ಮನುಷ್ಯ ಜಾತಿ
ತಾನೊಂದೆ ವಲಂ

ನಮ್ಮ ಕರ್ನಾಟಕ

ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ

ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವ ಮಾಲಿಕೆ ಪ್ರಕಟಣೆ

ನಮ್ಮ ಕರ್ನಾಟಕ

ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು- ೫೬೦೦೧೮

Kannada Sahitya Parishattu Centenary Publication

ನಮ್ಮ ಕರ್ನಾಟಕ
ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ
ಪ್ರಕಾಶಕರು :

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ
ಚಾಮರಾಜಪೇಟೆ
ಬೆಂಗಳೂರು – ೫೬೦ ೦೧೮

ಮುಖಪುಟ ವಿನ್ಯಾಸ : ಶ್ರೀ ಪ.ಸ. ಕುಮಾರ್

ಪುಟಗಳು : ೧೭೮

ಮುದ್ರಣ ಕಾಗದ : ೮೦ ಜಿ.ಎಸ್.ಎಂ.
ಎನ್.ಎಸ್.ಮ್ಯಾಪ್‌ಲಿಥೋ

ಬೆಲೆ : ೧೨೫=೦೦

ಪರಿಷತ್ತಿನಿಂದ ಮುದ್ರಣ: ೧೯೮೩, ೧೯೯೭
೨೦೦೦, ೨೦೦೯
ಹಾಗೂ ೨೦೧೪

ಪ್ರತಿಗಳು : ೧೦೦೦

ಮುದ್ರಣ
ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್
೩/೪, ಮೊದಲನೇ ಮುಖ್ಯರಸ್ತೆ
ನ್ಯೂ ತರಗುಪೇಟೆ
ಬೆಂಗಳೂರು – ೫೬೦ ೦೦೨.

NAMMA KARNATAKA - a study on history & culture of Karnataka in Kannada by Dr. T.V. Ventachalashastry

published by :

Kannada Sahitya Parishattu
Pampa Mahakavi Road
Chamarajapete
Bengaluru - 560018

Cover Page : Sri P.S. Kumar

Pages : 178

Paper : 80 G.S.M. N.S. Maplitho

Rs : 125=00

Editions by Parishattu : 1983, 1997
2000, 2009
& 2014

Copies : 1000

printed at

Omkar Offset Printers
3/4, 1st Main Road
New Taragupete
Bengaluru - 560002.

ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವ ಕೃತಿಗಳ ಆಯ್ಕೆ ಸಮಿತಿ

ಅಧ್ಯಕ್ಷರು

ಶ್ರೀ ಪುಂಡಲೀಕ ಹಾಲಂಬಿ

ಸದಸ್ಯರು

ಡಾ. ಸಿದ್ಧಲಿಂಗಯ್ಯ

ಪ್ರೊ. ಜಿ. ಅಶ್ವತ್ಥನಾರಾಯಣ

ಡಾ. ಶ್ಯಾಮಸುಂದರ ಬಿದರಕುಂದಿ

ಡಾ. ರಾಜಶೇಖರ ಹತಗುಂದಿ

ಡಾ. ತಾರಿಣಿ ಶುಭದಾಯಿನಿ

ಡಾ. ಮಾಧವ ಪೆರಾಜೆ

ಶ್ರೀ ಸಂಗಮೇಶ ಬಾದವಾಡಗಿ, **ಗೌರವ ಕಾರ್ಯದರ್ಶಿ, ಕ.ಸಾ.ಪ.**

ಶ್ರೀ ಸಿ.ಕೆ. ರಾಮೇಗೌಡ, **ಗೌರವ ಕಾರ್ಯದರ್ಶಿ, ಕ.ಸಾ.ಪ.**

ಶ್ರೀ ಪಿ. ಮಲ್ಲಿಕಾರ್ಜುನಪ್ಪ, **ಗೌರವ ಕೋಶಾಧ್ಯಕ್ಷ, ಕ.ಸಾ.ಪ.**

ಪ್ರಕಟಣಾ ಸಮಿತಿ ಸಂಚಾಲಕ

ಶ್ರೀ ಜೆ.ಎನ್. ಶಾಮರಾವ್

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಕಾರ್ಯಕಾರಿ ಸಮಿತಿ

[illegible]

[illegible]

ಅಧ್ಯಕ್ಷರ ಮಾತು

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಶತಮಾನೋತ್ಸವವನ್ನು ಆಚರಿಸಿಕೊಳ್ಳುತ್ತಿರುವುದು ಹೆಮ್ಮೆಯ ವಿಷಯ. ನಾಡು, ನುಡಿ, ಸಾಹಿತ್ಯಕ್ಕೆ ಪ್ರೇರಕಶಕ್ತಿಯಾಗಿ ಹಾಗೂ ಪೋಷಕವಾಗಿ ದುಡಿಯುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತು ೫-೫-೧೯೧೫ರಂದು ಅಂದಿನ ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರು ಹಾಗೂ ದಿವಾನ್‌ರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯನವರ ಪ್ರಯತ್ನದ ಫಲವಾಗಿ ಸಂಸ್ಥಾಪನೆಗೊಂಡಿತು. ಈವರೆಗೆ ೨೪ ಜನ ಅಧ್ಯಕ್ಷರು ಪರಿಷತ್ತಿನ ಸೇವೆ ಸಲ್ಲಿಸಿದ್ದಾರೆ. ೮೧ ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷತೆಯನ್ನು ೭೯ ಜನ ಮಹಾನ್ ಲೇಖಕರು ಅಲಂಕರಿಸಿದ್ದಾರೆ. ೮೩ ಜನ ಸದಸ್ಯರಿಂದ ಆರಂಭಗೊಂಡ ಪರಿಷತ್ತಿನ ಇಂದಿನ ಸದಸ್ಯರ ಸಂಖ್ಯೆ ೨,೦೨,೦೦೦. ಪರಿಷತ್ತಿನ ಪ್ರಕಟಣೆಗಳ ಸಂಖ್ಯೆ ೧೪೨೪. ಕೇವಲ ಅಂಕಿಸಂಖ್ಯೆಯ ದೃಷ್ಟಿಯಿಂದಲೇ ಕನ್ನಡ ಸಾಹಿತ್ಯ ಪರಿಷತ್ತಿನ ಸಾಧನೆ ಅನನ್ಯವಾದುದು; ಇನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ ಕೊಡುಗೆಯಂತೂ ಅವಿಸ್ಮರಣೀಯವಾದುದು.

ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವದ ಅಂಗವಾಗಿ ಕೆಲವೊಂದು ಮಹತ್ವದ ಯೋಜನೆಗಳನ್ನು ಪರಿಷತ್ತು ಕೈಗೊಂಡಿರುತ್ತದೆ. ಮೊದಲನೆಯದಾಗಿ, ಎರಡು ಶತಮಾನಗಳಿಗೂ ಮೀರಿದ ಅವಧಿಯ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಗಳ ರಚನೆ ಹಾಗೂ ಪ್ರಕಟಣೆ. ಈ ೧೭ ಸಂಪುಟಗಳ ರಚನೆಯ ಕಾರ್ಯದಲ್ಲಿ ಈಗಾಗಲೇ ಪರಿಣತ ಸಂಪಾದಕರು ಹಾಗೂ ನೂರಾರು ಲೇಖಕರು ಕ್ರಿಯಾಶೀಲರಾಗಿದ್ದಾರೆ. ಎರಡನೆಯದಾಗಿ, ಪರಿಷತ್ತಿನ ನೂರರ ಸಂಭ್ರಮಕ್ಕೆ ಕಿರೀಟಪ್ರಾಯವಾಗಿ ಕನ್ನಡದ ನೂರು ಮೌಲಿಕ ಗ್ರಂಥಗಳ ಮುದ್ರಣ. ಜೊತೆಗೆ, ಪರಿಷತ್ತಿನ ನೂರು ವರ್ಷಗಳ ಇತಿಹಾಸವನ್ನು ದಾಖಲಿಸುವ ನೆನಪಿನ ಸಂಪುಟದ ಪ್ರಕಟಣೆ.

'ಕನ್ನಡ ಸಾಹಿತ್ಯ ಪರಿಷತ್ತು ಶತಮಾನ : ಕೃತಿ ನೂರು' ಎಂಬ ಯೋಜನೆಯಡಿ ಪುಸ್ತಕಗಳ ಆಯ್ಕೆಗೆ ಪರಿಣತರ ಸಮಿತಿಯನ್ನು ರಚಿಸಲಾಯಿತು. ಈ ಆಯ್ಕೆ ಸಮಿತಿಯು ನೂರು ಪುಸ್ತಕಗಳನ್ನು ಆಯ್ಕೆಮಾಡಿ ಕೊಟ್ಟಿರುತ್ತದೆ. ಕನ್ನಡ ಸಾಹಿತ್ಯದ ವಿವಿಧ ಘಟ್ಟಗಳು, ಚಳುವಳಿಗಳು ಹಾಗೂ ವಿವಿಧ ಸಾಹಿತ್ಯಿಕ ಸಂವೇದನೆಗಳನ್ನು ಆಯ್ಕೆ ಸಮಿತಿಯು ಗಮನದಲ್ಲಿರಿಸಿಕೊಂಡು ನೂರು ಪುಸ್ತಕಗಳನ್ನು ಆಯ್ಕೆ ಮಾಡಿರುತ್ತದೆ. ಇದರಲ್ಲಿ ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಪ್ರಾತಿನಿಧ್ಯವಿರುವಂತೆ ಸಹ ನೋಡಿಕೊಳ್ಳಲಾಗಿದೆ. ಪ್ರತಿಭೆ, ಪ್ರಾದೇಶಿಕತೆ ಹಾಗೂ ಸಾಮಾಜಿಕ ನ್ಯಾಯಗಳನ್ನು

ಪರಿಗಣಿಸಲಾಗಿದೆ. ಈಗಾಗಲೇ ಸಮಗ್ರವಾಗಿ ಲಭ್ಯವಿರುವ ಹಾಗೂ ಮತ್ತೆ ಮತ್ತೆ ಪುನರ್‌ಮುದ್ರಿತವಾಗಿರುವ ಕೃತಿಗಳಿಗೆ ಆದ್ಯತೆ ನೀಡಿಲ್ಲವಾಗಿದ್ದರೂ, ಒಟ್ಟಾರೆ ಕನ್ನಡ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿರುವ ಲೇಖಕರನ್ನು ಬಹುಮಟ್ಟಿಗೆ ಉಳಿಸಿಕೊಳ್ಳಲಾಗಿದೆ. ಇಂಥ ಮಹತ್ವದ ಪುಸ್ತಕಗಳ ಪಟ್ಟಿಯನ್ನು ಸಿದ್ಧಪಡಿಸಿಕೊಟ್ಟ ಆಯ್ಕೆ ಸಮಿತಿ ಸದಸ್ಯರಾದ ಡಾ. ಸಿದ್ಧಲಿಂಗಯ್ಯ, ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಶ್ಯಾಮಸುಂದರ ಬಿದರಕುಂದಿ, ಡಾ. ರಾಜಶೇಖರ ಹತಗುಂದಿ, ಡಾ. ತಾರಿಣಿ ಶುಭದಾಯಿನಿ ಹಾಗೂ ಡಾ. ಮಾಧವ ಪೆರಾಜೆ ಅವರಿಗೆ ನನ್ನ ಕೃತಜ್ಞತೆಗಳು.

ಈ ನೂರು ಕೃತಿಗಳನ್ನು ಏಕ ಚೌಕಟ್ಟಿನಲ್ಲಿ, ಆದರೆ ವಿವಿಧ ಕಲಾವಿನ್ಯಾಸಗಳಲ್ಲಿ ಮುದ್ರಿಸಲು ಸಹ ಯೋಜಿಸಲಾಗಿದೆ. ಸಾಧ್ಯವಾದ ಮಟ್ಟಿಗೂ ಒಟ್ಟಾರೆ ಗುಣಮಟ್ಟದಲ್ಲಿ ಏಕರೂಪತೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸಲಾಗಿದೆ.

ಪರಿಷತ್ತಿನ ಯೋಜನೆಯಡಿ ತಮ್ಮ ಕೃತಿಯನ್ನು ಪುನರ್‌ಮುದ್ರಿಸಲು ಅನುಮತಿಯನ್ನು ಕೋರಿದಾಗ, ಪರಿಷತ್ತಿನ ಮೇಲಿನ ಗೌರವದಿಂದಾಗಿ ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ ಅವರು ತಮ್ಮ ಒಪ್ಪಿಗೆಯನ್ನು ನೀಡಿ ಹೃತ್ಪೂರ್ವಕವಾಗಿ ಸಹಕರಿಸಿದ್ದಾರೆ. ಅವರಿಗೆ ನನ್ನ ಗೌರವಪೂರ್ವಕ ಕೃತಜ್ಞತೆಗಳು.

ಈ ಮೊದಲ ಕಂತಿನ ಪುಸ್ತಕಗಳನ್ನು ಅಂದವಾಗಿ ಮುದ್ರಿಸಿಕೊಟ್ಟ ಮೆ॥ ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್ ಅವರಿಗೆ ನನ್ನ ಕೃತಜ್ಞತೆಗಳು.

ದಿನಾಂಕ : ೫.೫.೨೦೧೪
ಬೆಂಗಳೂರು

ಪುಂಡಲೀಕ ಹಾಲಂಬಿ
ಅಧ್ಯಕ್ಷರು

ಅರಿಕೆ

ಪ್ರಥಮ ವಿಶ್ವಕನ್ನಡ ಸಮ್ಮೇಳನದ ವೇಳೆಗೆ, ಅದರ ಸವಿನೆನಪು ಸ್ಥಾಯಿಯಾಗುವಂತೆ ನನ್ನದಾಗಿ ಏನಾದರೊಂದು ಸಣ್ಣ ಕಾಣಿಕೆಯನ್ನು ಸಲ್ಲಿಸಬೇಕೆಂಬ ಆಸೆ ಈಗ್ಗೆ ಕೆಲವು ತಿಂಗಳ ಹಿಂದೆ ಮನಸ್ಸಿನಲ್ಲಿ ಮೂಡಿತು. ಆ ಕಾಣಿಕೆ ಕನ್ನಡ ನಾಡು ನುಡಿಗಳಿಗೆ ಸಂಬಂಧಿಸಿರಬೇಕೆಂದೂ ತೋರಿತು. ಈ ಮೊದಲೇ ಬೇರೆಯ ಕೆಲಸಕ್ಕಾಗಿ ಸಂಗ್ರಹಿಸಿ ಇಟ್ಟುಕೊಂಡಿದ್ದ ವಿಷಯಸಂಗ್ರಹದಲ್ಲಿ, ಬಳಸಿ ಉಳಿದುಕೊಂಡಿದ್ದ ಸ್ವಲ್ಪ ಸಾಮಗ್ರಿಯನ್ನೇ ಅವಲಂಬಿಸಿ ಬರೆವಣಿಗೆಯನ್ನೂ ಆರಂಭಿಸಿದ್ದಾಯಿತು; ಅದು ನಿರೀಕ್ಷೆಯಂತೆ ಎರಡು ವಾರಗಳ ಒಳಗೇ ಮುಗಿದುದೂ ಆಯಿತು. ಅನಂತರದಲ್ಲಿ ಪ್ರಕಟಣೆಯ ಏರ್ಪಾಡಿನ ಕಾರಣಗಳಿಂದಾಗಿ, ಅನಾಯಾಸವಾಗಿ ದೊರೆತ ಕಾಲಾವಕಾಶವನ್ನು ಬಳಸಿಕೊಂಡು, ಮೊದಲ ಬರೆಹವನ್ನು ಪರಿಷ್ಕರಿಸುತ್ತಲೂ ವಿಸ್ತರಿಸುತ್ತಲೂ ಹೋದೆನಾದ್ದರಿಂದ, 'ನಮ್ಮ ಕರ್ನಾಟಕ' ಎಂಬ ಈ ಕೃತಿ ಈ ರೂಪದಲ್ಲಿ ಸಿದ್ಧವಾಗಿ ಹೊರಬರುವುದು ಈಗ ಸಾಧ್ಯವಾಗಿದೆ.

ಈ ಕೃತಿಯನ್ನು ಒಂದು ಸಂಶೋಧನ ಕೃತಿಯೆಂದಾಗಲಿ, ಅವಶ್ಯವಾದ ಒಂದು ಆದಾರಗ್ರಂಥವೆಂದಾಗಲಿ ನಾನು ತಿಳಿದಿಲ್ಲ; ಆದರೆ ಕರ್ನಾಟಕದ ಇತಿಹಾಸ, ಸಂಸ್ಕೃತಿಗಳ ಅಭ್ಯಾಸದಲ್ಲಿ ಆಸಕ್ತರಾದವರಿಗೆ ಇದರಿಂದಲೂ ಸ್ವಲ್ಪ ಪ್ರಯೋಜನವಾಗಬಹುದು ಎಂಬ ಭರವಸೆಯನ್ನಿಟ್ಟು ಕೊಂಡಿದ್ದೇನೆ. ನಾನು ಕೃತಿರಚನೆಗೆ ಇಟ್ಟುಕೊಂಡ ಕಾಲಮಿತಿ ಯಿಂದಾಗಿಯೂ ಬೇರೆ ಬೇರೆ ಕೆಲಸಗಳ ನಡುವೆ ಇದನ್ನು ಕೈಗೂಡಿಸಿರುವುದ ರಿಂದಾಗಿಯೂ ಇದು ಅಲ್ಲಲ್ಲಿ ಅಸಮಗ್ರವಾದ ವಿವರಗಳೊಂದಿಗೆ ಉಳಿಯುವಂತಾಗಿದೆ; ಅಲ್ಲಲ್ಲಿ ಉಪಪತ್ತಿಗಳ ಅಭಾವ ಕಾರಣವಾಗಿಯೂ ಆಲಸ್ಯ ಅನವಧಾನಗಳು ಕಾರಣವಾಗಿಯೂ ಲೋಪದೋಷಗಳು ಉಳಿಯುವಂತಾಗಿವೆ. ಇದಕ್ಕಾಗಿ ನಾನು ಓದುಗರ ಕ್ಷಮೆ ಬೇಡುತ್ತೇನೆ. ದೈವಯೋಗದಿಂದ ಈ ಕೃತಿ ಪುನರ್ಮುದ್ರಣಗೊಳ್ಳುವುದು ಸಾಧ್ಯವಾದರೆ, ಇಲ್ಲಿಯ ಕೆಲವಾದರೂ ಲೋಪದೋಷಗಳನ್ನು ಆಗ ಸರಿಪಡಿಸುವುದು ಶಕ್ಯವಾದೀತು ಎಂದು ಭಾವಿಸುತ್ತೇನೆ.

'ಕರ್ನಾಟಕ' ಎಂಬ ಹೆಸರು ಕನ್ನಡಿಗರ ಅಭಿಮಾನದ ಸಂಕೇತ; ಅದು ಪರಂಪರೆಯಿಂದ ಬಂದುದು. ಅದರ ಅರ್ಥ, ನಿಷ್ಪತ್ತಿ, ಪ್ರಯೋಗ ಹಾಗೂ ಪ್ರಚುರತೆಗಳನ್ನು ನಿರೂಪಿಸುವುದೇ ಈ ಕೃತಿಯ ಮುಖ್ಯ ಉದ್ದೇಶವಾಗಿದೆ. ಈ ಕಾರಣವಾಗಿಯೇ ಇಲ್ಲಿ ಕನ್ನಡ ನಾಡಿನ ಜನ, ಇತಿಹಾಸ, ಧರ್ಮ, ಕಲೆಗಳು, ಭಾಷೆ ಸಾಹಿತ್ಯಗಳು ಮುಂತಾದ

ವಿವರಗಳನ್ನು ನಿರೂಪಿಸಲು ಹೋಗಿಲ್ಲ; ಆ ನಿರೂಪಣೆಯಿರುವ ಸಣ್ಣ ದೊಡ್ಡ ಪುಸ್ತಕಗಳಿಗೆ ನಮ್ಮಲ್ಲಿ ಕೊರತೆಯಿಲ್ಲವಾದ್ದರಿಂದ, ಅದು ಅನಾವಶ್ಯಕವೆಂದೂ ನನಗೆ ತೋರಿತು. ಹಾಗಾಗಿ ಈ ಪುಸ್ತಕ ಒಂದು ಸೀಮಿತ ಉದ್ದೇಶವನ್ನಿಟ್ಟುಕೊಂಡಿದೆಯೆಂದು ಹೇಳಬೇಕಾಗಿದೆ. ಆ ಉದ್ದೇಶವಾದರೂ ಎಷ್ಟರ ಮಟ್ಟಿಗೆ ಸಫಲವಾಗಿದೆಯೆನ್ನುವುದನ್ನು ತಿಳಿದವರು ಗುರುತಿಸಬಲ್ಲರು, ನನ್ನಮಟ್ಟಿಗೆ ಇದು ಒಂದು ಪ್ರಾತಿನಿಧಿಕಸ್ವರೂಪದ ಸಂಕ್ಷಿಪ್ತ ರಚನೆ; ಸಡಗರದ ದೊಡ್ಡ ಹಬ್ಬದಲ್ಲಿ ಹೊತ್ತಿಸಿಟ್ಟ ಒಂದು ಸಣ್ಣ ಸೊಡರುದೀಪ.

ಈ ಪುಸ್ತಕದ ಸಿದ್ಧತೆಯಲ್ಲಿ ನನಗೆ ಉದಾರವಾಗಿ ನೆರವು ನೀಡಿದ ಹಿರಿಯರನ್ನೂ ಮಿತ್ರರನ್ನೂ ಕೃತಜ್ಞತೆಯಿಂದ ಸ್ಮರಿಸುವುದು ನನ್ನ ಸಂತೋಷದ ಕರ್ತವ್ಯವಾಗಿದೆ.

ಪುಸ್ತಕದ ಪ್ರಕಟನೆಯ ವಿಷಯದಲ್ಲಿ ಪ್ರೋತ್ಸಾಹದ ಮಾತುಗಳನ್ನಾಡಿದುದೇ ಅಲ್ಲದೆ, ರಚನೆಯ ಉಪಯುಕ್ತತೆ ಹೆಚ್ಚುವಂತೆ ಕೆಲವು ಸಲಹೆಗಳನ್ನೂ ನೀಡಿ, ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಅದು ಪ್ರಕಟವಾಗುವಂತೆ ಸಹಾಯವಾದವರು ಡಾ|| ಹಾ. ಮಾ. ನಾಯಕರು, ಪುಸ್ತಕವನ್ನು ಪರಿಷತ್ತಿನ ಒಂದು ಪ್ರಕಟಣೆಯನ್ನಾಗಿ ವಿಶ್ವಾಸ ವಿಟ್ಟು ಅಂಗೀಕರಿಸಿದುದಲ್ಲದೆ, ನನ್ನ ಅಪೇಕ್ಷೆಯಂತೆಯೇ ಅದರ ಮುದ್ರಣಕ್ಕೆ ಸೂಕ್ತವಾದ ವ್ಯವಸ್ಥೆಯನ್ನು ಮಾಡಿಕೊಟ್ಟವರು ಪರಿಷದಧ್ಯಕ್ಷರು ಶ್ರೀ ಹಂಪ. ನಾಗರಾಜಯ್ಯನವರು ಇವರೊಂದಿಗೆ ಸಹಕರಿಸಿದವರು, ಪರಿಷತ್ತಿನ ಕಾರ್ಯದರ್ಶಿಗಳಲ್ಲಿ ಒಬ್ಬರಾಗಿರುವ ಶ್ರೀ ಲಕ್ಷ್ಮಣ್ ತೆಲಗಾವಿಯವರು.

ಪುಸ್ತಕದ ಮೊದಲ ಭಾಗದಲ್ಲಿ ನನಗೆ ಸರ್ವಶ್ರೀ ಡಾ. ಬಿ. ಆರ್. ಗೋಪಾಲ್, ಡಾ. ರಂ. ಶ್ರೀ. ಮುಗಳಿ, ಡಾ. ಜಿ. ಎಸ್. ಗಾಯಿ, ಕೆ. ವಿಜಯಕುಮಾರ್, ಬಿ. ಶಾಮಸುಂದರ, ಹೆಚ್. ಟಿ. ಕೃಷ್ಣೇಗೌಡ, ಎಸ್. ಜಿ. ರಾಮು, ಕೆ. ಜಿ. ನಾಗರಾಜನ್, ಟಿ. ಆರ್. ಮಹಾದೇವಯ್ಯ, ಹೀ. ಚಿ. ಶಾಂತವೀರಯ್ಯ ಇವರು ನೆರವಾಗಿದ್ದಾರೆ. ಎರಡನೆಯ ಭಾಗದಲ್ಲಿ ಸಂಸ್ಕೃತ ಉಲ್ಲೇಖಗಳಿಗೆ ಸರ್ವಶ್ರೀ ಡಾ. ಆರ್. ಸತ್ಯನಾರಾಯಣ, ಎಚ್. ವಿ. ನಾಗರಾಜರಾವ್, ಬಿ. ಕೆ. ಶಿವರಾಮಯ್ಯ, ಡಾ. ಆರ್. ಎಸ್. ಶಿವಗಣೇಶಮೂರ್ತಿ, ಸಿ. ರಾಮಾಚಾರ್, ಡಾ. ಜಿ. ವರದರಾಜರಾವ್ ಇವರೂ. ಕನ್ನಡ ಉಲ್ಲೇಖಗಳಿಗೆ ಸರ್ವಶ್ರೀ ಎನ್. ಬಸವಾರಾಧ್ಯ, ಬಿ. ಎಸ್. ಸಣ್ಣಯ್ಯ, ಆರ್. ವಿ. ಕುಲಕರ್ಣಿ ಇವರೂ ಪ್ರಾಕೃತಕ್ಕೆ, ಡಾ. ಪಿ. ಬಿ. ಬಡಿಗೇರ್ ಅವರೂ, ಹಿಂದಿಗೆ ಡಾ. ಎಂ. ಎಸ್. ಕೃಷ್ಣಮೂರ್ತಿಗಳೂ ತಮಿಳಿಗೆ, ಸರ್ವಶ್ರೀ ಡಾ. ಕೆ. ವಿ. ರಮೇಶ್, ಕೆ. ಜಿ. ಕೃಷ್ಣನ್, ಡಾ. ಕೆ. ಜಿ. ನಾರಾಯಣಪ್ರಸಾದ್, ಡಾ. ಟಿ. ಮಣಿಯನ್ ಇವರೂ ಮಲಯಾಳಕ್ಕೆ, ಶ್ರೀಮತಿ ಸಿ. ಕಮಲಾದೇವಿಯವರೂ ತೆಲುಗಿಗೆ, ಶ್ರೀ ಎಂ. ಎಸ್. ಮಹಾಂತಯ್ಯ, ಡಾ. ಆರ್. ವಿ. ಎಸ್. ಸುಂದರಂ ಅವರು 'ಕರ್ನಾಟಕ ಅಧ್ಯಯನದ ಗ್ರಂಥಸೂಚಿ'ಯ ಸಿದ್ಧತೆಗೆ,

ಶ್ರೀ ಎನ್. ಎಸ್. ತಾರಾನಾಥ್ ಅವರೂ ನನಗೆ ಸಹಾಯ ಮಾಡಿದ್ದಾರೆ. ನಾನು ಸಂಗ್ರಹಿಸಿದ್ದ ಉಲ್ಲೇಖಗಳಲ್ಲಿ ಕೆಲವನ್ನು ಸರಿನೋಡಲೂ ಕೆಲವು ಹೊಸ ಉಲ್ಲೇಖಗಳನ್ನು ಸೇರಿಸಲೂ ಇವರೆಲ್ಲ ನನಗೆ ನೆರವಾಗಿದ್ದಾರೆ. ಹೀಗಾಗಿಯೂ ತಿದ್ದುಪಡಿಯಾಗಬೇಕಾಗಿರುವ ಉಲ್ಲೇಖಗಳು ಇನ್ನೂ ಉಳಿದುಕೊಂಡಿವೆ. ಇನ್ನೂ ಹೆಚ್ಚು ಉಲ್ಲೇಖಗಳು ಸೇರಬೇಕಾಗಿದೆ. ಇವು ಪುಸ್ತಕದ ಪುನರ್ಮುದ್ರಣದಲ್ಲಿ ಕೈಗೂಡಬೇಕು, ಅಷ್ಟೆ.

ಈ ಪುಸ್ತಕವನ್ನು ಅಚ್ಚುಮಾಡಿಕೊಡಲು ಒಪ್ಪಿ, ನನ್ನ ಮೇಲೆ ಹಾಗೂ ಪರಿಷತ್ತಿನ ವಿಷಯದಲ್ಲಿ ಅಪಾರ ವಿಶ್ವಾಸವನ್ನು ಆದರವನ್ನೂ ತೋರಿಸಿರುವ ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್ ಒಡೆಯರಾಗಿರುವ ಶ್ರೀ ರಾ. ವೆಂ. ಶ್ರೀನಿವಾಸಮೂರ್ತಿಯವರಿಗೆ ನಾನು ಬಹುವಾಗಿ ಕೃತಜ್ಞನಾಗಿದ್ದೇನೆ. ಅವರ ಚಿರಂಜೀವರಾದ ಶ್ರೀ ಆರ್. ಎಸ್. ಮೋಹನಮೂರ್ತಿಯವರು ಈ ಪುಸ್ತಕವು ಶೀಘ್ರವಾಗಿಯೂ ಸುಂದರವಾಗಿಯೂ ಅಚ್ಚಾಗುವಂತೆ ಏರ್ಪಡಿಸಿ, ಕರಡಚ್ಚುಗಳನ್ನು ಓದುವುದರಿಂದ ಮೊದಲುಗೊಂಡು ಅಚ್ಚು ಮುಗಿಯುವವರೆಗೆ ತುಂಬ ಶ್ರಮಪಟ್ಟಿದ್ದಾರೆ. ಇವರಿಗೆ ಹಾಗೂ ಅಚ್ಚುಕೂಟದ ಸಿಬ್ಬಂದಿಯವರಿಗೆ ಸಹ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು : ೩-೧-೧೯೮೩

ಟಿ. ವಿ. ವೆಂಕಟಾಚಲ ಶಾಸ್ತ್ರೀ

ಕರ್ನಾಟಕ ರಾಜ್ಯ ನವೋದಯದ ಮೊದಲ ದಿನಗಳಲ್ಲಿ

ನಾಡು ನುಡಿಗಳ ಮೇಲ್ಮೆಗೆ ಅವಿಶ್ರಾಂತವಾಗಿ ಶ್ರಮಿಸಿದ

ದಿ|| ಆಲೂರು ವೆಂಕಟರಾಯರು

ಹಾಗೂ

ದಿ|| ಬಿ. ಎಂ. ಶ್ರೀಕಂಠಯ್ಯನವರು

ಇವರಿಗೆ

ಈ ಕೃತಿ ಅರ್ಪಿತವಾಗಿದೆ

ಜಿನಧರ್ಮಾವಾಸವಾದತ್ತ ಮಳವಿನಯದಾಗಾರವಾದತ್ತು ಪದ್ಮಾ
ಸನನಿರ್ಪಾ ಸದ್ಮವಾದತ್ತತಿವಿಶದಯಶೋಧಾಮವಾದತ್ತು ವಿದ್ಯಾ
ಧನಜನ್ಮಸ್ಥಾನವಾದತ್ತಸಮತರದ ಗಂಭೀರಸದ್ಗೇಹವಾದ
ತ್ತೆನಿಸಲ್ಕಿಂತುಳ್ಳ ನಾನಾಮಹಿಮೆಯೊಳೆಸೆಗುಂ ಚಾರು ಕರ್ಣಾಟದೇಶಂ

—ಎಪಿಗ್ರಾಫಿಯ ಕರ್ನಾಟಕ, viii-ii

ಸೊರಬ ೨೬೧; ೧೪೦೮

ಗಾಡಿಯ ಸೀಮೆ ಚೆಲ್ವೊಗೆದ ತಾಣಮಲಂಪಿನ ಸಂತೆ ಪೆಂಪು ಸಾ
ರ್ದಾಡುವ ಭೂಮಿ ಸೌಖ್ಯದೆಡೆ ಪುಣ್ಯದ ಗೊತ್ತು ವಿನೋದದಾಗರಂ
ಮೋಡಿಯ ಮಂಟಪಂ ಸಿರಿಯ ಪೆರ್ಚುಗೆಗೊಳ್ಗನೆ ಮುಕ್ತಿಕಾಂತೆ ಕೈ
ಗೂಡುವ ಬೀಡು ಕನ್ನಡದ ನಾಡು ವಿರಾಜಿಪುದೆಂತು ಬಣ್ಣಿಪೆಂ ॥ (೧-೨೪)

—ಚಿಕುಪಾಧ್ಯಾಯನ 'ಹಸ್ತಿಗಿರಿ ಮಹಾತ್ಮ್ಯ' (೧೬೭೯)

ಕನ್ನಡನಾಡೊಳು ಕಲಿಯುಗ ಪುಗದಿರ್ಕೆ
ಕನ್ನಡಿಗರು ಘನರಕ್ಕೆ ॥ (೯–೫೯)

– ಹೊನ್ನಮ್ಮನ 'ಹದಿಬದೆಯ ಧರ್ಮ'

(ಸು. ೧೬೮೦)

ವಿಷಯಸೂಚಿ

ಭಾಗ : ಒಂದು

ನಮ್ಮ ಕರ್ನಾಟಕ

ಕರ್ನಾಟಕ : ಇಂದು

ದಕ್ಷಿಣ ಭಾರತದಲ್ಲಿ ಕನ್ನಡ ಭಾಷೆಯನ್ನು ಆಡುವ ಜನ ವಿಶೇಷವಾಗಿ ವಾಸ ಮಾಡುತ್ತಿರುವ ಪ್ರದೇಶವನ್ನು ಕನ್ನಡ ನಾಡು ಎಂದು ವ್ಯವಹರಿಸುತ್ತೇವೆ. ಈ ನಾಡಿಗೆ ಪ್ರಾಚೀನವೂ ಉಜ್ಜ್ವಲವೂ ಆದ ಇತಿಹಾಸವಿದೆ, ಸಂಸ್ಕೃತಿ ಸಾಹಿತ್ಯಗಳ ಪರಂಪರೆಯಿದೆ. ಇಂಥ ಹಿರಿಮೆಯ, ಈ ನಮ್ಮ ಸೀಮೆಯ ಭೂರಚನೆ, ಭೌಗೋಳಿಕ ವ್ಯಾಪ್ತಿ, ಅದರಲ್ಲಿ ಕಾಲ ಕಾಲಕ್ಕೆ ಉಂಟಾದ ಸಂಕೋಚ ವಿಸ್ತಾರಗಳು, ಅಂತರ್ಗತ ಪ್ರದೇಶಗಳು, ಆ ಪ್ರದೇಶಗಳ ಹೆಸರು ಹಿನ್ನೆಲೆಗಳು, ಆಳಿದ ಮನೆತನಗಳು—ಈ ಕೆಲವು ವಿಚಾರಗಳಿಗೆ ಸಂಬಂಧಿಸಿದಂತೆ ಒಂದು ಸ್ಥೂಲವಾದ ಪರಿಶೀಲನೆಯನ್ನು ಕೈಕೊಳ್ಳುವುದು ಈ ಬರೆಹದ ಉದ್ದೇಶವಾಗಿದೆ.

* * *

ವೈಭವದ ವಿಜಯನಗರ ಸಾಮ್ರಾಜ್ಯ ಅಸ್ತಮಿಸಿದ ಅನಂತರದಲ್ಲಿ, ಕನ್ನಡ ರಾಜ್ಯದ ಎಲ್ಲೆ ಕಟ್ಟುಗಳು ಬಹುವಾಗಿ ಕುಗ್ಗಿಹೋದುವು. ಆದರೆ ಯಾದವ ವಂಶದವರೆಂದು ತಮ್ಮನ್ನು ಕರೆದುಕೊಳ್ಳುವ ಒಡೆಯರ ಕಾಲದಲ್ಲಿ, ಮೈಸೂರು ಸಂಸ್ಥಾನವೆಂಬ ಹೆಸರಿನಲ್ಲಿ, ಈ ರಾಜ್ಯ ಮತ್ತೆ ಸ್ವಲ್ಪ ತಲೆಯೆತ್ತಿತ್ತು. ಈ ಸಂಸ್ಥಾನವೂ ಆಗಾಗ ಹಿಗ್ಗು ಕುಗ್ಗುಗಳನ್ನು ಕಂಡಿತು. ೧೯ನೆಯ ಶತಮಾನದ ಹೊತ್ತಿಗೆ ಮೈಸೂರು ಸಂಸ್ಥಾನ ಮತ್ತು ಕೊಡಗು ರಾಜ್ಯಗಳು ಮಾತ್ರ ಪೂರ್ಣ ಕನ್ನಡ ಮಾತನ್ನಾಡುವ ಪ್ರದೇಶವಾಗಿದ್ದು, ಪರಂಪರೆಯ ಹಾಗೂ ಇತಿಹಾಸದ ಕನ್ನಡ ನಾಡಿನ ಹೆಚ್ಚಿನ ಭಾಗಗಳು ಮದರಾಸು ಪ್ರಾಂತ್ಯ, ಮುಂಬಯಿ ಪ್ರಾಂತ್ಯ ಹಾಗೂ ಹೈದರಾಬಾದು ಸಂಸ್ಥಾನಗಳ ಆಳ್ವಿಕೆಗಳಿಗೆ ಸೇರಿಹೋಗಿದ್ದುವು. ಹೀಗೆ ಸೇರಿಹೋಗಿದ್ದ ಭಾಗಗಳನ್ನು, ಭಾಷೆಯ ಆಧಾರದ ಮೇಲೆ ಮತ್ತೆ ಒಂದುಗೂಡಿಸಿಕೊಳ್ಳಲು ದೇಶಾಭಿಮಾನಿಗಳೂ ಭಾಷಾಭಿಮಾನಿಗಳೂ ಆದ ಕನ್ನಡ ಜನರು ಈಗ್ಗೆ ಸು. ನೂರು ವರ್ಷಗಳಷ್ಟು ಹಿಂದೆಯೇ ಪ್ರಯತ್ನಗಳನ್ನು ಮಾಡತೊಡಗಿದರು. ಈ ಪ್ರಯತ್ನಗಳು ಘಟ್ಟ ಘಟ್ಟಗಳಲ್ಲಿ ಬೆಳೆದು, ಕರ್ನಾಟಕ ಏಕೀಕರಣವೆಂಬ ಹೋರಾಟವಾಗಿ ಬಲಿದು ಬಲಗೊಳ್ಳುತ್ತ ನಡೆದು, ೧೯೫೬ ರ ನವೆಂಬರ್ ೧ ರಂದು ಹಳೆಯ ಮೈಸೂರು ಸಂಸ್ಥಾನವೆಂಬುದರ ಸ್ಥಾನದಲ್ಲಿ ನವಮೈಸೂರು ರಾಜ್ಯ ಉದಯಿಸಿತು.

ಈ ನವಮೈಸೂರು ರಾಜ್ಯದಲ್ಲಿ ಸಮಾವೇಶಗೊಂಡ ಪ್ರದೇಶಗಳು ಹೀಗಿವೆ: ೧. ಹಳೆಯ ಮೈಸೂರು ಸಂಸ್ಥಾನ, ಬಳ್ಳಾರಿ; ೨. ಮುಂಬಯಿ ರಾಜ್ಯದ (ಚಂದಗಡ ತಾಲ್ಲೂಕನ್ನು ಬಿಟ್ಟು) ಬೆಳಗಾಂವಿ ಜಿಲ್ಲೆ, ಧಾರವಾಡ, ಬಿಜಾಪುರ ಮತ್ತು ಉತ್ತರ ಕನ್ನಡ ಜಿಲ್ಲೆಗಳು;

೩. ಹೈದರಾಬಾದ್ ಸಂಸ್ಥಾನದ ಗುಲ್ಬರ್ಗ ಜಿಲ್ಲೆ (ಕೋಡಂಗಲ್, ತಾಂಡೂರು ತಾಲ್ಲೂಕುಗಳನ್ನು ಬಿಟ್ಟು) ಮತ್ತು ರಾಯಚೂರು ಜಿಲ್ಲೆ (ಆಲಂಪುರ, ಗದ್ವಾಲ್ ತಾಲ್ಲೂಕುಗಳನ್ನು ಬಿಟ್ಟು) ಹಾಗೂ ಬಿದರೆ ಜಿಲ್ಲೆಯ ಬಿದರೆ, ಭಾಲ್ಕಿ, ಸಂತಪುರ ಹುಮ್ನಾಬಾದ್ ತಾಲ್ಲೂಕುಗಳು; ೪ ಮದರಾಸು ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆ (ಕಾಸರಗೋಡು ತಾಲ್ಲೂಕು, ಅಮೀನ್‌ದೇವಿ ದ್ವೀಪಗಳನ್ನು ಬಿಟ್ಟು) ಮತ್ತು ಕೊಯಮತ್ತೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು; ೫. ಕೊಡಗು.

ಭೌಗೋಳಿಕ, ಐತಿಹಾಸಿಕ, ಸಾಂಸ್ಕೃತಿಕ ಮತ್ತು ಆಡಳಿತದ ಕಾರಣಗಳಿಂದ ಈಗಿನ ಕರ್ನಾಟಕಕ್ಕೇ ಸೇರಬೇಕಾಗಿದ್ದ ಇನ್ನೂ ಕೆಲವು ಭಾಗಗಳು ಹಾಗೆ ಸೇರದೆ ಬಿಟ್ಟು ಹೋಗಿವೆಯೆಂದು ಭಾವಿಸಲಾಗಿದೆ. ಕಾಸರಗೋಡು, ನೀಲಗಿರಿ, ಹೊಸೂರು, ತಾಳವಾಡಿ, ಮಡಕಶಿರ, ಆಲೂರು, ಆದವಾನಿ, ರಾಯದುರ್ಗ, ದೇಗಲೂರು, ಸೊಲ್ಲಾಪುರ, ಅಕ್ಕಲಕೋಟೆ, ಜತ್ತ, ಗಡಹಿಂಗ್ಲ ಜ ಇವು ಆ ಭಾಗಗಳು. ಮಹಾರಾಷ್ಟ್ರ-ಕರ್ನಾಟಕ ಗಡಿವಿವಾದವನ್ನು ಪುನರ್ವಿಮರ್ಶಿಸಿ ಇತ್ಯರ್ಥಪಡಿಸಲು ನೇಮಕವಾಗಿದ್ದ 'ಮಹಾಜನ ಆಯೋಗ' ಅಕ್ಕಲಕೋಟೆ, ಜತ್ತ ಮತ್ತು ಕಾಸರಗೋಡುಗಳು ಕರ್ನಾಟಕಕ್ಕೂ ನಿಪ್ಪಾಣಿ, ಖಾನಾಪುರ, ಹಳಿಯಾಳ ಮೊದಲಾದುವು ಮಹಾರಾಷ್ಟ್ರಕ್ಕೂ ಸೇರಬೇಕೆಂದೂ ಬೆಳಗಾಂವಿ ಮೈಸೂರಿನಲ್ಲೇ ಉಳಿಯಬೇಕೆಂದೂ ತೀರ್ಪು ನೀಡಿತು. ಆದರೆ ಗಡಿಹೊಂದಾಣಿಕೆಗಳ ಬಗ್ಗೆ ಇನ್ನೂ ತೀರ್ಮಾನ ಸಾಧ್ಯವಾಗಿಲ್ಲ.[೧]

ನವಮೈಸೂರು ರಾಜ್ಯ ಉದಯಗೊಂಡು, ಇತಿಹಾಸ ಪ್ರಸಿದ್ಧವಾದ ಕನ್ನಡ ರಾಜ್ಯದ ಹಳೆಯ ಗಡಿಗಳು ಕೆಲಮಟ್ಟಿಗಾದರೂ ಕೂಡಿಕೊಳ್ಳುವಂತಾದ ಮೇಲೆ, ಸಹಜವಾಗಿಯೇ ಇದು ಕರ್ನಾಟಕವೆಂಬ ಹಳಮೆಯ, ಹೆಮ್ಮೆಯ ಹೆಸರನ್ನು ಪಡೆದುಕೊಳ್ಳಲು ಸಿದ್ಧವಾದಂತೆ ಆಯಿತು. ಇದಕ್ಕಾಗಿ ಪ್ರತ್ಯೇಕವಾದ ಪ್ರಯತ್ನಗಳು ಸಾಹಿತಿಗಳ ಕಡೆಯಿಂದಲೂ ಸಾಮಾನ್ಯ ಜನತೆಯ ಕಡೆಯಿಂದಲೂ ನಿರಂತರವಾಗಿ ನಡೆಯತೊಡಗಿತು. ಈ ಪ್ರಯತ್ನಗಳು ಹೆಚ್ಚು ಉದ್ರೇಕಕ್ಕೆ ಅವಕಾಶ ಕೊಡದ ಹೋರಾಟವಾಗಿ ಪರಿಣಮಿಸಿ, ಕಡೆಗೆ ಫಲಿಸಿ, ಮೈಸೂರು ರಾಜ್ಯವಾಗಿದ್ದ ಕನ್ನಡನಾಡು ಈಗ ೧೯೭೩ರ ನವೆಂಬರ್ ೧ ರಿಂದ ಕರ್ನಾಟಕ ಎಂಬ ಹೆಸರಿನಲ್ಲಿ ಬೆಳಗುತ್ತಿದೆ. ಅನಧಿಕೃತವಾಗಿ ಕನ್ನಡ ಜನರ ವ್ಯವಹಾರದಲ್ಲಿ ಎಂದಿನಿಂದಲೂ ರೂಢಿಯಲ್ಲಿದ್ದ, ದೇಶ, ಭಾಷೆ ಹಾಗೂ ಜನಸಮುದಾಯದ ಅಭಿಮಾನದ ಸಂಕೇತವಾಗಿದ್ದ, ಆ ಹೆಸರು ಈಗ ಅಧಿಕೃತವಾಗಿಯೂ ವ್ಯವಹಾರಗೊಳ್ಳುವುದಕ್ಕೆ ಸಾಧ್ಯವಾಯಿತು.

ಇನ್ನೂ ಈಚೆಗೆ, ೧೯೭೯ರ ನವೆಂಬರ್ ೧ ರಿಂದ, ಕರ್ನಾಟಕದ ಆಡಳಿತಭಾಷೆ ಕನ್ನಡವೆಂದು ಅಧಿಕೃತವಾಗಿ ಘೋಷಿಸಲ್ಪಟ್ಟಿತು.

*

ಕರ್ನಾಟಕ : ಭೌಗೋಳಿಕವ್ಯಾಪ್ತಿ, ಭೂವಿಕಾಸ, ಮೇಲ್ಮೈಲಕ್ಷಣ ಮೊದಲಾದವು

೧. ಭೌಗೋಳಿಕವ್ಯಾಪ್ತಿ

ಕರ್ನಾಟಕ ದಕ್ಷಿಣ ಭಾರತದ ನಡುವೆ, ಸ್ವಲ್ಪ ಪಶ್ಚಿಮ ದಿಕ್ಕಿಗೆ ಅರಬ್ಬಿ ಸಮುದ್ರಕ್ಕೆ ಹೊಂದಿಕೊಂಡಂತೆ ಇರುವ ಪ್ರದೇಶ. ಇದು ಉತ್ತರದಲ್ಲಿ ಕೃಷ್ಣಾನದಿ, ದಕ್ಷಿಣದಲ್ಲಿ ಕಾವೇರಿ ಈ ಎರಡು ನದಿ, ವ್ಯವಸ್ಥೆಗಳಿಂದ ಕೂಡಿ ದಖನ್ ಪ್ರಸ್ಥಭೂಮಿಯ ನೈರುತ್ಯಭಾಗದಲ್ಲಿ ಉತ್ತರ ಅಕ್ಷಾಂಶ ೧೧ ಡಿಗ್ರಿ ೩೦' ದಿಂದ ೧೮ ಡಿಗ್ರಿ ೪೫'ದ ವರೆಗೂ ಪೂರ್ವದ ರೇಖಾಂಶ ೭೪ ಡಿಗ್ರಿ ೧೨' ದಿಂದ ೭೮ ಡಿಗ್ರಿ ೩೦'ದ ವರೆಗೂ ಹಬ್ಬಿದೆ. ವಾಯುವ್ಯ ಮತ್ತು ಉತ್ತರ ದಿಕ್ಕುಗಳಲ್ಲಿ ಮಹಾರಾಷ್ಟ್ರವೂ ಪೂರ್ವದಲ್ಲಿ ಆಂಧ್ರ ಪ್ರದೇಶವೂ ಆಗ್ನೇಯ ಮತ್ತು ದಕ್ಷಿಣ ದಿಕ್ಕುಗಳಲ್ಲಿ ತಮಿಳುನಾಡೂ ನೈರುತ್ಯದಲ್ಲಿ ಕೇರಳವೂ ಪಶ್ಚಿಮದಲ್ಲಿ ಅರಬ್ಬಿ ಸಮುದ್ರವೂ ನಮ್ಮ ನಾಡ ಭಾಗದ ಮೇರೆಗಳಾಗಿವೆ.[೭] ಇನ್ನೂ ನಿಕರವಾಗಿ ಕರ್ನಾಟಕದ ಆಯಕಟ್ಟುಗಳನ್ನು ಹೇಳಬಹುದಾದರೆ, ಹೀಗೆ ಹೇಳಬಹುದು: ಪಶ್ಚಿಮದ ಕಡೆ ಅರಬ್ಬಿಸಮುದ್ರ ಚಾಚಿಕೊಂಡಿದೆ; ವಾಯುವ್ಯದಲ್ಲಿ ಮತ್ತು ಉತ್ತರದಿಕ್ಕಿನಲ್ಲಿ ಮಹಾರಾಷ್ಟ ಪ್ರಾಂತ್ಯಕ್ಕೆ ಸೇರಿದ ಕೊಲ್ಲಾಪುರ, ದಕ್ಷಿಣ ಸತಾರ, ಸೊಲ್ಲಾಪುರ, ಉಸ್ಮಾನಾಬಾದ್, ನಾಂದೇಡ್ ಈ ಪ್ರದೇಶಗಳು ಎಲ್ಲೆಗಳಾಗಿವೆ; ಪೂರ್ವದ ಕಡೆ ಆಂಧ್ರಪ್ರದೇಶದ ನಿಜಾಮಾಬಾದ್, ಮೇಡಕ್, ಮೆಹಬೂಬ್ ನಗರ್, ಕಾರ್ನೂಲ್, ಅನಂತಪುರ, ಚಿತ್ತೂರು ಈ ಪ್ರದೇಶಗಳು ಸೀಮಾಭಾಗಗಳಾಗಿವೆ. ಇನ್ನು ಆಗ್ನೇಯ ದಕ್ಷಿಣಗಳಲ್ಲಿ ತಮಿಳುನಾಡಿನ ಉತ್ತರ ಆರ್ಕಾಟ್, ಸೇಲಂ, ಕೊಯಮತ್ತೂರು, ನೀಲಗಿರಿ ಪ್ರದೇಶಗಳಿವೆ. ನೈರುತ್ಯಭಾಗದಲ್ಲಿ ಕೇರಳ ರಾಜ್ಯದ ಮಂಜೇಶ್ವರ, ಕಾಸರಗೋಡುಗಳಿವೆ. ಹೀಗೆ ವಿವಿಧ ಭಾಷೆಗಳನ್ನಾಡುವ ವಿಭಿನ್ನ ರಾಜ್ಯಗಳ ನಡುವಣ ಸೀಮೆಯಾಗಿರುವ ಕರ್ನಾಟಕ ಕನ್ನಡ ಭಾಷೆಯನ್ನು ಮುಖ್ಯವಾಗಿ ಆಡುವ ಜನರ ಹೃದಯ ಸ್ಥಾನವಾಗಿವೆ. ಇದೇ 'ಕವಿರಾಜಮಾರ್ಗ' (ಸು. ೮೫೦) ಕರ್ತೃ ತಿಳಿಸುವ ವ್ಯಾಪ್ತಿಯ "ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡು."

ಈ ಸೀಮಾವ್ಯವಸ್ಥೆಯನ್ನು ಕರ್ನಲ್ ವಿಲ್ಕ್ಸ್ ವಿವರಿಸಿರುವ ಈ ಭೂ ಭಾಗದ ರೂಪರೇಖೆಗಳೊಂದಿಗೆ ಹೋಲಿಸಿ ನೋಡಬಹುದಾಗಿದೆ:

According to this criterion the northern limits of that extensive region (ancient carnatic) commenced near the town of Beder in the latitude of 18^0 45' N., about 60 miles N. W. from Hyderabad; following the course of this language to the S. E, it is found to be limited by a waving line which nearly touches Adwanee (Adoni) winds to the west of Gooti, skirts the town of Anantapur and passing exactly through Nundidroog, touches the range of eastern Ghauts., thence pursuing the sourthern course to the mountainous pass of gujjelhutty, it continues to follow the abrupt turn caused by the great chasm of the Western hills. Between the towns of Coimbettor, Palatchi and palghaut; and sweeping to the N.W., skirts the edges of the precipitous Western Ghauts, nearly as far north as the sources of the Kistna; whence folloing first an eastern and afterwards a north-eastern course. it terminats in rather an acute angle near Beder, already described as its northern limit.[೩]

ಕರ್ನಾಟಕ ಪೂರ್ವ ಪಶ್ಚಿಮವಾಗಿ ಸು. ೪೦೦ ಕಿಲೋ ಮೀಟರ್ ಮತ್ತು ಉತ್ತರ ದಕ್ಷಿಣವಾಗಿ ಸು. ೭೭೦ ಕಿಲೋಮೀಟರ್ ಉದ್ದದವರೆಗೆ ಹಬ್ಬಿದೆ. ಒಟ್ಟು ವಿಸ್ತೀರ್ಣ ೧, ೯೧,೭೯೧ ಚದರ ಕಿಲೋಮೀಟರ್‌ಗಳಷ್ಟು. ೧೯೮೧ ರ ಜನಗಣತಿಯಂತೆ ಕರ್ನಾಟಕದ ಒಟ್ಟು ಜನಸಂಖ್ಯೆ ೩೭, ೦೪೩, ೪೫೧ ಇವರಲ್ಲಿ ೧೪, ೨೨೮, ೯೪೭ ಮಂದಿ ಅಕ್ಷರಸ್ಥರಿದ್ದಾರೆ; ಈ ಅಕ್ಷರಸ್ಥರಲ್ಲಿ ೯,೧೭೧, ೬೭೭ ಮಂದಿ ಪುರುಷರು, ಹಾಗೂ ೫, ೦೫೭, ೨೭೦ ಮಂದಿ ಸ್ತ್ರೀಯರು. ರಾಜ್ಯದಲ್ಲಿ ಪಟ್ಟಣಗಳೂ ಗ್ರಾಮಗಳೂ ಸೇರಿದಂತೆ ಒಟ್ಟು ೨೯, ೭೭೧ ಜನವಸತಿ ಘಟಕಗಳಿವೆ, ಪಟ್ಟಣಗಳ ಸಂಖ್ಯೆ ೨೮೧, ಇವುಗಳಲ್ಲಿ ಬೆಂಗಳೂರು, ಹುಬ್ಬಳ್ಳಿ-ಧಾರವಾಡ, ಮೈಸುರು, ಮಂಗಳೂರು ದೊಡ್ಡ ಪಟ್ಟಣಗಳು, ಒಂದು ಲಕ್ಷಕ್ಕೂ ಮೀರಿದ ಜನಸಂಖ್ಯೆನ್ನು ಉಳ್ಳ ಇತರ ನಗರಗಳು ಸಂಖ್ಯೆಯಲ್ಲಿ ೧೭ ಇವೆ. ಪಟ್ಟಣದ ಜನಸಂಖ್ಯೆ ಆಧಾರದ ಮೇಲೆ ಭಾರತದಲ್ಲಿ ಕರ್ನಾಟಕದ ಸ್ಥಾನ ೫ನೆಯದು, ೫೦ ಸಾವಿರದಿಂದ ಒಂದು ಲಕ್ಷದ ವರೆಗಿನ ಜನಸಂಖ್ಯೆಯನ್ನು ಉಳ್ಳ ನಗರಗಳು ಒಟ್ಟು ೧೧; ೨೦ ಸಾವಿರದಿಂದ ೫೦ ಸಾವಿರದವರೆಗೆ ಜನಸಂಖ್ಯೆಯನ್ನು ಉಳ್ಳ ಪಟ್ಟಣಗಳು ೬೪; ೧೦ ಸಾವಿರದಿಂದ ೧೦ ಸಾವಿರದವರೆಗೆ ಜನಸಂಖ್ಯೆಯನ್ನುಳ್ಳವು ೧೦೦; ೫ ಸಾವಿರದಿಂದ ೨೦ ಸಾವಿರದವರೆಗೆ ಜನಸಂಖ್ಯೆನ್ನುಳ್ಳವು ೪೨. ೫ ಸಾವಿರಕ್ಕಿಂತ ಕಡಿಮೆ ಜನಸಂಖ್ಯೆಯವು ೧೬; ಉಳಿದವು ಗ್ರಾಮಗಳು.[೪]

ಕರ್ನಾಟಕ ರಾಜ್ಯ ಭಾರತದ ಒಟ್ಟು ವಿಸ್ತೀರ್ಣದಲ್ಲಿ (೩, ೨೮೦, ೪೩೩ ಚ. ಕಿ. ಮೀ) ಶೇಕಡ ೮. ೮೫ ವಿಸ್ತೀರ್ಣವುಳ್ಳುದು; ಹಾಗೆಯೇ ಒಟ್ಟು ಜನಸಂಖ್ಯೆಯಲ್ಲಿ (೬೮೩, ೮೧೦, ೦೫೧) ಶೇಕಡ ೫.೫೧ ಭಾಗ ಸಾಂದ್ರತೆಯುಳ್ಳುದು. ಭಾರತದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಹೋಲಿಸಿದರೆ, ವಿಸ್ತೀರ್ಣ ಹಾಗೂ ಜನಸಂಖ್ಯೆಯಲ್ಲಿ ಕರ್ನಾಟಕದ ಸ್ಥಾನ ೮ನೆಯದು. ಕರ್ನಾಟಕದ ಜನಸಾಂದ್ರತೆ ಚದರ ಕಿಲೋ ಮೀಟರ್ ಗೆ ೧೯೩.

ಆಡಳಿತದ ಉದ್ದೇಶಗಳಿಗಾಗಿ ಕರ್ನಾಟಕವನ್ನು ೪ ರೆವಿನ್ಯೂ ಉಪವಿಭಾಗಗಳಾಗಿಯೂ ೨೦ ಜಿಲ್ಲೆಗಳಾಗಿಯೂ ವಿಂಗಡಿಸಲಾಗಿದೆ. ಬೆಂಗಳೂರು, ಮೈಸೂರು, ಬೆಳಗಾಂವಿ ಮತ್ತು ಗುಲ್ಬರ್ಗ ಎಂಬವೇ ಆ ರೆವಿನ್ಯೂ ಉಪವಿಭಾಗಗಳು. ಬೆಂಗಳೂರು ಉಪವಿಭಾಗದಲ್ಲಿ ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ, ಕೋಲಾರ, ತುಮಕೂರು, ಚಿತ್ರದುರ್ಗ, ಶಿವಮೊಗ್ಗ ಈ ೬ ಜಿಲ್ಲೆಗಳು, ಮೈಸೂರು ಉಪವಿಭಾಗದಲ್ಲಿ ಮೈಸೂರು, ಮಂಡ್ಯ, ಕೊಡಗು, ಹಾಸನ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಈ ೬ ಜಿಲ್ಲೆಗಳು, ಬೆಳಗಾಂವಿ ಉಪವಿಭಾಗದಲ್ಲಿ ಬೆಳಗಾಂವಿ, ಬಿಜಾಪುರ, ಧಾರವಾಡ, ಉತ್ತರ ಕನ್ನಡ ಈ ೪ ಜಿಲ್ಲೆಗಳು, ಗುಲ್ಬರ್ಗ ಉಪವಿಭಾಗದಲ್ಲಿ ಗುಲ್ಬರ್ಗಾ, ರಾಯಚೂರು, ಬಿದರೆ, ಬಳ್ಳಾರಿ ಈ ೪ ಜಿಲ್ಲೆಗಳು- ಹೀಗೆ ಒಟ್ಟು ೨೦ ಜಿಲ್ಲೆಗಳು ವಿಂಗಡಗೊಂಡಿವೆ. ಈ ಜಿಲ್ಲೆಗಳಲ್ಲಿಯ ತಾಲ್ಲೂಕುಗಳ ಸಂಖ್ಯೆ ೧೭೫, ಈ ತಾಲ್ಲೂಕುಗಳ ಉಪಪ್ರದೇಶಗಳಾಗಿರುವ ಹೋಬಳಿ ಅಥವಾ ರೆವಿನ್ಯೂ ಸರ್ಕಲ್‌ಗಳು ಸು. ೬೮೦. ರಾಜ್ಯದ ರಾಜಧಾನಿ ಬೆಂಗಳೂರು ನಗರ[ಶ] ಜನಸಂಖ್ಯೆಯ ಹೆಚ್ಚಳ ಹಾಗೂ ಹರಹು ಎರಡರ ದೃಷ್ಟಿಯಿಂದಲೂ ಬೆಂಗಳೂರಿನ ಬೆಳವಣಿಗೆಯ ಪ್ರಮಾಣ ೧೯೭೧ ರ ಜನಗಣತಿಯ ಪ್ರಕಾರ ೩೭. ೮೨ರ ಹಾಗಿದ್ದರೂ, ೧೯೮೧ ರ ಜನಗಣತಿಯ ಪ್ರಕಾರ ೭೬.೨೭ರಷ್ಟು ಆಗಿರುವುದು ಗಮನಿಸತಕ್ಕುದಾಗಿದೆ. ಇದು ಭಾರತದಲ್ಲಿಯೇ ಬೇರೆ ಪಟ್ಟಣಗಳ ಏರಿಕೆಯ ಪ್ರಮಾಣದೊಂದಿಗೆ ಹೋಲಿಸಿದರೆ ಅತಿ ಹೆಚ್ಚಿನದು.

೧೯೬೨ ರಷ್ಟು ಹಿಂದೆಯೇ ಕರ್ನಾಟಕದ ವಿಸ್ತಾರವನ್ನು ಕುರಿತು ಹೇಳುತ್ತ, ಇತಿಹಾಸಜ್ಞರೊಬ್ಬರು (HJMV. A, 21-2 p. 57) ಇಂಗ್ಲೆಂಡ್ ಸ್ಕಾಟ್ಲೆಂಡ್ ಒಟ್ಟು ಸೇರಿದರೆ ಎಷ್ಟೋ ಅಷ್ಟು, ಪೋರ್ಚುಗಲ್ ಅಥವಾ ಗ್ರೀಸ್‌ಗೆ ಎರಡರಷ್ಟು, ಡೆನ್ಮಾರ್ಕ್‌ಗೆ ಐದರಷ್ಟು, ಹಾಲೆಂಡ್‌ಗೆ ಆರರಷ್ಟು ಮತ್ತು ಬೆಲ್ಜಿಯಂಗೆ ಏಳರಷ್ಟು ಎಂಬುದಾಗಿ ಭೌಗೋಳಿಕ ಪ್ರಮಾಣಕ್ಕೆ ಸಾದೃಶ್ಯವನ್ನು ಗುರುತಿಸಿದ್ದಾರೆ.[೬]

(ಈಗ ೧೯೮೧ ರ ಜನಗಣತಿಯ ಪ್ರಕಾರ ಸರ್ಕಾರದ ವರದಿಯಲ್ಲಿ ಸೂಚಿತವಾಗಿರುವ ಜನಸಂಖ್ಯೆ ಹೀಗೆ ಸಾದೃಶ್ಯವನ್ನು ಉಳ್ಳುದಾಗಿದೆ:)

ಕರ್ನಾಟಕದ ಜನಸಂಖ್ಯೆ ಇರಾನಿನ (೩೭,೪೩೦,೦೦೦) ಅಥವಾ ಕೊರಿಯಾ ಗಣರಾಜ್ಯದ (೩೯, ೧೪೦,೦೦೦) ಅಥವಾ ಸ್ಪೇನಿನ (೩೭,೦೭,೦೦) ಜನಸಂಖ್ಯೆಗೆ ಸಮೀಪವಾದುದಾಗಿದೆ, ಕೆನಡಾ (೨೩, ೬೮೮, ೦೦೦) ಅಥವಾ ಇಥಿಯೋಪಿಯ (೩೧,೭೮೦,೦೦೦) ಅಥವಾ ಬರ್ಮ (೩೩,೫೯೦,೦೦೦) ಅಥವಾ ಪೋಲೆಂಡ್ (೩೫, ೨೨೭, ೦೦೦) ರಾಜ್ಯಗಳ ಜನಸಂಖ್ಯೆಗಳ ಅಧಿಕವಾದುದಾಗಿದೆ. ಬಲುಮಟ್ಟಿಗೆ ನೈಜೀರಿಯಾದ್ದರ (೭೪, ೫೯೫, ೦೦೦) ಅರ್ಧದಷ್ಟಿದೆ. ಜಪಾನಿನ ಜನಸಂಖ್ಯೆಯ (೧೧೫,೮೮೦,೦೦೦) ಸು ಒಂದು ಮೂರನೆಯ ಭಾಗದಷ್ಟಿದೆ.

೨. ಕರ್ನಾಟಕದ ಭೂವಿಕಾಸ

ಕರ್ನಾಟಕ ಭೂವಿಕಾಸದ ಪರಿಶೋಧನೆಯಿಂದ, ಅದು ಆರ್ಷೇಯ ಕಲ್ಪದ ಶಿಲೆಗಳು, ಆದಿಜೀವ ಕಲ್ಪದ ಶಿಲೆಗಳು ಮತ್ತು ದಖನ್‌ಟ್ರ್ಯಾಪ್ ಎಂಬುದಾಗಿ ಮೂರು ಶಿಲಾಸಮೂಹಗಳಿಂದ ಆದುದು ಎಂಬುದಾಗಿ ತಿಳಿದಿದೆ. ಆರ್ಷೇಯಕಲ್ಪದ ಶಿಲೆಗಳು ಅತ್ಯಂತ ವಿಶಾಲವಾದವು. ಅವನ್ನು ಧಾರವಾಡ ಶಿಸ್ಟುಗಳು, ಪೆನಿನ್ಸುಲಾರ್ ನೈಸುಗಳು, ಚಾರ್ನ್‌ಕೈಟುಗಳು ಮತ್ತು ಕ್ಲೋಸ್‌ಪೇಟೆ (ರಾಮನಗರ) ಗ್ರಾನೈಟುಗಳು ಎಂದು ನಾಲ್ಕು ಉಪವಿಭಾಗ ಮಾಡಲಾಗಿದೆ. ಇವುಗಳಲ್ಲಿ ಪೆನಿನ್ಸುಲಾರ್ ನೈಸು ಬಹುಭಾಗವನ್ನಾಕ್ರಮಿಸಿದೆ ಮತ್ತು ರಾಜ್ಯದ 'ಮೈದಾನ ಪ್ರದೇಶ'ವೆನಿಸುವ ಬಹುಭಾಗ ಮಟ್ಟ ಪ್ರದೇಶವು ಈ ನೈಸುಗಳಿಂದಾಗಿದೆ. ಪೆನಿನ್ಸುಲಾರ್ ನೈಸುಗಳು ಪುರಾತನ ಶಿಸ್ಟುಗಳನ್ನು ಛೇದಿಸಿ ಅಂತಸ್ಸರಣವಾಗಿವೆ; ಅದರ ಪರಿಣಾಮವಾಗಿ ಹಿರಿಯ ಧಾರವಾಡ ಶಿಸ್ಟುಗಳು ಒಂದು ಕಡೆಗೆ ಒತ್ತರಿಸಲ್ಪಟ್ಟು, ತೊಡಕಾದ ಮಡಿಕೆಗಳಾಗಿ ಮುದುಡಲ್ಪಟ್ಟು ಈಗ ಶಿಸ್ಟು ಭೂವಲಯುಗಳೆಂದು ಕಂಡುಹಿಡಿಯಲಾಗಿರುವ ಇಕ್ಕಟ್ಟಾದ ಶಿಲಾಭಾಗಗಳಾಗಿ ದೊರಕುವಂತಾಗಿವೆ. ಈ ಶಿಸ್ಟು ಭೂವಲಯದಲ್ಲಿರುವ ಕ್ವಾರ್ಟ್ಜೈಟ್, ಫೆರುಜಿನಸ್ ಕ್ವಾರ್ಟ್ಜೈಟ್‌ಗಳಂತಹ ಗಟ್ಟಿಯಾದ ಮತ್ತು ನಿರೋಧಕ ಸ್ವಭಾವವಿರುವ ಶಿಲೆಗಳಿರುವುದರಿಂದಲೂ ಇಕ್ಕಟ್ಟಾದ ಮಡಿಕೆಗಳಾಗಿರುವುದರಿಂದಲೂ ಅವು ಭೂಸವೆತ ಕರ್ತೃಗಳ ಸವೆತಕ್ರಿಯೆಯನ್ನು ತಡೆದುಕೊಂಡಿವೆ ಮತ್ತು ಆಗಿಂದಾಗ್ಗೆ ಕಡಿದಾದ ಬೆಟ್ಟಗಳ ಮತ್ತು ಶಿಖರಗಳ ಪ್ರಮುಖಸಾಲು ಎದ್ದು ನಿಂತಿವೆ. ಪ್ರಾಂತ್ಯದ ಪಶ್ಚಿಮ ಭಾಗದಲ್ಲಿ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳ 'ಮಲೆನಾಡು' ಭಾಗಗಳೆಂದು ಹೆಸರಾದ ಕಡಿದಾದ ಬೆಟ್ಟಗಳು ಈ ಸ್ವಭಾವದವು ಮತ್ತು ಇವು ಪಶ್ಚಿಮ ಘಟ್ಟಗಳ ಭಾಗಗಳಾಗಿವೆ. ಕ್ಲೋಸ್‌ಪೇಟೆ (ರಾಮನಗರ) ಗ್ರಾನೈಟುಗಳು ಹೋಲಿಕೆಯಿಂದ ಕಿರಿದಾದರೂ ಅವು ಪ್ರಾಂತ್ಯದ ಪೂರ್ವಭಾಗದ ಮಧ್ಯದಲ್ಲಿ ಬಳ್ಳಾರಿ, ಚಿತ್ರದುರ್ಗ, ತುಮಕೂರು ಮತ್ತು ಬೆಂಗಳೂರು ಜಿಲ್ಲೆಗಳ ಮೂಲಕ ಹಾದು ಗ್ರಾನೈಟ್ ಬೆಟ್ಟಗಳ (ದೊಡ್ಡದಾದ ಗುಂಡಾದ ಬಂಡೆಗಳಿಂದಾದ ಶಂಖಾಕಾರದ ಬೆಟ್ಟಗಳಿಂದಾದ) ಸಾಲುಗಳಿಗೆ ಕಾರಣವಾಗಿವೆ. ಕರ್ನಾಟಕದ ಶಿಲಾಸಮೂಹಗಳ ಅತ್ಯಲ್ಪ ಭಾಗವಾಗಿರುವ ಚಾರ್ನ ಕೈಟುಗಳು ಪ್ರಾಂತ್ಯದ ನೈರುತ್ಯ ಭಾಗದಲ್ಲಿ ಚಿಕ್ಕ ಪ್ರದೇಶವನ್ನು ಆಕ್ರಮಿಸಿ ಬೆಟ್ಟಗಳಾಗಿ ನಿಂತಿವೆ.

ಪೂರ್ವೋಕ್ತವಾದ ಆರ್ಷೇಯ ಕಲ್ಪದ ಶಿಲೆಗಳಿಗೆ ಬಹಳ ಕಿರಿಯ ಕಲಾದ್ಗಿ ಮತ್ತು ಭೀಮಾ ಶ್ರೇಣಿಗಳು ಕೂಡ ರಾಜ್ಯದ ಉತ್ತರ ಭಾಗದಲ್ಲಿ ಅತಿಮಿತವಾದ ಹರವನ್ನು ಪಡೆದಿವೆ. ಕಲಾದ್ಗಿ ಶಿಲೆಗಳು ರೂಪಗೊಂಡ ಬಹಳ ಕಾಲವಾದ ಮೇಲೆ ರೂಪತಳೆದ ದಖನ್ ಟ್ರ್ಯಾಪ್ ಶಿಲೆಗಳು ಪ್ರಾಂತ್ಯದ ಅತ್ಯಂತ ಉತ್ತರಭಾಗದಲ್ಲಿ ಬಹಳ ಕಡಿಮೆ ಭಾಗವನ್ನಾಕ್ರಮಿಸಿವೆ. ರಚನೆಯಲ್ಲಿ ಆದಿಜೀವಕಲ್ಪ ಮತ್ತು ದಖನ್ ಟ್ರ್ಯಾಪ್ ಶಿಲೆಗಳು ಒಟ್ಟುಗೂಡಿ ಕರ್ನಾಟಕ ಪ್ರದೇಶದ ಶೇಕಡಾ ೨೫ ಭಾಗವನ್ನು ಮಾತ್ರ ಆಕ್ರಮಿಸಿವೆ. ಉಳಿದ ಶೇಕಡಾ ೭೫ ಭಾಗವು ಆರ್ಷೇಯಕಲ್ಪದ ಶಿಲೆಗಳಿಂದ ಆವರಿಸಲ್ಪಟ್ಟಿದೆ.

ಭೂವೈಜ್ಞಾನಿಕ ಜ್ಞಾನವು ಕರ್ನಾಟಕದ ಮತ್ತು ಕಾಲದ ಹಾದಿಯಲ್ಲಿ ಅದರ ಜನರ ವಿಕಾಸದ ಮುಂದಿನ ಅಧ್ಯಯನಕ್ಕೆ ಅಗತ್ಯವಾದ ಹಿನ್ನೆಲೆಯ ಬಹುಮುಖ್ಯವಾದ ಭಾಗವಾಗಿದೆ. ಈ ವಿಕಾಸದ ಮುನ್ನಡೆಯ ಪ್ರತಿಯೊಂದು ಹಂತವೂ "ವರ್ತಮಾನವು ಭೂತಕಾಲದ ಶಿಶು ಮತ್ತು ಭವಿಷ್ಯತ್‌ಕಾಲದ ಜನ್ಮದಾತ" ಎನ್ನುವ ಅರ್ಥದಲ್ಲಿ ಭೂತ ಭವಿಷ್ಯತ್ ಕಾಲಗಳೊಂದಿಗೆ ನಿಕಟಸಂಬಂಧ ಪಡೆದಿದೆ.

೩. ಮೇಲ್ಮೈಲಕ್ಷಣ

ಭೌಗೋಳಿಕವಾಗಿಯೂ ಭೂವೈಜ್ಞಾನಿಕವಾಗಿಯೂ ಭಾರತದಲ್ಲಿಯೇ ಅತ್ಯಂತ ಪ್ರಾಚೀನವಾದ ಭೂಭಾಗವೆಂದು ಹೇಳಲಾಗಿರುವ ದಖಿನ್ ಪ್ರಸ್ಥಭೂಮಿಯಲ್ಲಿ ಕರ್ನಾಟಕದ ಬಹುಭಾಗ ನೆಲೆಗೊಂಡಿದೆ. ಈ ಪ್ರಸ್ಥಭೂಮಿಯ ಎರಡೂ ಪಕ್ಕಗಳಲ್ಲಿ ಹಬ್ಬಿಕೊಂಡಿರುವ ಪೂರ್ವ ಮತ್ತು ಪಶ್ಚಿಮ ಘಟ್ಟಗಳು ಕರ್ನಾಟಕಕ್ಕೆ ದಕ್ಷಿಣದಲ್ಲಿರುವ ನೀಲಗಿರಿಯಲ್ಲಿ ಬಂದು ಸಂಧಿಸುತ್ತವೆ. ಅರಬ್ಬಿ ಸಮುದ್ರಕ್ಕೆ ಸೇರಿದಂತಿರುವ ಪಶ್ಚಿಮದ ಅಂಚಿನ ಕಿರಿದಾದ ಪಟ್ಟಿಯೊಂದೇ ತಗ್ಗುಪ್ರದೇಶ. ಸುಮಾರು ೩೨೦ ಕಿ. ಲೋ. ಮೀಟರ್‌ವರೆಗೆ ವಿಸ್ತರಿಸಿಕೊಂಡಿರುವ ಈ ಕಡಲ ತೀರ ಬಲುಮಟ್ಟಿಗೆ ನೇರವಾಗಿದೆ. ಕಡಲತೀರದ ಸುಮಾರು ೬೦-೮೦ ಕಿ. ಮೀ. ವರೆಗಿನ ಖಂಡಾವರಣ ವಲಯದಲ್ಲಿ ಸಮುದ್ರದ ಆಳ ೧೮೦ ಮೀಟರುಗಳನ್ನು ಮೀರುವುದಿಲ್ಲ. ಈ ಪಶ್ಚಿಮದ ಅಂಚಿನಿಂದ ಕಡಿದಾಗಿ ಮೇಲೇರುವ ಪಶ್ಚಿಮಘಟ್ಟಗಳು ಪೂರ್ವಘಟ್ಟಗಳಿಂತಲೂ ಹೆಚ್ಚು ಎತ್ತರ. ಈ ಕಡಿದಾದ ಬೆಟ್ಟಗಳಿಂದ ಕೆಳಗಿಳಿದು ಸಮುದ್ರವನ್ನು ಸೇರುವ ಹೊಳೆ ಝರಿಗಳು ಜಲರಾಶಿಯಲ್ಲಿ ಹೊತ್ತು ತರುವ ಆಹಾರವೂ ಕಿರಿ ಆಳದ ಕಡಲೂ ಕರ್ನಾಟಕದ ಮತ್ಸ್ಯಸಂಪತ್ತಿಗೆ ಆಧಾರ.

ಪಶ್ಚಿಮ ಕರಾವಳಿ, ಪೂರ್ವ ಪಶ್ಚಿಮ ಘಟ್ಟಗಳೆಂಬ ಮಲೆನಾಡು ಮತ್ತು ಪ್ರಸ್ಥಭೂಮಿ ಪ್ರದೇಶವೆಂಬ ಬಯಲುಸೀಮೆ ಇವು ಕರ್ನಾಟಕದ ಮೇಲ್ಮೈಯ ಸ್ಥೂಲ ವಿಭಾಗಗಳು, ಇದು ವೈವಿಧ್ಯಮಯವಾಗಿರುವ ಕರ್ನಾಟಕದ ಪ್ರಾಕೃತಿಕ ಸನ್ನಿವೇಶದ ಸ್ಥೂಲವಾದ ಒಂದು ವಿಂಗಡಣೆ ಮಾತ್ರ. ಪ್ರಾಕೃತಿಕವಾಗಿ ಭಿನ್ನವಾಗಿರುವ ಕರಾವಳಿಯ ಉತ್ತರ ಹಾಗೂ ದಕ್ಷಿಣ ಭಾಗಗಳನ್ನೂ ಕರ್ನಾಟಕದ ಮಧ್ಯಭಾಗದಲ್ಲಿ ೧೫ ಡಿಗ್ರಿ ಉತ್ತರ ಅಕ್ಷಾಂಶದ ಸಮೀಪದಲ್ಲಿ ಹರಿಯುವ ತುಂಗಭದ್ರಾ ನದಿಯಿಂದ ಪ್ರತ್ಯೇಕಿಸಲ್ಪಡುವ ಬಯಲುಸೀಮೆಯ ಉತ್ತರ ದಕ್ಷಿಣ ಪಾರ್ಶ್ವಗಳನ್ನೂ ಎತ್ತರದಲ್ಲಿ ಪೂರ್ವಘಟ್ಟಗಳನ್ನು ಮೀರುವ ಪಶ್ಚಿಮಘಟ್ಟಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ಮತ್ತೆ ವಿಭಜಿಸುವುದಾದರೆ, ಕರ್ನಾಟಕದ ಮೇಲ್ಮೈರಚನೆಯನ್ನು ಉತ್ತರ ಕರಾವಳಿ, ದಕ್ಷಿಣ ಕರಾವಳಿ, ಪಶ್ಚಿಮಘಟ್ಟ ಅಥವಾ ಸಹ್ಯಾದ್ರಿ ಪರ್ವತಶ್ರೇಣಿ, ಪೂರ್ವಘಟ್ಟ, ಉತ್ತರ ಪ್ರಸ್ಥಭೂಮಿ, ದಕ್ಷಿಣದ ದಿಣ್ಣೆ ನೆಲ ಮತ್ತು ಮಲೆನಾಡು ಅಥವಾ ಬೆಟ್ಟಗಳ ತಪ್ಪಲುಗಳು ಎಂಬುದಾಗಿ ವರ್ಗೀಕರಿಸಬಹುದು. ಕರ್ನಾಟಕದ ಪ್ರಸ್ಥಭೂಮಿ ತ್ರಿಕೋನಾಕಾರದಲ್ಲಿದ್ದು, ಅದರ ಪಾದ ಅಥವಾ ತಳ ಉತ್ತರದಲ್ಲಿಯೂ ಅದರ ಶಿರಸ್ಸು ಅಥವಾ ಅಗ್ರಭಾಗ ದಕ್ಷಿಣದಲ್ಲಿಯೂ ಇವೆ. ಇದು ದಖಿನಿನ ಬಹುಭಾಗವನ್ನು ಆಕ್ರಮಿಸಿಕೊಂಡಿದೆ. ದಖಿನೀ ದಿಣ್ಣೆನೆಲದ ಅತ್ಯಂತ ಎತ್ತರವಾದ ಭಾಗವಿರುವುದು

ಕರ್ನಾಟಕದಲ್ಲಿ. ಪರ್ಯಾಯ ದ್ವೀಪೀಯ ಭಾರತದಲ್ಲಿ ಬೇರಾವ ರಾಜ್ಯವೂ ಇಷ್ಟು ಎತ್ತರವಿಲ್ಲ. ಈ ಪ್ರಸ್ಥಭೂಮಿ ಸಮುದ್ರಮಟ್ಟಕ್ಕಿಂತ ಸಾಮಾನ್ಯವಾಗಿ ೬೦೦ ಮೀಟರುಗಳಿಗಿಂತಲೂ ಹೆಚ್ಚು ಎತ್ತರವಾಗಿದ್ದು, ಇಡೀ ದಕ್ಷಿಣಭಾರತಕ್ಕೆ ಇದು ಛಾವಣಿಯಂತಿದೆ.[೬]

ಪಶ್ಚಿಮ ಘಟ್ಟಗಳು ಅಥವಾ ಸಹ್ಯಾದ್ರಿಶ್ರೇಣಿ ಉತ್ತರ-ದಕ್ಷಿಣವಾಗಿ ಹಬ್ಬಿದ್ದು, ದಕ್ಷಿಣದತ್ತ ಸಾಗುತ್ತ ಬಂದ ಹಾಗೆ ಹೆಚ್ಚು ಹೆಚ್ಚು ಎತ್ತರವಾಗಿ ತೊಡಗಿ, ಕೊನೆಗೆ ನೀಲಗಿರಿಯೊಂದಿಗೆ ಬೆರೆಯುವುದನ್ನು ಕಾಣಬಹುದು. ಸಹ್ಯಾದ್ರಿಯ ಬೆಟ್ಟಸಾಲುಗಳಲ್ಲಿ ಕರ್ನಾಟಕದ ಅತ್ಯಂತ ಎತ್ತರವಾದ ಶಿಖರಗಳು ಕಂಡುಬರುತ್ತವೆ. ಇದರ ಒಂದು ಶಾಖೆಯಾದ ಚಂದ್ರದ್ರೋಣ ಪರ್ವತದ ಮುಳ್ಳಯ್ಯನ ಗಿರಿ ಶಿಖರದ ಎತ್ತರ ಸು. ೧೮೭೪. ೮ ಮೀ.; ಕುದುರೆಮುಖದ ಎತ್ತರ ಸು. ೧೮೯೨ ಮೀ, ಕೊಡಚಾದ್ರಿಯದು ೧೩೪೪ ಮೀ.; ಪುಷ್ಪಗಿರಿಯದು ೧೭೧೩ ಮೀ. ಹೀಗಿಯೇ ಇನ್ನೂ ಹಲವು ಉನ್ನತ ಶಿಖರಗಳಿವೆ. ಈ ಸಹ್ಯಾದ್ರಿ ಶ್ರೇಣಿಯಲ್ಲಿ ಸಂಪರ್ಕ ಮಾಧ್ಯಮಗಳಾಗಿ ಪರಿಣಮಿಸಿರುವ ಕಣಿವೆಮಾರ್ಗಗಳಲ್ಲಿ ಉತ್ತರ ಕರ್ನಾಟಕದ ಕೊಲ್ಲೂರು ಘಾಟ್, ಶಿವಮೊಗ್ಗ-ಉಡುಪಿಗಳ ನಡುವೆಯ ಆಗುಂಬೆ ಘಾಟಿ ಹಾಗೂ ಚಿಕ್ಕಮಗಳೂರು-ಮಂಗಳೂರುಗಳ ನಡುವೆ ಬರುವ ಚಾರ್ಮಾಡಿ ಘಾಟಿ ಮುಖ್ಯವಾದವು.

ಈಶಾನ್ಯ ದಿಕ್ಕಿನಿಂದ ನೈರುತ್ಯಾಭಿಮುಖವಾಗಿ ಸಾಗುವ ಪೂರ್ವಘಟ್ಟಗಳು ನೀಲಗಿರಿಯಲ್ಲಿ ಪಶ್ಚಿಮಘಟ್ಟಗಳೊಂದಿಗೆ ಕೂಡುತ್ತವೆ. ಕೋಲಾರದ ಸಮೀಪದಲ್ಲಿ ಮಾತ್ರವೇ ಇದು ಎದ್ದು ಕಾಣುವಂತೆ ನಿಲ್ಲುವುದು. ಪಶ್ಚಿಮದಿಂದ ಪೂರ್ವದ ಕಡೆಗೆ ಸಾಗುತ್ತ ಬಂದಂತೆ, ಪ್ರಸ್ಥಭೂಮಿ ಇಳಿಜಾರಾಗತೊಡಗುತ್ತದೆ. ಪೂರ್ವ ಮತ್ತು ಪಶ್ಚಿಮ ಘಟ್ಟಗಳ ನಡುವಣ ಪ್ರಸ್ಥಭೂಮಿಯನ್ನು ಬಯಲುಸೀಮೆಯೆನ್ನುತ್ತಾರೆ. ತುಂಗಭದ್ರೆಯ ಉತ್ತರಕ್ಕಿರುವ ಭೂಪ್ರದೇಶ ಕಪ್ಪುಮಣ್ಣಿನಿಂದ ಕೂಡಿದೆ. ಉತ್ತರದ ಬಯಲು ಸೀಮೆಯ ಹೆಚ್ಚುಭಾಗ ಸಮುದ್ರ ಮಟ್ಟಕ್ಕಿಂತ ಸು. ೬೧೦ ಮೀ. ಗಳಷ್ಟು ಎತ್ತರದಲ್ಲಿದೆ; ಪೂರ್ವಭಾಗದ ಕೆಲವು ಘಟ್ಟಗಳು ಸು. ೩೬೬ ರಿಂದ ೩೯೬ ಮೀ. ಗಳಷ್ಟು ಕೆಳಸ್ತರದಲ್ಲಿದೆ. ದಕ್ಷಿಣಭಾಗದ ಮೈದಾನ ಇನ್ನೂ ಹೆಚ್ಚು ಎತ್ತರದಲ್ಲಿದ್ದು, ೯೧೫ ರಿಂದ ೯೭೫ ಮೀಟರುಗಳಷ್ಟು ಎತ್ತರವನ್ನು ತಲುಪುವುದುಂಟು. ಇಂಗ್ಲಿಷ್ ವರ್ಣಮಾಲೆಯ 'ಹೆಚ್' ಅಕ್ಷರವನ್ನು ಹೋಲುವ ಉಬ್ಬುನೆಲ ಇಲ್ಲಿಯದು. ಈ ಆಕೃತಿಯ ಪಶ್ಚಿಮದ ಪಾದ ಮಲೆನಾಡಿನ ಪೂರ್ವದ ಅಂಚಿನಲ್ಲಿ ನೆಲೆಗೊಂಡಿದ್ದರೆ, ಪೂರ್ವದ ಪಾದ ಬಿಳಿಗಿರಿರಂಗನ ಬೆಟ್ಟದಿಂದ ಮಧುಗಿರಿ ಪಾವಗಡಗಳವರೆಗೆ ಹಬ್ಬಿಕೊಂಡಿರುವ ಹಾಗೂ ರಾಮನಗರದ ಮೂಲಕ ಹಾದೂ ಹೋಗುವ ಶಿಲಾಶ್ರೇಣಿಯಲ್ಲಿ ನೆಲೆಗೊಂಡಿದೆ. ಅಲ್ಲಿಂದ ಮುಂದೆ ಇದು ಸಾಗಿ ಸಂಡೂರಿನ ಕಬ್ಬಿಣದ ಅದುರಿನ ಬೆಟ್ಟಗಳ ಮೇಲೆ ಹಾದುಹೋಗುತ್ತದೆ. ಈ ಭೂಭಾಗದ ಎತ್ತರ ೯೧೫ ಮೀ. ಗಳಿಂದ (ಮಲೆನಾಡಿನಲ್ಲಿ) ಹಿಡಿದು ೧೭೩೭ ಮೀ. ಗಳವರೆಗೆ (ಬಿಳಿಗಿರಿರಂಗನ ಬೆಟ್ಟ) ಹೆಚ್ಚು ಕಡಿಮೆಯಾಗುವುದುಂಟು. 'ಹೆಚ್' ಆಕೃತಿಯ ಕೆಳ ಅರ್ಧದ ಆವರಣದಲ್ಲಿ ಕಾವೇರಿ ಕಣಿವೆಯ ಮಧ್ಯಭಾಗವೂ ಮೇಲರ್ಧದಲ್ಲಿ ತುಂಗಭದ್ರಾ ಕಣಿವೆಯ ಭಾಗವೂ ಕಂಡುಬರುತ್ತವೆ. ಬಿಳಿಗಿರಿರಂಗನ

ಬೆಟ್ಟದ ಶ್ರೇಣಿಗಳೂ ದಕ್ಷಿಣಾಭಿಮುಖವಾಗಿ ಸಾಗಿ ನೀಲಗಿರಿ ಶ್ರೇಣಿಯನ್ನು ಸೇರುತ್ತವೆ.

ರಾಮನಗರ-ಹೊಳೆ ನರಸೀಪುರ ನಡುಪಟ್ಟಿಯ ಉತ್ತರಕ್ಕೆ ಇರುವ ಪ್ರಸ್ಥಭೂಮಿಯ ಸರಾಸರಿ ಎತ್ತರ ಸು. ೯೧೫ ಮೀ. ಇಲ್ಲಿಯ ಶಿಲಾಶ್ರೇಣಿಗಳಲ್ಲಿ ಒಂದು, ಚಿಕ್ಕನಾಯಕನ ಹಳ್ಳಿಯ ಬಳಿಯಿಂದ ದಾವಣಗೆರೆಯನ್ನು ಹಾಯ್ದು ಉತ್ತರದ ಮೈದಾನ ಪ್ರದೇಶದಲ್ಲಿನ ಮಂಡರಗಿ ಬಳಿಯಿರುವ ಡಂಬಳ ಬೆಟ್ಟಗಳವರೆಗೆ ವ್ಯಾಪಿಸಿಕೊಂಡಿದೆ. ಇನ್ನೊಂದು ಶ್ರೇಣಿ ಹೆಚ್ಚು ಸಂಕೀರ್ಣವಾಗಿದ್ದು, ಕೃಷ್ಣರಾಜಪೇಟೆಯಿಂದ ವಾಯವ್ಯ ದಿಕ್ಕಿನಲ್ಲಿ ಸಾಗಿ ಹೊನ್ನಾಳಿಯ ಆಚೆಯವರೆಗೂ ವಿಸ್ತರಿಸಿಕೊಂಡಿದೆ. ಇವುಗಳ ನಡುವಣ ಭೂಭಾಗವನ್ನು ದಕ್ಷಿಣ ಮೈದಾನದ ಉಪಪ್ರದೇಶವೆಂದು ಕರೆಯಲಾಗಿದೆ. ಈ ನೆಲದ ಉತ್ತರದ ಏರು ಹೆಚ್ಚು ಎತ್ತರವಾಗಿದ್ದು, ನಂದಿಬೆಟ್ಟದಲ್ಲಿ ೧೪೬೭ ಮೀ. ಎತ್ತರವನ್ನು ಅದು ತಲುಪುತ್ತದೆ. ಬಾಗೇಪಲ್ಲಿಯ ಪೂರ್ವದಿಂದ ಬಂಗಾರಪೇಟೆಯವರೆಗೆ ಇನ್ನೊಂದು ಶ್ರೇಣಿಯನ್ನು ಕಾಣಬಹುದಾಗಿದೆ.

ದಕ್ಷಿಣ ಮೈದಾನ ಹಳೆಯ ಮೈಸೂರು ರಾಜ್ಯದ ೯ ಜಿಲ್ಲೆಗಳನ್ನೊಳಗೊಂಡಿರುವ ಭೂಭಾಗ, ಈ ಭೂಭಾಗದ ಉತ್ತರಪಾರ್ಶ್ವ ದಕ್ಷಿಣಪಾರ್ಶ್ವಕ್ಕಿಂತ ಹೆಚ್ಚು ಸಮತಲ ಪ್ರದೇಶವನ್ನು ಒಳಗೊಂಡಿದೆ; ಸು. ೭೯೦ ಮೀ. ಎತ್ತರದಲ್ಲಿದೆ. ಪಶ್ಚಿಮ ಹಾಗೂ ದಕ್ಷಿಣದ ಕೆಲವು ಭಾಗಗಳು ಸರಾಸರಿ ಸು. ೧೦೮೦ ಮೀ. ಗಳಷ್ಟು ಎತ್ತರದಲ್ಲಿದ್ದು, ಕೆಲವೆಡೆಗಳಲ್ಲಿ ೧೮೦೦ ಮೀ. ಗಳಷ್ಟು ಎತ್ತರಕ್ಕೆ ಏರುವುದೂ ಉಂಟು. ಉತ್ತರದ ಮೈದಾನಕ್ಕೆ ಭಿನ್ನವಾಗಿ ದಕ್ಷಿಣ ಮೈದಾನವು ಕೆಂಪುಮಣ್ಣಿನಿಂದ ಕೂಡಿರುವುದು ಗಮನಾರ್ಹವಾದುದು.

ರಾಜ್ಯದ ಪಶ್ಚಿಮದ ಸೆರಗಿನಲ್ಲಿ, ದಕ್ಷಿಣದ ತುದಿಯಿಂದ ಉತ್ತರದ ಕಾರವಾರದ ವರೆಗೆ ಸು. ೩೨೦ ಕಿ. ಮೀ. ಗಳಷ್ಟು ದೂರ ಚಾಚಿಕೊಂಡಿರುವ ಭೂಭಾಗವೇ ಕರಾವಳಿ ಪ್ರದೇಶ. ಇದರ ಅಗಲ ಸು. ೧೦ ರಿಂದ ೬೪ ಕಿ. ಮೀ. ವರೆಗೆ ವ್ಯತ್ಯಾಸಗೊಳ್ಳುತ್ತ ಸಾಗುತ್ತದೆ. ಕೆಲವೆಡೆ ಎತ್ತರ ೧೨೦ ಮೀಟರ್‌ಮೀರುವುದುಂಟು. ಅಪ್ಪಳಿಸುವ ಅಲೆಗಳ ಘೋಷದಿಂದ ಅನುರಣಿಸುವ ಕಡಲ ತೀರ ತೆಂಗು-ಗೇರುಗಳ ತೋಟಗಳು, ಹಸಿರುಗದ್ದೆಗಳು ಮತ್ತು ಹಿನ್ನೆಲೆಯ ಅರಣ್ಯಾವೃತ ಘಟ್ಟ ಪ್ರದೇಶಗಳಿಂದ ರಮಣೀಯವಾಗಿದೆ. ಬೈಂದೂರಿನಿಂದ ಉತ್ತರಕ್ಕೆ ಸಾಗಿದಂತೆ ಕಿರಿದಾಗಿಯೂ ದಕ್ಷಿಣಕ್ಕೆ ಮಂಗಳೂರಿನತ್ತ ಸಾಗುತ್ತ ಬಂದಂತೆ ಅಗಲವಾಗಿಯೂ ಈ ತೀರಪ್ರದೇಶವಿದೆ. ಅಲ್ಲಲ್ಲಿ ಕೆಲವು ಕಣಿವೆಗಳೂ ಅಳುವೆಗಳೂ ಏರ್ಪಟ್ಟಿವೆ. ಕಾರವಾರದಿಂದ ಪೂರ್ವ ಹಾಗೂ ದಕ್ಷಿಣಾಭಿಮುಖವಾಗಿ ಸಾಗುತ್ತ ಬಂದಂತೆ ಪ್ರಸ್ಥಭೂಮಿ ಎದುರಾಗಿ ಸುಮಾರು ೬೧೦ ಮೀಟರುಗಳಷ್ಟು ಎತ್ತರದ ಭೂಭಾಗವನ್ನು ಸೇರುತ್ತದೆ. ಇತ್ತ ಉಡುಪಿಯಿಂದ ಪುತ್ತೂರಿನವರೆಗೆ ಮೇಲ್ಮುಖವಾಗಿ ಸಾಗುವ ಭೂಭಾಗದಲ್ಲಿ ಕೆಲವೆಡೆ ಸು. ೩೦೫ ಮೀ. ಗಳಷ್ಟು ಎತ್ತರವನ್ನೂ ಮೀರುವ ಗಿರಿಶ್ರೇಣಿಗಳೂ ಉಂಟು.

ಪಶ್ಚಿಮಘಟ್ಟಗಳ ಏಣೆನಿಂದ ಪೂರ್ವಕ್ಕೆ ಮೈದಾನದವರೆಗೆ ಚಾಚಿಕೊಂಡಿರುವ

ಅರಣ್ಯಾವೃತ ಪ್ರದೇಶವೇ ಮಲೆನಾಡು. ಈಗ ಅರಣ್ಯ ಕ್ಷೀಣವಾಗುತ್ತ ಬಂದಿದೆ. ಇದರ ಅಗಲ ಒಂದೇ ಸಮನಾಗಿಲ್ಲ. ಸಕಲೇಶಪುರದ ಬಳಿ ಕೇವಲ ಸು. ೨ ಕಿ. ಮೀ. ಅಗಲವಾಗಿರುವ ಈ ಭೂಭಾಗ ಕೆಲವೆಡೆ ಸು. ೧೦೦ ಕಿ. ಮೀ. ಗಳಷ್ಟು ವಿಶಾಲವಾದುದಾಗಿದೆ. ಈ ಭೂಭಾಗದ ಎಡೆಗಳು ಹೆಚ್ಚು ಎತ್ತರವಾಗಿಯೇನೂ ಇಲ್ಲ. ದಕ್ಷಿಣದ ಭಾಗ ೭೩೦ ರಿಂದ ೮೫೦ ಮೀ. ಗಳಷ್ಟು ಎತ್ತರವಾಗಿದ್ದು, ಪಶ್ಚಿಮದ ಕಡೆ ಬಾಬಾಬುಡನ್ ಗಿರಿ ಶ್ರೇಣಿಯಲ್ಲಿ ೧೩೫೦ ರಿಂದ ೧೮೯೦ ಮೀ. ಗಳ ವರೆಗೆ ಹೆಚ್ಚಿನ ಎತ್ತರವನ್ನು ಕಾಣುತ್ತೇವೆ. ಮುಂದೆ ಕರಾವಳಿಯತ್ತ ಕಡಿದಾಗಿ ಇಳಿಯುತ್ತ ಸಾಗುತ್ತದೆ.

೪. ವಾಯುಗುಣ

ಕರ್ನಾಟಕದಲ್ಲಿ ಬಹುಭಾಗ ಸಮುದ್ರಮಟ್ಟಕ್ಕಿಂತ ಹೆಚ್ಚಿನ ಎತ್ತರದಲ್ಲಿರುವುದರಿಂದ ವಾಯುಗುಣದ ವೈಪರೀತ್ಯಗಳೇನೂ ಅಷ್ಟಾಗಿ ಕಂಡುಬರುವುದಿಲ್ಲ. ಸಾಮಾನ್ಯವಾಗಿ ಎಲ್ಲಿಯೂ ಕನಿಷ್ಠ ಮತ್ತು ಗರಿಷ್ಠ ಉಷ್ಣತೆಗಳ ನಡುವಣ ಅಂತರ ಅತಿರೇಕದ ಪ್ರಮಾಣಗಳನ್ನು ತೋರುವುದಿಲ್ಲ. ಪ್ರಸ್ಥಭೂಮಿಯ ನಡುಗಡ್ಡೆಯಲ್ಲಿ ಹಾಗೂ ಹಾಸನ, ಕೊಡಗು, ಬೆಂಗಳೂರು, ಧಾರವಾಡ ಮತ್ತು ಬೀದರ್‌ಜಿಲ್ಲೆಗಳಲ್ಲಿ ಸಾಮಾನ್ಯವಾಗಿ ಹವಾಗುಣ ತಂಪಾಗಿರುತ್ತದೆ. ಇಲ್ಲಿಯೂ ಭಾರತಪರ್ಯಾಯ ದ್ವೀಪದ ವಿಲಕ್ಷಣ ಮಳೆಮಾರುತದ ವಾಯುಗುಣದ ಲಕ್ಷಣಗಳೇ ಗೋಚರಿಸುತ್ತವೆ; ಎಂದರೆ, ನೈರುತ್ಯ ಮತ್ತು ಈಶಾನ್ಯ ಮಳೆಮಾರುತಗಳ ಪ್ರಭಾವವೇ ಇಲ್ಲಿ ಕಂಡು ಬರುತ್ತದೆ. ಇದರಿಂದಾಗಿ ಜೂನ್ ಮಧ್ಯಭಾಗದಿಂದ ಸೆಪ್ಟೆಂಬರ್‌ವರೆಗೆ ನೈರುತ್ಯ ದಿಕ್ಕಿನ ಮಳೆಮಾರುತಪ್ರೇರಿತವಾದ ಮಳೆಗಾಲವಿರುತ್ತದೆ. ಈ ಅವಧಿಯಲ್ಲಿ ರಾಜ್ಯದ ಪಶ್ಚಿಮ ಭಾಗದಲ್ಲಿ ವಿಶೇಷವಾಗಿ ಮಳೆಯಾಗುತ್ತದೆ. ಅಕ್ಟೋಬರ್‌ನಲ್ಲಿ ಬರುವ ಈಶಾನ್ಯ ದಿಕ್ಕಿನ ಮಳೆಮಾರುತದ ಹಿಂಗಾರಿನಲ್ಲಿ ಈಶಾನ್ಯಭಾಗಗಳಿಗೆ ಮಳೆಯಾಗುತ್ತದೆ. ಮಳೆಯ ಪ್ರಮಾಣ ಕಡಿಮೆಯಾದರೂ ಕೃಷಿಗೆ ಇದು ಉಪಯುಕ್ತವಾದುದು. ಡಿಸೆಂಬರ್ ಮಧ್ಯದಿಂದ ಫೆಬ್ರುವರಿಯುವರೆಗೆ ಚಳಿಗಾಲ. ಈ ಅವಧಿಯಲ್ಲಿ ಮಳೆಮಾರುತಗಳು ಭೂಭಾಗದಿಂದ ಸಮುದ್ರದ ಕಡೆಗೆ ಬೀಸತೊಡಗುವುದರಿಂದ ರಾಜ್ಯದಲ್ಲಿ ಸಾಮಾನ್ಯವಾಗಿ ಮಳೆಯೇನೂ ಇರುವುದಿಲ್ಲ. ಮಳೆಗಾಲದಲ್ಲಿ (ಜೂನ್-ಸೆಪ್ಟೆಂಬರ್) ಉತ್ತರ ಕನ್ನಡ, ದಕ್ಷಿಣ ಕನ್ನಡ, ಬೆಳಗಾಂವಿ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಮಳೆ ಹೆಚ್ಚಾಗಿರುತ್ತದೆ. ಈ ಜಿಲ್ಲೆಗಳಲ್ಲಿ ಸರಾಸರಿ ಮಳೆ ೩೭೫೦ ಮಿ. ಮೀ. ಶಿವಮೊಗ್ಗ ಜಿಲ್ಲೆಯ ಆಗುಂಬೆಯಂತೂ ದಕ್ಷಿಣದ ಚಿರಾಪುಂಜಿಯೆಂದು ಪ್ರಖ್ಯಾತವಾಗಿದ್ದು, ಇಲ್ಲಿ ವಾರ್ಷಿಕವಾಗಿ ಸರಾಸರಿ ೭೬೦೦ ಮಿ. ಮೀ. ಮಳೆಯಾಗುವುದು. ಬೆಂಗಳೂರು, ಕೋಲಾರ, ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ಮಳೆಯ ಸರಾಸರಿ ಸು. ೭೫೦ ಮಿ. ಮೀ. ಗಳಷ್ಟಾದರೆ, ಇತ್ತ ಬೀದರ್, ಗುಲ್ಬರ್ಗ, ಬಿಜಾಪುರ, ರಾಯಚೂರು, ಬಳ್ಳಾರಿ, ಚಿತ್ರದುರ್ಗ, ಧಾರವಾಡ ಮತ್ತು ತುಮಕೂರು ಜಿಲ್ಲೆಗಳಲ್ಲಿ ಈ ಸರಾಸರಿ ೬೨೫ ಮಿ. ಮೀ. ಗಳಿಗೆ ಇಳಿಯುತ್ತದೆ. ಈ ಜಿಲ್ಲೆಗಳ ಕೆಲವು ಭಾಗಗಳಲ್ಲಿಯಂತೂ ಸು. ೩೭೫ ಮಿ. ಮಿ. ಗಳಿಗಿಂತಲೂ ಕಡಿಮೆ ಮಳೆಯಾಗುವುದೂ ಇದೆ. ಮಳೆಯ ಪ್ರಮಾಣವನ್ನು ಅನುಸರಿಸಿ ಉಷ್ಣತೆಯಲ್ಲಿ ಏರಿಳಿತಗಳುಂಟಾಗುತ್ತವೆ.

ಒಟ್ಟಿನಲ್ಲಿ ಹವಾಗುಣದ ದೃಷ್ಟಿಯಿಂದ, ಕರ್ನಾಟಕದ ಋತುಮಾನ ಭಾರತದ ಋತುಮಾನವನ್ನು ಹೊಂದಿಯೇ ಇರುತ್ತದೆ. ಆದರೆ ಇತರ ಕೆಲವು ರಾಜ್ಯಗಳ ಹಾಗೆ ವೈಪರೀತ್ಯಗಳೇನೂ ಕಾಣುವುದಿಲ್ಲ; ಎಂದರೆ ಬಿಸಿಲಿನ ಪ್ರಖರತೆ, ಚಳಯ ತೀವ್ರತೆಯಿಂದಾಗಿ ಪ್ರಾಣಹಾನಿಯಾಗುವಂಥ ನಿದರ್ಶನಗಳಿಲ್ಲ. ಕರಾವಳಿಯ ಪ್ರದೇಶಗಳಲ್ಲಿ, ಗುಲ್ಬರ್ಗ, ರಾಯಚೂರು ಹಾಗೂ ಬೀದರ್ ಜಿಲ್ಲೆಗಳಲ್ಲಿ ಬೇಸಿಗೆಯಲ್ಲಿ ಉಷ್ಣತೆ ಹೆಚ್ಚಿರಬಹುದಾದರೂ ಅದು ಅತಿರೇಕಕ್ಕೆ ಹೋಗುವುದಿಲ್ಲ. ಋತುಚಕ್ರದ ಗತಿಯಂತೆ ಸ್ಥೂಲವಾಗಿ ಮಾರ್ಚಿಯಿಂದ ಮೇ ವರೆಗಿನ ಮೂರು ತಿಂಗಳು ಬೇಸಗೆಕಾಲ, ಜೂನ್‌ನಿಂದ ಅಕ್ಟೋಬರ್‌ವರೆಗಿನ ಐದು ತಿಂಗಳು ಮಳೆಗಾಲ, ನವೆಂಬರ್‌ನಿಂದ ಫೆಬ್ರುವರಿಯ ವರೆಗಿನ ನಾಲ್ಕು ತಿಂಗಳು ಚಳಿಗಾಲ ಎಂದು ಕರ್ನಾಟಕದ ವಾಯುಗುಣವನ್ನು ವಿಭಜಿಸಬಹುದಾಗಿದೆ.

೫. ಜಲಸಂಪತ್ತು

ಕರ್ನಾಟಕದ ಜಲಸಂಪತ್ತನ್ನು ಪಶ್ಚಿಮಕ್ಕೆ ಹರಿಯುವ ನದೀಜಾಲ, ಕೃಷ್ಣಾ ನದೀಜಾಲ, ಕಾವೇರಿ ನದೀಜಾಲ, ಗೋದಾವರೀ ನದೀಜಾಲ ಹಾಗೂ ಪಾಲಾರ್-ಪೆನ್ನಾರ್ ನದೀಜಾಲವೆಂದು ಐದು ಭಾಗಗಳಾಗಿ ವಿಂಗಡಿಸಬಹುದಾಗಿದೆ. ಮೊದಲನೆಯದು ಪಶ್ಚಿಮ ಘಟ್ಟಗಳಲ್ಲಿ ಜನಿಸಿ ಪಶ್ಚಿಮ ದಿಕ್ಕಿಗೇ ಹರಿಯುವ ನದೀಸಮೂಹವನ್ನು ಸೂಚಿಸುತ್ತದೆ. ಶರಾವತಿ, ಅಘನಾಶಿನಿ, ನೇತ್ರಾವತಿ, ವಾರಾಹಿ ಮೊದಲಾದ ೫೭ ನದಿಗಳ ಜಾಲವನ್ನು ಉಳ್ಳದು ಇದು, ಜಲವಿದ್ಯುತ್ ಉತ್ಪಾದನೆಗೆ ಮಹತ್ವದ ಕೊಡುಗೆ ಇವುಗಳಿಂದ ಬಲುಮಟ್ಟಿಗೆ ಸಂದಿದೆ. ೩೮ ಶತ ಕೋಟಿ ಘನಮೀಟರುಗಳೆಂದು ಅಂದಾಜು ಮಾಡಿರುವ ಈ ಜಲಸಂಪತ್ತು, ಒಟ್ಟಿನಲ್ಲಿ ಕರ್ನಾಟಕದ ಶೇ. ೧೦ ರಷ್ಟು ಪ್ರದೇಶವನ್ನು ಒಳಕೊಂಡಿದೆ. ಮಹಾರಾಷ್ಟ್ರದ ಮಹಾಬಲೇಶ್ವರದಲ್ಲಿ ಮೂಡಿ ಕರ್ನಾಟಕದಲ್ಲಿ ಹರಿದು, ಆಂಧ್ರಪ್ರದೇಶವನ್ನು ಹೊಗುವ ಒಂದು ಮುಖ್ಯನದಿ ಕೃಷ್ಣೆಯ ನದೀಜಾಲವೂ ಸಮೃದ್ಧವಾದುದು. ತುಂಗಭದ್ರಾ, ವೇದಾವತಿ, ವರದಾ, ಭೀಮಾ, ಘಟಪ್ರಭಾ, ಮಲಪ್ರಭಾ ಮೊದಲಾದವು ಈ ನದೀಜಾಲಕ್ಕೆ ಸೇರಿದವಾಗಿವೆ. ಕೃಷ್ಣೆಗೆ ಬಂದು ಸೇರುವ ಎಲ್ಲ ನದಿಗಳೂ ಉಪನದಿಗಳೂ ಸು. ೨೮ ಕೋಟಿ ಘನಮೀಟರುಗಳಷ್ಟು ನೀರನ್ನು ಒದಗಿಸುತ್ತವೆಯೆಂದು ಅಂದಾಜಿದೆ. ಆದರೆ ಬಳಸುತ್ತಿರುವ ಜಲಸಂಪತ್ತಿನ ಪ್ರಮಾಣ ೧/೩ ಭಾಗ ಮಾತ್ರ. ಕೊಡಗು ಜಿಲ್ಲೆಯ ಭಾಗಮಂಡಲದಲ್ಲಿ ಹುಟ್ಟಿ ಪೂರ್ವಾಭಿಮುಖವಾಗಿ ಹರಿಯುವ ಕಾವೇರಿ ಮುಖ್ಯವಾಗಿ ಮೈಸೂರು ಮಂಡ್ಯ ಜಿಲ್ಲೆಗಳಿಗೆ ಸಹಾಯಕವಾಗಿವೆ; ಈಚೆಗೆ ಹಾಸನ, ಕೊಡಗು, ಬೆಂಗಳೂರು, ತುಮಕೂರು ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೂ ಇದರ ಪ್ರಯೋಜನ ಸಲ್ಲುತ್ತಿದೆ. ಈ ನದಿಗೆ ಸೇರುವ ನಮ್ಮ ರಾಜ್ಯದ ಉಪನದಿಗಳೆಂದರೆ ಹಾರಂಗಿ, ಹೇಮಾವತಿ, ಕಪಿಲಾ, ಶಿಂಷಾ, ಅರ್ಕಾವತಿ ಮೊದಲಾದವು. ಇವು ಸುಮಾರು ೨೦. ಜಲಸಂಪತ್ತಿನ ಅಂದಾಜು ಸು. ೧೭ ಶತಕೋಟಿ ಘನಮೀಟರುಗಳು. ಗೋದಾವರೀ ನದೀಜಾಲದೊಳಗೆ, ಆ ನದಿಗೆ ಸೇರುವ ಉಪನದಿಗಳಾದ ಬೀದರ್ ಜಿಲ್ಲೆಯ ಮಾಂಜರಾ, ಕಾರಂಜಿ, ಮಧುರನಾಲಾ, ದೇವನಾಲಾ, ಹೆಬ್ಬಾಳ ಮುಂತಾದವು ಸೇರುತ್ತವೆ. ಪಾಲಾರ್-ಪೆನ್ನಾರ್

ನದೀ ಜಾಲವು ನಂದೀದುರ್ಗದ ಪೂರ್ವಕ್ಕೆ ಹರಿಯುವ ನದಿಗಳನ್ನು ಒಳಗೊಂಡಿದೆ. ಇವುಗಳಲ್ಲಿ ಪಿನಾಕನಿ, ಪಾಲಾರ್, ಪೆನ್ನಾರ್ ಮುಖ್ಯವಾದವು. ಕೋಲಾರ್ ಜಿಲ್ಲೆಯ ಬಹುಭಾಗ, ಬೆಂಗಳೂರು ಜಿಲ್ಲೆಯ ಸು. ೧/೩ ಭಾಗ, ತುಮಕೂರು ಜಿಲ್ಲೆಯ ಸು. ೧ಳ ಭಾಗ ಈ ನದೀಜಾಲದ ವ್ಯಾಪ್ತಿಗೆ ಒಳಪಡುತ್ತವೆ. ಒಟ್ಟಾರೆ ಜಲಸಂಪತ್ತು ೦.೯೮ ಶತಕೋಟಿ ಘನಮೀಟರು ಎಂಬುದು ಅಂದಾಜು.

ರಾಜ್ಯದ ನೀರಾವರಿ ಯೋಗ್ಯಭೂಮಿಯಲ್ಲಿ ಪಶ್ಚಿಮಕ್ಕೆ ಹರಿಯುವ ನದಿಗಳಿಂದ ಸು. ೧. ೭೬ ಲಕ್ಷ, ಕೃಷ್ಣಾನದೀಜಾಲದಿಂದ ಸು. ೭.೪ ಲಕ್ಷ, ಕಾವೇರೀ ನದೀಜಾಲದಿಂದ ೩ ಲಕ್ಷ, ಗೋದಾವರೀ ನದೀಜಾಲದಿಂದ ೦.೧೭ ಲಕ್ಷ, ಪಾಲಾರ್-ಪೆನ್ನಾರ್ ನದೀಜಾಲದಿಂದ ಸು. ೧.೩೭ ಲಕ್ಷಣಗಳಷ್ಟು ಹೆಕ್ಟೇರ್ ಪ್ರದೇಶಗಳು ನೀರಾವರಿ ಸೌಲಭ್ಯ ಪಡೆದುಕೊಂಡಿವೆ. ಉಳಿದ ಸಾಗುವಳಿ ಭೂಮಿಗೆ, ಎಂದರೆ ಸು. ೮೬ ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಮಳೆಯೇ ಮುಖ್ಯವಾದ ಆಧಾರ, ಶಿಂಷಾ, ಶರಾವತಿ ಮತ್ತು ಕಾಳೀನದಿಗಳು ಜಲವಿದ್ಯುತ್ ಯೋಜನೆಗೆ ಒದಗಿರುವಂಥವಾಗಿವೆ.

೬. ಸಸ್ಯಸಂಪತ್ತು

ಕರ್ನಾಟಕದ ಪ್ರಸ್ಥಭೂಮಿಯ ಉತ್ಕೃಷ್ಟ ವಾಯುಗುಣ ಮತ್ತು ಸಮೃದ್ಧವಾದ ಮಳೆಯ ಪರಿಣಾಮವಾಗಿ ಇಲ್ಲಿಯ ಗಹನ ಅರಣ್ಯಗಳು ಸಸ್ಯಸಂಪತ್ತಿಯಿಂದಲೂ ಪ್ರಾಣಿಸಮೂಹಗಳಿಂದಲೂ ಕೂಡಿದೆ. ಇಲ್ಲಿಯ ಒಟ್ಟು ಭೂವಿಸ್ತೀರ್ಣದ ಸು. ಶೇಕಡ ೧೫ ರಷ್ಟು ಮಾತ್ರ, ಎಂದರೆ ೨೮,೯೫,೧೫೮ ಹೆಕ್ಟೇರುಗಳಷ್ಟು ಪ್ರದೇಶ ಮಾತ್ರ ಅರಣ್ಯಾವೃತವಾಗಿದೆ. ಕರ್ನಾಟಕದ ಕರಾವಳಿ, ಮಲೆನಾಡು ಮತ್ತು ಮೈದಾನ ಪ್ರದೇಶಗಳು ಹಾಗೂ ದಕ್ಷಿಣ ಉಷ್ಣವಲಯದ ಇಲ್ಲಿಯ ವಾಯುಗುಣ, ಮಳೆಯ ವಾರ್ಷಿಕ ಸರಾಸರಿ ಹಾಗೂ ಭೂಗುಣ ಇವನ್ನು ಲಕ್ಷಿಸಿ ಇಲ್ಲಿಯ ಸಸ್ಯ ಸಂಪತ್ತನ್ನು ಹೀಗೆ ವರ್ಗೀಕರಿಸಬಹುದು. ಉಷ್ಣವಲಯದ ನಿತ್ಯಹರಿದ್ವರ್ಣದ ಕಾಡುಗಳು, ಉಷ್ಣವಲಯದ ಆಂಶಿಕ ನಿತ್ಯಹರಿದ್ವರ್ಣದ ಕಾಡುಗಳು, ಬೇಸಿಗೆಯಲ್ಲಿ ಎಲೆಯುದುರುವ ಮಲೆನಾಡಿನ ಕಾಡು, ಮೈದಾನಪ್ರದೇಶದ ಒಣಕಾಡು ಮತ್ತು ಕುರುಚಲು ಕಾಡು. ಉತ್ತರ ಕನ್ನಡ ಜಿಲ್ಲೆಯ ಹಲವು ಭಾಗಗಳು, ಶಿವಮೊಗ್ಗ ಜಿಲ್ಲೆಯ ಆಗುಂಬೆ, ಹಾಸನ ಜಿಲ್ಲೆಯ ಬಿಸಲೆಘಾಟು, ಕೊಡಗು ಜಿಲ್ಲೆಯ ಮಾಕುಟ್ಟಿ ಇವು ನಿತ್ಯಹರಿದ್ವರ್ಣದ ಅರಣ್ಯಗಳ ನೆಲೆಗಳು, ಉತ್ತರ ಕನ್ನಡ ಜಿಲ್ಲೆಯ ಕೆಲವು ಭಾಗಗಳು, ಕೊಡಗು ಜಿಲ್ಲೆಯ ಬಹುಭಾಗ, ಶಿವಮೊಗ್ಗ ಜಿಲ್ಲೆಯ ಜೋಗ್, ಬೆಳಗಾವಿ ಜಿಲ್ಲೆಯ ಅನೇಕ ಭಾಗಗಳು ಆಂಶಿಕ ನಿತ್ಯಹರಿದ್ವರ್ಣದ ಕಾಡುಗಳನ್ನು ಒಳಕೊಂಡಿವೆ. ಮೈಸೂರು, ಚಿಕ್ಕಮಗಳೂರು, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಯ ಕೆಲವು ಭಾಗಗಳಲ್ಲಿ ಬೇಸಿಗೆಯಲ್ಲಿ ಎಲೆಯುದುರುವ ಮಲೆನಾಡು ಕಾಡುಗಳುಂಟು. ಬಯಲುಸೀಮೆಯ ಒಣಕಾಡಿನಲ್ಲಿ ದಟ್ಟವಾದ ಅರಣ್ಯಗಳೇನೂ ಇಲ್ಲ. ಆರು ತಿಂಗಳಿಗೂ ಹೆಚ್ಚು ಕಾಲ ಒಣ ಹವೆಯೇ, ಮೈಸೂರು, ಹಾಸನ, ಚಿತ್ರದುರ್ಗ, ಗುಲ್ಬರ್ಗ, ರಾಯಚೂರು, ಬಳ್ಳಾರಿ ಜಿಲ್ಲೆಯ ಭಾಗಗಳಲ್ಲಿ ಕುರುಚಲುಗಿಡಗಳ ಕಾಡುಗಳನ್ನು ಕಾಣಬಹುದು. ಇವಲ್ಲದೆ ಕರಾವಳಿ

ಪ್ರದೇಶಗಳಲ್ಲಿ ಮ್ಯಾಂಗ್ರೋವ್ ಕಾಡುಗಳನ್ನೂ ಮಲೆನಾಡಿನ ಗುಡ್ಡ ಗಾಡುಗಳಲ್ಲಿ ರಬ್ಬರ್ ಕಾಡುಗಳನ್ನು ಕಾಣಬಹುದಾಗಿದೆ. ಎಲ್ಲೆಡೆಯೂ ಬೆಳೆಯಬಹುದಾದ ನೀಲಗಿರಿ ಮರಗಳು ಈಗೀಗ ತಲೆಯೆತ್ತುತ್ತಲಿವೆ. ಕೊಡಗು, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕಾಫಿ ತೋಟಗಳು ಕಂಗೊಳಿಸುತ್ತಿವೆ. ಹಾಗೆಯೇ ರಾಜ್ಯದ ಅನೇಕ ಭಾಗಗಳಲ್ಲಿ ತೆಂಗು, ಅಡಿಕೆ, ಬಾಳೆ, ಹೊಗೆಸೊಪ್ಪು, ಹಿಪ್ಪನೇರಳೆ ಹಣ-ಫಸಲುಗಳಾಗಿ ಬೆಳೆಯುತ್ತಿವೆ. ನೀರಾವರಿ ಸೌಲಭ್ಯಗಳಿರುವೆಡೆಯಲ್ಲಿ ಕಬ್ಬು ಬತ್ತಗಳು ಮುಖ್ಯ ಬೆಳೆಗಳು; ಇತರತ್ರ ರಾಗಿ, ಜೋಳ ಮತ್ತು ಇತರ ದ್ವಿದಳ ಧಾನ್ಯಗಳು. ಉತ್ತರ ಕರ್ನಾಟಕದ ಹುಬ್ಬಳ್ಳಿ, ಧಾರವಾಡ ಮೊದಲಾದ ಭಾಗಗಳ ಸುತ್ತಮುತ್ತ ಕಪ್ಪುಮಣ್ಣು ಕಾರಣವಾಗಿ ಹತ್ತಿ ಬೆಳೆಯ ಸಮೃದ್ಧಿಯಿದೆ. ಆರ್ಥಿಕವಾಗಿ ಪ್ರಾಮುಖ್ಯ ಪಡೆದಿರುವ ಶ್ರೀಗಂಧ, ತೇಗ, ಮತ್ತಿ, ನಂದಿ, ಹೊನ್ನೆ, ಬೀಟೆ ಮೊದಲಾದ ಮರಗಳನ್ನೂ ಗೇರು, ಏಲಕ್ಕಿ, ಮೆಣಸು, ಕಿತ್ತಳೆ ಮೊದಲಾದ ನಗದುಬೆಳೆಗಳನ್ನೂ ಪ್ರತ್ಯೇಕವಾಗಿ ಎತ್ತಿ ಹೇಳಬಹುದಾಗಿದೆ.

೭. ಪ್ರಾಣಿಸಂಪತ್ತು

ಕರ್ನಾಟಕದ ಕರಾವಳಿ, ಮಲೆನಾಡು ಮತ್ತು ಬಯಲುಸೀಮೆಗಳಲ್ಲಿ ವೈವಿಧ್ಯಮಯ ಪ್ರಾಣಿಸಂಪತ್ತು ಗೋಚರಿಸುತ್ತದೆ. ಇವುಗಳಲ್ಲಿ ಸಸ್ತನಿಗಳು, ಪಕ್ಷಿಗಳು, ಸರೀಸೃಪಗಳು, ದ್ವಿಚರಿಗಳು, ಮತ್ಸ್ಯಗಳು ಮೊದಲಾದ ಕಶೇರುಕಗಳೂ ಹಲವು ಬಗೆಯ ಅಕಶೇರುಕಗಳೂ ಕಾಣದೊರೆಯುತ್ತವೆ. ದಕ್ಷಿಣ ಉತ್ತರ ಕನ್ನಡಜಿಲ್ಲೆಗಳು, ಕೊಡಗು, ಹಾಸನ ಮತ್ತು ಚಿಕ್ಕಮಗಳೂರು, ಜಿಲ್ಲೆಗಳಲ್ಲಿ ಬಹುತೇಕ ಎಲ್ಲ ಬಗೆಯ ಪ್ರಾಣಿವರ್ಗಗಳೂ ಕಾಣಸುತ್ತವೆ. ಹೋಮೋಸೇಪಿಯನ್ ವರ್ಗದ ಪ್ರಾಣಿಗಳಲ್ಲಿ ಕೋತಿ, ಸಿಂಗಲೀಕ, ಮುಸುವ, ಕಾಡುಪಾಪ ಮೊದಲಾದವೂ ಮಾಂಸಾಹಾರಿಗಳಲ್ಲಿ ಹುಲಿ, ಚಿರತೆ, ತೋಳ, ನರಿ ಮುಂತಾದುವೂ ಉಂಟು. ಹಾಸನ, ಮೈಸೂರು, ಶಿವಮೊಗ್ಗ, ಕಡೂರುಗಳ ಅರಣ್ಯಭಾಗಗಳಲ್ಲಿ ಆನೆಗಳು ಹೆಚ್ಚಾಗಿ ಕಂಡುಬರುತ್ತವೆ. ಕರ್ನಾಟಕವು ಎಂದಿನಿಂದಲೂ ಆನೆಗಳಿಗೆ ಪ್ರಸಿದ್ಧವಾದುದು; ಜಿಂಕೆ, ಸಾರಂಗ, ಮೊಲ, ಕಾಡುಹಂದಿ, ಕಾಡೆಮ್ಮೆ, ಕರಡಿ ಮೊದಲಾದವುಗಳಿಗೇನೂ ಕೊರತೆಯಿಲ್ಲ. ಕರ್ನಾಟಕದ ಹಕ್ಕಿಗಳಲ್ಲಿ ಹಲವು ತೆರನಾದವು ಇವೆ. ಇಲ್ಲಿಯೇ ವಾಸಿಸುವಂಥವೂ ಬೇರೆಡೆಗೆ ವಲಸೆಹೋಗುವ ಹಾಗೂ ಬೇರೆಡೆಗಳಿಂದ ವಲಸೆ ಬರುವಂಥವೂ ಸಾಕಷ್ಟು ಇವೆ. ಸರೀಸೃಪಗಳಲ್ಲಿ ಮೊಸಳೆಯೂ ಹಾವಿನ ಹಲವು ಜಾತಿಗಳೂ ಇಲ್ಲಿ ಸಾಕಷ್ಟು ಸಂಖ್ಯೆಯಲ್ಲಿವೆ. ಸಾಕುಪ್ರಾಣಿಗಳಲ್ಲಿ ಕುರಿ, ಆಡು, ಹಸು, ಎಮ್ಮೆ ಮೊದಲಾದವು ಸಾಮಾನ್ಯ. ಉತ್ತರದ ಬಯಲಿನಲ್ಲಿ ಎಮ್ಮೆಗಳ ಸಂಖ್ಯೆ ಹಸುಗಳ ಸಂಖ್ಯೆಗಿಂತ ಹೆಚ್ಚು. ಅಕಶೇರುಕಗಳಲ್ಲಿ ಹಲವು ಬಗೆಯ ಪರತಂತ್ರಜೀವಿಗಳೂ ಸೊಳ್ಳೆಗಳೂ ಕೀಟಗಳೂ ಕಡಲಿನ ಸ್ಪಂಜುಪ್ರಾಣಿಗಳೂ ಜೌಗು ಪ್ರದೇಶದ ಜಿಗಣೆಗಳೂ ಬಸವನ ಹುಳುವಿನಂತಹ ಮೃದ್ವಂಗಿಗಳೂ ತುಂಬಿಕೊಂಡಿವೆ.

೮. ಖನಿಜಸಂಪತ್ತು

ದೇಶದ ಖನಿಜಸಂಪತ್ತಿನಲ್ಲಿ ಕರ್ನಾಟಕದ ಸ್ಥಾನ ನಾಲ್ಕನೆಯದು, ಆದರೂ

ನಿಕ್ಷೇಪಗಳ ಶೋಧ ಅಸಮಗ್ರವೇ. ಕರ್ನಾಟಕ ರಾಜ್ಯದ ಖನಿಜಸಂಪತ್ತು ಅನೇಕ ಲೋಹ ಅಲೋಹ ಖನಿಜಗಳಿಂದ ಸಮೃದ್ಧವಾದುದು. ಕರ್ನಾಟಕ ರಾಜ್ಯದ ಚಿನ್ನದ ಗಣಿಗಾರಿಕೆ ಭಾರತದಲ್ಲಿಯೇ ಪುರಾತನವಾದದ್ದು. ಕೋಲಾರ ಜಿಲ್ಲೆಯ ಉರಿಗಾಂ, ರಾಯಚೂರು ಜಿಲ್ಲೆಯ ಹಟ್ಟಿ ಸುವಿಖ್ಯಾತವಾದ ಹಳೆಯ ಚಿನ್ನದ ಗಣಿಗಳು. ಇತರ ಗಣಿಗಳಲ್ಲಿ ತುಮಕೂರು ಜಿಲ್ಲೆಯ ಅಜ್ಜನ ಹಳ್ಳಿ, ಬೆಳ್ಳಾರ, ಚನ್ನರಾಯಪಟ್ಟಣದ ಬಳಿಯ ಕೆಂಪಿನ ಕೋಟೆ, ರಾಯಚೂರು ಜಿಲ್ಲೆಯ ಮಸ್ಕಿ, ವಂದಲಿ, ಗುಲ್ಬರ್ಗ ಜಿಲ್ಲೆಯ ಮಂಗ್ಳೂರು, ನಂಜನಗೂಡು ಹತ್ತಿರದ ಅಂಬಳೆ, ಒಳಗೆರೆ ಇವು ಮುಖ್ಯವಾಗಿದ್ದು, ಇವು ಇನ್ನೂ ಊರ್ಜಿತವಾಗಬೇಕಾಗಿದೆ. ಕರ್ನಾಟಕದಲ್ಲಿ ಕೋಲಾರದ ಚಿನ್ನದ ಅದುರಿನಲ್ಲಿ ಬೆಳ್ಳಿಯ ಅದುರೂ ಬೆರೆತಿರುವುದಲ್ಲದೆ, ಪ್ರತ್ಯೇಕ ಬೆಳ್ಳಿನಿಕ್ಷೇಪಗಳಿಲ್ಲ.

ಕಬ್ಬಿಣದ ಅದುರಿನ ನಿಕ್ಷೇಪಗಳು ರಾಜ್ಯದ ನಾನಾ ಭಾಗಗಳಲ್ಲಿ ಕಂಡು ಬಂದಿವೆ. ಬಳ್ಳಾರಿ-ಹೊಸಪೇಟೆ ನಡುವಣ ಗುಡ್ಡಗಳಲ್ಲಿಯ ನಿಕ್ಷೇಪಗಳು ಪ್ರಪಂಚದಲ್ಲಿಯೇ ಅತ್ಯುತ್ತಮವಾದಂಥವು. ಭದ್ರಾವತಿಯ ಬಳಿಯ ಬಾಬಾಬುಡನ್‌ಗಿರಿ ಶ್ರೇಣಿಯಲ್ಲಿ ದೊರೆಯುವ ಕಬ್ಬಿಣದ ಅದುರನ್ನು ಬಳಸಿಕೊಳ್ಳುವ ಭದ್ರಾವತಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಸು. ೬೦ ವರ್ಷಗಳಷ್ಟು ಹಳೆಯದು. ಚಿಕ್ಕನಾಯಕನಹಳ್ಳಿ, ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ, ಚಿತ್ರದುರ್ಗ, ಚಿಕ್ಕಮಗಳೂರು ಈ ಸ್ಥಳಗಳಲ್ಲಿ ಕಬ್ಬಿಣದ ಅದುರು ಹೇರಳವಾಗಿ ದೊರೆಯುವುದು ತಿಳಿದಿದೆ. ಚಿಕ್ಕಮಗಳೂರು ಜಿಲ್ಲೆಯ ಪಶ್ಚಿಮದ ಅಂಚಿನಲ್ಲಿರುವ ಕುದುರೆಮುಖ ಬೆಟ್ಟಸಾಲಿನಲ್ಲಿ ದಟ್ಟವಾಗಿ ಕಬ್ಬಿಣ ಬೆರೆತಿರುವ ಶಿಲಾಪದರಗಳಿವೆ. ಇವುಗಳಲ್ಲಿ ಕಬ್ಬಿಣದ ಕಬ್ಬಿಣದ ಅಂಶ ಕಡಿಮೆಯಾದರೂ ಅದಕ್ಕೆ ಅಯಸ್ಕಾಂತಶಕ್ತಿಯಿದೆ. ಪ್ರತ್ಯೇಕಿಸಿದ ಕಬ್ಬಿಣದ ಅಂಶದಿಂದ ಕಬ್ಬಿಣದ ಕಲ್ಲುಂಡೆಗಳನ್ನು ತಯಾರಿಸಿರುವ ಕಾರ್ಖಾನೆ ಸ್ಥಾಪಿತವಾಗುತ್ತಿದೆ. ಕಬ್ಬಿಣದ ತಯಾರಿಕೆಯಲ್ಲಿ ವಿಶೇಷವಾಗಿ ಉಪಯೋಗಿಸುವ ಕ್ರೋಮೈಟ್ ಮ್ಯಾಂಗನೀಸ್ ಟಿಟೇನಿಯಂ ವೆನೇಡಿಯಂ ಅದುರುಗಳು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಕಂಡುಬಂದಿವೆ. ಕ್ರೋಮೈಟ್ ಖನಿಜದ ನಿಕ್ಷೇಪವು ಹಾಸನ ಮತ್ತು ಮೈಸೂರು ಜಿಲ್ಲೆಗಳಲ್ಲಿ ದೊರೆತಿದ್ದು, ಬೈರಾಪುರದ ನಿಕ್ಷೇಪಗಳು ಉತ್ಕೃಷ್ಟವಾದವು. ಈ ಖನಿಜವು ಮುಖ್ಯವಾಗಿ ಸ್ಟೈನ್‌ಲೆಸ್‌ಸ್ಟೀಲ್ ತಯಾರಿಕೆಗೆ ಬಳಸಲ್ಪಡುತ್ತದೆ.

ಕರ್ನಾಟಕವು ಮ್ಯಾಂಗನೀಸ್ ಅದುರುಗಳನ್ನು ಹೊಂದಿರುವ ರಾಜ್ಯಗಳಲ್ಲಿ ದೇಶದಲ್ಲಿಯೇ ಐದನೆಯದು. ಇದು ಉಕ್ಕು ಕೈಗಾರಿಕೆಗೆ ಮುಖ್ಯವಾದುದು. ಬಳ್ಳಾರಿ, ಶಿವಮೊಗ್ಗ, ಚಿತ್ರದುರ್ಗ, ತುಮಕೂರು, ಉತ್ತರ ಕನ್ನಡ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಕಬ್ಬಿಣದ ಅದುರುಗಳೊಂದಿಗೆ ಮ್ಯಾಂಗನೀಸ್ ಅದುರುಗಳು ದೊರೆಯುತ್ತವೆ. ಸಣ್ಣ ನಿಕ್ಷೇಪಗಳು ಧಾರವಾಡ, ಬಿಜಾಪುರ, ಬಿದರೆ ಜಿಲ್ಲೆಗಳಲ್ಲಿವೆ. ಇದರ ಮುಖ್ಯವಾದ ನಿಕ್ಷೇಪಗಳು ಬಳ್ಳಾರಿಜಿಲ್ಲೆಯ ಸೊಂಡೂರು, ಉತ್ತರ ಕನ್ನಡ ಜಿಲ್ಲೆಯ ಲೋಂಡ, ಸೂಪ ಮತ್ತು ಕಾರವಾರಗಳಲ್ಲಿಯೂ ಶಿವಮೊಗ್ಗದ ಅಕ್ಕಪಕ್ಕಗಳಲ್ಲಿಯೂ ತರೀಕೆರೆ ಆನಂದಪುರಗಳಲ್ಲಿಯೂ ಇವೆ. ಬೆಂಗಳೂರು ಸುತ್ತಮುತ್ತ ಕೊಲಂಬಿಯಂ, ಟ್ಯಾಂಟಲಂ,

ಅದುರುಗಳಿರುವುದು ತಿಳಿದಿದೆ. ಮಂಡ್ಯ ಜಿಲ್ಲೆಯಲ್ಲಿ ಟೈಟಾನಿಯಂನಿಂದ ಕೂಡಿದ ಕಬ್ಬಿಣದ ಅದುರು ಸಿಕ್ಕುತ್ತದೆ. ಧಾರವಾಡ ಜಿಲ್ಲೆಯ ಕಪ್ಪದ ಗುಡ್ಡದೆಡೆ ತವರದ ಮರಳು ಸಿಕ್ಕುತ್ತದೆ. ಅಲ್ಯೂಮಿನಿಯಂ ಲೋಹದ ಅದುರು ಪಶ್ಚಿಮ ಘಟ್ಟಗಳ ಸಾಲಿನಲ್ಲಿ, ಮುಖ್ಯವಾಗಿ ಬೆಳಗಾಂವಿಯ ಪಶ್ಚಿಮಕ್ಕಿರುವ ಗುಡ್ಡಸಾಲಿನಲ್ಲಿ ದೊರೆಯುತ್ತದೆ. ಬೆಳಗಾವಿಯ ಬಳಿಯ ಕಾರ್ಖಾನೆಯಲ್ಲಿ ೩೦,೦೦೦ ಟನ್‌ಗಳಷ್ಟು ಈ ಲೋಹದ ಉತ್ಪಾದನೆಯಾಗುತ್ತಿದೆ. ಬಾಬಾಬುಡನ್‌ಗಿರಿ, ಚಿತ್ರದುರ್ಗಜಿಲ್ಲೆಯ ಹೊಳಲ್ಕೆರೆ ತಾಲ್ಲೂಕು, ಕರಾವಳಿಯ ಬೈಂದೂರು ಭಟ್ಕಳಗಳಲ್ಲಿಯೂ ಅಲ್ಪ ಸ್ವಲ್ಪ ಪ್ರಮಾಣದಲ್ಲಿ ನಿಕ್ಷೇಪಗಳು ಕಂಡುಬಂದಿವೆ.

ಕಂಚು, ಹಿತ್ತಾಳೆ, ತಾಮ್ರ ಇವು ಪುರಾತನ ಕಾಲದಿಂದಲೂ ನಮ್ಮಲ್ಲಿ ಬಳಕೆಯ ಲೋಹಗಳು. ವಿದೇಶಿ ಆಕ್ರಮಣಗಳಿಂದಾಗಿ ತಾಮ್ರದ ಗಣಿಗಾರಿಕೆ ನಶಿಸಿ ಹೋಗಿದೆ. ಚಿತ್ರುದುರ್ಗದ ಇಂಗಳದಾಳು, ಅರಸೀಕೆರೆ ತಾಲ್ಲೂಕಿನ ಕಲ್ಯಾಡಿ ಇಲ್ಲಿಯ ತಾಮ್ರದ ಗಣಿಗಳನ್ನೂ ಈಗ ಊರ್ಜಿತಪಡಿಸಿದೆ. ಗಂಡಸಿ ಬಳಿಯ ಆಲದ ಹಳ್ಳಿ, ಗುಲ್ಬರ್ಗ ಜಿಲ್ಲೆಯ ತಿಂತಿಣಿ, ರಾಯಚೂರು ಜಿಲ್ಲೆಯ ಕಲ್ಲೂರು ಇವುಗಳ ಸುತ್ತಣ ಗಣಿಗಳನ್ನು ಊರ್ಜಿತ ಮಾಡುವ ಯತ್ನ ನಡೆಯುತ್ತಿದೆ.

ಅದುರುಗಳಲ್ಲದ ಖನಿಜಗಳಲ್ಲಿ ಕಲ್ನಾರು ಹಾಸನ, ಮೈಸೂರು, ಬಿಜಾಪುರ, ಉತ್ತರ ಕನ್ನಡ ಜಿಲ್ಲೆಯ ಹಲವೆಡೆಗಳಲ್ಲಿ ದೊರೆತಿವೆ. ಮೈಸೂರು ಮತ್ತು ಹಾಸನ ಜಿಲ್ಲೆಯ ಕೆಲವೆಡೆ ಪಚ್ಚೆಯ ನಿಕ್ಷೇಪಗಳಿವೆ. ಹಾಸನ, ಮೈಸೂರು, ಬೆಂಗಳೂರು ಮೊದಲಾದ ಜಿಲ್ಲೆಗಳಲ್ಲಿ ಕುರಂದ, ಫೆಲ್ಸ್ಪಾರ್, ಗಾರ್ನೆಟ್ ಕಂಡು ಬಂದಿವೆ. ಹಾಸನ, ಶಿವಮೊಗ್ಗ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಪಿಂಗಾಣಿ ಮತ್ತು ಕಾಗದ ತಯಾರಿಕೆಗಳಿಗೆ ಒದಗುವ ಜೇಡಿಮಣ್ಣಿನ ನೆಲೆಗಳು ದೊರೆಯುತ್ತವೆ. ಹೆಂಚು ತಯಾರಿಕೆಗೆ ಬೇಕಾಗುವ ಮೆಕ್ಕಲುಮಣ್ಣು, ಸಿಮೆಂಟು ತಯಾರಿಕೆಗೆ ಬೇಕಾಗುವ ಸುಣ್ಣಕಲ್ಲು ರಾಜ್ಯದ ನಾನಾ ಭಾಗಗಳಲ್ಲಿ ಕಂಡು ಬಂದಿವೆ. ಮೆಕ್ಕಲುಮಣ್ಣು ವಿಶೇಷವಾಗಿ ಮಂಗಳೂರು ಭಾಗದಲ್ಲಿಯೂ ಸುಣ್ಣಕಲ್ಲು ನಿಕ್ಷೇಪಗಳು ಗುಲ್ಬರ್ಗಾ, ಬಿಜಾಪುರ, ಚಿತ್ರದುರ್ಗ, ಉತ್ತರ ಕನ್ನಡ ಜಿಲ್ಲೆಯ ಹಲವು ಪ್ರದೇಶಗಳಲ್ಲಿಯೂ ಕಾಣದೊರೆತಿವೆ. ಕರಾವಳಿ ಭಾಗಗಳಲ್ಲಿ ಸುಣ್ಣ ಕಲ್ಲು ಚಿಪ್ಪು, ಮೈಸೂರು ಬೆಂಗಳೂರು ತುಮಕೂರುಗಳ ಸುತ್ತ ಗ್ರಾನೈಟ್ ಶಿಲೆ, ಗುಲ್ಬರ್ಗಾ ಬಿಜಾಪುರಗಳ ಹಲವೆಡೆ ಷಹಾಬಾದ್ ಕಲ್ಲು ದೊರೆಯುತ್ತವೆ. ಇಂಗಳದಾಳಿನ ಗಂಧಕದ ನಿಕ್ಷೇಪಗಳಲ್ಲಿ ಸ್ವಲ್ಪವಾಗಿ ಆರ್ಸನಿಕ್, ಸುರಮ ಮತ್ತು ಸೀಸ ಇವೆ. ಈಚೆಗೆ ಹೊಸಪೇಟೆ ತಾಲ್ಲೂಕಿನ ಮೆಟ್ರಿಯೆಂಬಲ್ಲಿ ಗೆಲಿನ (Lead Sulphide)ಸಿಕ್ಕಿದೆ. ರಾಜ್ಯದ ನಾನಾ ಭಾಗಗಳಲ್ಲಿ ಕಯನೈಟ್, ಸಿಲಿಮನೈಟ್, ಮ್ಯಾಗ್ನಸೇಟ್, ಗ್ರಾಫೈಟ್, ವರ್ಮೆಕ್ಯೂಲೈಟ್ ಎಂಬ ಅದುರುಗಳಲ್ಲದ ಬೇರೆ ಬೇರೆ ಖನಿಜಗಳು ಸಹ ದೊರೆತಿವೆ. ಬೆಣಚುಕಲ್ಲು, ಬಳಪದ ಕಲ್ಲುಗಳಿಗೂ ಗ್ರಾನೈಟ್, ಫೆಲ್ಸೈಟ್ ಮೊದಲಾದ ಕಟ್ಟಡದ ಕಲ್ಲುಗಳಿಗೂ ಕೊರತೆಯಿಲ್ಲ.

*

ಕರ್ನಾಟಕದ ಜಾನಾಂಗಿಕ ಹಿನ್ನೆಲೆ

ಪ್ರಾಗೈತಿಹಾಸಿಕ ಅಧ್ಯಯನದಿಂದ ಸುಮಾರು ನಾಲ್ಕು ಲಕ್ಷ ವರ್ಷಗಳಷ್ಟು ಹಿಂದೆಯೇ ಕರ್ನಾಟಕದಲ್ಲಿ ಜನವಸತಿಯಿತ್ತೆಂದು ಭಾವಿಸಿದೆ. ಬೇರೆ ಬೇರೆ ಪ್ರದೇಶಗಳಿಂದ, ಬೇರೆ ಬೇರೆ ಕಾಲಗಳಲ್ಲಿ ವಲಸೆ ಬಂದ ವಿಭಿನ್ನ ಬುಡಕಟ್ಟುಗಳ ಜನ ಇಂದಿನ ಕರ್ನಾಟಕದ ಜನಸಮುದಾಯಕ್ಕೆ ಕಾರಣವಾಗಿದೆ. ಈ ನೆಲದಲ್ಲಿ ಎಷ್ಟೋ ಹಿಂದೆ ವಸತಿ ಪಡೆದ ಭಿನ್ನ ದೈಹಿಕಲಕ್ಷಣಗಳ ನಾಲ್ಕು ಮುಖ್ಯ ಬುಡಕಟ್ಟುಗಳ ಜನರನ್ನು ಗುರುತಿಸಲಾಗಿದೆ. ಸುದೀರ್ಘವಾದ ಜೀವನನಿರ್ವಹಣೆ ನಿಮಿತ್ತವಾಗಿ ಪರಸ್ಪರ ರಕ್ತ ಸಂಬಂಧಗಳಿಂದ ಈ ಜನ ತಮ್ಮ ತಮ್ಮಲ್ಲಿಯೇ ಬೆರೆತು ಹೋಗಿದ್ದರೂ, ಯಾವುದೋ ಪ್ರಮಾಣದಲ್ಲಿ ಮೂಲಲಕ್ಷಣಗಳು ಇನ್ನೂ ಉಳಿದು ಬಂದಿರುವುದನ್ನು ಕಾಣಬಹುದು.

ಅತ್ಯಂತ ಪ್ರಾಚೀನ ಕಾಲದಲ್ಲಿ, ಇತರರೆಲ್ಲರಿಗಿಂತ ಮೊದಲು ನೆಗ್ರಿಟೋ ಬುಡಕಟ್ಟಿನ ಜನ ಕರ್ನಾಟಕ ಪ್ರದೇಶಕ್ಕೆ ಕಾಲಿಟ್ಟರಬಹುದು. ಇವರ ದೈಹಿಕ ಲಕ್ಷಣಗಳ ಸಾಮಾನ್ಯಾಂಶಗಳು ಎಂದರೆ ಕುಳ್ಳು ದೇಹ, ಕಪ್ಪಾಗಿರುವ ಮೈ, ದೊಡ್ಡ ನಿತಂಬ, ಮುಂಚಾಚಿದ ಕೆಳದವಡೆ, ಜಜ್ಜಿದಂತಹ ಮೂಗು, ಒಂದೊಂದು ಸುರುಳಿಸುರುಳಿಯಾಗಿ ಸುತ್ತಿ ಕೊಳ್ಳುವ ಗುಂಗುರು ಕೂದಲು. ಈಗ ಈ ದೈಹಿಕ ಲಕ್ಷಣಗಳನ್ನು ಪೂರ್ಣವಾಗಿ ಹೊಂದಿರುವವರನ್ನು ಕಾಣುವುದು ದುರ್ಲಭವಾದರೂ, ಹಲವಂಶಗಳನ್ನು ಹೊಂದಿರುವವರು ಕಾಣಸಿಗುತ್ತಾರೆ. ಕರ್ನಾಟಕದಲ್ಲಿ ಕಂಡುಬರುವ ಸೂಕ್ಷ್ಮ ಶಿಲಾಯುಗದ ಸಂಸ್ಕೃತಿಯ ಇಲ್ಲವೆ ಅದಕ್ಕೂ ಹಿಂದಿನ ಕಾಲದ ಪಟ್ಟೆಚಕ್ಕೆ ಶಿಲಾಯುಗ ಸಂಸ್ಕೃತಿಯ ಜನ ಇದೇ ಬುಡಕಟ್ಟಿನವರು ಇರಬಹುದೇ ಎಂಬುದಾಗಿ ಸಂದೇಹಿಸಲಾಗಿದೆ.

ಅನಂತರದ ಆಸ್ಟ್ರಲಾಯಿಡ್ ಬುಡಕಟ್ಟಿನ ಜನ ಕರ್ನಾಟಕ ಜನಸಮೂಹದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಮಿಳಿತವಾಗಿದ್ದಾರೆ. ಸುಮಾರು ಕಪ್ಪಾದ ಮೈಬಣ್ಣ, ಅತಿ ಎತ್ತರವಲ್ಲದ ನಿಲವು, ಸ್ವಲ್ಪ ಮುಂಚಾಚಿದ ಮೂತಿ, ಕಿರಿದಾದ ಹಣೆ, ದಪ್ಪ ಮೂಗು, ಅಲೆಯಲೆಯಾಗಿ ಹಬ್ಬುವ ಸಾಧಾರಣ ಗುಂಗುರುಕೂದಲು ಇವರ ಸಾಮಾನ್ಯ ದೈಹಿಕಲಕ್ಷಣಾಂಶಗಳು. ಕರ್ನಾಟಕದ ಇಂದಿನ ಇರುಳ, ಸೋಲಿಗ, ಕೊರಗ ಮುಂತಾದ ಆದಿವಾಸಿ ಜನರಲ್ಲಿ ಇವನ್ನು ಹೆಚ್ಚಾಗಿ ಗುರುತಿಸಬಹುದೆನ್ನಲಾಗಿದೆ. ಈ ಜನ ಆಸ್ಟ್ರೇಲಿಯದ ಮತ್ತು ಆಗ್ನೇಯ ಏಷ್ಯಾದ ಕಡೆಗಳಿಂದ ಭಾರತಕ್ಕೆ ಬಂದು, ಕರ್ನಾಟಕಕ್ಕೆ ಸಹ ಬಂದಿರಬೇಕೆಂದು ಊಹಿಸಲಾಗಿದೆ.

ಕರ್ನಾಟಕದಲ್ಲಿ ಅತಿಹೆಚ್ಚಿನ ಸಂಖ್ಯೆಯಲ್ಲಿ ಕಾಣಸಿಗುವವರು ಎಂದರೆ, ಮೆಡಿಟರೇನಿಯನ್ ಬುಡಕಟ್ಟಿನ ದೈಹಿಕಲಕ್ಷಣ ಹೊಂದಿರುವವರು ಎನ್ನಬಹುದು. ಸಾಮಾನ್ಯ ಎತ್ತರದ ನಿಲವು, ನೇರಮುಖ ಮತ್ತು ಹಣೆ, ನೀಳಮೂಗು, ಹೆಚ್ಚು ಗುಂಗುರಲ್ಲದ ಕೂದಲು, ಕಡುಗೆಂಪು ಮೈಬಣ್ಣ ಇವು ಈ ಬುಡಕಟ್ಟಿನ ಜನರ ದೈಹಿಕ ಲಕ್ಷಣಾಂಶಗಳು, ಈ ರೀತಿಯ ಜನ ಮೆಡಿಟರೇನಿಯನ್ ಸಮುದ್ರದ ಸುತ್ತ, ಅದರಲ್ಲಿಯೂ ಏಷ್ಯಾ ಮೈನರ್, ಪಶ್ಚಿಮ ಏಷ್ಯಾ ಮತ್ತು ಉತ್ತರ ಆಫ್ರಿಕಾಗಳಲ್ಲಿ ವಿಶೇಷವಾಗಿ ಹರಡಿದ್ದಾರೆ. ಮೆಡಿಟರೇನಿಯನ್ ರೀತಿಯ ಅಸ್ಥಿಪಂಜರಗಳು ಕರ್ನಾಟಕದ ನವಶಿಲಾಯುಗದ ಸಮಾಧಿಗಳಲ್ಲಿ ಕಂಡುಬಂದಿರುವುದನ್ನು ಗಮನಿಸಲಾಗಿದೆ. ಈ ಬುಡಕಟ್ಟಿನ ಜನ ತಮ್ಮ ನೆಲೆಗಳಿಂದ ವಾಯವ್ಯ ಭಾರತದ ಮೂಲಕ ದಕ್ಷಿಣ ಭಾರತಕ್ಕೆ ಬಂದು, ನವಶಿಲಾಯುಗದ ಸಂಸ್ಕೃತಿಯ ಕಾಲದಲ್ಲಿ ವಾಸಿಸುತ್ತಿದ್ದರೆಂದು ಗುರುತಿಸಲಾಗಿದೆ. ಅಲ್ಲದೆ ಇವರ ಮೂಲಕವೇ ದ್ರಾವಿಡ ಭಾಷೆ ಇಲ್ಲಿ ಪ್ರಚಲಿತಗೊಂಡಿತೆಂದು ಸಾಧಿಸುವ ಯತ್ನ ಮಾಡಿದೆ. ಈಚೆಗೆ ಯೂರೋಪ್ ಖಂಡದ ಮೆಡಿಟರೇನಿಯನ್ ಪೂರ್ವತೀರಪ್ರದೇಶ, ಪೂರ್ವಹೆಲನೀಯ ಗ್ರೀಸ್, ಕ್ರೀಟ್ ಮತ್ತು ಏಜಿಯನ್ ಸಮುದ್ರದಲ್ಲಿಯ ಗ್ರೀಕ್ ದ್ವೀಪಗಳು ಮತ್ತು ಏಷ್ಯಾ ಮೈನರಿನ ಕೆಲವು ಭಾಗಗಳ ಜನಾಂಗಗಳೊಂದಿಗೆ ದ್ರಾವಿಡ ಜನಾಂಗದ ಸಂಪರ್ಕ ಸಮಾನಲಕ್ಷಣಗಳನ್ನು ಧಾರ್ಮಿಕವಾಗಿ, ಸಾಮಾಜಿಕವಾಗಿ ಹಾಗೂ ಭಾಷಿಕವಾಗಿ ಗುರುತಿಸುವ ಯಶಸ್ವಿಯಾದ ಪ್ರಯತ್ನಗಳನ್ನು ಮಾನವಶಾಸ್ತ್ರಜ್ಞರೂ ಭಾಷಾಶಾಸ್ತ್ರಜ್ಞರೂ ಮಾಡಿದ್ದಾರೆ.

ಕ್ರಿ. ಪೂ. ೨೦೦೦ದ ಹೊತ್ತಿಗೆ ಮಧ್ಯ ಏಷ್ಯಾಪ್ರದೇಶದಿಂದ ಹೊರಟು ವಾಯವ್ಯ ಭಾಗದ ಭಾರತಕ್ಕೆ ಬಂದ ಕಕೇಷಿಯನ್ ಬುಡಕಟ್ಟಿನ ಜನ ಕರ್ನಾಟಕದಲ್ಲಿಯೂ ಹರಡಿದ್ದರೇ ಎನ್ನುವುದನ್ನು ಸುಲಭವಾಗಿ ತಿಳಿಯಲು ಸಾಧ್ಯವಾಗಿಲ್ಲ. ಎತ್ತರದ ನಿಲವು, ನೀಟಾದ ಮುಖಮಾಟ, ತೆಳವಾದ ನೇರ ಮೂಗು, ನೀಲಿಗಣ್ಣು, ನೇರಕೂದಲು ಇವು ಈ ಬುಡಕಟ್ಟಿನ ಜನರ ವಿಶಿಷ್ಟ ದೈಹಿಕಲಕ್ಷಣಗಳು. ಆದರೆ ಚಾರಿತ್ರಿಕ ಯುಗದ ಆದಿಭಾಗದಲ್ಲಿ ಆಫ್‌ಘನೀಸ್ತಾನದ ಸೇಸ್ತಾನ್ ಮೂಲಕ ಭಾರತಕ್ಕೆ ವಲಸೆ ಬಂದ ಶಕರು ಇಲ್ಲಿಯ ಅಗಲತಲೆಯ ಇನ್ನೊಂದು ಜನವರ್ಗಕ್ಕೆ ಕಾರಣವಾಗಿರಬಹುದೆಂದು ತಿಳಿಯಲಾಗಿದೆ. ಕರ್ನಾಟಕದಲ್ಲಿ ಕಂಡುಬರುವ ಅಗಲ ತಲೆಯ ಜನವರ್ಗಕ್ಕೂ ಈ ವಲಸೆ ಕಾರಣವಾಗಿರಬಹುದು. ಆದರೆ ಇತ್ತೀಚೆಯ ಕೆಲವು ಸಂಶೋಧನೆಗಳಿಂದ ಬೃಹತ್ ಶಿಲಾಯುಗದ ಸಂಸ್ಕೃತಿಗಳ ಕಾಲದಲ್ಲಿಯೂ ಈ ರೂಪಾಂಶವನ್ನು ಹೊಂದಿದ್ದ ಜನ ಇದ್ದಿರಬಹುದೆಂಬುದಕ್ಕೆ ಸಾಕಷ್ಟು ಸಾಕ್ಷ್ಯಗಳಿರುವುದಿರಂದ ಈ ಸಂಬಂಧದ ಸಮಸ್ಯೆ ಜಟಿಲವಾಗಿದೆ.

ಒಟ್ಟಿನಲ್ಲಿ ಕ್ರಿಸ್ತಶಕಾರಂಭದ ೩-೪ ನೆಯ ಶತಮಾನಗಳ ಹೊತ್ತಿಗೆ ಕರ್ನಾಟಕ ವಿವಿಧ ಬುಡಕಟ್ಟುಗಳವರ ನೆಲೆವೀಡಾಗಿತ್ತು. ಇಂದು ಈ ನಾಡಿನಲ್ಲಿರುವ ಬಹುಪಾಲು ಜನರ ಮೂಲವನ್ನು ಈ ನಾಲ್ಕು ವಿಧಗಳಲ್ಲಿಯೇ ಕಾಣಬಹುದು.

ಭಾರತ ಭೂಶಿರದ ಪ್ರಾಚೀನತಮ ಭೂಖಂಡವಾದ ಕರ್ನಾಟಕದ ನೆಲವು ಪ್ರಾಕ್ ಪ್ರಾಚೀನ ಮಾನವನ ಬಹುಕಾಲದ ವಸತಿಯಾಗಿತ್ತು. ಕರ್ನಾಟಕದಲ್ಲಿ ಅವನ

ಉತ್ಕ್ರಾಂತಿಯ ವಿವಿಧ ಘಟ್ಟಗಳಲ್ಲಿ ಅವನ ಸಂತತಿಯ ಅವಿಚ್ಛಿನ್ನ ಪರಂಪರೆ ಭಾರತದ ಬೇರೆ ಭಾಗಗಳಲ್ಲಿ ಕಂಡುಬರುವಷ್ಟೇ ಸ್ಪಷ್ಟವಾಗಿ ಕರ್ನಾಟಕದಲ್ಲಿಯೂ ಮೂಡಿಬಂದಿದೆ. ಭಾರತದಲ್ಲಿಯ ಮಾನವನ, ಅಲ್ಲಿ ವಿಶೇಷತಃ ಕರ್ನಾಟಕದಲ್ಲಿಯ ಮಾನವನ ಪ್ರಾಚೀನತ್ವವು ಲಕ್ಷವರ್ಷಗಳ ಹಿಂದಿನಿಂದ ಆರಂಭವಾಗುವುದೆಂದು ಈಚೆಗೆ ಗುರುತಿಸಲಾಗಿದೆ. ಪೂರ್ವಶಿಲಾಯುಗ, ಮಧ್ಯಶಿಲಾಯುಗ, ನವಶಿಲಾಯುಗ ಮತ್ತು ಕಬ್ಬಿಣ ಯುಗವೆಂದು ೪ ಘಟ್ಟಗಳಲ್ಲಿ ಕರ್ನಾಟಕದಲ್ಲಿ ಮಾನವಾಸ್ತವ್ಯದ ನೆಲೆಗಳನ್ನು ಪರಿಶೋಧಿಸುವ ಕೆಲಸ ನಡೆದಿದೆ. ತುಮಕೂರು, ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ, ಬಳ್ಳಾರಿ, ಗುಲಬರ್ಗಾ, ಬಿಜಾಪುರ, ಬೆಳಗಾವಿ ಜಿಲ್ಲೆಗಳ ಕೆಲವು ಪ್ರದೇಶಗಳನ್ನು ಪೂರ್ವ ಶಿಲಾಯುಗೀನ ಮಾನವನೆಲೆಗಳೆಂದೂ ಬಳ್ಳಾರಿ ಜಿಲ್ಲೆಯ ನಿಟ್ಟೂರು ಬಳಿಯಲ್ಲಿ ತುಂಗಭದ್ರಾ ನದೀತೀರದ ಸ್ಥಾನ, ಬೆಳಗಾವಿ ಜಿಲ್ಲೆಯ ಘಟಪ್ರಭಾ ದಂಡೆ, ಬಿಜಾಪುರ ಜಿಲ್ಲೆಯ ಮಲಪ್ರಭಾತೀರದ ನೆಲೆ ಹಾಗೂ ತುಮಕೂರು ಜಿಲ್ಲೆಯ ಕಿಬ್ಬನಹಳ್ಳಿಯ ನೆಲೆಗಳನ್ನು ಮಧ್ಯಶಿಲಾಯುಗೀನ ಮಾನವನೆಲೆಗಳೆಂದೂ ಕೃಷ್ಣಾ-ಭೀಮಾ ಕೊಳ್ಳದ ಗುಲಬರ್ಗಾ ಜಿಲ್ಲೆಯ ಶೋರಾಪುರದ ಬಳಿ ಮತ್ತು ಬಿಜಾಪುರ ಜಿಲ್ಲೆಯ ಕೃಷ್ಣಾ-ಭೀಮಾ ನದಿಗಳ ಹೊಳೆಯ ಮಧ್ಯಾಂತರದಲ್ಲಿ ದೊರೆತ ಪುರಾವೆಗಳ ಪ್ರಕಾರ ಇವು ಉತ್ತರ ಶಿಲಾಯುಗೀನ ಮಾನವನೆಲೆಗಳೆಂದೂ ತಿಳಿದುಬಂದಿದೆ. ಮಧ್ಯಶಿಲಾಯುಗೀನ ಕೈಗಾರಿಕೆಗಳ ಅವಶೇಷಗಳು ಕರ್ನಾಟಕದಲ್ಲಿ ಕಳೆದ ಐವತ್ತು ವರ್ಷಗಳಿಂದ ಗಮನಕ್ಕೆ ಬರುತ್ತಲೇ ಇವೆ. ಕರ್ನಾಟಕದ ಬಳ್ಳಾರಿ ಜಿಲ್ಲೆಯ ಬಳಿ ಸಂಗನಕಲ್ಲು ನೆಲೆ ನೀಡಿದ ಪುರಾವೆಯ ಆಧಾರದಿಂದ, ಉತ್ತರ ಶಿಲಾಯುಗೀನ ಕಾಲದ ಬಳಿಕ ಮಧ್ಯಶಿಲಾಯುಗದ ಮೊದಲಿಗೆ ಒಂದು ಪರ್ಯಾಯಕಾಲ ಘಟ್ಟವನ್ನೂ ಸಹ ಗುರುತಿಸಲಾಗುತ್ತದೆ.

ಮಧ್ಯಶಿಲಾಯುಗದಲ್ಲಿ, ಆಹಾರಸಂಗ್ರಾಹಕನಾಗಿದ್ದ ಮಾನವ ಆಹಾರೋತ್ಪಾದನೆಯತ್ತ ಸಾಗುತ್ತಿರುವುದನ್ನು ಕಾಣಬಹುದು. ಸೂಕ್ಷ್ಮಶಿಲಾ ಉದ್ಯಮ ಹುಟ್ಟಿಕೊಂಡ ಕಾಲವಿದು. ಬಳ್ಳಾರಿ ಜಿಲ್ಲೆಯ ಸಂಗನಕಲ್ಲು ನೆಲೆ ಸರ್ವಸಾಮಾನ್ಯ ಮಧ್ಯಯುಗೀನ ಸಂಸ್ಕೃತಿಯ ಉತ್ತಮ ಉದಾಹರಣೆಯೆನ್ನಲಾಗಿದೆ. ಇದಲ್ಲದೆ, ಶಿಲಾ ಆಯುಧಗಳ ಪುರಾವೆಗಳನ್ನು ಬೆಂಗಳೂರಿನ ಜಾಲಹಳ್ಳಿ, ಆನೇಕಲ್, ರಸ್ತೆಯ ಬದಿಯಲ್ಲಿ ಸೂಡಸಂದ್ರ ಮತ್ತು ಸಿದ್ಧಾಪುರ ಕ್ಷೇತ್ರ, ತುಮಕೂರು ಬಳಿಯ ಕಿಬ್ಬನಹಳ್ಳಿ ನೆಲೆ ಹಾಗೂ ಬಿಜಾಪುರ ಜಿಲ್ಲೆಯ ಹಲವಾರು ನೆಲೆಗಳು ಇಂತಹ ಕಡೆಗಳಲ್ಲಿ ಶಿಲಾ ಆಯುಧಗಳು ದೊರೆತಿವೆ. ಇವುಗಳಲ್ಲಿ ವಿಶೇಷ ಮಹತ್ವದ ನೆಲೆಗಳೆಂದರೆ ಗುಲ್ಬರ್ಗಾ, ಕೋವಳ್ಳಿ ಮತ್ತು ಶೋರಾಪುರದಂತಹ ನದೀಮಧ್ಯದ ನೆಲೆಗಳು. ಇಲ್ಲಿ ಸುಮಾರು ಹತ್ತು ನೆಲೆಗಳು ದೊರಕಿದ್ದು ಅವುಗಳ ಅಭ್ಯಾಸದಿಂದ ವಿಪುಲ ಪುರಾವೆಗಳು ದೊರಕುವುವು.

ಆಹಾರಸಂಗ್ರಾಹಕನಾಗಿದ್ದ ಮಾನವನು ಆಹಾರೋತ್ಪಾದಕನಾಗಿ, ಮುಂದೆ ಚಿಕ್ಕ ಚಿಕ್ಕ ಹಳ್ಳಿಗಳನ್ನು ನಿರ್ಮಿಸಿಕೊಂಡು ಸ್ಥಿರ ಸ್ಥಾವರಜೀವನ ನಡಸತೊಡಗಿದ್ದು ನವಶಿಲಾಯುಗದಲ್ಲಿ ಕಂಡುಬರುತ್ತದೆ. ಉಪಜೀವನದ ನಿರ್ವಹಣೆಯಲ್ಲಿ ಕ್ರಾಂತಿಕಾರಿ

ಪಲ್ಲಟವಾದುದು ಈ ಯುಗದಲ್ಲಿಯೇ. ಮಾನವನ ಚಟುವಟಿಕೆಗಳ ಸೀಮೆ ವಿಸ್ತಾರಗೊಂಡು ಪಶುಸಾಕಣೆ, ಬೇಟೆ, ಒಕ್ಕಲುತನ, ಕಟ್ಟಿಗೆಕೆಲಸ ಇವೆಲ್ಲ ಜೀವನವಿಧಾನದಲ್ಲಿ ಸೇರ್ಪಡೆಗೊಂಡುವು; ತಕ್ಕ ಆಯುಧಗಳೂ ಸಲಕರಣೆಗಳೂ ಕುಶಲರೀತಿಯಿಂದ ನಿರ್ಮಾಣಗೊಂಡುವು; ಉತ್ತರ ಕರ್ನಾಟಕ ಮತ್ತು ಆಂಧ್ರಪ್ರದೇಶಗಳು, ವಿಶೇಷತಃ ರಾಯಚೂರು ನದೀಮಧ್ಯಕ್ಷೇತ್ರವೆಂದು ಗುರುತಿಸಲಾದ ಪ್ರದೇಶ, ಇವು ದಕ್ಷಿಣ ಭಾರತದಲ್ಲೇ ಸಂಸ್ಕೃತಿಯ ತೊಟ್ಟಿಲು ಎಂಬುದಾಗಿ ಹೇಳಲಾಗಿದೆ. ಕಳೆದ ೪೦ ವರ್ಷಗಳಲ್ಲಿ ಬಹಳ ಸಂಖ್ಯೆಯಲ್ಲಿ ಕರ್ನಾಟಕದ ಬೇರೆ ಬೇರೆ ಸ್ಥಾನಗಳಲ್ಲಿ ಪರಿವೀಕ್ಷಣೆ ನಡೆದಿದೆ. ಗಮನಾರ್ಹವಾದ ನೆಲೆಗಳೆಂದರೆ, ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಬಳ್ಳಾರಿ ಜಿಲ್ಲೆಯ ಸಂಗನಕಲ್ಲು, ಪಚ್ಚೆಗಲ್ಲು ಮತ್ತು ತೆಕ್ಕಲಕೋಟೆ, ಕೋಲಾರ ಜಿಲ್ಲೆಯ ಬನಳ್ಳಿ, ರಾಯಚೂರು ಜಿಲ್ಲೆಯ ಮಸ್ಕಿ ಮತ್ತು ಪಿಕಲಿಹಾಳ್, ಧಾರವಾಡ ಜಿಲ್ಲೆಯ ಹಳ್ಳೂರು, ಮೈಸೂರು ಜಿಲ್ಲೆಯ ಹೆಮ್ಮಿಗ್ಗೆ ಮತ್ತು ತಿರುಮ ಕೂಡ್ಲು ನರಸೀಪುರ, ಗುಲಬರ್ಗಾ ಜಿಲ್ಲೆಯ ಕೊಡೆಕಲ್ಲು ಇವು. ಈ ಸಂಸ್ಕೃತಿಗೆ ಪೂರ್ವಭಾವಿಯಾದ ಅನೇಕ ಬೂದಿಗುಡ್ಡಗಳ ನೆಲೆಗಳನ್ನು ಶೋಧಿಸಲಾಗಿದೆ. ಈ ನೆಲೆಗಳೆಂದರೆ ಕುಪ್ಪಲ್ಲು, ಕೊಡೆಕಲ್ಲು, ಮಸ್ಕಿ ಪಿಕಲಿಹಾಳ್; ಇವು ಮಾತ್ರವೇ ಅಲ್ಲದೆ, ಬೇರೆ ನೆಲೆಗಳಾದ ಕುಡಚಿ, ತೇರದಾಳ, ಕುಡತಿನಿ, ಕಲ್ಲೊಳ್ಳಿ ಮೊದಲಾದುವು.

ಅನಂತರದ ಕಾಲ, ತಾಮ್ರದ ಸಾಧನಗಳನ್ನೂ ಕೆಂಪುವರ್ಣದ ಗಡಿಗೆ ಮಡಕೆಗಳನ್ನೂ ಹೆಚ್ಚಾಗಿ ಬಳಸುವ ತಾಮ್ರ ಶಿಲಾಯುಗೀನ ಸಂಸ್ಕೃತಿಯದು. ಇದು ನವ ಶಿಲಾಯುಗದ ಎರಡನೆಯ ಘಟ್ಟ. ಒಕ್ಕಲತನ, ಲೋಹದ ಗಣಿ ಉದ್ಯಮ, ಕಲ್ಲು ಕೆಲಸ, ಕುಂಬಾರ ಕೆಲಸ. ತೋಟಗಾರಿಕೆ, ಕೆಲವು ಕರಕುಶಲವೃತ್ತಿಗಳು ಇವನ್ನು ಈ ಅವಧಿಯ ಜನ ಬಲ್ಲವರಾಗಿದ್ದರು. ಕರ್ನಾಟಕದ ಈಶಾನ್ಯ ದಿಕ್ಕಿನ ಕೆಲಭಾಗಗಳಲ್ಲಿ ಈ ಸಂಸ್ಕೃತಿಯ ಪ್ರಭಾವ ಹೆಚ್ಚಾಗಿ ಕಂಡುಬಂದಿದೆ. ಮಕ್ಕಳನ್ನು ಮಣ್ಣಿನ ಜಾಡಿಗಳಲ್ಲಿಯೂ ವಯಸ್ಕರನ್ನು ಅಗೆದ ಗುಣಿಗಳಲ್ಲಿಯೂ ಹೂಳುತ್ತಿದ್ದ ಈ ಯುಗದ ಜನರ ಅಭ್ಯಾಸವು ಅವರಿಗೆ ಮರಣೋತ್ತರ ಜೀವನದ ನಂಬಿಕೆಯನ್ನು ಸೂಚಿಸುವುದಾಗಿದೆ. ನವಶಿಲಾಯುಗೀನ ಕಾಲದ ಕರ್ನಾಟಕದ ಜನರು ಚಿನ್ನದ ಗಣಿಯಿಂದ ಚಿನ್ನ ತೆಗೆದು ವಾಯವ್ಯಭಾರತದ ನಾಗರಿಕ ಗರಿಮೆಯ ಹರಪ್ಪಾ ಜನರಿಗೆ ಕಳಿಸುತ್ತಿದ್ದರು ಎಂದು ಭಾವಿಸಲಾಗಿದೆ. ಇದಕ್ಕೆ ಪುರಾತತ್ತ್ವದ ನಿರ್ಣಯ ಆಗಬೇಕಾಗಿದೆ.

ನವಶಿಲಾಯುಗದ ಕೊನೆಯ ಘಟ್ಟವನ್ನು ಕಬ್ಬಿಣಯುಗವೆಂದೂ ಬೃಹತ್ ಶಿಲಾ ಸಂಸ್ಕೃತಿಯ ಯುಗವೆಂದೂ ಹೇಳಲಾಗುತ್ತದೆ. ಕಬ್ಬಿಣದ ಉಪಯೋಗ, ಕುಂಬಾರಿಕೆ, ಶವಗಳನ್ನು ಹೂಳುವುದು ಹಾಗೂ ಅಸ್ಥಿಪಂಜರಗಳ ಅವಶೇಷವನ್ನು ಸಂಚಯಿಸುವುದು ಮೊದಲಾದವು ಈ ಕಾಲದ ಜನರ ಚಟುವಟಿಕೆಗಳ ಕೆಲವು ಲಕ್ಷಣಗಳಾಗಿವೆ. ಈ ಕಾಲದ ಬೃಹತ್ ಶಿಲಾ ಗೋರಿಗಳು ಕರ್ನಾಟಕದ ತುಂಬ ಸಿಕ್ಕುತ್ತವೆ. ಕುತೂಹಲ ಕೆರಳಿಸುವ ವಿಶಿಷ್ಟರಚನೆಯ ಗೋರಿಗಳು ಕಂಡುಬಂದಿದ್ದು, ಈ ಗೋರಿಗಳ ರಚನಾವಿಧಾನವು ಕರ್ನಾಟಕದ ಕಟ್ಟಡ ನಿರ್ಮಾಣ ಕಲೆಯ ಹುಟ್ಟಿಗೆ ಮುನ್ಸೂಚಿಯೆಂದು ಹೇಳುವಂತಿದೆ.

ಈ ಜನರು ಆರೆ-ನಾಗರ ದಕ್ಷಿಣ ಭಾರತೀಯ ಸಮಾಜದ ಮೂಲಪುರುಷರು. ಇವರೇ ಅನಂತರದಲ್ಲಿ ದೊಡ್ಡ ಪ್ರಮಾಣದ ವಸತಿಗಳನ್ನು ನಿರ್ಮಿಸಿದವರು. ಬ್ರಹ್ಮಗಿರಿ, ಮಸ್ಕಿ, ಹಳ್ಳೂರು, ಪಿಕಲಿಹಾಳ್ ಮತ್ತು ತಿ. ನರಸೀಪುರದ ಕಬ್ಬಿಣಯುಗದ ವಸತಿನೆಲೆಗಳು ಈ ಜನರವು. ಅವರು ಪ್ರಗತಿ ಪರ ಒಕ್ಕಲು ಮಕ್ಕಳು. ಒಕ್ಕಲತನದ ಸಾಧನಸಾಮಗ್ರಿಗಳು ಹಲವನ್ನು ಇವರು ಬಲ್ಲವರಾಗಿದ್ದರು; ಬೇಟೆ ಪ್ರಾಣಿಸಂಗೋಪನೆಗಳಲ್ಲಿ ಉತ್ಸಾಹಿಗಳಾಗಿದ್ದರು. ಕಬ್ಬಿಣ, ತಾಮ್ರ ಬಂಗಾರಗಳ ಬಳಕೆಯನ್ನು ಅರಿತಿದ್ದರು. ಭಾರತದ ಈ ಪ್ರದೇಶಗಳ, ಸನ್ನಿವೇಶಗಳ ಪೂರ್ವದ ಇತಿಹಾಸ ಕರ್ನಾಟಕದ ಇತಿಹಾಸವನ್ನು ಮುಂದಕ್ಕೆ ಒಯ್ಯುವ ಹರಿಕಾರನಾಯಿತು. ಕ್ರಿ. ಪೂ. ೨-೩ ನೆಯ ಶತಮಾನದಿಂದ, ಎಂದರೆ ಮೌರ್ಯ ಮತ್ತು ಸಾತವಾಹನ ಆಳಿಕೆ ತೊಡಗಿದಂದಿನಿಂದ ಶಿಲಾಯುಗಗಳು ಕೊನೆಗೊಂಡು ಚರಿತ್ರಯುಗ ಎನ್ನುವುದು ಪ್ರವರ್ತಿಸಿತು.

ಕ್ರಿಸ್ತಶಕಾರಂಭದ ೩-೪ ನೆಯ ಶತಮಾನಗಳ ಹೊತ್ತಿಗೆ ಕರ್ನಾಟಕ ಪ್ರದೇಶ ವಿವಿಧ ಬುಡಕಟ್ಟುಗಳವರ ನೆಲೆವೀಡಾಗಿತ್ತು. ಹೊರನಾಡುಗಳಿಂದ ಕರ್ನಾಟಕದತ್ತ ಹರಿಯುತ್ತಿದ್ದ ಜನವಲಸೆ ಚಾರಿತ್ರಿಕವೆಂಬ ಕಾಲದಲ್ಲಿಯೂ ಮುಂದುವರಿಯಿತು. ಕ್ರಿಸ್ತಾಬ್ದದ ಆರಂಭದ ಶತಮಾನಗಳಲ್ಲಿ ಗ್ರೀಕೋ-ರೋಮನರು, ಪಾರ್ಥಿಯನರು, ಸಿಥಿಯನರು, ಹೂಣರು, ಕುಶಾನರು, ೭-೯ನೆಯ ಶ. ಗಳಲ್ಲಿ ಅರಬ್ಬರು, ಪರ್ಶಿಯನ್ನರು, ಸಿಂಹಳೀಯರು ಹಾಗೂ ಪ್ರಾಯಶಃ ಆಗ್ನೇಯ ಏಷ್ಯಾದವರು, ಮುಂದೆ ೧೨ನೆಯ ಶತಮಾನದ ಅನಂತರದಲ್ಲಿ ತುರ್ಕಿ ಅರೇಬಿಯ ಪರ್ಶಿಯ ಮತ್ತಿತರ ಪಶ್ಚಿಮ ಏಷ್ಯಾ ದೇಶಗಳ ಮೂಲದ ಮುಸಲ್ಮಾನರು, ೧೪ನೆಯ ಶತಮಾನದಿಂದ ಪೋರ್ಚುಗೀಸರು, ಫ್ರೆಂಚರು, ಡಚ್ಚರು, ಬ್ರಿಟಿಷರು ಈ ನಾಡಿನೊಡನೆ ಸಂಪರ್ಕ ಹೊಂದಿದ್ದರು. ಅಲ್ಲದೆ ಬಹಮನಿ ಬಿಜಾಪುರ ಸುಲ್ತಾನರ ಕಾಲದಲ್ಲಿ ಆಫ್ರಿಕಾದಿಂದ ಸಿದ್ದಿಗಳು ಕರ್ನಾಟಕಕ್ಕೆ ವಲಸೆ ಬಂದರು. ಈ ವಿವಿಧ ಮೂಲಗಳವರು ಕರ್ನಾಟಕದ ಜನಸ್ರೋತದಲ್ಲಿ ಒಂದಲ್ಲ ಒಂದೆಡೆ ಬೆರೆತು ಹೋಗಿದ್ದಾರೆ. ಆದರೆ ಅದು ಅಂತಹ ಹೆಚ್ಚು ಪ್ರಮಾಣದಲ್ಲೇನೂ ಆಗಿಲ್ಲವೆಂದು ತೋರುತ್ತದೆ.

ಜನರಾಶಿಯ ವೈವಿಧ್ಯವನ್ನು ಹೇಳುವಾಗ, ದ್ರಾವಿಡ ಮತ್ತು ಆರ್ಯ ಶಬ್ದಗಳ ಅರ್ಥವ್ಯಾಪ್ತಿಯನ್ನು ಕುರಿತು ಹೇಳಬೇಕಾಗುತ್ತದೆ. ನಮ್ಮ ದೇಶದಲ್ಲಿ ಈ ಎರಡು ಶಬ್ದಗಳನ್ನು ಬೇರೆ ಬೇರೆ ಸ್ವರೂಪದ ಜನವರ್ಗಗಳು ಎಂದರೆ ಬುಡಕಟ್ಟುಗಳು ಎಂಬ ಅರ್ಥದಲ್ಲಿ ಧಾರಾಳವಾಗಿ ಬಳಸಲಾಗುತ್ತದೆ. ಆದರೆ ಮಾನವಶಾಸ್ತ್ರಜ್ಞರ ದೃಷ್ಟಿಯಲ್ಲಿ ಇವು ಭಾಷಿಕಗುಂಪುಗಳನ್ನು ಹೆಸರಿಸುತ್ತವೆಯೇ ಹೊರತು, ಆ ಗುಂಪುಗಳ ಭಾಷೆಗಳನ್ನು ಆಡುವವರ ದೇಹಲಕ್ಷಣಗಳ ವ್ಯತ್ಯಾಸವನ್ನು ಸೂಚಿಸುವುದಿಲ್ಲ. ಕನ್ನಡದ ಬೇರಾದ ಮೂಲದ್ರಾವಿಡ ಭಾಷೆ, ಬೇರೆ ಬೇರೆಡೆಯಿಂದ ಬಂದ ಈ ಮೊದಲು ಹೇಳಿದ ಬುಡಕಟ್ಟುಗಳಲ್ಲಿ, ಯಾವುದೋ ಒಂದರ ಆಡುಭಾಷೆಯಾಗಿರಬೇಕು. ಬಳಿಕ ಇತರ ಬುಡಕಟ್ಟಿನವರೂ ಅದನ್ನು ತಮ್ಮದಾಗಿಸಿಕೊಂಡಿರಬಹುದು ಎಂಬ ಭಾವನೆಯೂ ಸಹಜವೇ.

ಮೊದಲು ಬಂದ ನೆಗ್ರಿಟೋ ಜನರ ಭಾಷೆ ಆಫ್ರಿಕಾ ಮತ್ತಿತರ ಎಡೆಗಳಲ್ಲಿ

ಇರುವ ಆ ಜನಾಂಗಗಳಲ್ಲಿ ಇಂದು ಕಾಣುವ ಭಾಷಾವರ್ಗಗಳಿಗೆ ಸೇರಿದ್ದಾಗಿರಬಹುದು. ಆದರೆ ದ್ರಾವಿಡ ಭಾಷೆಗಳಿಗೂ ಈಗಿನ ನೆಗ್ರಿಟೋ ಜನರ ಭಾಷೆಗೂ ಸಂಬಂಧವಿದ್ದಂತಿಲ್ಲ. ಆಸ್ಟ್ರಲಾಯಿಡ್ ಜನರು ಆಡುತ್ತಿದ್ದರೆನ್ನಲಾದ ಮುಂಡಾರಿ ವರ್ಗದ ಭಾಷೆಗಳ ಹಲವು ಅಂಶಗಳು ಕನ್ನಡವೂ ಸೇರಿದಂತೆ ದ್ರಾವಿಡಭಾಷೆಗಳಲ್ಲಿದ್ದಂತೆ ತೋರುತ್ತದೆ. ಮೂಲತಃ ಪಾಲಿನೇಷಿಯ ದ್ವೀಪಸ್ತೋಮದ ಸ್ವಾಭಾವಿಕ ಸಸ್ಯಗಳಾಗಿರುವ ತೆಂಗು, ಬಾಳೆ, ವೀಳ್ಯದ ಎಲೆ ಇವು ಕನ್ನಡ ಭಾಷಾವರ್ಗದ ಜನರ ಧಾರ್ಮಿಕ ಆಚರಣೆಗಳಲ್ಲಿ ವಹಿಸುವ ಪಾತ್ರವನ್ನು ನೋಡಿದರೆ, ಈ ಸಸ್ಯಗಳು, ಆ ಸಂಬಂಧವಾದ ಆಚರಣೆಗಳು ಮತ್ತು ಅವನ್ನು ಹೇಳುವ ಪದಗಳು ಮುಂಡಾರಿ ಮೂಲದವಾಗಿರಬಹುದು ಎಂಬ ಅಭಿಪ್ರಾಯವೂ ಇದೆ. ಆದರೆ ಎರಡೂ ವಿಭಿನ್ನ ಭಾಷಾ ಕುಟುಂಬಕ್ಕೆ ಸೇರಿದ ಭಾಷೆಗಳೆಂಬುದು ಭಾಷಾವಿಜ್ಞಾನಿಗಳ ಮತ. ಮೂರನೆಯದಾಗಿ, ಮೆಡಿಟರೇನಿಯನ್ ಬುಡಕಟ್ಟಿನ ಜನ ನವಶಿಲಾಯುಗದಲ್ಲಿ ಕರ್ನಾಟಕದಲ್ಲಿ ವಾಸಿಸುತ್ತಿದ್ದರೆಂದು ತಿಳಿದಿರುವುದರಿಂದ, ಆ ಪ್ರದೇಶದಲ್ಲಿ ಎಲ್ಲಿಯೋ ಪ್ರಚಲಿತವಾಗಿದ್ದ ದ್ರಾವಿಡಭಾಷೆ ವಾಯುವ್ಯಭಾರತದ ಮೂಲಕ ದಕ್ಷಿಣಭಾರತಕ್ಕೆ ಹರಡಿರಬೇಕೆಂದು ಕೆಲವು ಭಾಷಾವಿಜ್ಞಾನಿಗಳು ಊಹಿಸಿದ್ದಾರೆ. ಈ ದೇಶದ ನವ ಶಿಲಾಯುಗದ ಸಂಸ್ಕೃತಿಗೆ ಕಾರಣವಾಗಿರಬಹುದಾದ ಮೆಡಿಟರೇನಿಯನ್ ಜನರೇ ಮೂಲದ್ರಾವಿಡಭಾಷೆಯನ್ನು ತಂದವರಾಗಿರಬಹುದು ಎಂಬ ಅಭಿಪ್ರಾಯವಿದೆ. ಹಲವರು ಮಾನವಶಾಸ್ತ್ರಜ್ಞರೂ ಭಾಷಾಶಾಸ್ತ್ರಜ್ಞರೂ ದ್ರಾವಿಡರ ಮೂಲನೆಲೆ ಮೆಡಿಟರೇನಿಯನ್ ಪ್ರದೇಶವೆಂದು ಸಾಧಾರವಾಗಿ ಪ್ರತಿಪಾದಿಸುವ ಯತ್ನ ಮಾಡಿದ್ದಾರೆ. ಉದಾಹರಣೆಗೆ, ದೋಣಿನಿರ್ಮಾಣದ ಕೌಶಲ್ಯದಲ್ಲಿ ವಿವಿಧಭಾಗಗಳೊಡನೆ ಸಾದೃಶ್ಯಗಳನ್ನು ಗುರುತಿಸುತ್ತ. ಜೇಮ್ಸ್ ಹಾರ್ನೆಲ್ ದ್ರಾವಿಡರು ಮೆಡಿಟರೇನಿಯನ್ ಜನಾಂಗಕ್ಕೆ ಸೇರಿದವರು ಎಂದು ತರ್ಕಿಸಿದ್ದಾರೆ; ಅಲ್ಲದೆ ಆ ಜನಾಂಗದೊಂದಿಗೆ ಅವಿಭಾಜ್ಯವಾಗಿ ಸೇರಿದ್ದಾಗ ಆರ್ಜಿಸಿದ ಆಚಾರಗಳುಂಟೆಂದೂ ಹೇಳಿದ್ದಾರೆ. ಮಾನವ ಶಾಸ್ತ್ರೀಯ ಪ್ರಮಾಣಗಳನ್ನು ಆಧರಿಸಿ, ಸಾಂಸ್ಕೃತಿಕ ಸಂಬಂಧಗಳನ್ನು ಗುರುತಿಸಿ, ಎಫ್. ಜೆ. ರಿಚರ್ಡ್ ಈ ಸಂಬಂಧವನ್ನು ಸಮರ್ಥಿಸಿದ್ದಾರೆ. ಎರಡೂ ಜನಾಂಗಗಳ ನಡುವಣ ಜನಪದಕಥೆಗಳ ಸಮಾನ ಆಶಯಗಳು, ಪುನರ್ಜನ್ಮ, ಮೊಮ್ಮಗನಿಗೆ ತಾತನ ಹೆಸರಿಡುವುದು, ಬರೆವಣಿಗೆಯ ಕಲೆ, ಕೆಲವು ಧಾರ್ಮಿಕ ಆಚರಣೆಗಳು, ಗ್ರಾಮದೇವತೆಗಳ ಪೂಜೆ, ಪ್ರಾಣಿಬಲಿ, ಬಾವಿಪೂಜೆ ಇತ್ಯಾದಿಗಳನ್ನು ಪ್ರಸ್ತಾವಿಸಿದ್ದಾರೆ. ಇತ್ತೀಚೆಗೆ ವಿವರವಾದ ಮಾನವಶಾಸ್ತ್ರೀಯ ಶೋಧನೆಯಿಂದ, ತಮಿಳು ಮಾತಾಡುವ ಹಾಗೂ ದ್ರಾವಿಡರಾದ ಇತರರಿಗೆ ಮೆಡಿಟರೇನಿಯನ್ ಜನಾಂಗದೊಂದಿಗೆ ಹೊಂದಿಕೆಯುಂಟು ಎನ್ನುವುದನ್ನು ಮಾನ್ಯ ಮಾಡಿದರೂ ಈ ಜನವನ್ನು ಪ್ರತ್ಯೇಕವಾಗಿ ದಕ್ಷಿಣಭಾರತೀಯ ಜನಾಂಗವೆಂದು ಹೇಳುವುದೂ ಸೂಕ್ತವೆಂದು ಡಾ|| ಜಾರ್ಜ್ ಒಲಿವಿಯರ್ ಸಲಹೆ ಮಾಡಿದ್ದಾರೆ. ಆದರೆ ಇತರ ಎಷ್ಟೋ ಸಾಂಸ್ಕೃತಿಕ ಸಾಕ್ಷ್ಯಗಳು ಮೆಡಿಟರೇನಿಯನ್ ಜನಾಂಗದೊಂದಿಗೆ ದ್ರಾವಿಡಸಂಬಂಧವನ್ನು ಬೆಸೆಯುವುದೆಂದು ಸುನೀತಿ ಕುಮಾರ ಚಟರ್ಜಿ ಹೇಳುತ್ತಾರೆ; ದ್ರಾವಿಡರನ್ನು ಕುರಿತ ತಮ್ಮ ಪುಸ್ತಕದಲ್ಲಿ ಅಂಥ ಸಾಕ್ಷ್ಯಗಳನ್ನು ಒದಗಿಸಿದ್ದಾರೆ. ಹಿಂದೂಧರ್ಮದ ಪರಂಪರೆ ಎಂದು ಹೇಳುವಲ್ಲಿ ಹೆಚ್ಚುಭಾಗ,

ಮೆಡಿಟರೇನಿಯನ್ ಜನಾಂಗವಾಗಿ ದ್ರಾವಿಡರು ಭಾರತಕ್ಕೆ ತಂದುದೇ ಆಗಿದೆಯೆಂದೂ ಯಂತ್ರಕೌಶಲ, ಗರುಡದ ಸಂಕೇತ, ಶಿವಶಕ್ತಿಯ ಪೂಜಾಪಂಥ ಇವುಗಳಲ್ಲೆಲ್ಲ ಅದನ್ನು ಕಾಣಬಹುದೆಂದೂ ಅವರ ಭಾವನೆ.

ಇವನ್ನು ಗಮನಿಸಿದಾಗ, ದ್ರಾವಿಡಭಾಷೆ ಮತ್ತು ಗ್ರೀಸ್ ಬಯಲುನಾಡು, ದ್ವೀಪಗಳು ಮತ್ತು ಏಷ್ಯಾಮೈನರುಗಳ ಮೆಡಿಟರೇನಿಯನ್ (ಪೆಲಾಸ್ಗಿಯನ್, ಏಜಿಯನ್) ಜನರ ಪ್ರಾಚೀನಭಾಷೆಗಳ ನಡುವೆ ಸಂಪರ್ಕವುಂಟು ಎನ್ನುವುದು ತಿಳಿಯುತ್ತದೆ. ಈ ಸಂಪರ್ಕವನ್ನು ಇನ್ನೂ ದೃಢಗೊಳಿಸುವ ಯತ್ನಗಳೂ ನಡೆದಿವೆ. ಹೈಡಲ್‌ಬರ್ಗ್‌ನ ಹೆರ್ಮನ್ ಬರ್ಗರ್ ಪೂರ್ವ-ಮೆಡಿಟರೇನಿಯನ್ ಭಾಷೆಯ ಕೆಲವು ಶಬ್ದಗಳು ದ್ರಾವಿಡರಲ್ಲಿ ಉಳಿದು ಬಂದಿರುವುದಕ್ಕೆ ಉದಾಹರಣೆಗಳನ್ನು ತೋರಿಸಿದ್ದಾರೆ. ಟಿ. ಬಾಲಕೃಷ್ಣನ್ ನಾಯರ್ ಅವರು ದ್ರಾವಿಡಮೂಲಗಳ ಸಮಸ್ಯೆಯನ್ನು ವಿವೇಚಿಸುವ ತಮ್ಮ ಒಂದು ಪುಸ್ತಕದಲ್ಲಿ, ನವಶಿಲಾಯುಗದಿಂದ ಆರಂಭಿಸಿ ಅಲೆಕ್ಸಾಂಡರ್ ಮಹಾಶಯನ ಕಾಲದವರೆಗೆ, ಮೆಡಿಟರೇನಿಯನ್, ನೈರುತ್ಯ ಏಷ್ಯ, ಇರಾನ್ ಮತ್ತು ಭಾರತ ಒಂದೇ ಸಾಂಸ್ಕೃತಿಕ ಒಕ್ಕೂಟವಾಗಿತ್ತು ಎಂದು ಹೇಳಬಹುದು ಎಂದಿದ್ದಾರೆ.

ಕ್ರಿ. ಪೂ. ಒಂದನೆಯ ಸಹಸ್ರಮಾನದ ಉತ್ತರಾರ್ಧದಲ್ಲಿ ಸಾಂಸ್ಕೃತಿಕ ಪ್ರಭಾವಗಳು ಕರ್ನಾಟಕದಲ್ಲಿ ಹರಡಲಾರಂಭಿಸಿರಬಹುದು. ರಾಜಕೀಯ ವಾಣಿಜ್ಯಾದಿ ಸಂಪರ್ಕಗಳು ಕಾರಣವಾಗಿ ಘಟ್ಟಘಟ್ಟವಾಗಿ ಹಿಂದು, ಬೌದ್ಧ ಮತ್ತು ಜೈನ ಧರ್ಮಗಳೂ ಪ್ರಾಕೃತ ಸಂಸ್ಕೃತ ಭಾಷೆಗಳೂ ಈ ಭಾಗದಲ್ಲಿ ಹರಡಿದಂತೆ ತೋರುವುದು. ಆರ್ಯ ಎಂಬ ವಿಶಿಷ್ಟ ಬುಡಕಟ್ಟಿನವರು ತಮ್ಮ ಭಾಷೆ ಸಂಸ್ಕೃತಿಗಳನ್ನು ಇಲ್ಲಿಗೆ ತಂದರೆಂದು ಹೇಳಲಾಗದು; ಅವು ಮಿಶ್ರಜನಾಂಗದವರ ಸ್ವತ್ತುಗಳಾಗಿದ್ದು, ಆ ಜನಾಂಗಗಳಲ್ಲಿ ದಕ್ಷಿಣಭಾರತದಲ್ಲಿ ಕಂಡುಬರುವ ಬುಡಕಟ್ಟಿನವರೂ ಬಹು ಪ್ರಮಾಣದಲ್ಲಿದ್ದರು. ಆರ್ಯ ಭಾಷೆಯೂ ಸಂಸ್ಕೃತಿಯೂ ಮೂಲತಃ ಆರ್ಯಭಾಷೆಯನ್ನು ತಂದ ಕಾಕೇಷಿಯನ್ ಬುಡಕಟ್ಟಿನ ಜನರಿಗಷ್ಟೇ ಸೀಮಿತವಾಗಿರದೆ, ಉತ್ತರಭಾರತದ ಇತರ ಜನರೂ ಆರ್ಯಭಾಷೆಗಳನ್ನು ತಮ್ಮದಾಗಿಸಿಕೊಂಡಿದ್ದರು ಎಂದು ತಿಳಿಯುವಂತಿದೆ. ಹೀಗೆ ಕರ್ನಾಟಕದಲ್ಲಿ ಪ್ರಾಗೈತಿಹಾಸಿಕ ಕಾಲದಿಂದ ಇಂದಿನವರೆಗೆ ಹಲವೆಡೆಗಳಿಂದ ಬಂದ ಹಲವು ಜನಾಂಗಗಳು ಕಾಲಾನುಕಾಲದಿಂದ ನಡೆಯುತ್ತಿರುವ ರಕ್ತಸಂಬಂಧದಿಂದ ಒಂದುಗೂಡಿ ವೈವಿಧ್ಯಮಯ ಜನಸ್ತೋಮಗಳಿಗೆ ಎಡೆಮಾಡಿವೆ.

ಈಗ ಆರ್ಥಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ವಿಶಿಷ್ಟವಾದ ರೂಪರೇಖೆಗಳಿಂದ ಬೇರ್ಪಡಿಸಬಲ್ಲ ಒಂದು ಜನಘಟಕವೆಂದರೆ ಆದಿವಾಸಿಗಳದು. ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಭಿಲ್ಲರು, ದಕ್ಷಿಣ ಕನ್ನಡ ಜಿಲ್ಲೆಯ ಕೊರಗರು, ಮಲೆಯ ಕಂಡಿಗಳು, ಕೊಡಗಿನ ಯರವ, ಕುರುಂಬ, ಕುಡಿಯ ಮತ್ತು ಕೊರಮರು, ಮೈಸೂರು ಜಿಲ್ಲೆಯ ಪಲ್ಲಿಯನ್, ಕುರುಮನ್, ಕಣಿಯ, ಕಾಡುಕುರುಬ ಮತ್ತು ಜೇನು ಕುರುಬರು, ಮೈಸೂರು ಮತ್ತು ಮಂಡ್ಯಜಿಲ್ಲೆಗಳಲ್ಲಿರುವ ಸೋಲಿಗರು, ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿರುವ

ಇರುಳರು, ಗುಲ್ಬರ್ಗ ಜಿಲ್ಲೆಯ ಚೆಂಚುಗಳು ಈ ಮುಂತಾದ ಜನವರ್ಗಗಳು ಆದಿವಾಸಿಗಳಲ್ಲಿವೆ. ಇವರೆಲ್ಲರನ್ನೂ ಇಂದು ಆದಿವಾಸಿಗಳೆಂದು ನಾವು ಹೆಸರಿಸಿದರೂ ಇವರ ರೂಪ, ಭಾಷೆ, ಜೀವನವಿಧಾನ, ನಡೆ ನಂಬಿಕೆಗಳು ಒಂದೇ ರೀತಿಯಾಗಿಲ್ಲ. ಇವರೆಲ್ಲ ಅಲ್ಪಸಂಖ್ಯಾತರು. ಹೆಚ್ಚಿನವರು ಸಣ್ಣ ಗುಂಪುಗಳಾಗಿದ್ದು ಬೆಟ್ಟಪ್ರದೇಶಗಳಲ್ಲಿ ಬೇಟೆ ಇತ್ಯಾದಿಗಳಿಂದ ಜೀವನ ನಡಸುವವರು; ಬಲುಮಟ್ಟಿಗೆ ಅನಕ್ಷರಸ್ಥರು. ಇವರಿಗೂ ಸುತ್ತಣ ಗ್ರಾಮವಾಸಿಗಳಿಗೂ ಸಂಪರ್ಕ ಬಹಳಷ್ಟಿಲ್ಲ. ಧಾರ್ಮಿಕ ಸಾಮಾಜಿಕ ಆಚರಣೆಗಳಲ್ಲಿ ಅವರದೇ ಆದ ರೀತಿ ನೀತಿಗಳಿರುತ್ತವೆ. ಕರ್ನಾಟಕದ ಈ ಆದಿವಾಸಿಗಳ ಭಾಷೆ ಕನ್ನಡ ಅಥವಾ ಅದಕ್ಕೆ ಸಂಬಂಧಿಸಿದ ಉಪಭಾಷೆಗಳಾಗಿದ್ದರೂ, ಸಾಮಾನ್ಯ ಕನ್ನಡ ಭಾಷೆಯ ಜನ ಅವನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ.

ಬೇಸಾಯ ಗೃಹಕೈಗಾರಿಕೆಗಳನ್ನು ಅವಲಂಬಿಸಿರುವ ಗ್ರಾಮವಾಸಿಗಳು ಚಿಕ್ಕ ಚಿಕ್ಕಗ್ರಾಮಗಳಲ್ಲಿ ನೆಲಸಿ ರಾಜ್ಯದ ದೊಡ್ಡ ಜನವರ್ಗವಾಗಿದ್ದಾರೆ. ಹೆಚ್ಚು ಜನ ಇಲ್ಲಿಯೂ ಅನಕ್ಷರಸ್ಥರು; ಅವರ ಸಾಂಸ್ಕೃತಿಕ ನಡೆವಳಿಕೆಗಳೂ ಸಾಧನೆಗಳೂ ಪರಂಪರಾಗತವಾಗಿ ರೂಢಿಸಲ್ಪಟ್ಟುವು. ಗ್ರಾಮಗಳೇ ಕರ್ನಾಟಕದ ಜಾನಪದಸಂಸ್ಕೃತಿಯ ತವರುನೆಲೆಗಳು. ಇಂಗ್ಲಿಷ್ ವಿದ್ಯಾಭ್ಯಾಸ, ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಹೆಚ್ಚಾಗಿ ಕಾಣುವ ರಾಜ್ಯದ ನಗರಗಳು ಕೈಗಾರಿಕೆ ಹಾಗೂ ಆಡಳಿತ ಕಛೇರಿಗಳ ಕೇಂದ್ರಗಳಾಗಿ, ಅತಿಸಂಪತ್ತು ಅತಿಬಡತನದ ಬೇರೆ ಬೇರೆ ಸಾಮಾಜಿಕಸ್ತರದ ಜನವರ್ಗಗಳಿಂದ ಜನನಿಬಿಡವಾಗಿರುವುದೇ ಸಾಮಾನ್ಯ. ಗ್ರಾಮಗಳಲ್ಲಿಯೂ ನಗರಗಳಲ್ಲಿಯೂ ಬಹುಸಂಖ್ಯಾತರಾದ ಹಿಂದುಗಳೂ ಬೌದ್ಧ, ಜೈನ, ಝುರತುಷ್ಟ್ರ, ಸಿಖ್, ಕ್ರೈಸ್ತ ಮತ್ತು ಇಸ್ಲಾಂ ಧರ್ಮದ ಅನುಯಾಯಿಗಳೂ ಯಥೋಚಿತ ಸಂಖ್ಯೆಯಲ್ಲಿ ವಾಸಿಸುವುದನ್ನು ಕಾಣಬಹುದು. ಈ ಎಲ್ಲ ಧರ್ಮೀಯರನ್ನೂ ಅವರ ಆಚಾರ ವಿಚಾರಗಳಿಂದ, ಹಲವು ವೇಳೆ ಉಡುಗೆ ತೊಡುಗೆ, ಊಟ ಉಪಚಾರಗಳಿಂದ ಸುಲಭವಾಗಿ ಗುರುತಿಸಬಹುದು.

*

ಕರ್ನಾಟಕ : ಪರಂಪರೆ

ಕರ್ನಾಟಕ ಬಹುಪ್ರಾಚೀನ ಕಾಲದಿಂದ ಅಸ್ತಿತ್ವದಲ್ಲಿದೆ, ಜನವಸತಿಯ ಒಂದು ಪುರಾತನ ನೆಲೆಯಾಗಿದೆ ಎಂಬುದನ್ನು ಸಿದ್ಧಪಡಿಸಲು ಪೌರಾಣಿಕ ಸಾಕ್ಷ್ಯಾಧಾರಗಳು ಮೊದಲಾದುವನ್ನು ಅವಲಂಬಿಸಿ ಕೆಲವರು ಪ್ರಯತ್ನಿಸಿದ್ದಾರೆ. ಈ ಪ್ರಯತ್ನಗಳನ್ನು ಶುದ್ಧ ಇತಿಹಾಸದ ಸಾಕ್ಷ್ಯಾಧಾರಗಳಿಂದ ಉಪೇಕ್ಷಿಸುವುದು, ತಳ್ಳಿಹಾಕುವುದು ಸುಲಭವೇ ಆದರೂ, ಪ್ರತೀತಿ ಐತಿಹ್ಯಗಳಿಗೆ ಸಲ್ಲುವ ಬೆಲೆಯನ್ನು ಕೊಟ್ಟು, ಇತಿಹಾಸಗ್ರಂಥಗಳಲ್ಲಿಯೂ ಒಮ್ಮೊಮ್ಮೆ ಇವನ್ನು ಪುರಸ್ಕರಿಸಿರುವುದು ಕಂಡುಬರುತ್ತದೆ. ಪುರಾಣೇತಿಹಾಸ ಗ್ರಂಥಗಳ ಉಲ್ಲೇಖಗಳನ್ನು ಲಕ್ಷಿಸಿಯೂ ಜನಪ್ರತೀತಿಗಳನ್ನು ಮನ್ನಿಸಿಯೂ ಕರ್ನಾಟಕದ ಪ್ರಾಚೀನತೆಯನ್ನು ರಾಮಾಯಣ ಭಾರತಗಳ ಹಿಂದಿನ ಕಾಲಕ್ಕೆ ಕೊಂಡೊಯ್ದಿರುವುದುಂಟು. ವಿವರಗಳಿಗೆ ಪ್ರವೇಶಿಸದೆ, ಸಂಕ್ಷೇಪವಾಗಿ ಕೆಲವು ಸಂಗತಿಗಳನ್ನು ಇಲ್ಲಿ ಒಗ್ಗೂಡಿಸಿ ಕೊಡಬಹುದಾಗಿದೆ.ಲ

ರಾಮಾಯಣದಲ್ಲಿ ಬಂದಿರುವ ದಂಡಕಾರಣ್ಯ, ಗೋದಾವರಿ, ಕೃಷ್ಣವೇಣಿ (ಮಹಾನದಿ), ಕಾವೇರಿ, ತಾಮ್ರಪರ್ಣಿ ಈ ಹೆಸರಿನ ಉಲ್ಲೇಖಗಳು ಕರ್ನಾಟಕಕ್ಕೆ ಸಂಬಂಧಿಸಿದುರಾಗಿವೆ; ಆ ಪ್ರದೇಶಗಳ ಬಗೆಗೆ ಬೆಳಕು ಚೆಲ್ಲುವಂಥವಾಗಿವೆ. ರಾಮನು ಅರಣ್ಯವಾಸ ಸೀತಾನ್ವೇಷಣ ಕಾಲಗಳಲ್ಲಿ ಸುಲಿದಾಡಿದ್ದು ಇಲ್ಲಿಯೇ., ಕರ್ನಾಟಕಸ್ಥರಾದ ವಾನರಧ್ವಜರೇ ವಾನರರು, ಬಳ್ಳಾರಿ ಜಿಲ್ಲೆಯ ಹಂಪಿಯ ಹತ್ತಿರದ ಪಂಪಾ ಸರೋವರದ ಬಳಿಯಲ್ಲಿಯೇ ರಾಮನಿಗೆ ಹನುಮಂತನ ಸ್ನೇಹ ಸಂಘಟಿಸಿತು. ಸುಗ್ರೀವನು ಕಾರವಾರ ಜಿಲ್ಲೆಯ ಹೊನ್ನಾವರದಲ್ಲಿ ವಾಲಿಯ ಕೈಕೆಳಗೆ ಆಳುತ್ತಿದ್ದ ಚಿಕ್ಕ ಅರಸು ಇಲ್ಲವೆ ವಾನರರಾಜಧಾನಿ ಕಿಷ್ಕಿಂಧೆ ಎಂಬುದು ಸಾಮಾನ್ಯವಾಗಿ ಹಂಪೆಯ ಹತ್ತಿರದ ಆನೆಗೊಂದಿ. ಸೀತೆಯನ್ನು ಅಪಹರಿಸಿ ಒಯ್ಯುತ್ತಿದ್ದ ರಾವಣನೊಂದಿಗೆ ಜಟಾಯು ಕಾದಿ ಮಡಿದ ಸ್ಥಳ ಚಿತ್ರದುರ್ಗ ಜಿಲ್ಲೆಯ ಈಗಿನ ಜಟಿಂಗ ರಾಮೇಶ್ವರಗಿರಿ, ಲಂಕೆಯ ಕಡೆಗೆ ಶ್ರೀರಾಮನು ಹೋಗುವಾಗ ರಾಮನಾಥಪುರವೆಂಬಲ್ಲಿ ಕಾವೇರಿಯನ್ನೂ ಲಕ್ಷ್ಮಣತೀರ್ಥವೆಂಬಲ್ಲಿ ದೊಡ್ಡ ಹೊಳೆಯನ್ನೂ ದಾಟಿದನು. ರಾವಣವಧೆಯಾಗಿ ಲಂಕೆಯನ್ನು ಬಿಟ್ಟು ಮರಳುವಾಗ, ಕೋಲಾರ ಜಿಲ್ಲೆಯ ಆವನಿಯೆಂಬ ಗ್ರಾಮದಲ್ಲಿ ಇಳಿದುಕೊಂಡಿರುವುದು ಸಾಧ್ಯ. ಅಲ್ಲಿಂದ ಹೊರಟು ಅದೇ ಜಿಲ್ಲೆಯ ನಂದಿ, ತುಮಕೂರು ಜಿಲ್ಲೆಯ ಮುಳುಕುಂಟೆ ಇವುಗಳ ಮಾರ್ಗವಾಗಿ ಅಯೋಧ್ಯೆಗೆ ಮರಳಿರಬಹುದು.

ರಾಮಾವತಾರದ ಕಾಲದಲ್ಲಿ ಚಂದ್ರಗುತ್ತಿಯಲ್ಲಿ ಜಮದಗ್ನಿ, ಗಾಲವ ಮತ್ತು ಮತಂಗರು, ನೆಲಮಂಗಲದ ಪತ್ತಿರದ ತಮ್ಮಸಂದ್ರದಲ್ಲಿ ಅಗಸ್ತ್ಯ, ಇಧ್ಮವಾಹನ, ಶರಭಂಗ ಮತ್ತು ಸುತೀಕ್ಷ್ಣರು, ಕೋಲಾರ ಜಿಲ್ಲೆಯ ಅವನಿಹಳ್ಳಿಯ ನೆರೆಯ ಗುಡ್ಡದ ಮೇಲೆ ವಾಲ್ಮೀಕಿ, ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯಲ್ಲಿ ವಿಭಾಂಡಕ ಮತ್ತು ಋಷ್ಯಶೃಂಗರು ವಾಸಿಸುತ್ತಿದ್ದರು.

ಹೀಗೆ ಸಂಗತಿಗಳನ್ನು ಗುರುತಿಸಿರುವುದಲ್ಲದೆ, ಉತ್ತರ ಕನ್ನಡದ ಬನವಾಸಿ, ಬಿಜಾಪುರ ಜಿಲ್ಲೆಯ ಸೀತಿಮನಿ, ಮುದ್ದೇಬಿಹಾಳದ ಹತ್ತಿರದ ಛಾಯಾಭಗವತಿ, ಬಾಗಲಕೋಟೆ ತಾಲ್ಲೂಕಿನ ಬೀರಕಬ್ಬಿ ಇತ್ಯಾದಿ ಸ್ಥಳಗಳನ್ನು ಸಹ ರಾಮಾಯಣದ ಐತಿಹ್ಯವುಳ್ಳ ಸ್ಥಳಗಳನ್ನಾಗಿ ಗುರುತಿಸಿದೆ.

ಕರ್ನಾಟಕವನ್ನು 'ರಾಮಕ್ಷೇತ್ರ'ವಾಗಿ ತಿಳಿಯುವಂತೆಯೇ ಕುಲಾಬೆ, ಠಾಣೆ, ರತ್ನಗಿರಿ, ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆ ಇವನ್ನೊಳಕೊಂಡ ಕೊಂಕಣಪಟ್ಟಿಯನ್ನು ಪರಶುರಾಮ ನೆಲಸಿದ್ದನೆಂಬ ಕಾರಣದಿಂದ 'ಪರಶುರಾಮ ಕ್ಷೇತ್ರ'ವೆಂಬುದಾಗಿ ತಿಳಿಯಲಾಗುತ್ತಿದೆ. ಕರ್ನಾಟಕದಲ್ಲಿ ಪರಶುರಾಮನಿಗೆ ಸಂಬಂಧಿಸಿದ ಸ್ಥಳಗಳು ಹಲವಾರು ಇವೆ. ಇಲ್ಲಿ ಅವನ ಮತ್ತು ಅವನ ತಾಯಿಯ ಹೆಸರಿನ ಗುಡಿಗಳು ಇರುವಷ್ಟು ಭರತಖಂಡದ ಬೇರಾವ ಭಾಗದಲ್ಲಿಯೂ ಇಲ್ಲವೆಂದು ತಿಳಿದಿದೆ. ಬೆಳಗಾಂವಿ ಜಿಲ್ಲೆಯ ಸವದತ್ತಿಗೆ ಸಮೀಪದ ಪರಸಗಡ, ಎಲ್ಲಮ್ಮನ ಗುಡ್ಡ, ಶಿವಮೊಗ್ಗ ಜಿಲ್ಲೆಯ ಚಂದ್ರಗುತ್ತಿ, ಚಿಕ್ಕಮಗಳೂರು ಜಿಲ್ಲೆಯ ಹಿರೇಮಗಳೂರು ಈ ಮುಂತಾದೆಡೆಗಳಲ್ಲಿ ಅವನ್ನು ಗಮನಿಸಬಹುದಾಗಿದೆ.

ಮಹಾಭಾರತ ಸಂಬಂಧದ ಐತಿಹ್ಯಗಳು ಸಹ ಹೀಗೆಯೇ ಅನೇಕವಾಗಿವೆ. ಪಾಂಡವರು ಕೌರವರ ಕೃತ್ರಿಮದಿಂದ ಪಾರಾಗಿ ದಂಡಕಾರಣ್ಯವನ್ನು ದಾಟಿ ಕರ್ನಾಟಕವನ್ನು ಸೇರಿದರು. ಅವರು ಚಿತ್ರದುರ್ಗದ ನೆರೆಯಲ್ಲಿರುವಾಗ ಭೀಮನು ಹಿಡಿಂಬನೆಂಬ ರಾಕ್ಷಸನನ್ನು ಕೊಂದು, ಅವನ ತಂಗಿ ಹಿಡಿಂಬೆಯನ್ನು ಮದುವೆಯಾಗಿ ಘಟೋತ್ಕಚನನ್ನು ಮಗನಾಗಿ ಪಡೆದನು. ಅಲ್ಲಿಂದ ತೆರಳಿ, ಶಿವಮೊಗ್ಗ ಜಿಲ್ಲೆಯ ತಾಳಗುಂದಕ್ಕೆ ಹೋಗಿ ಸೇರಿದ ಪಾಂಡವರು, ಇನ್ನೂ ಮುಂದೆ ನಡೆದು ಏಕಚಕ್ರ ನಗರದಲ್ಲಿ ಒಬ್ಬ ಕುಂಬಾರನ ಮನೆಯಲ್ಲಿರುತ್ತಿದ್ದು, ಭಿಕ್ಷಾವೃತ್ತಿಯನ್ನು ನಡೆಸುತ್ತಿದ್ದರು. ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಕೈವಾರವೆಂಬ ಗ್ರಾಮವೇ ಏಕಚಕ್ರನಗರವೆಂದು ತಿಳಿಯಲಾಗಿದೆ. ಅಲ್ಲಿರುವಾಗ ಅದೇ ಜಿಲ್ಲೆಯ ಮಾಲೂರು ತಾಲ್ಲೂಕಿನ ರಹಮಾನ ಬೇಟವೆಂಬಲ್ಲಿ ಲೋಕಕಂಟಕನಾಗಿದ್ದ ಬಕಾಸುರನನ್ನು ಭೀಮಸೇನನು ನಿಗ್ರಹಿಸಿದನು. ಮುಂದೆ ದ್ರೌಪದೀವಿವಾಹದ ಅನಂತರದಲ್ಲಿ, ಪಾಂಡವರು ಇಂದ್ರಪ್ರಸ್ಥದಲ್ಲಿ ರಾಜ್ಯವಾಳುತ್ತಿದ್ದ ಕೆಲಕಾಲಕ್ಕೆ, ಅರ್ಜುನನು ಪೃಥ್ವೀಸಂಚಾರಾರ್ಥವಾಗಿ ಹೊರಟು ಕರ್ನಾಟಕಕ್ಕೆ ಬಂದು ಮೈಸೂರಿನ ದಕ್ಷಿಣದಲ್ಲಿ, ಆ ಜಿಲ್ಲೆಯ ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿರುವ ಮಣಿಪುರವನ್ನು ಬಂದು ಸೇರಿದನು. ಅಲ್ಲಿಯ ರಾಜಪುತ್ರಿ ಚಿತ್ರಾಂಗದೆಯನ್ನು ವರಿಸಿ, ಮುಂದೆ ಅವಳಲ್ಲಿ ತನಗೆ ಜನಿಸಿದ ಬಭ್ರುವಾಹನನೊಂದಿಗೆ ಇಲ್ಲಿಯೇ ಹೋರಾಡಿದನು. ಬಳಿಕ ಕೌರವರ ಇನ್ನೊಂದು ಬಾರಿಯ

ಕೃತ್ರಿಮದಿಂದ ವನವಾಸಮಾಡಬೇಕಾಗಿ ಬಂದಾಗ, ಪಾಂಡವರಿಗೆ ಅಜ್ಞಾತವಾಸದ ಕೊನೆಯ ವರ್ಷದ ನೆಲೆಯಾಗಿ ಒದಗಿದ್ದು ಮತ್ಸ್ಯಪುರ ಅಥವಾ ವಿರಾಟನಗರ ತಾನೇ? ಇದು ಇಂದಿನ ಧಾರವಾಡ ಜಿಲ್ಲೆಯ ಹಾನಗಲ್ಲು ಎಂದು ತಿಳಿಯಲಾಗಿದೆ. ಮಹಾಭಾರತ ಯುದ್ಧಾನಂತರದ ಅಶ್ವಮೇಧ ಯಾಗದ ಪ್ರಸಂಗದಲ್ಲಿ ಅರ್ಜುನನಿಗೆ ನೆರವಾದವನೂ ವಿಷ್ಣುಭಕ್ತನಾದವನೂ ಆದ ಚಂದ್ರಹಾಸ ಕುತಂಳರಾಜ್ಯವಾಳುತ್ತಿದ್ದನೆಂದು ಹೇಳಿದೆ. ಈ ಕುಂತಳವು ಈಗಿನ ಶಿವಮೊಗ್ಗ ಜಿಲ್ಲೆಯ ಕುಪ್ಪಟೂರು ಎದು ಭಾವಿಸಲಾಗಿದೆ.

ಹೀಗೆ ರಾಮಾಯಣ ಭಾರತಗಳ ಕಥಾಸಂಗತಿಗಳೊಂದಿಗೆ ಕರ್ನಾಟಕದ ಸ್ಥಳ ಸಂಬಂಧವು ಚೆನ್ನಾಗಿ ಬೆಸೆದುಕೊಂಡಿರುವುದು ಕನ್ನಡಿಗರಿಗೆ ಅಭಿಮಾನದ ವಿಷಯವೆನಿಸಿದೆ. ರಾಮಾಯಣ ಭಾರತಗಳಲ್ಲಿಯೂ ಪುರಾಣಗ್ರಂಥಗಳಲ್ಲಿಯೂ ಕರ್ನಾಟಕವೂ ಅದರ ಹಲವು ಸ್ಥಳಗಳೂ ಆಗಾಗ ಬಂದಿದ್ದು, ಇವನೆಲ್ಲ ಇಲ್ಲಿ ವಿವರಿಸುವ ಅಗತ್ಯವಿಲ್ಲ. ಪ್ರಾತಿನಿಧಿಕವಾಗಿ ಗೋಕರ್ಣವೊಂದರ ಬಗ್ಗೆ ಇಲ್ಲಿ ಸೂಚಿಸಬಹುದು. ಉತ್ತರ ಕನ್ನಡ ಜಿಲ್ಲೆಯ ಕುಮಟ ತಾಲ್ಲೂಕಿನಲ್ಲಿ ಆ ಊರಿನಿಂದ ಉತ್ತರಕ್ಕೆ ೧೬ ಕಿಲೋಮೀಟರ್ ದೂರದಲ್ಲಿರುವ ಈ ಪುಣ್ಯಕ್ಷೇತ್ರ ರಾಮಾಯಣದ ಉತ್ತರಕಾಂಡದಲ್ಲಿಯೂ ಭಾರತದ ಆದಿ, ವನ ಮತ್ತು ಅನುಶಾಸನ ಪರ್ವಗಳಲ್ಲಿಯೂ ಪುರಾಣಗ್ರಂಥಗಳಲ್ಲಿಯೂ ಉಲ್ಲೇಖವಾಗಿದೆ. ದಂಡಕಾರಣ್ಯದಲ್ಲಿರುವ ಈ ಪುಣ್ಯಕ್ಷೇತ್ರದಲ್ಲಿ ಪೂರ್ವದಲ್ಲಿ ಕುಂಭಕರ್ಣ ತಪಸ್ಸು ಮಾಡಿ ಬ್ರಹ್ಮನನ್ನು ಒಲಿಸಿಕೊಂಡನೆಂದೂ ಈಶ್ವರನಿಂದ ಪಡೆದ ಆತ್ಮಲಿಂಗವನ್ನು ರಾವಣನು ತನ್ನೊಂದಿಗೆ ಒಯ್ಯದಂತೆ ಗಣಪತಿ ಯುಕ್ತಿಯಿಂದ ಈ ಕ್ಷೇತ್ರದಲ್ಲಿಯೇ ನೆಲೆಗೊಳ್ಳುವಂತೆ ಮಾಡಿದನೆಂದೂ ಅರ್ಜುನನು ತೀರ್ಥಯಾತ್ರೆಯ ಸಂದರ್ಭದಲ್ಲಿ ಇಲ್ಲಿಗೆ ಬಂದಿದ್ದನೆಂದೂ ಮುಂತಾಗಿ ಮೇಲಿನ ಆಕರಗಳಲ್ಲಿ ಉಕ್ತವಾಗಿದೆ.

ವಾಮನಾವತಾರ ಕಾಲದ ಬಲಿಚಕ್ರವರ್ತಿಯೂ ಅವನ ಮಗ ಬಾಣನ ವಂಶರವರೂ ಕರ್ನಾಟಕದಲ್ಲಿ ಆಳುತ್ತಿದ್ದರೆಂದೂ ಕರ್ನಾಟಕವನ್ನೊಳಕೊಂಡ ದಕ್ಷಿಣ ಭಾರತವೇ ವಾಮನಪುರಾಣದ ಪಾತಾಳಲೋಕವೆಂದು ತಿಳಿಯಬೇಕೆಂದೂ ಕೆಲವರು ಭಾವಿಸಿದ್ದಾರೆ. ಶ್ರೀಕೃಷ್ಣನ ಅಣ್ಣ ಬಲರಾಮನು ತೀರ್ಥಯಾತ್ರೆಗೆ ಹೊರಟಾಗ ಪಂಪಾಸರೋವರ, ಭೀಮರಥಿ, ಕಾವೇರಿಗಳಲ್ಲಿ ಸ್ನಾನಮಾಡಿದನೆಂತಲೂ ಸ್ಕಂದ ಪರ್ವತ, ಶ್ರೀಶೈಲ, ಗೋಕರ್ಣಗಳಿಗೆ ಹೋಗಿ ಅಲ್ಲಿ ದೇವತಾದರ್ಶನವನ್ನು ಪಡೆದನೆಂತಲೂ ಶ್ರೀಮದ್ಭಾಗವತ ಪುರಾಣದ ದಶಮಸ್ಕಂಧದಲ್ಲಿ ಉಕ್ತವಾಗಿದೆ; ಕೃಷ್ಣ ಬಲದೇವರು ಒಂದು ಅರಣ್ಯದಲ್ಲಿ ಪರಶುರಾಮನನ್ನು ಸಂದರ್ಶಿಸಿ, ಆತನ ಸೂಚನೆಯಂತೆ ಕರವೀರದ ಅರಸು ಶೃಗಾಲವಾಸುದೇವನನ್ನು ಕೆಣಕಿ ಕಾಳಗದಲ್ಲಿ ಸಂಹರಿಸಿದನೆಂದು ಸಹ ಅಲ್ಲಿಯೇ ಬಂದಿದೆ. ಈ ಕರವೀರ ಇಂದಿನ ಕರ್ನಾಟಕದ ಕೊಲ್ಲಾಪುರವೇ ಆಗಿರಬೇಕು ಎಂಬುದಾಗಿ ಊಹೆಮಾಡಿದೆ.

ಪೌರಾಣಿಕ ಹಾಗೂ ವೇದಕಾಲೀನ ಋಷಿಮುನಿಗಳ ಸಂಬಂಧವುಳ್ಳ ಹಲವು

ಸ್ಥಳಗಳನ್ನು ಕರ್ನಾಟಕದ ಐತಿಹ್ಯಗಳು ಎತ್ತಿ ಹೇಳುತ್ತವೆ. ಬಾದಾಮಿ, ಗಲಗಲಿ, ಮಣೂರು, ಶೃಂಗೇರಿ ಈ ಸ್ಥಳಗಳು ಕ್ರಮವಾಗಿ ಅಗಸ್ತ್ಯ, ಗಾಲವ, ಮಾಂಡವ್ಯ, ಋಷ್ಯಶೃಂಗ ಈ ಋಷಿಮುನಿಗಳ ಸಂಬಂಧವನ್ನು ಹೇಳುವಂತೆಯೇ ಇತರ ಪ್ರಾಚೀನ ಸ್ಥಳಗಳು ಸಹ ಯಾವನಾದರೊಬ್ಬ ಋಷಿಯ ಸಂಬಂಧವನ್ನು ಹೇಳುವ ಹಾಗೆ ದಟ್ಟವಾದ ಐತಿಹ್ಯ ಬೆಳೆದಿರುತ್ತದೆ. ಇವೆಲ್ಲ ಪ್ರತೀತಿಗಳನ್ನೂ ಐತಿಹ್ಯಗಳನ್ನೂ ಐತಿಹಾಸಿಕವಾಗಿ ಮಾನ್ಯಮಾಡುವ ವಿಷಯ ಹಾಗೆಯೇ ಇದ್ದರೂ, ತಮ್ಮ ಪ್ರಾಚೀನ ಪುರಾಣೇತಿಹಾಸಗಳ ವಿಷಯದಲ್ಲಿ ಕನ್ನಡಿಗರಿಗೆ ಇರುವ ಆತ್ಮೀಯತೆಯಂತೂ ಬಹುಗಾಢವಾದುದು ಎನ್ನುವುದು ಇವುಗಳಿಂದ ನಿಶ್ಚಯವಾಗುತ್ತದೆ.

*

ಕನ್ನಡ, ಕರ್ನಾಟಕ : ಶಬ್ದಗಳ ಪ್ರಾಚೀನತೆ ಪ್ರಯೋಗಗಳು

ಕನ್ನಡ

ಕನ್ನಡ, ಕರ್ಣಾ(ರ್ನಾ)ಟ(ಕ) ಎಂಬ ಶಬ್ದಗಳು ಬಹುಪ್ರಾಚೀನ ಕಾಲದಲ್ಲಿಯೇ ಈ ನಮ್ಮ ನಾಡಿನ ಭಾಗಕ್ಕೆ ಬಳಕೆಯಾಗುತ್ತ ಬಂದಿರುವುದನ್ನು ಶಾಸನಗಳ ಹಾಗೂ ಸಾಹಿತ್ಯಗ್ರಂಥಗಳ ಆಧಾರಗಳಿಂದ ತಿಳಿದುಕೊಳ್ಳಬಹುದಾಗಿದೆ. ಇವು ದೇಶವನ್ನೂ ಭಾಷೆಯನ್ನೂ ಸಮಾನವಾಗಿ ಸೂಚಿಸುವುದು ಸ್ಪಷ್ಟವೇ ಇದ್ದರೂ, ಇವುಗಳ ಬಳಕೆಯ ಪ್ರಾಚೀನತೆಯನ್ನು ಸಹ ತಾತ್ಕಾಲಿಕವಾಗಿ ಗುರುತಿಸಬಹುದಾದರೂ, ಇವುಗಳ ನಿಷ್ಪತ್ತಿಯೂ ನಿಷ್ಪನ್ನರೂಪದಲ್ಲಿ ಪೂರ್ವೋತ್ತರ ಪದಗಳ ಅರ್ಥ ರೂಪಗಳೂ ವಿದ್ವಾಂಸರಲ್ಲಿ ಬಹುವಾದ ಜಿಜ್ಞಾಸೆಗೆ ಎಡೆಗೊಟ್ಟಿವೆ. ಈ ಯಮಳಶಬ್ದಗಳಲ್ಲಿ ಮೊದಲು 'ಕನ್ನಡ' ಎಂಬುದರ ಬಗ್ಗೆ ಸ್ವಲ್ಪ ನೋಡೋಣ.

'ಕನ್ನಡ' ಎಂಬುದು ದೇಶ ಹಾಗೂ ಭಾಷಾವಾಚಕವಾಗಿ 'ಕವಿರಾಜಮಾರ್ಗ' ದಲ್ಲಿಯೇ (ಸು ೮೫೦), ಈ ವರೆಗೆ ದೊರೆತ ಗ್ರಂಥಗಳಲ್ಲೆಲ್ಲ ಮೊದಲನೆಯದಾದ ಗ್ರಂಥದಲ್ಲಿಯೇ, ಪ್ರಯೋಗವಾಗಿರುವುದನ್ನು ಗಮನಿಸಬಹುದು. ದೇಶದ ಹೆಸರನ್ನು ಸೂಚಿಸುವ ಬಹುಪರಿಚಿತವಾದ ಇಲ್ಲಿಯ ಉಲ್ಲೇಖ ಈ ರೀತಿಯಾಗಿದೆ:

ಕಾವೇರಿಯಿಂದಮಾ ಗೋ
ದಾವರಿವರಮಿರ್ದ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾವಳಯವಿಲೀನವಿಶದವಿಷಯವಿಶೇಷಂ॥ (೧-೩೬)

ಇದರ ಸಾಮಾನ್ಯಾರ್ಥ ಎಂದರೆ: "ಆ 'ಕನ್ನಡ'ವೆಂಬುದರಲ್ಲಿ, ಕಾವೇರಿನದಿಯಿಂದ ಆ ಗೋದಾವರೀನದಿಯ ವರೆಗೆ ಇರುವ ಆ ನಾಡು ಪ್ರಸಿದ್ಧವಾದ ಜನಪದವೆನಿಸಿದೆ; ಭೂಮಂಡಲದೊಳಗೆ ಸೇರಿರುವ ನಿರ್ಮಲರಾಜ್ಯವಿಶೇಷವೆನಿಸಿದೆ." ಆ 'ಕನ್ನಡ'ದ ತಿರುಳು ಪ್ರದೇಶಗಳನ್ನೂ ಮುಂದೆ ಹೀಗೆ ಹೆಸರಿಸಿದೆ:

ಅದಱಿಂೊಳಗಂ ಕಿಸುವೊಟಿಲಾ
ವಿದಿತ ಮಹಾಕೊಪಣನಗರದಾ ಪುಲಿಗೆಱೆಯಾ
ಸದಭಿಸ್ತು ತಮಪ್ಪೊಂಕುಂ
ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ ॥ (೧-೩೭)

ಕಿಸುವೊಟಿಲ್ (ಬಿಜಾಪುರ ಜಿಲ್ಲೆಯ ಪಟ್ಟದ ಕಲ್ಲು), ಕೊಪಣನಗರ (ರಾಯಚೂರು ಜಿಲ್ಲೆಯ ಕೊಪ್ಪಳ), ಪುಲಿಗೆಱೆ (ಧಾರವಾಡ ಜಿಲ್ಲೆಯ ಲಕ್ಷ್ಮೇಶ್ವರ), ಒಂಕುಂದ (ಬೆಳಗಾಂ ಜಿಲ್ಲೆಯ ಈಗಿನ ಒಕ್ಕುಂದ) ಇವುಗಳ ನಡುವಿನ ನಾಡೇ ಆ 'ಕನ್ನಡ'ದ ತಿರುಳಾದ ಪ್ರದೇಶ. ಈ ಎರಡು ಪದ್ಯಗಳಲ್ಲೂ 'ಕನ್ನಡ' ಶಬ್ದ ದೇಶವಾಚಕವಾಗಿಯೇ ಇರುವುದು ಗಮನಿಸತಕ್ಕದ್ದಾಗಿದೆ. ಯಾವುದೇ ಕಾರಣವಾಗಿರಲಿ, "ಗೋದಾವರಿಯ ಆಚೆಯ ದಂಡೆಯಲ್ಲಿಯೂ 'ಕನ್ನಡ' ಹೆಸರಿನ ಒಂದು ತಾಲ್ಲೂಕು ಇಂದಿಗೂ ಇದೆ" ಎನ್ನುವುದು ಸಹ ಕನ್ನಡ ಸೀಮೆಯ ವ್ಯಾಪ್ತಿಯನ್ನು ಹೇಳುವ ಸಾಕ್ಷ್ಯವೇ ಆಗಿದೆ.

ಈಚೆಗೆ ಆಂಡಯ್ಯನೆಂಬ ಕವಿ (ಸು. ೧೨೩೫), ತನ್ನ 'ಕಬ್ಬಿಗರ ಕಾವ' ಎಂಬ ಕೃತಿಯಲ್ಲಿ "ಕನ್ನಡಮೆನಿಪ್ಪಾ ನಾಡು ಚೆಲ್ವಾಯ್ತು" (ಪ. ೧೮) ಎಂಬುದಾಗಿ ಹೇಳಿರುವ ಸೊಗಸಾದ ಮಾತಿನಲ್ಲಿಯೂ 'ಕನ್ನಡ'ಶಬ್ದ ದೇಶವಾಚಕವಾಗಿಯೇ (ಕೆಲವರು ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಮಾತ್ರ ಕುರಿತಿದೆ ಎನ್ನುತ್ತಾರೆ) ಬಂದಿದೆ. ಅನಂತರ ಕನಕದಾಸನ (ಸು. ೧೫೫೦) 'ಮೋಹನ ತರಂಗಿಣಿ' ಎಂಬ, ಗೋವಿಂದ ವೈದ್ಯನ (೧೬೪೮) 'ಕಂಠೀರವನರಸರಾಜ ವಿಜಯ' ಎಂಬ ಸಾಂಗತ್ಯಕೃತಿಗಳಲ್ಲಿಯೂ (೨-೧೪' ಸಂಧಿ ೧೧ರ ಸೂಚನೆ) ಹಾಗೆಯೇ ಬಂದಿದೆ. ಕನ್ನಡ ಭಾಷೆಯಲ್ಲಿ ಲಘುನಿಘಂಟುಗಳನ್ನು ರಚಿಸಿರುವವರು ದೇಶ ಹಾಗೂ ಭಾಷೆ ಎರಡಕ್ಕೂ ಅನ್ವಯಿಸುವಂತೆ "ಕನ್ನಡಮೇ ಕರ್ಣಾಟನಾಮಂ" ಎಂದೂ '(ಕರ್ಣಾಟಕ ನಿಘಂಟು', ಪ. ೪೧), "ಕನ್ನಡವೆನಲ್ ಕರ್ನಾಟಕಂ' ಎಂದೂ ('ಕಬ್ಬಿಗರ ಕೈಪಿಡಿ', ಪ. ೬೬) ಬಂದಿರುವ ಹಾಗೆ ತೋರುತ್ತದೆ.

೧೧೨೧ರ ದಾವಣಗೆರೆಯ ಒಂದು ಶಾಸನದಲ್ಲಿ "ಕಂನಡ ನಾಲ್ಕುಸಾಸಿರದ ಮುಂಮುಱಿದಂಡಂಗಳಿಗೆ ಮುಖ್ಯರಪ್ಪ ಶೈವರ ದೇವಿಸೆಟ್ಟಿಯರು" ಎಂಬುದಾಗಿ ಬಂದಿದ್ದು (ಎಕ., xi, ದಾವಣ. ೩-೩೪), ಇದು ಒಂದು ನಾಡಿನ ಅಥವಾ ಮಂಡಲದ ಹೆಸರನ್ನು ಹೇಳುತ್ತದೆ.

'ಕನ್ನಡ' ಪ್ರದೇಶದಲ್ಲಿ ಆಡುವ ಭಾಷೆಯೂ ಕನ್ನಡವೇ. 'ಕವಿರಾಜಮಾರ್ಗ'ದಲ್ಲಿಯೇ ಈ ಅರ್ಥದ ಪ್ರಯೋಗ ಧಾರಾಳವಾಗಿ ಆಗಿದೆ. "ಮಿಗೆ ಕನ್ನಡಗಬ್ಬಂ ಗಳೊಳ್..." (೧-೨೭), "ನುಡಿಗೆಲ್ಲಂ ಸಲ್ಲದ ಕನ್ನಡದೊಳ್......" (೧-೩೩) ಹೀಗೆ ಪ್ರಯೋಗಗಳನ್ನು ಗುರುತಿಸುತ್ತ ಹೋಗಬಹುದು. ಅನಂತರದ ಕವಿಗಳಲ್ಲಿಯಂತೂ ಸಂದರ್ಭವನ್ನು ಹಿಡಿದು ಸಾಮಾನ್ಯವಾಗಿ ಈ ಶಬ್ದ ಈ ಅರ್ಥದಲ್ಲಿ ಕಾಣಿಸಿಕೊಂಡಿರುವುದಕ್ಕೆ ಕೊರತೆಯೇನಿಲ್ಲ. ಕನ್ನಡ ಭಾಷೆಯೆಂಬ ಸಾಮಾನ್ಯಾರ್ಥದಲ್ಲಿ ಮಾತ್ರವಲ್ಲದೆ, ಆ ಭಾಷೆಯ ಪ್ರಭೇದಗಳಲ್ಲಿ

ಒಂದು ಎಂಬ ವಿಶಿಷ್ಟಾರ್ಥದಲ್ಲಿಯೂ ಅದು ಬಳಕೆಯಾಗಿರುವುದಕ್ಕೆ 'ಕವಿರಾಜ ಮಾರ್ಗ'ದಿಂದಲೇ (೧-೫೭) ಅಲ್ಲದೆ, ಈಚೆಗೆ 'ಕಬ್ಬಿಗರ ಕಾವ' (ಪ. ೩೪೮), 'ಕವಿಜಿಹ್ವಾಬಂಧನ' (೪-೩) ಮೊದಲಾದ ಕೃತಿಗಳಿಂದಲೂ ಉದಾಹರಣೆಗಳನ್ನು ಕೊಡಬಹುದು. 'ಕವಿರಾಜಮಾರ್ಗ' ಉದಾಹರಣೆಯನ್ನೇ ಪ್ರಾಚೀನವೆಂಬ ಕಾರಣಕ್ಕಾಗಿ ಎತ್ತಿಕೊಡಬಹುದಾದರೆ, "ದೋಸಮಿನಿತೆಂದು ಬಗೆದು ದ್ಭಾಸಿಸಿ ತಱಿಸಂದು ಕನ್ನಡಂಗಳೊಳ್...." ಎಂಬುದನ್ನು (೧-೪೬) ಎತ್ತಿಕೊಡಬಹುದು.

ಬರುಬರುತ್ತ "ಕನ್ನಡ ಶಬ್ದದ ಅರ್ಥವ್ಯಾಪ್ತಿ ಬೆಳೆಯುತ್ತ ಹೋಯಿತು. ಚಾಲುಕ್ಯ ವಿನಯಾದಿತ್ಯನ ಕಾಲದ ೫೯೮ರ ಒಂದು ತ್ರಾಮ ಶಾಸನದಲ್ಲಿ (ಸೌಇಇ. ೧೯೩೪ ಪು. ೩೦) 'ಕನ್ನಡಾನ್ವಯ ಕಾಶವ ಕೌವೇರಭಟ್ಟ'ನೆಂಬುವನ ವಿಚಾರ ಬಂದಿದೆಯಾದರೂ ಈ ಶಾಸನ ಕೂಟಶಾಸನವೆಂದು ತಿಳಿದಿದ್ದಾರೆ. ೧೧೯೨ರ ಶಿಕಾರಿಪುರದ ಶಾಸನವೊಂದರಲ್ಲಿ, "ಕಂನಡಶಾಖೆಯ ವಿಶ್ವಾಮಿತ್ರಗೋತ್ರದ ವಿಷ್ಣುದೀಕ್ಷಿತರು" ಎಂಬುದಾಗಿ ಹೇಳಿರುವಲ್ಲಿ, ಅದು ವೈದಿಕಬ್ರಾಹ್ಮಣರ ಒಂದು ಶಾಖೆಯನ್ನು ಹೇಳುವ ಮಾತಾಗಿದೆ. 'ಕನ್ನಡಿಗ' ಕುಲನಾಮವನ್ನು ಹೇಳುವ ಒಂದು ಮಾತಾಗಿ ಚಾವುಂಡರಾಯನ (ಸು. ೧೦೫೦) 'ಲೋಕೋಪಕಾರ' ಎಂಬ ಕೃತಿಯಲ್ಲಿಯೂ ಅದಕ್ಕೆ ಈಚಿನ ಕಾಲದ ಕೆಲವು ಶಾಸನಗಳಲ್ಲಿಯೂ ಕಂಡುಬಂದಿದೆ. ಇವುಗಳಲ್ಲಿ "ಕಾಶ್ಯಪಗೋತ್ರದೊಳ್ ಸದಾಚರಿತರೆನಿಪ್ಪ ಕನ್ನಡಿಗರೊಳ್ ಕುಲನಾಮ ದಿನೊಪ್ಪುವೆತ್ತ..." ಎನ್ನುವುದು (೧-೩ ಪೀಠಿಕೆ) 'ಲೋಕೋಪಕಾರ'ದ ಪ್ರಯೋಗ. "ಕನ್ನಡಿಗಕುಲಕೆ ರನ್ನದ ಕನ್ನಡಿಯೆನೆ ವಿಶ್ವವಿದಿತವೃತ್ತಶ್ರೀಸಂಪನ್ನಂ ಲಕ್ಷ್ಮೀಧರದೇವಂ...." ಎಂಬುದಾಗಿ ಮಧುರಕವಿ ಮಂತ್ರಿ ಲಕ್ಷ್ಮೀಧರನನ್ನು ಹಂಪಿಯ ಶಾಸನವೊಂದರಲ್ಲಿ ಕೀರ್ತಿಸಿರುವುದು (ಸೌಇಇ iv, ೨೬೭-೪೧; ೧೩೮೦) ಒಂದು ಶಾಸನದ ಪ್ರಯೋಗ ವಂಶನಾಮವಾಗಿ ಅಲ್ಲದೆ, ಸಂಗೀತಶಾಸ್ತ್ರದ ಪರಿಧಿಯಲ್ಲಿಯೂ ಈ ಶಬ್ದ ಬಳಕೆಯಾಗಿರುವುದು ಕಾಣುತ್ತದೆ. ಕನ್ನಡ ಗೌಳ, ಕನ್ನಡ ವರಾಳಿ ಎಂಬವು ಕ್ರಮವಾಗಿ ಗೌಳಮಿಶ್ರ, ವರಾಳಿರಾಗದ ಉಪಾಂಗ ರಾಗಗಳೆಂದು ನಿಜಗುಣ ಶಿವಯೋಗಿ 'ವಿವೇಕಚಿಂತಾಮಣಿ'ಯಲ್ಲಿ ತಿಳಿಸಿದ್ದಾನೆ ಪು. (೨೩೪, ೨೩೫). ಸು. ೧೮೦೦ರ ಅನಂತರದ ಸಂಗೀತಶಾಸ್ತ್ರ ಕೃತಿಗಳಲ್ಲಿ 'ಕನ್ನಡ' ಪೂರ್ವಪದವಾಗಿರುವ ದೀಪಕ, ಕುರುಂಜಿ, ದರ್ಬಾರು, ಪಂಚಮ, ವೇಳಾವಳಿ, ಸಾಳವಿ, ಸೌರಾಷ್ಟ್ರ ಎಂಬ, 'ಕನ್ನಡ' ಉತ್ತರಪದವಾಗಿರುವ ಗಂಧರ್ವ, ನವರಸ, ಪೂರ್ವ, ಮಾರುವ, ಸಾಮ, ಶುದ್ಧ ಎಂಬ ಕೆಲವು 'ಅಪರಾಗಗಳು' ಉಲ್ಲೇಖವಾಗಿವೆಯೆಂದು ತಿಳಿಯಲಾಗಿದೆ, 'ಕನ್ನಡ' ಒಂದು ರಾಗದ ಹೆಸರೆಂದೇ.....' 'ಸಂಗೀತಶಾಸ್ತ್ರ ಚಂದ್ರಿಕೆ'ಯಲ್ಲಿ ಸೂಚಿಸಿರುವುದಲ್ಲದೆ, 'ಕನ್ನಡವೀಣೆ'ಯನ್ನು ವೀಣೆಯ ಒಂದು ಪ್ರಕಾರವಾಗಿ ಇಲ್ಲಿಯೇ ಗುರುತಿಸಿದೆ.

ಹೀಗೆ ವಿವಿಧಾರ್ಥಗಳಲ್ಲಿ ಪ್ರಯೋಗವಾಗಿರುವ 'ಕನ್ನಡ' ಶಬ್ದವನ್ನು ಈಗ ಸಾಮಾನ್ಯವಾಗಿ ಭಾಷಾಸೂಚಕವಾಗಿಯೇ ನಾಡಿನ ಜನ ಬಳಸುತ್ತಾರೆ; ಉತ್ತರ ಪದ 'ದೇಶ' ಎಂದೋ 'ನಾಡು' ಎಂದೋ ಇದ್ದಾಗ ಅದು ದೇವವಾಚಕವೆಂಬುದೂ

'ಭಾಷೆ'ಯೆಂದೋ 'ನುಡಿ'ಯೆಂದೋ ಇದ್ದಾಗ ಅದು ಭಾಷಾವಾಚಕವೆಂಬುದೂ ವಿದಿತವೇ ಇದೆ. ಇನ್ನು ಈ ಶಬ್ದದ ನಿಷ್ಪತ್ತಿಯನ್ನೂ ರೂಪಭೇದಗಳನ್ನೂ ಕುರಿತು ಪ್ರತ್ಯೇಕವಾಗಿ ವಿವೇಚಿಸದೆ, 'ಕರ್ನಾಟಕ' ಶಬ್ದದ ನಿಷ್ಪತ್ತಿಯನ್ನೂ ರೂಪಭೇದಗಳನ್ನೂ ಕುರಿತು ವಿವೇಚಿಸುವಾಗ ಅದರೊಂದಿಗೆ ವಿವೇಚಿಸಲಾಗುತ್ತದೆ.

ಕರ್ನಾಟಕ

ಈಗ ಪರಿಶೀಲನೆಗೆ 'ಕರ್ನಾಟಕ' ಶಬ್ದವನ್ನು ಎತ್ತಿಕೊಳ್ಳೋಣ. ಈ ಶಬ್ದದ ಸಂಸ್ಕೃತವ್ಯಾಕರಣ ಸಮ್ಮತವೂ ಪ್ರಾಚೀನವೂ ಆದ ರೂಪ 'ಕರ್ಣಾಟ(ಕ)' ಎಂಬುದಾಗಿದ್ದು, ಇದರ ಪ್ರಯೋಗ ಭಾರತೀಯ ಸಾಹಿತ್ಯದಲ್ಲಿ ಸು. ೪೦೦ರ ವರೆಗೆ ಹಿಂದಕ್ಕೆ ಹೋಗುವುದಂತೂ ಈ ವರೆಗಿನ ಪ್ರಮಾಣಗಳಿಂದ ನಿಶ್ಚಯವಾಗಿದೆ. ಕ್ರಿ. ಪೂ. ೪ನೆಯ ಶತಮಾನದಿಂದ ಕ್ರಿ. ಶ. ೪ನೆಯ ಶತಮಾನದ ವರೆಗಿನ ನಡುವಣ ಅವಧಿಯಲ್ಲಿ ಎಂದೋ ರಚಿತವಾಗಿದೆಯೆಂದು ಕೆಲವರು ವಿದ್ವಾಂಸರು ಭಾವಿಸಿರುವ 'ಮಹಾಭಾರತ'ದಲ್ಲಿಯೇ ಅದರ 'ಸಭಾಪರ್ವ'ದಲ್ಲಿ ಒಂದು ಕಡೆಯೂ (೭೮-೯೪) 'ಭೀಷ್ಮಪರ್ವ'ದಲ್ಲಿ ಇನ್ನೊಂದು ಕಡೆಯೂ (ಅ. ೯-ಶ್ಲೋ. ೫೯) ಕ್ರಮವಾಗಿ 'ಕರ್ಣಾಟ', 'ಕರ್ಣಾಟಕ' ಶಬ್ದಗಳ ಪ್ರಯೋಗವಾಗಿರುವುದು ಆ ಗ್ರಂಥದ ಕೆಲವು ಪರಿಷ್ಕರಣಗಳಿಂದ ತಿಳಿದು ಬರುವುದೇನೋ ಸಾಧ್ಯವಿದೆ; ಆದರೆ ಇಲ್ಲಿ ಪಾಠಭೇದಗಳಿರುವಂತಿದ್ದು, ಪುಣೆಯ ಭಂಡಾರ್ಕರ್ ಸಂಸ್ಥೆ ಪ್ರಕಟಿಸಿರುವ ಪರಿಷ್ಕರಣದಲ್ಲಿ ಇವುಗಳ ಪ್ರಯೋಗ ಕಂಡು ಬರುತ್ತಿಲ್ಲದಿರುವುದು ಸಂಶಯಕ್ಕೆ ಎಡೆಗೊಡುವುದಾಗಿದೆ. ಈ ಆಕರವನ್ನು ಹೊರತುಪಡಿಸಿದರೆ, ಪುರಾಣಗ್ರಂಥಗಳಲ್ಲಿ ವಿಷ್ಣುಧರ್ಮೋತ್ತರ, ಭಾಗವತ, ಮಾರ್ಕಂಡೇಯ, ಸ್ಕಾಂದ, ಪದ್ಮಪುರಾಣಗಳಲ್ಲಿಯೂ ಕಾವ್ಯನಾಟಕ ಗ್ರಂಥಗಳಲ್ಲಿ ' 'ಮೃಚ್ಛಕಟಿಕ ಪ್ರಕರಣ', 'ಯಶಸ್ತಿಲಕ ಚಂಪೂ', 'ವಿದ್ಧಶಾಲಭಂಜಿಕಾ', 'ಬಾಲರಾಮಾಯಣ' ಮೊದಲಾದವುಗಳಲ್ಲಿಯೂ ಲಕ್ಷಣ ಮತ್ತು ಶಾಸ್ತ್ರಗ್ರಂಥಗಳಲ್ಲಿ 'ಬೃಹತ್ಸಂಹಿತಾ', 'ಬೃಹದ್ದೇಶೀ, 'ಕಾವ್ಯಮೀಮಾಂಸಾ' ಮೊದಲಾದವುಗಳಲ್ಲಿಯೂ ಈ ಶಬ್ದಗಳಿಗೆ ಪ್ರಯೋಗಗಳು ಸಂದರ್ಭೋಚಿತವಾಗಿ ಕಂಡು ಬಂದಿವೆ ಎನ್ನುವುದು ಪರಿಶೀಲಿಸಿದಲ್ಲಿ ತಿಳಿಯುತ್ತದೆ. ಈ ಪ್ರಯೋಗಗಳು ಕೇವಲ ಸಂಸ್ಕೃತ ಭಾಷೆಗಷ್ಟೇ ಮೀಸಲಾಗಿರದೆ, ಅಪಭ್ರಂಶಾದಿ ಪ್ರಾಕೃತಭಾಷೆಗಳಲ್ಲಿ, ಮರಾಠಿ ಮೊದಲಾದ ಆಧುನಿಕ ಆರ್ಯಭಾಷೆಗಳಲ್ಲಿ, ತಮಿಳು ತೆಲುಗು ಮುಂತಾದ ದ್ರಾವಿಡ ಭಾಷೆಗಳಲ್ಲಿ ಸಹ ವ್ಯಾಪಕವಾಗಿ ಕಂಡುಬಂದಿವೆಯೆನ್ನುವುದೂ ಪರಿಶೀಲನೆಯಿಂದ ತಿಳಿಯುತ್ತದೆ. ಕನ್ನಡ ಭಾಷೆಯಲ್ಲಿಯಂತೂ ಅವು ಜೀವಾಳವಾದ ಮಾತುಗಳೇ ಆಗಿವೆ. ಈ ಪ್ರಯೋಗ ವೈವಿಧ್ಯವನ್ನು ಈ ಮುಂದೆ ಸೂಚಿತವಾದ ಕೆಲವು ಆಕರಗಳಿಂದ ತಿಳಿಯಬಹುದಾಗಿದ್ದು, ಉದ್ಧೃತಿಗಳನ್ನು ಅನುಬಂಧದಲ್ಲಿ ನೋಡಿಕೊಳ್ಳಬಹುದಾಗಿದೆ.

೧. ಸಂಸ್ಕೃತಸಾಹಿತ್ಯದ ಪ್ರಯೋಗಗಳಲ್ಲಿ ಕೆಲವು ಈ ಆಕರಗಳಲ್ಲಿವೆ; i ಪುರಾಣೇತಿಹಾಸಗಳು: 'ಮಹಾಭಾರತ' (ಕೆಲವು ಪ್ರಚಲಿತ ಪರಿಷ್ಕರಣಗಳ ಪ್ರಕಾರ), 'ವಿಷ್ಣುಧರ್ಮೋತ್ತರಪುರಾಣ' (೧೨೧-೩-೩), 'ಭಾಗವತಪುರಾಣ' (೫-೬-೧.೭),

'ಮಾರ್ಕಂಡೇಯಪುರಾಣ' (೫೫-೨೪), 'ಸ್ಕಾಂದಪುರಾಣ' (೩-೧೮ ಪ. ೧-೧೭೯), 'ಪದ್ಮಪುರಾಣ' (ಆದಿ. ౬-೫೪) ಇ. (ii) ಕಾವ್ಯ ನಾಟಕಾದಿ ಸಾಹಿತ್ಯ ಗ್ರಂಥಗಳು: ಶೂದ್ರಕ ಕವಿಯ 'ಮೃಚ್ಛಕಟಿಕ ಪ್ರಕರಣ' (೬-೨೦), ಭರ್ತೃಹರಿಯ 'ಸುಭಾಷಿತ ಸಂಗ್ರಹ' (ಪ. ೬೪೬), ಜಿನಸೇನರ 'ಪೂರ್ವಪುರಾಣ' (೨೯-೯೧, ೧೬-೧೫೪), ಸೋಮದೇವ ಸೂರಿಯ 'ಯಶಸ್ತಿಲಕ ಚಂಪೂ' (೧-ಪು. ೨೧೦), ರಾಜಶೇಖರನ 'ವಿದ್ಧಶಾಲಭಂಜಿಕಾ' (೪-ಪ.೧೯), ರಾಜಶೇಖರನ 'ಬಾಲರಾಮಾಯಣ ನಾಟಕ' (ಪ್ರಸ್ತಾವನೆ, ಪ. ೨-೩ರ ನಡುವೆ), ಬಿಲ್ಹಣನ 'ವಿಕ್ರಮಾಂಕದೇವಚರಿತ' (೧೮-೧೦೨), ಸೋಮದೇವ ಸೂರಿಯ 'ಕಥಾಸರಿತ್ಸಾಗರ, (೪೦-೫-೩೨೩, ೧೨-೧೧-೧೧೯), ಕಲ್ಹಣನ 'ರಾಜಾತರಂಗಿಣಿ' (೧-೩೦೦), ಜಲ್ಹಣನ 'ಸೂಕ್ತಿಮುಕ್ತಾವಳಿ' (೧-ಪ. ೪೭), ಅಯ್ಯಪಾರ್ಯನ 'ಜಿನೇಂದ್ರ ಕಲ್ಯಾಣಾಭ್ಯುದಯ', ಗಂಗಾಬಿಂಕೆಯ 'ಮಧುರಾವಿಜಯ' (೧-೭೫, ೪-೪೭), ಕೆಳದಿ ಬಸವರಾಜನ 'ಶಿವತತ್ತ್ವರತ್ನಾಕರ' (೪-೨-೫), ವೆಂಕಟಾಧ್ವರಿಯ 'ವಿಶ್ವಗುಣಾದರ್ಶ' (ಶ್ಲೋ-೨೪೯), '(iii) ಲಕ್ಷಣ ಮತ್ತು ಶಾಸ್ತ್ರಗ್ರಂಥಗಳು : ವರಾಹಮಿಹಿರನ 'ಬೃಹತ್ಸಂಹಿತಾ' (೧೪-೧೩), ಮತಂಗನ ಬೃಹದ್ದೇಶಿ' (ಶ್ಲೋ. ೩೯೭, ೪೦೩, ೪೧೧, ೪೮೭, ೪೮೯), ರಾಜಶೇಖರನ 'ಕಾವ್ಯಮೀಮಾಂಸಾ' (೧-೧), ಇಂದ್ರನಂದಿಯ 'ಶ್ರುತಾವತಾರ' (ಪ. ೧೬೪, ೧೬೬), ನಾಗವರ್ಮನ 'ಕರ್ನಾಟಕ ಭಾಷಾ ಭೂಷಣ' (ಸೂ. ೧, ೧೧, ೧೨), ಜಯಕೀರ್ತಿಯ 'ಛಂದೋನುಶಾಸನ' (೧-೨೨, ೭-೪, ೫, ೬, ೭, ೧೦), ಕ್ಷೇಮೇಂದ್ರನ 'ಔಚಿತ್ಯವಿಚಾರಚರ್ಚಾ' (೨೭-೮೦), ದಿವಾಕರಣಂದಿಯ 'ತತ್ತ್ವಾರ್ಥ ಸೂತ್ರವೃತ್ತಿ', ಮೂರನೆಯ ಸೋಮೇಶ್ವರನ 'ಮಾನೋಲ್ಲಾಸ' (೪-೧೬,೨೮೮, ೧೪೨೫), ಶಾರ್ಙ್ಗದೇವನ 'ಸಂಗೀತರತ್ನಾಕರ' (೪-೨೭೪), ವಾತ್ಸ್ಯಾಯನ ಕಾಮಸೂತ್ರದ 'ಜಯಮಂಗಲಾ' ವ್ಯಾಖ್ಯೆ (೨-೫-೨೮ ಇ.) ಹೇಮಾದ್ರಿಯ 'ಚತುರ್ವರ್ಗ ಚಿಂತಾಮಣಿ'ಯ 'ವ್ರತಖಂಡಪ್ರಶಸ್ತಿ', ಹರಿಪಾಲದೇವನ 'ಸಂಗೀತ ಸುಧಾಕರ', ಭಟ್ಟಾಕಳಂಕನ 'ಕರ್ಣಾಟಕ ಶಬ್ದಾನುಶಾಸನ' (ಮಂಗಲಶ್ಲೋಕ, ಸೂ. ೧೬೦ ಇ.)

ಈ ಮೂಲಗಳಲ್ಲಿ ಕರ್ಣಾಟ(ಕ) ಶಬ್ದವನ್ನು ದೇಶವಾಚಕವಾಗಿಯೂ ಭಾಷಾ ವಾಚಕವಾಗಿಯೂ ಹಿಂದಿನಿಂದ ಬಳಸುತ್ತ ಬಂದಿರುವುದನ್ನು ಕಾಣಬಹುದು. ಇವುಗಳಿಗೆ ಪ್ರಾಚೀನತೆಯನ್ನು ಲಕ್ಷಿಸಿ ಒಂದೊಂದು ಉದಾಹರಣೆಯನ್ನು ಈ ಮುಂದೆ ಉದಾಹರಿಸಬಹುದು:

೧. ಶೂದ್ರಕ ಕವಿಯ 'ಮೃಚ್ಛಕಟಿಕ ಪ್ರಕರಣ' (ಸು. ೪೦೦) ದಲ್ಲಿ ಚಂದನಕನೆಂಬ ಪಾತ್ರದ ಮಾತು ಪ್ರಾಕೃತದಲ್ಲಿದ್ದು, ಅದರ ಸಂಸ್ಕೃತ ರೂಪ ಹೀಗಿದೆ:

....ವಯಂ ದಾಕ್ಷಿಣಾತ್ಯಾ ಅವ್ಯಕ್ತ ಭಾಷಿಣಃ ಖಷ ಖತ್ತಿ ಕಡ ಕಡಟ್ಠೋಬಿಲ ಕರ್ಣಾಟ ಕರ್ಣ ಪ್ರಾವರಣ ದ್ರಾವಿಡ ಚೋಲ ಚೀನ ಬರ್ಬರ ಖೇರ ಖಾನ ಮುಖ ಮಧುಘಾತಪ್ರಭೃತೀನಾಂ ಮ್ಲೇಚ್ಛಜಾತೀನಾಮನೇಕದೇಶ ಭಾಷಾಭಿಜ್ಞಾ ಯಥೇಷ್ಟಂ ಮನ್ತ್ರಯಾಮಃ, ದೃಷ್ಟೋ ದೃಷ್ಟಾವಾ ಆರ್ಯ ಆರ್ಯಾ ವಾ।

(ವಿಚಿನ್ತ್ಯ) ಕರ್ಣಾಟಕಲಹಪ್ರಯೋಗಂ ಕರೋಮಿ

ಇಂದ್ರನಂದಿಯ 'ಶ್ರುತಾವತಾರ' (೮೭೮ ರ ಪೂರ್ವ)ದಲ್ಲಿ 'ಪದ್ಧತಿ' ಗ್ರಂಥಗಳು ಕರ್ಣಾಟ ಭಾಷೆಯಲ್ಲಿಯೂ ರಚಿತವಾಗುತ್ತಿದ್ದುವೆಂಬ ವಿಚಾರ ಹೀಗೆ ಉಕ್ತವಾಗಿದೆ:

ಪ್ರಾಕೃತ ಸಂಸ್ಕೃತ ಕರ್ಣಾ
ಟಭಾಷಾಯಾ ಪದ್ಧತಿ: ಪರಾ ರಚಿತಾ
ತಸ್ಮಾದ್ಧಾರಾತ್ಪುನರಪಿ
ಕಾಲೇ ಗತವತಿ ಕಿಯತ್ಯಪಿ ಚ॥ (ಪ. ೧೬೪)

೨. ಪ್ರಾಕೃತ ಭಾಷೆಯ ಗ್ರಂಥಗಳಲ್ಲಿ ಕರ್ಣಾಟ(ಕ) ಶಬ್ದ ಪ್ರಯೋಗ ಈ ಕೆಲವು ಆಕರಗಳಲ್ಲಿ ಕಂಡು ಬಂದಿದೆ:

ಉದ್ಯೋತನ ಸೂರಿಯ 'ಕುವಲಯಮಾಲಾ ಕಹಾ' (೨೪೩), 'ಭವಿಸ್ಸಯತ್ತ ಕಹಾ' (೧-೧೨), ರಾಜಶೇಖರನ 'ಕಪ್ಪೂರಮಂಜರೀ' (೧-೧೫೫).

ಉದ್ಯೋತನ ಸೂರಿಯ ಪ್ರಾಚೀನವಾದ 'ಕುವಲಯಮಾಲಾ ಕಹಾ' (೭೭೯) ದಲ್ಲಿ

ಲಾಡಾ ಕಣ್ಣಾಡಾ ವಿ ಯ। ಮಾಲವಿಯ -ಕಣುಜ್ಜ-ಗೋಲ್ಲಯಾ ಕೇ ಇ।
ಮರಹಟ್ಟಿ ಯ ಸೋರಾಟ್ಟಾ ಥಕ್ಕಾ । ಸಿರಿಅಂತ-ಸೇಂಧವಯಾ॥

೩. ಮರಾಠಿ ಮೊದಲಾದ ಆಧುನಿಕ ಆರ್ಯಭಾಷೆಯ ಗ್ರಂಥಗಳಲ್ಲಿ ಕರ್ಣಾಟ(ಕ) ಶಬ್ದದ ಪ್ರಯೋಗಗಳು:

ಮರಾಠಿಯಲ್ಲಿ : ಜ್ಞಾನದೇವನ 'ಜ್ಞಾನೇಶ್ವರೀ', ಸರಸ್ವತಿ ಗಂಗಾಧರನ 'ಗುರುಚರಿತ್ರೆ' (೪೨-೧೭೧), ಚಂದ್ರಾತ್ಮಜನ 'ಭಾರತ', ಶೇಷಗಿರಿರಾಯನ 'ಜೈಮಿನಿ ಭಾರತ' (ಮೊದಲ ಸಂಧಿ) ಇ

ಜ್ಞಾನದೇವನ 'ಜ್ಞಾನೇಶ್ವರಿ' (೧೨೯೦) ಯಲ್ಲಿ—

ಕಾನಡಾ ಹೋ ವಿಟ್ಠಲೂ ಕರ್ನಾಟಕೂ ತ್ಯಾನೇ ಮಝು ಲಾವಿಲೇ ವೇಧೀ

೪. ತಮಿಳು, ತೆಲುಗು ಮೊದಲಾದ ದ್ರಾವಿಡ ಭಾಷೆಗಳಲ್ಲಿ ಕರ್ಣಾಟ(ಕ) ಶಬ್ದ.

ಪ್ರಯೋಗಗಳು

(i) ತಮಿಳಿನಲ್ಲಿ: ಇಳಂಗೋವಡಿಗಳ್ ಕವಿಯ 'ಶಿಲಪ್ಪದಿಗಾರಂ' (ವಂಜಿ. ಕಾ. ೨೫, ಸಾ. ೧೫೧-೫೫). ಪಾಂಡ್ಯರಾಜ ಶೈಡೈಯನ್ ಪರಾಂತಕನ ವೇಳ್ವಿ ಕುಡಿ ತಾಮ್ರಶಾಸನ (ಸಾಲು ೬೯-೭೦), ಕಲಿಂಗತ್ತುಪ್ಪರಣಿ, ಅಮೃತಸಾಗರನ 'ಯಾಪ್ಪರುಂಗಲಕ್ಕಾರಿಗೈ'ಗೆ ಗುಣಸಾಗರನ ವ್ಯಾಖ್ಯಾನ (ಮೊದಲ ಪದ್ಯದ ಕಾರಿಕೆ) ಇ.

(ii) ತೆಲುಗಿನಲ್ಲಿ: ತಿಕ್ಕನ ಸೋಮಯಾಜಿಯ 'ನಿರ್ವಚನೋತ್ತರ ರಾಮಾಯಣಮು' (೧-೩೪, ೩೯), ಪಾಲ್ಕುರಿಕೆ ಸೋಮನಾಥನ 'ಪಂಡಿತಾರಾಧ್ಯ ಚರಿತ್ರಮು' (ಪರ್ವತ ಪ್ರಕರಣ), 'ಬಸವ ಪುರಾಣಮು' (ಅವತಾರಿಕ), 'ಭಾಸ್ಕರ ರಾಮಾಯಣಮು', ಶ್ರೀನಾಥನ 'ಶೃಂಗಾರನೈಷಧಮು' (೪-೧೪೧),' ಭೀಮೇಶ್ವರ ಪುರಾಣಮು' (೧-೧೫, ೧೯, ೩೨ ವ, ೩೮, ಮೊಲ್ಲ ಕವಯಿತ್ರಿಯ 'ಮೊಲ್ಲ ರಾಮಾಯಣಮು' (ಬಾಲ, ೧-೬೫) ಇ.

ತಮಿಳು ತೆಲುಗು ಭಾಷೆಗಳಿಂದ ಒಂದೊಂದು ಉದಾಹರಣೆ:

(i) ಇಳಂಗೋವಡಿಗಳ್ ಕವಿಯ 'ಶಿಲಪ್ಪದಿಗಾರಂ' (ಸು. ೬೦೦):

ತಿಗೈಮುಗ ವೇಜತ್ತಿನ್ ಶೆವಿಯಗಮ್ ಪುಕ್ಕನ
ಕೊಙ್ಗಣರ್ ಕಲಿಙ್ಗರ ಕೋಡುಙ್ಗರುನಾಡರ್
ಪಙ್ಗಳರ್ ಕಙ್ಗರ್ ವಣ್ಡಮಿಜ್ ಕಟ್ಟಿಯರ್
ವಡವಾರಿಯರೋಡು ಪಲ್ವೇಜ್ ಮಯಕ್ಕತ್ತುನ್
ಕಡಮಲ್ಲೈ ವೆಟ್ಟಮೆನ್ ಕಟ್ಟುಲಮ್ ಪಿರಿಯಾದು
(ವಞ್ಜಿಕ್ಕಾಂಡಂ, ಕಾಟ್ಚಿಕ್ಕಾದೈ ೨೫, ಸಾಲು ೧೫೧-೫೫)

(ii) ತಿಕ್ಕನ ಸೋಮಯಾಜಿಯ 'ನಿರ್ವಚನೋತ್ತರ ರಾಮಾಯಣಮು' (೧೨೧೦-೯೦)

ಕಮಲಾಪ್ರಪ್ರತಿಮಾನಮೂರ್ತಿಯಗುನಾ ಕರ್ಣಾಟಸೋಮೇಶು ದು
ರ್ದಮದೋರ್ಗರ್ವಮು ರೂಪು ಮಾಪಿ ನಿಜದರ್ಪಂಬುಂ ಬ್ರತಿಷ್ಠಿಂಚಿಲೀ
ಲಮೆಯಿನ್ ಜೋಳುನಿ ಭೂಮಿಪ್ಪೈ ನಿಲಿಪಿ ಚೋಳಸ್ಥಾಪನಾಚಾರ್ಯನಾ
ಮಮು ದಕ್ಕಂ ಗೊನಿ ತಿಕ್ಕಭೂವಿಭುಡು ಸಾಮರ್ಥ್ಯಂಬು ಚೆಲ್ಲಿಂಪಡೇ॥

ಕನ್ನಡ ಸಾಹಿತ್ಯದೊಳಗಿನ ಉಲ್ಲೇಖಗಳು, ಈಗ ತಿಳಿದಮಟ್ಟಿಗೆ ಪ್ರಾಚೀನತಮ ಗದ್ಯಗ್ರಂಥವಾದ 'ವಡ್ಡಾರಾಧನೆ' (ಸು. ೯೨೦) ಯಿಂದ ತೊಡಗುತ್ತವೆ, 'ಕವಿರಾಜ ಮಾರ್ಗ'ದಲ್ಲಿ ಒಂದು ಸಲವಾದರೂ 'ಕರ್ಣಾಟ(ಕ)' ಶಬ್ದದ ಪ್ರಯೋಗವಾಗಿಲ್ಲದಿರುವುದು ಕುತೂಹಲಕರವಾಗಿದೆ. ಇದಕ್ಕೆ ವಿಶೇಷಕಾರಣವೇನೂ ಇದ್ದಿರಲಾರದು. ಇಲ್ಲಿ ಕೆಲವು ಆಕರಗಳನ್ನು ಸೂಚಿಸಬಹುದು: (i) ಕಾವ್ಯನಾಟಕಾದಿ ಸಾಹಿತ್ಯ ಗ್ರಂಥಗಳು; 'ವಡ್ಡಾರಾಧನೆ' (ಪು. ೪೦-೪೧), ಪಂಪಕವಿಯ 'ಆದಿಪುರಾಣ' (೮-೬೩ ವ. ೧೩-೪೫ ವ), 'ವಿಕ್ರಮಾರ್ಜುನ ವಿಜಯ' (೧-೧೪೮ ವ, ೨-೩೯ವ, ೯-೯೫ವ), ನಾಗವರ್ಮನ 'ಕರ್ಣಾಟಕ ಕಾದಂಬರಿ' (೧-೫, ೯-೯೫), ದುರ್ಗಸಿಂಹನ 'ಕರ್ಣಾಟಕ 'ಪಂಚತಂತ್ರ' ೧-೪೨), ಬಾಹುಬಲಿಯ 'ಧರ್ಮನಾಥಪುರಾಣ' (೧-೪೮), ಭೀಮಕವಿಯ 'ಬಸವಪುರಾಣ' (೨-೬-೧೪), ಕುಮಾರವ್ಯಾಸನ 'ಕರ್ಣಾಟಭಾರತ ಕಥಾಮಂಜರಿ' (ಭೀ. ೪-೬೯), ನಂಜುಂಡ ಕವಿಯ 'ರಾಮನಾಥಚರಿತೆ' (೧-೨ ಸೂ. ೧-೨-೨೧, ೨೨, ೨೩,), ಮುರಿಗೆ ದೇಶಿಕೇಂದ್ರನ 'ಹಮ್ಮೀರ ಕಾವ್ಯ' (೧-೪೬ ವ), ರತ್ನಾಕರನ

'ಭರತೇಶವೈಭವ' (೧-೯-೪೬, ೧-೧೨-೧೨), ವಿರೂಪಾಕ್ಷ ಪಂಡಿತನ 'ಚೆನ್ನಬಸವಪುರಾಣ'೧-೧-೨೩,೨೮; ೧-೬-೫೦), ಲಕ್ಷ್ಮೀಶನ 'ಜೈಮಿನಿ ಭಾರತ' (೧-೧೨), ಗೋವಿಂದ ವೈದ್ಯನ 'ಕಂಠೀರವನರಸರಾಜ ವಿಜಯ' (೧-೨೧;೨-೧೦, ೧೭; ೧೧-೬೭), ಚಿಕದೇವರಾಜನ 'ಗೀತಗೋಪಾಲ' (ಉಪಸಂಹಾರ ಗದ್ಯ), ಪದ್ಮನಾಭನ 'ಜಿನದತ್ತ ರಾಯ ಚರಿತೆ' (೭-೩), ತಿರುಮಲಾರ್ಯನ 'ಚಿಕದೇವರಾಯ ವಂಶಾವಳಿ' (ರಾನ್ನಪ. ೧), ಚಿಕ್ಕುಪಾಧ್ಯಾಯನ 'ದಿವ್ಯಸೂರಿ ಚರಿತೆ' (೧೪-೧೨೦), 'ವಿಷ್ಣುಪುರಾಣ (೩೩-೨೨೩), ತಿಮ್ಮಕವಿಯ 'ಯಾದವಗಿರಿ ಮಹಾತ್ಮೆ' (೧-೪೦,೪೧), ಪಶ್ಚಿಮರಂಗ ಮಹಾತ್ಮೆ (ಆಶ್ವಾಸಾಂತ್ಯ ಗದ್ಯ), ಸಿಂಗರಾರ್ಯನ 'ಮಿತ್ರವಿಂದಾ ಗೋವಿಂದ' (೧-೫), ಹೊನ್ನಮ್ಮನ 'ಹದಿಬದೆಯ ಧರ್ಮ' (೧-೪), ಲಕ್ಷ್ಮಕವಿಯ 'ರುಕ್ಮಾಂಗದ ಚರಿತೆ' (೧-೨೬), ಬಬ್ಬೂರು ರಂಗನ 'ಅಂಬಿಕಾ ವಿಜಯ' (೧-೧೭) ಇ. (ii) ಲಕ್ಷಣ ಮತ್ತು ಶಾಸ್ತ್ರ ಗ್ರಂಥಗಳು: ನಾಗವರ್ಮನ 'ಛಂದೋಂಬುಧಿ' (೧-೫೫ ವ. ೫-೨೩೯), ನಾಗವರ್ಮನ 'ಕಾವ್ಯಾವಲೋಕನ' (ಪೀ. ೩), ಜಗದ್ದಳ ಸೋಮನಾಥನ 'ಕರ್ಣಾಟಕ ಕಲ್ಯಾಣಕಾರಕ' (ಪೀ. ೯), ಕೇಶಿರಾಜನ 'ಶಬ್ದಮಣಿದರ್ಪಣ' (ಪೀ ೩, ಸೂ. ೨೫, ೧೬೬, ೨೬೪, ೨೭೯ ಪ್ರ), ಕವಿಮಲ್ಲನ 'ಮನ್ಮಥವಿಜಯ' (೧-೧೦), ನಿಜಗುಣ ಶಿವಯೋಗಿಯ 'ವಿವೇಕಚಿಂತಾಮಣಿ' (೨೩೩-೨೩೪, ೪-೪೦೪), ಕಳಲೆ ವೀರರಾಜೇಂದ್ರನ 'ಸಕಲವೈದ್ಯ ಸಂಹಿತಾಸಾರಾರ್ಣವ' (ಪ್ರಸ್ತಾವನೆ, ಪ. ೪). (ಇತರ ಉಲ್ಲೇಖಗಳಿಗೆ ಅನುಬಂಧ ನೋಡಿ).

ಇಲ್ಲಿ ಪ್ರಾಚೀನತೆಯನ್ನು ಲಕ್ಷಿಸಿ, ದೇಶವಾಚಕ ಹಾಗೂ ಭಾಷಾವಾಚಕವಾದ 'ಕರ್ಣಾಟ(ಕ)' ಶಬ್ದದ ಒಂದೊಂದು ಉದಾಹರಣೆಯನ್ನು ಉದ್ಧರಿಸಬಹುದು:

> (i) 'ವಡ್ಡಾರಾಧನೆ' (ಸು. ೯೨೦)ಯಲ್ಲಿ ದೇಶವಾಚಕವಾಗಿ:
> ಸ್ವಯಂವರಸಾಲೆಯೊಳ್ ನೆರೆದಿರ್ದಿರಂಗ ವೆಂಗಿ ಕಳಿಂಗ ಕಾಂಭೋಜ ಕಾಶಿ ಕೌಶಲ ಪಲ್ಲವ ಪಾಂಚಾಳ ಮಗಧ ಮಾಳವ ವತ್ಸ ಮಹಾರಾಷ್ಟ್ರ ಕುಣಾಳ ಕುರುಜಾಂಗಣ ದ್ರವಿಳ ಲಾಳ ಕರ್ನ್ನಾಟ ಗೌಳ ಸುಹುಮ ಸುರಕ್ತಾನ ಸೂರ ಸೇನಿಯ ಪ್ರಭೃತಿ ನಾನಾವಿಷಯಾಧಿಪತಿಗಳಪ್ಪರಸುಗಳೆಲ್ಲಂ ನೆರೆದಿರ್ದ್ದರಲ್ಲಿ ಯಾರುಮಂ ಮೆಚ್ಚದೆ ದಾಂಟಿ ಪೋಗಿ........
>
> (ಸುಕೌಶಳಸ್ವಾಮಿಯ ಕಥೆ, ಪು. ೪೦-೪೧, ೧೯೭೦)

> (ii) ನಾಗವರ್ಮನ (ಸು. ೯೯೦) 'ಛಂದೋಂಬುಧಿ'ಯಲ್ಲಿ ಭಾಷಾವಾಚವಾಗಿ:
> ಸಂಸ್ಕೃತ ಪ್ರಾಕೃತಂ ಅಪಭ್ರಂಶಿಕಂ ಪೈಶಾಚಿಕಂ ಎಂಬ ಮೂಱುವರೆ ಭಾಷೆ ಯೊಳ್ ಪುಟ್ಟುವುವೆಲ್ಲಂ ದ್ರಮಿಡಾಂಧ್ರ ಕರ್ಣಾಟಕಾದಿ ಷಟ್ಪಂಚಾಶತ್ಸರ್ವ ವಿಷಯಭಾಷಾಜಾತಿಗಳಕ್ಕುಂ.....
>
> (ಅಧಿಕಾರ, ೧-೫೫ ವ.)

ನಾವು ಈ ಮೇಲೆ ಕನ್ನಡ ಭಾಷೆಯ ಹಿಂದಿನ ಸಾಹಿತ್ಯ ಗ್ರಂಥಗಳವರೆಗೆ, ವಿವಿಧ ಭಾರತೀಯ ಭಾಷೆಗಳಲ್ಲಿ 'ಕರ್ಣಾಟ(ಕ)' ಶಬ್ದ ಹೇಗೆ ಪ್ರಯೋಗಗೊಂಡಿದೆಯೆಂಬುದನ್ನು ಸ್ವಲ್ಪಮಟ್ಟಿಗೆ ನೋಡಿದ್ದಾಯಿತು. ಕನ್ನಡ ನಾಡಿನ, ವಿರಳವಾಗಿ ಹೊರನಾಡಿನ, ಸಂಸ್ಕೃತ ಕನ್ನಡ ಮೊದಲಾದ ಭಾಷೆಗಳ ತಾಮ್ರ ಮತ್ತು ಶಿಲಾಶಾಸನಗಳಲ್ಲಿ 'ಕರ್ಣಾಟಕ' ಶಬ್ದವು ವಿವಿಧರೂಪಗಳಲ್ಲಿ ಪ್ರಯೋಗಗೊಂಡಿದ್ದು, ಈ ವೈವಿಧ್ಯಕ್ಕೆ ದೇಶೀಯರ ಉಚ್ಚಾರವೈಚಿತ್ರ್ಯವೂ ಲಿಪಿಕಾರಸ್ಖಾಲಿತ್ಯವೂ ಕಾರಣಗಳಾಗಿರಬೇಕು. ಇವು ದೇಶ ಮತ್ತು ಭಾಷೆಯ ಅರ್ಥಗಳನ್ನು ಮಾತ್ರವೇ ಅಲ್ಲದೆ, ಜನ, ವಂಶ ಇತ್ಯಾದಿ ಅರ್ಥಗಳಲ್ಲಿಯೂ ಕಂಡುಬಂದಿದೆ. (ಅನುಬಂಧ ನೋಡಿ) ; ಅಲ್ಲದೆ ೧೮೦೦ ಮತ್ತು ಅನಂತರದ ಸಂಗೀತಲಕ್ಷಣಗ್ರಂಥಗಳಲ್ಲಿ 'ಕರ್ಣಾಟಕ' ಎಂಬುದು ಪೂರ್ವಪದವಾಗಿರುವ ಅಂಬಾಳಿ, ಕಮಾಚ್, ಕುರಂಜಿ, ಭಾಗಿ, ಭೋಗ, ಸಾರಂಗ, ಸುರಟಿ ಎಂಬ 'ಅಪರಾಗ'ಗಳನ್ನು ಹೆಸರಿಸಿವೆಯೆಂದೂ ತಿಳಿದು ಬರುತ್ತದೆ.

ಕದಂಬರ ಕಾಲಕ್ಕೆ ಸೇರಿದ, ಸು. ೪೫೦ರ ಕಡೂರು ತಾಲ್ಲೂಕು ಬೀರೂರಿನ ಒಂದು ಶಾಸನದಲ್ಲಿ, ದೊರೆ ಶಾಂತಿರ್ವ್ಮನ ಅನುಜ್ಞೆಯಂತೆ ವಿಷ್ಣುವರ್ಮನು ಬ್ರಾಹ್ಮಣರಿಗೆ ಭೂದಾನವನ್ನು ಮಾಡಿದ ವಿಶೇಷಸಂದರ್ಭವೊಂದನ್ನು ದಾಖಲೆಮಾಡಿದ್ದು, ಆ ಉಲ್ಲೇಖದೊಳಗಿನ 'ಕರ್ಣ್ನಾಟ' ಶಬ್ದವೇ, ಈಗ ತಿಳಿದ ಮಟ್ಟಿಗೆ ಕನ್ನಡ ನಾಡಿನ ಶಾಸನಸ್ಥ ಪ್ರಯೋಗಳಲ್ಲಿ ಅತ್ಯಂತ ಪ್ರಾಚೀನವಾದುದೆಂದು ಹೇಳಬಹುದು. ಆದರೆ ಶಾಸನತಜ್ಞರಾದ ಆರ್. ಎಸ್. ಪಂಚಮುಖಿಯವರು ತಮ್ಮ 'ಕರ್ನಾಟಕದ ಇತಿಹಾಸ'ದಲ್ಲಿ (ಅಲ್ಲದೆ ನೋಡಿ: 'ಕರ್ಣಾಟಕದ ಅರಸುಮನೆತನಗಳು', ೧೯೪೬, ಪು. ೨೩, ೩೧) "ಇದು ಕೃತಕವೆಂದು ಎಲ್ಲ ಸಂಶೋಧಕರ ಅಭಿಪ್ರಾಯ. ಆದರೆ ಅದನ್ನು ಬರೆದ ಕಾಲಕ್ಕೆ ಇದ್ದು ಸಂಗತಿಗಳನ್ನು ಬರೆದಿಟ್ಟಿದ್ದಿರಬಹುದು, ಆ ಕಾಲಕ್ಕೆ ಅವುಗಳನ್ನು ಒಪ್ಪಬೇಕಾಗುತ್ತದೆ... ಈ ಶಾಸನದ ಅಕ್ಷರಗಳು ೮ನೆಯ ಶತಮಾನದವಿರುತ್ತವೆ. ಭಾಷೆ ಅಶುದ್ಧವಿದೆ. "— ಎಂದಿರುವರು (ಪು. ೧೪೨). ಇದು ಚಿಂತನೀಯ. ಆದರೆ ಎಲ್ಲ ಸಂಶೋಧಕರೂ ಹೀಗೆ ನಿರಾಕರಿಸಿರುವಂತೆ ತೋರುವುದಿಲ್ಲ. ಆ ಶಾಸನದ ಸ್ವಲ್ಪ ಭಾಗ:

..ಕದಮ್ಬೇನ ಶ್ರೀವಿಷ್ಣುವರ್ಮ್ಮ ಧರ್ಮ್ಮಮಹಾರಾಜೇನ ರಣರಭಸ
ಪ್ರವರ್ತ್ತದತ್ಥಾಷ್ಟಾದಶ ಮಾಣ್ಡಪಿಕಮಣ್ಡಿತ ವೈಜಯನ್ತೀತಿಲಕ
ಸಮಗ್ರ ಕರ್ಣ್ನಾಟದೇಶ ಭೂವರ್ಗ್ಗಭರ್ತ್ತಾರಂ ಜ್ಯೇಷ್ಠಪಿತರಂ ಶ್ರೀಶಾಂತಿ
ವರವರ್ಮ್ಮ ಧರ್ಮಮಹಾರಾಜಮನುಜ್ಞಾಪ್ಯಮ್....

(ಎಕ vi, ಕಡೂರು ೧೬೨, ಸಾಲು ೯-೧೨)

ಇಲ್ಲಿಂದ ಮುಂದೆ ಭಾಷಾವಾಚಕವಾಗಿ, 'ಕನ್ನಾಟಕ' ಶಬ್ದವನ್ನು ಒಳಕೊಂಡ ಗಂಗದೊರೆ ಭೂವಿಕ್ರಮನ ೬೩೪ರ ಶಾಸನದೊಳಗಿನ (ಮೈಆರಿ. ೧೯೨೫, ಸಂ. ೧೫, ಸಾ. ೩೭-೩೮)

...ವಿಕ್ರಮಾದಿತ್ಯಗವುಂಡಸ್ಯ ಹೊದಲಿವಿಷಯೇ ಬೆದಿರೂರ್ ಮಯಾ
ದತ್ತಮ್ ಅಸ್ಯ ಸೀಮಾಃ ಕನ್ನಾಟಕೇ ಪ್ರವಕ್ಷ್ಯಾಮಿ.....

ಎಂಬ ಉಲ್ಲೇಖವೂ ದೇಶವಾಚಕವಾಗಿಯೂ ವಿಶಿಷ್ಟವಾದ ಅರ್ಥದಲ್ಲಿ 'ಕರ್ಣ್ಣಾಟಕಂ' ಶಬ್ದವನ್ನು ಒಳಕೊಂಡ ರಾಷ್ಟ್ರಕೂಟ ದಂತಿದುರ್ಗನ ೭೫೪ರ ಸಾಮನಗಡ ಶಾಸನದೊಳಗಿನ (ಇಂಆ., xi, ೧೮೮೨, ಪು. ೧೧೨).

ಕಾಞ್ಚೀಶ ಕೇರಲನರಾಧಿಪ ಚೋಲ ಪಾಣ್ಡ್ಯ
ಶ್ರೀಹರ್ಷ ವಜ್ರಟ ವಿಭೇದ ವಿಧಾನ ದಕ್ಷಂ
ಕರ್ಣ್ಣಾಟಕಂ ವ(ಬ)ಲಮನನ್ತಮಜೇಯರತ್ಯೈ (ಥ್ಯೈ)
ರ್ಭೃತ್ಯೈಃ ಕಿಯದ್ಭಿರಪಿ ಯಃ ಸಹಸಾ ಜಿಗಾಯ ॥

ಎಂಬ ಉಲ್ಲೇಖವೂ ಸುಪರಿಚಿತವಾದುವಾಗಿವೆ. ಪೂರ್ವೋಕ್ತ ದಂತಿದುರ್ಗನ ಶಾಸನದ ಉಲ್ಲೇಖ, 'ಕಾರ್ನ್ನಾಟಕಂ' ಎಂಬ ಶಬ್ದ ರೂಪದೊಂದಿಗೆ, ಅಲ್ಪವಾದ ಇತರ ಪಾಠ ವ್ಯತ್ಯಾಸಗಳೊಂದಿಗೆ, ಸ್ವಲ್ಪ ಈಚೆಗೆ, ೭೬೮ರ ಕೃಷ್ಣರಾಜನ ತಲೆಗಾವ್ ಶಾಸನದಲ್ಲಿ (ಎಇ xiii, ಪು. ೨೭೯) ಹೀಗೆ ಪುನರಾವರ್ತನೆಗೊಂಡಿದೆ:

ಕಾಞ್ಚೀಶ ಕೇರಲನರಾಧಿಪ ಚೋಲ ಪಾಣ್ಡ್ಯ
ಶ್ರೀಹರ್ಷ ವಜ್ರಟ ವಿಭೇದ ವಿಧಾನ ದಕ್ಷಂ
ಕಾರ್ನ್ನಾ(ರ್ಣ್ಣಾ)ಟಕಂ ವಲಮನನ್ತ ಮಜೇಯಮನ್ಯೈ (ಥ್ಯೈ)
ರ್ಭ್ರಿ (ರ್ಭೃ) ತ್ಯೈಃ ಕಿಯದ್ಭಿರಪಿ ಯತ್ಸ (ಸ್ಸ) ಹಸಾ ಜಿಗಾಯ ॥

ಇಲ್ಲಿಂದ ಆರಂಭಗೊಂಡು, ವಿವಿಧ ರೂಪಗಳಲ್ಲಿ, ಅರ್ಥಗಳಲ್ಲಿ ಕರ್ನಾಟಕ ಶಬ್ದವು ಉಲ್ಲೇಖಗೊಂಡಿರುವ ಸು. ೯೦ ರ ಮೇಲ್ಪಟ್ಟು ಶಾಸನಗಳನ್ನು ವಿದ್ವಾಂಸರು ಗುರುತಿಸಿದ್ದಾರೆ; ಇಂತಹ ಒಂದು ಸೂಚಿಯನ್ನೇ ಮೈಸೂರು ಪುರಾತತ್ತ್ವ ಇಲಾಖೆಯ 'ಎಪಿಗ್ರಾಫಿಯ ಕರ್ನಾಟಕ'ದ ೧೩ನೆಯ ಸಂಪುಟದಲ್ಲಿ, ಎಂ. ಎಚ್. ಕೃಷ್ಣ ಅವರು ಸಿದ್ಧಪಡಿಸಿಕೊಟ್ಟಿದ್ದಾರೆ[೧೦] ಹಳೆಯ ಮೈಸೂರು ಸಂಸ್ಥಾನದ ಎಂಟು ಜಿಲ್ಲೆಗಳಲ್ಲಿ ದೊರೆತಿರುವ ಶಾಸನಗಳಿಗೆ ಮಾತ್ರ ಇದು ಸಂಬಂಧಿಸಿದೆ. ಮೈಸೂರು ಕರ್ನಾಟಕವಾಗಿ ಹಿಗ್ಗಿದ ಮೇಲೆ ಎಲ್ಲೆಲ್ಲಿ ಈ ಶಬ್ದದ ಪ್ರಯೋಗಗಳು ಕಂಡುಬರುತ್ತವೆ ಎನ್ನುವುದನ್ನು ತಿಳಿಯುವುದಕ್ಕೆ ಬೇರೆ ಸೂಚಿ ಯಾವುದೂ ಇನ್ನೂ ಸಿದ್ಧವಾಗಿರುವಂತಿಲ್ಲ. ಜಿ.ಪಿ. ರಾಜರತ್ನಂ ಅವರು ಅಂತಹ ಏಳು ಪ್ರಯೋಗಗಳನ್ನು 'ಎಪಿಗ್ರಾಫಿಯ ಇಂಡಿಕ' ಸಂಪುಟಗಳನ್ನು ಆಶ್ರಯಿಸಿ ಪಟ್ಟಿ ಮಾಡಿದ್ದಾರೆ. ಇನ್ನೂ ಬಹುಸಂಖ್ಯೆಯ ಪ್ರಯೋಗಗಳ ಸಂಗ್ರಹ ಸಾಧ್ಯ (ಲಬ್ಧವಾದ ಶಾಸನಸ್ಥ ಪ್ರಯೋಗಗಳಿಗೆ ಅನುಬಂಧ ನೋಡಿ).

❀

ಕರ್ನಾಟಕ, ಕನ್ನಡ : ರೂಪ, ಅರ್ಥ ನಿಷ್ಪತ್ತಿಗಳು

ರೂಪ

ಸಂಸ್ಕೃತ ಕನ್ನಡ ಭಾಷೆಗಳಲ್ಲಿಯ ಶಾಸನಗಳಲ್ಲಿಯೂ ಗ್ರಂಥಗಳಲ್ಲಿಯೂ 'ಕರ್ನಾಟಕ' ಶಬ್ದದ ಕರ್ಣಾಟ, ಕರ್ನಾಟ, ಕರ್ಣಾಟಕ, ಕರ್ನಾಟಕ, ಕರ್ಣ್ಣಾಟ, ಕರ್ಣ್ಣಾಟಕ, ಕರ್ಣ್ನಾಟ, ಕರ್ಣ್ನಾಟಕ, ಕಣ್ಣಾಟಕ, ಕಣ್ನತ್ತಗ, ಕಣ್ನತ್ತರ ಇತ್ಯಾದಿ ರೂಪಗಳನ್ನು ಗಮನಿಸಬಹುದು. ಗ್ರಂಥಗಳಿಗಿಂತ ಶಾಸನಗಳಲ್ಲಿಯೇ ರೂಪವೈವಿಧ್ಯ ಹೆಚ್ಚು. ಈ ರೂಪವೈವಿಧ್ಯಕ್ಕೆ ಉಚ್ಚಾರಭೇದ ಲಿಪಿಕಾರಸ್ಖಾಲಿತ್ಯಗಳೇ ಮುಖ್ಯ ಕಾರಣಗಳಾದರೂ, ಪ್ರಾಂತೀಯ ಉಚ್ಚಾರಭೇದ ಕಾರಣವಾಗಿ. ಹಲವು ವರ್ಷಗಳ ಹಿಂದೆ ಕರ್ಣಾಟ(ಕ), ಕರ್ನಾಟ(ಕ) ಈ ರೂಪಗಳು ಜಿಜ್ಞಾಸೆಗೆ ವಿಷಯವಾಗಿ ಪರಿಣಮಿಸಿದುವು. ಈ ಜಿಜ್ಞಾಸೆ ಈಗ ಅಷ್ಟು ಪ್ರಸ್ತುತವಲ್ಲವೆಂದರೂ, ಅದಕ್ಕೆ ಇರುವ ಚಾರಿತ್ರಿಕ ಮಹತ್ತ್ವದಿಂದಾಗಿ, ಸ್ವಲ್ಪ ಮಟ್ಟಿಗೆ ಅದರ ಬಗೆಗೆ ಇಲ್ಲಿ ಹೇಳಬೇಕಾಗಿದೆ. ಬಲುಮಟ್ಟಿಗೆ ೧೯೧೮ರಲ್ಲಿ ತೊಡಗಿದ ಈ ಶಬ್ದರೂಪದ ಚರ್ಚೆ ೧೯೩೮ರ ವೇಳೆಗೆ ಹೆಚ್ಚು ಮೊನೆಗೊಂಡಿತು, ಕಾವೇರಿತು ಎನ್ನಬಹುದು. ಈ ಚರ್ಚೆಯಲ್ಲಿ ಮೊದಲು ಹಟ್ಟಿಯಂಗಡಿ ನಾರಾಯಣರಾವ್, ಆರ್. ತಾತಾಚಾರ್ಯ, ತೋಗೆರೆ ನಂಜುಂಡಶಾಸ್ತ್ರಿ, ರಾ. ಹ. ದೇಶಪಾಂಡೆ, ಈ ಕೆಲವರೂ ಅನಂತರದಲ್ಲಿ ಬೆಳ್ಳಾವೆ ವೆಂಕಟನಾರಾಯಣಪ್ಪ, ಗೋವಿಂದಪೈ, ಎಂ.ಎಚ್. ಕೃಷ್ಣ, ತೀ.ನಂ. ಶ್ರೀಕಂಠಯ್ಯ, ಜಿ.ಪಿ. ರಾಜರತ್ನಂ, ಶಂ.ಭಾ. ಜೋಶಿ ಈ ಕೆಲವರೂ ಭಾಗವಹಿಸಿದರು. ಆ ಕಾಲದ ಸಂಸ್ಕೃತ ಕನ್ನಡ ಭಾಷಾಪಂಡಿತರಿಗೆಲ್ಲ ಇದು ಆಸಕ್ತಿಯನ್ನೂ ಆವೇಶವನ್ನೂ ಹುಟ್ಟಿಸಿದರೂ, ಈಗ ಒಂದು ಕುತೂಹಲದ ವಿಷಯವಾಗಿ ಮಾತ್ರ ಉಳಿದುಕೊಂಡಿದೆ.[೧೧]

'ಕರ್ಣಾಟ(ಕ)' ಎಂಬುದು ಶುದ್ಧ ಸಂಸ್ಕೃತಪದವೆಂದೂ ಅದಕ್ಕೆ ಸಂಸ್ಕೃತದಲ್ಲಿಯೇ ವ್ಯುತ್ಪತ್ತಿಯನ್ನು ಕೊಡಬಹುದೆಂದೂ 'ಕನ್ನಡ' ಎಂಬುದು ಆ ಪದದ ತದ್ಭವವೆಂದೂ ಆದ್ದರಿಂದ ಕರ್ಣಾಟ(ಕ)ವೇ ಸಾಧುರೂಪವೆಂದೂ ಹೇಳುವವರು, ಮುಖ್ಯವಾಗಿ ತೋಗೆರೆ ನಂಜುಂಡಶಾಸ್ತ್ರಿಗಳು ಮೊದಲಾದವರು, 'ಶಬ್ದರತ್ನಾವಳಿ'ಯಲ್ಲಿ ಹೇಳಿರುವ ಆ ಶಬ್ದದ ವ್ಯುತ್ಪತ್ತಿಯನ್ನೂ 'ಶಬ್ದಮಣಿದರ್ಪಣ'ದ ಅಪಭ್ರಂಶ ಪ್ರಕರಣದಲ್ಲಿ (೮-೨೭೯ರ ಪ್ರಯೋಗ) ಹಾಗೂ 'ಶಬ್ದಾನುಶಾಸನ'ದ ದ್ವಿತೀಯ ಪಾದದಲ್ಲಿ (ಸೂ. ೧೬೦ರ ಪ್ರಯೋಗ) 'ಕರ್ಣಾಟ'

ಪದದ ತದ್ಭವ 'ಕನ್ನಡ' ಎಂದು ಹೇಳಿರುವುದನ್ನೂ ಸಂಸ್ಕೃತ ಕನ್ನಡ ಗ್ರಂಥಗಳಲ್ಲಿ 'ಕರ್ನಾಟ(ಕ)' ಪದದ ಪ್ರಾಚುರ್ಯ ತೋರುವುದನ್ನೂ ಆಧಾರವಾಗಿ ಎತ್ತಿ ಹೇಳುತ್ತಾರೆ. ಈ ಗ್ರಹಿಕೆಯನ್ನು ಪೋಷಿಸುವಂತೆ ಎರಡನೆಯ ಪಂಥದವರು, ಸಂಸ್ಕೃತ ಭಾಷಾ ಪ್ರಚಲಿತವಾದ 'ಕರ್ಣಾಟ(ಕ)' ಶಬ್ದದ ಮೂಲ ಕರ್ + ನಾಡು, ಕರು + ನಾಡು ಹೀಗೆ ಯಾವುದೇ ನಿಷ್ಪತ್ತಿಗೆ ಅನುಗುಣವಾದ ದೇಶ್ಯಶಬ್ದಗಳಿಂದ ರೂಪಗೊಂಡಿರಲಿ, ಪಾಣಿನಿಯ 'ಅಷ್ಟಾಧ್ಯಾಯಿ'ಯ "ರಷಾಭ್ಯಾಂ ನೋ ಣಃ ಸಮಾನಪದೇ" (೮-೪-೧) ಎಂಬ ಸೂತ್ರದಿಂದ ವಿದಿತವಾಗುವ ಹಾಗೆ, ಸಂಸ್ಕೃತ ವ್ಯಾಕರಣ ಮರ್ಯಾದೆಯಂತೆ 'ಕರ್ಣಾಟ(ಕ)' ಎಂಬುದಾಗಿ ಇರುವುದೇ ಸಾಧುವಾದ್ದು ಎನ್ನುತ್ತಾರೆ ; ಮುಂದುವರಿದು, ಬಹುಶಃ 'ಕರ್ಣಾಟ' ಎಂಬುದು 'ಕನ್ನಡ' ಎಂಬುದರ ಸಂಸ್ಕೃತ ರೂಪವೆಂದು ಇವರಲ್ಲಿ ಕೆಲವರು ಭಾವಿಸಿಯೂ ಇದ್ದಾರೆ.

'ಕರ್ಣಾಟ(ಕ)' ಎಂಬುದಾಗಿ ಮೂರ್ಧನ್ಯ ಣ ಕಾರವನ್ನಿಟ್ಟ ರೂಪವೇ ಆದರಣೀಯ ವೆಂದು ವಾದಿಸುವವರಲ್ಲಿ ಕೆಲವರು ಕೊಡುವ ಕಾರಣಗಳು ಸಾಮಾನ್ಯವಾಗಿ ಈ ಮೇಲೆ ಹೇಳಿದುದನ್ನು ಪೋಷಿಸುವಂತೆಯೇ ಇವೆ. ಅಲ್ಲದೆ, ಮೈಸೂರು ದೇಶದ ಕಡೆಯ ಜನರೂಢಿ, ಪಾಶ್ಚಾತ್ಯ ಮತ್ತು ಪೌರಸ್ತ್ಯ ವಿದ್ವಾಂಸರು ಹೇಳುವ ನಿಷ್ಪತ್ತಿ, ಅವರು ಸಾಧುವೆಂದು ಗ್ರಹಿಸಿರುವ ಶಬ್ದರೂಪ 'ಕರ್ಣಾಟ(ಕ)' ಎಂದೇ ಇದೆಯೆಂದು ಈ ವಾದದ ಪುರಸ್ಕರ್ತರು ತೋರಿಸಿದ್ದಾರೆ. ಹೀಗೆ ವಾದಿಸಿರುವ ಕೆಲವರು ವಿದ್ವಾಂಸರು ಇವರು : ತೋಗೆರೆ ನಂಜುಂಡಶಾಸ್ತ್ರಿ, ಬೆಳ್ಳಾವೆ ವೆಂಕಟನಾರಾಯಣಪ್ಪ, ತಿರುವಳ್ಳೂರು ಶ್ರೀನಿವಾಸರಾಘವಾಚಾರ್ಯ, ಎಂ. ಗೋವಿಂದ ಪೈ, ಕೆ. ವರದಾಚಾರ್ಯ, ಟಿ. ಶ್ರೀನಿವಾಸ ರಂಗಾಚಾರ್ಯ, ಸಿ.ಆರ್. ನರಸಿಂಹಶಾಸ್ತ್ರಿ, ಸಂಕೀಘಟ್ಟದ ವೆಂಕಟಾಚಾರ್ಯ, ಎನ್.ವಿ. ಪದ್ಮನಾಭಾ ಚಾರ್ಯ, ಹೆಮ್ಮಿಗೆ ಶ್ರೀನಿವಾಸಯ್ಯಂಗಾರ್ಯ, ಮಧ್ವರಾಯಚಾರ್ಯ, ಬೆಳ್ಳಾವೆ ನರಹರಿ ಶಾಸ್ತ್ರಿ, ಸೋ. ತಿರುನಾರಾಯಣಯ್ಯಂಗಾರ್ಯ, ಎಸ್. ರಾಮಾಶಾಸ್ತ್ರಿ, ಸಿ.ಎನ್. ಸೀತಾರಾಮಶಾಸ್ತ್ರಿ, ಎನ್. ಚೆನ್ನಕೇಶವಯ್ಯಂಗಾರ್ಯ, ನಂಜನಗೂಡು ಶ್ರೀಕಂಠಶಾಸ್ತ್ರಿ, ಸಿದ್ಧಾಂತಿ ಶಿವಶಂಕರ ಶಾಸ್ತ್ರಿ, ಎಂ.ಟಿ. ನಾರಾಯಣಯ್ಯಂಗಾರ್ಯ, ಎಂ.ಎ. ಸಿಂಗಾರಯ್ಯಂಗಾರ್ಯ, ಎಂ.ಸಿ. ಚೆಲುವಯ್ಯಂಗಾರ್ಯ, ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿ, ಎಂ.ಡಿ. ಅಳಸಿಂಗರಾಚಾರ್ಯ, ಉಳ್ಳಾಲ ಮಂಗೇಶರಾಯ.[೧೨]

'ಕರ್ನಾಟ(ಕ)' ಎಂಬುದಾಗಿ ದಂತ್ಯ ನಕರಾವನ್ನಿಟ್ಟ ರೂಪವೇ ಆದರಣೀಯವೆಂದು ಕೆಲವರು ವಾದಿಸಿರುವರಾದರೂ, ಇವರ ಸಂಖ್ಯೆ ಚಿಕ್ಕದೇ. ಇವರು 'ಕರ್ನಾಟ(ಕ)' ಎಂಬುದು ಅಚ್ಚಗನ್ನಡ ಶಬ್ದ, ಅದಕ್ಕೆ ಕನ್ನಡದಲ್ಲಿಯೇ ವ್ಯುತ್ಪತ್ತಿಯುಂಟು, ಸಂಸ್ಕೃತಜ್ಞರು ತಮ್ಮ ಭಾಷಾಮರ್ಯಾದೆಗೆ ಅನುಸಾರವಾಗಿ ಅದನ್ನು 'ಕರ್ಣಾಟ(ಕ)' ಎಂಬುದಾಗಿ ಮಾಡಿಕೊಂಡಿದ್ದಾರೆ ಎಂದು ಮುಂತಾಗಿ ವಾದಿಸಿದ್ದಾರೆ.

ಪಾಶ್ಚಾತ್ಯ ಮತ್ತು ಪೌರಸ್ತ್ಯ ವಿದ್ವಾಂಸರು ಭಾಷಾ ವಾಚಕವಾದ 'ಕನ್ನಡ' ಶಬ್ದವೂ

ದೇಶವಾಚಕವಾದ 'ಕರ್ನಾಟ(ಕ)' ಶಬ್ದವೂ ದೇಶ್ಯವೆಂದೇ ತಿಳಿದು, ಅದಕ್ಕೆ ತಕ್ಕಂತೆ ವ್ಯುತ್ಪತ್ತಿ ಹೇಳಿರುವುದು ನ್ಯಾಯವಾಗಿಯೇ ಇದೆ. ಈ ದೇಶ್ಯಶಬ್ದವನ್ನು ಮೊದಲು ಕಲ್ಪಿಸಿದವರು ದೇಶೀಯರಾದ ಕನ್ನಡಿಗರೇ. ಇವರು ರೇಫದ ಮುಂದಿನ ನಕಾರವನ್ನು ನಕಾರವಾಗಿಯೇ ಉಚ್ಚರಿಸಲು ಶಕ್ತರು. ಅದು ಸಹಜವೂ ಹೌದು ಸಂಸ್ಕೃತದವರು ಅದನ್ನು ಣಕಾರವಾಗಿ ಮಾಡಿಕೊಂಡರು.

'ಕನ್ನಡ' ಎಂಬುದಾಗಿ ನಕಾರವನ್ನೊಳಕೊಂಡ ಬೆಳೆವಣಿಗೆಯ ರೂಪವು ಮೂಲರೂಪದಲ್ಲಿ ನಕಾರವಿದ್ದುದನ್ನು ತೋರಿಸುತ್ತದೆ. ಇದನ್ನು ಗಮನಿಸಿದರೆ, 'ಕರ್ನಾಟ(ಕ)'ವೇ ಸಹಜವೆನ್ನಬೇಕು. 'ಕರ್ಣಾಟ(ಕ)' ಎಂದು ಮೂಲರೂಪವನ್ನು ಗ್ರಹಿಸಿದರೆ, ತದ್ಭವಶಬ್ದ 'ಕಣ್ಣಡ' ಎಂದು ಸಹಜವಾಗಿ ಆಗಬೇಕಾಗಿದ್ದಿತು; ಹಾಗೆ ಆಗಿಲ್ಲ. ಸಂಸ್ಕೃತ ಸಾಹಚರ್ಯದಿಂದ ಸೇರಿರಬಹುದಾದ ಕಕಾರವನ್ನು ತೆಗೆದು 'ಕರ್ನಾಟ' ಎಂದು ಹೇಳುವುದು ಪ್ರಶಸ್ತವಾದುದು.

ಈ ರೀತಿಯಲ್ಲಿ ವಾದಿಸಿರುವ ವಿದ್ವಾಂಸರಲ್ಲಿ ಮುಖ್ಯರಾದವರು ಎಂದರೆ, ರಾ.ಹ. ದೇಶಪಾಂಡೆ, ಮ.ಪ್ರ. ಪೂಜಾರ, ಆರ್.ವಿ. ಜಾಗೀರದಾರ ಈ ಕೆಲವರು. ಉತ್ತರ ಕರ್ನಾಟಕದ ಪ್ರದೇಶಗಳ ಜನರೂಢಿಯನ್ನೂ ಬರೆವಣಿಗೆಯ ರೀತಿಯನ್ನೂ ಈ ವಿದ್ವಾಂಸರು ತಮ್ಮ ವಾದದಲ್ಲಿ ವಿಶೇಷವಾಗಿ ಮನ್ನಿಸಿರುವುದು ಕಂಡುಬರುತ್ತದೆ.[೧೩]

ಈ ಎರಡು ವಿಭಿನ್ನ ಗ್ರಹಿಕೆಗಳ ನಡುವೆ, ಶಿಕ್ಷಾಶಾಸ್ತ್ರ, ಭಾಷಾಗತಿ ಮತ್ತು ಶಿಷ್ಟಸಮ್ಮತಿ ಇವನ್ನು ಲಕ್ಷಿಸಿ 'ಕರ್ಣಾಟ(ಕ)', 'ಕರ್ನಾಟ(ಕ)' ಎಂಬ ಎರಡು ರೂಪಗಳನ್ನು ಮಾನ್ಯಮಾಡಬೇಕೆಂಬ ಮಧ್ಯಮಾರ್ಗಿಗಳ ಒಂದು ವಾದಸರಣಿಯೂ ಇದೆ.

'ಕರ್ಣಾಟ(ಕ)' ಶಬ್ದವು ಸಂಸ್ಕೃತಭಾಷಾ ವ್ಯವಹಾರದಲ್ಲಿರುವಾಗ, ಅಲ್ಲಿಯ ಣಕಾರವು ಸೂಕ್ತವಾದುದೇ. ಆದರೆ ಈ ಶಬ್ದ ಮೂಲತಃ ದೇಶ್ಯಪದಗಳು ಸೇರಿ ಆಗಿರುವುದರಿಂದ 'ಕರ್ನಾಟ(ಕ)' ಶಬ್ದರೂಪವು ತಪ್ಪೇನಲ್ಲ. ಸಂಸ್ಕೃತದವರು ದಂತ್ಯಘಟಿತ ವಾದುದನ್ನು ಮೂರ್ಧನ್ಯಕ್ಕೆ ಪರಿವರ್ತಿಸಿರಬಹುದು. ಉಚ್ಚಾರಣೆಗೆ ದಂತ್ಯವೇ ಸುಕರವಾದ್ದು, ಮೂರ್ಧನ್ಯವಲ್ಲ ಎನ್ನುವುದು ಈ ಶಬ್ದದ ಬರೆವಣಿಗೆಯ ರೂಢಿಯಿಂದ, ಆಡುಮಾತುಗಳ ಪರಿಶೀಲನೆಯಿಂದ ತಿಳಿಯುತ್ತದೆ. ಉತ್ತರಕರ್ನಾಟಕದ ಜನಬಳಕೆಯನ್ನು ಲಕ್ಷಿಸಿ ಇದನ್ನು ಒಪ್ಪಬಹುದು. ಹೀಗೆಯೇ ಪ್ರಾಚೀನಗ್ರಂಥಗಳಲ್ಲಿಯ ಬರೆವಣಿಗೆಯ ರೂಢಿ, ಮೈಸೂರು ಪ್ರಾಂತದಲ್ಲಿ ಬಡಹ ಮತ್ತು ಆಡುಮಾತುಗಳಲ್ಲಿಯ ಬಳಕೆ ಇವನ್ನು ಲಕ್ಷಿಸಿ ಮೂರ್ಧನ್ಯ ಸಹಿತ ರೂಪವನ್ನೂ ಒಪ್ಪಬಹುದು.

ಈ ವಾದವನ್ನು ಪುರಸ್ಕರಿಸಿರುವ ವಿದ್ವಾಂಸರಲ್ಲಿ ತೀ.ನಂ. ಶ್ರೀಕಂಠಯ್ಯ, ಎಲ್. ಗುಂಡಪ್ಪ, ಎಂ.ಎಚ್. ಕೃಷ್ಣ, ಮುಳಿಯ ತಿಮ್ಮಪ್ಪಯ್ಯ, ರಾಳ್ಳಪಲ್ಲಿ ಅನಂತಕೃಷ್ಣಶರ್ಮ ಈ ಕೆಲವರು ಮುಖ್ಯರೆಂದು ಹೇಳಬಹುದು.[೧೪]

ಈ ವಾದಗಳ ಸಾರಾಸಾರ ವಿಚಾರವನ್ನು ವಿಸ್ತಾರವಾಗಿ ನಡೆಸುವುದು ಈಗ ಅವಶ್ಯವೇನಲ್ಲ. 'ಕರ್ಣಾಟ(ಕ)', 'ಕರ್ನಾಟ(ಕ)' ಎಂಬೆರಡು ರೂಪಗಳ ಪ್ರಚುರತೆ ಪ್ರಯೋಗಗಳನ್ನು ಪರಿಶೀಲಿಸಿರುವ ಇಬ್ಬರು ವಿದ್ವಾಂಸರು ಏನು ಹೇಳಿರುವರೆಂಬುದನ್ನು ಮುಂದೆ ಸಂಗ್ರಹಿಸಿದೆ :

ಎಂ.ಎಚ್. ಕೃಷ್ಣ ಅವರು : ಮಹಾಭಾರತವನ್ನೂ ಒಳಕೊಂಡಂತೆ ವರಾಹಮಿಹಿರ, ಕುಮಾರಿಲಭಟ್ಟ, ರಾಜಶೇಖರ ಮೊದಲಾದವರ ಗ್ರಂಥಗಳಲ್ಲಿ ಕರ್ಣಾಟ, ಕರ್ಣಾಟಕ ಎಂಬ ರೂಪಗಳೇ ಇವೆ. ಉತ್ತರ ಭಾರತದ ಹಾಗೂ ಎಲ್ಲ ಸಂಸ್ಕೃತಶಾಸನಗಳಲ್ಲೂ ಇವೇ ರೂಪಗಳನ್ನು ಬಳಸಿದೆ. ರ್+ನ್= ರ್ಣ್ ಎಂಬ ಸಂಸ್ಕೃತವ್ಯಾಕರಣದ ನಿಯಮ ಹೀಗೆ ಕಳೆದ ೧೬೦೦ ವರ್ಷಗಳಿಂದ ಈ ಶಬ್ದದ ವಿಷಯದಲ್ಲಿ ಪ್ರವರ್ತಿಸಿರುವುದು ಕಾಣುತ್ತದೆ. ಹಳಗನ್ನಡ ಸಾಹಿತ್ಯದ ಹಸ್ತಪ್ರತಿ ಮುದ್ರಿತ ಪ್ರತಿಗಳಲ್ಲಿ ಸಹ ಹೀಗೆಯೇ.

ಮುಂಬಯಿ, ಮದ್ರಾಸು ಮತ್ತು ಹೈದರಾಬಾದು ಕರ್ಣಾಟಕವೂ ಸೇರಿದಂತೆ ಸು. ೮೦ ಶಾಸನಗಳಲ್ಲಿ, ೫೨ರಲ್ಲಿ 'ಣ', ೨೮ರಲ್ಲಿ 'ನ' ಮಾತ್ರವಿದೆ. 'ಕ' ಉಪಸರ್ಗದ ಬಳಕೆ ಸು. ೧೨ನೆಯ ಶತಮಾನದಿಂದ ಮುಂದಕ್ಕೆ ಕಂಡುಬರುತ್ತದೆ ; ತೀರ ಮೊದಲಿನವುಗಳಲ್ಲಿ ಸು. ೧೦೫೮ರ ನಾಗಾಯಿ ಶಾಸನವನ್ನು ಹೆಸರಿಸಬಹುದು. ಸುಪರಿಚಿತವೂ ಪ್ರಾಯಃ ಪ್ರಾಚೀನವೂ ಆದ ರೂಪಗಳಲ್ಲಿ 'ಕ' ಸೇರಿಲ್ಲ ; ೮೦ರಲ್ಲಿ ೬೨ರೊಳಗೆ 'ಕ' ಸಂಘಟನೆಯಿಲ್ಲ. ೧೪ನೆಯ ಶತಮಾನದ ಅನಂತರದ ಶಾಸನಗಳಲ್ಲಿ, ಹಳೆಯ ದ್ರಾವಿಡ ಪದ್ಧತಿಯಂತೆ ಣ ಅಥವಾ ನ ದ್ವಿತ್ವಗೊಂಡಿರುವುದನ್ನು ಕಾಣಬಹುದು. ೮೦ರಲ್ಲಿ ೪೨ರಷ್ಟುರಲ್ಲಿ 'ರ್ಣ್' ಇದೆ. ಇಂಥ ಕಡೆ, ನ ಲೋಪಗೊಂಡ ರೂಪವೇ ಣ ಲೋಪಗೊಂಡ ರೂಪಗಳಿಗಿಂತ ಹೆಚ್ಚು, ಶಾಸನಗಳಲ್ಲಿ. ಹೊಸಗನ್ನಡದಲ್ಲಿ ಣ ಅಥವಾ ನ ಒಂದನ್ನು ಲೋಪಮಾಡಿ ಉಚ್ಚಾರಮಾಡಲಾಗುತ್ತದೆ.

ವಿಜಯನಗರ ಕಾಲದ ಮತ್ತು ಅನಂತರದ ಶಾಸನಗಳಲ್ಲಿ ನ ಘಟಿತ 'ಕರ್ನಾಟ(ಕ)' ರೂಪವೇ ವಿಶೇಷವಾಗಿ ಕಾಣಿಸಿಕೊಂಡಿದೆ. ಈ ರೂಪ ಆ ಮುನ್ನಿನ ಶಾಸನಗಳಲ್ಲಿ, ಎಂದರೆ ೧೪ನೆಯ ಶತಮಾನ ಮತ್ತು ಅದಕ್ಕೆ ಮೊದಲಿನ ಶಾಸನಗಳಲ್ಲಿ, ಅಪವಾದವಾಗಿ ಮಾತ್ರ ಗೋಚರವಾಗುತ್ತಿದ್ದಿತು. ಇಂತಹದಕ್ಕೆ ಬಹಳ ಹಳೆಯ ನಿದರ್ಶನ ಎಂದರೆ ೧೦೨೨ರ ಒಂದು ಗಂಗಶಾಸನ. ಇದಕ್ಕೂ ಹಳೆಯ ಶಾಸನಗಳಲ್ಲಿ ಹೆಚ್ಚಾಗಿ 'ಕರ್ಣಾಟ(ಕ)' ರೂಪವೇ ಬಳಕೆಯಾಗಿದೆ. ಇದಕ್ಕೆ ಬಹಳ ಹಳೆಯ ನಿದರ್ಶನ ಎಂದರೆ ಸು. ೪೫೦ರ ಕದಂಬ ತಾಮ್ರಶಾಸನ.

ಹೀಗೆ ಪರಿಶೀಲಿಸಿದರೆ, 'ಕರ್ಣಾಟ' ಹೆಚ್ಚು ಪ್ರಾಚೀನ, ಸುದೃಢ ಎಂದು ವಿದಿತ ವಾಗುತ್ತದೆ. ಪ್ರಯೋಗದಲ್ಲಿ ಕರ್ಣಾಟ, ಕರ್ನಾಟ ಎರಡನ್ನೂ ಕಾಣಬಹುದು. ಉಪಸರ್ಗಸಹಿತರೂಪ ತಪ್ಪಲ್ಲವಾದರೂ ಅನಾವಶ್ಯಕ ಎನ್ನುವುದರಿಂದ, ಕರ್ಣಾಟ ಇಲ್ಲವೆ ಕರ್ನಾಟ ಎಂದು ಅಷ್ಟೇ ಬಳಸಿದರೂ ಸಾಕಾಗುತ್ತದೆ.[೧೫]

ಜಿ.ಪಿ. ರಾಜರತ್ನಂ ಅವರು : (i) ಎ ಕ., ii-xii ರಲ್ಲಿ ಕೇವಲ ಕರ್ನಾಟ(ಕ)ವಿರುವ ಶಾಸನಗಳು ಒಟ್ಟು ೪೧ ; ಕೇವಲ ಕರ್ಣಾಟ(ಕ)ವಿರುವ ಶಾಸನಗಳು ಒಟ್ಟು ೪೪ ; ಎರಡೂ ರೂಪಗಳಿರುವ ಶಾಸನಗಳು ೪. (ii) ರೂಪಗಳ ವಿವರ : ಕರ್ನಾಟ ೨೧, ಕರ್ನ್ನಾಟ ೧೫, ಕರ‍್ನಾಟ ೧ = ಒಟ್ಟು ಕರ್ನಾಟ ೩೭ ; ಕರ್ನಾಟಕ ೧೫, ಕರ್ನ್ನಾಟಕ ೩ = ಒಟ್ಟು ಕರ್ನಾಟಕ ೧೮ ; ಕರ್ಣಾಟ ೨೩, ಕರ್ಣ್ಣಾಟ ೧೬, ಕರ್ಣ್ಣಾಟ ೧೩ = ಒಟ್ಟು ಕರ್ಣಾಟ ೫೨ ; ಕರ್ಣಾಟಕ ೫, ಕರ್ಣ್ಣಾಟಕ ೩, ಕಂರ್ಣ್ಣಾಟಕ ೧ = ಒಟ್ಟು ಕರ್ಣಾಟಕ ೯.

(iii) ಒಟ್ಟು ನೋಟ : "ಮೇಲೆ ಹೇಳಿದ ೯೧ ಶಾಸನಗಳಲ್ಲಿ ಬರುವ ಕರ್ನಾಟ(ಕ), ಕರ್ಣಾಟ(ಕ) ರೂಪಗಳನ್ನು ಆಯಾ ಡಿಸ್ಟ್ರಿಕ್ಟಿನಂತೆ ಗಣಿಸಿದರೆ, ಶಿವಮೊಗ್ಗ ಹೊರತಾಗಿ ಉಳಿದ ಡಿಸ್ಟ್ರಿಕ್ಟುಗಳಲ್ಲಿ ಣಕಾರವೇನೂ ನಕಾರಕ್ಕಿಂತ ಅಂತಹ ಹೆಚ್ಚಿನ ಮೇಲ್ಮೆಯನ್ನು ತೋರಿಸಿಕೊಳ್ಳುವುದಿಲ್ಲ. ಅದರಲ್ಲಿ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಸಿಕ್ಕುವ ೩೬ ಪ್ರಯೋಗಗಳಲ್ಲಿ ಕರ್ನಾಟ(ಕ) ೨೫, ಕರ್ಣಾಟ(ಕ) ೧೧ ! ಇನ್ನೂ ಎರಡುಹೆಜ್ಜೆ ಮುಂದೆ ಹೋಗಿ ನೋಡಿದರೆ, ಶ್ರವಣಬೆಳಗೊಳ, ನಂಜನಗೂಡು, ಶ್ರೀರಂಗಪಟ್ಟಣ, ಎಡತೊರೆ, ಚಾಮರಾಜನಗರ, ಕಡೂರುಗಳಲ್ಲಿ ಶಾಸನಗಳು ಹೆಚ್ಚಾಗಿ ಸಿಕ್ಕಿರುವ ಕಡೆ - ಕರ್ನಾಟ(ಕ)ದ ಪ್ರಾಬಲ್ಯವೇ ಕಂಡುಬರುತ್ತದೆ."

ಹೀಗೆ ಅವರು ಪರಿಶೀಲಿಸಿ, "ಪ್ರಮಾಣಗಳು ಈ ರೀತಿಯಿರುವಾಗ, ರೇಫೆಯೊಡ ಗೂಡಿದ ನ-ಣಕಾರಗಳೆರಡೂ ನಮ್ಮಲ್ಲಿ ಬಹುಕಾಲದಿಂದ ವಿಕಲ್ಪವಾಗಿ ಪ್ರಯೋಗ ವಾಗುತ್ತಿರುವುದಕ್ಕೆ ಹೇರಳವಾಗಿ ಉದಾಹರಣೆಗಳಿರುವಾಗ, ಅಂದಿನ ವ್ಯಾಕರಣದಿಂದ ಈಚಿನ ಪ್ರಯೋಗಗಳನ್ನು ತಿದ್ದಲು ಯತ್ನಿಸುವುದಕ್ಕಿಂತ 'ವೈಯಾಕರಣರು ಪ್ರಯೋಗಶರಣರು' ಎಂಬುದನ್ನು ಸಾರ್ಥಕಪಡಿಸುವುದೇ ಸಾಧು" - ಎಂಬುದಾಗಿ ತಮ್ಮ ಪರಿಶೀಲನೆಯನ್ನು ಮುಗಿಸಿದ್ದಾರೆ.[೧೬]

ಕರ್ಣಾಟಕ, ಕರ್ನಾಟಕ ಎಂಬೆರಡು ರೂಪಗಳನ್ನೂ ಭಾಷಾಶಾಸ್ತ್ರದ ತತ್ತ್ವಗಳಿಗೆ ಅನುಸಾರವಾಗಿ ವಿಮರ್ಶಿಸಿ, ತೀ.ನಂ. ಶ್ರೀಕಂಠಯ್ಯನವರು ತಮ್ಮ ನಿಲವನ್ನು ಹೀಗೆ ವ್ಯಕ್ತಮಾಡಿದ್ದಾರೆ :

".....ಸಂಸ್ಕೃತಭಾಷೆಯ ಉಚ್ಚಾರಣೆಯಲ್ಲೇ ರೇಫವು ಎಷ್ಟೋ ಹಿಂದಿನ ಕಾಲದಲ್ಲೇ ದಂತ್ಯವೋ ದಂತಮೂಲೀಯವೋ ಆಗಿತ್ತು. ಅದು ಮೂರ್ಧನ್ಯವೆಂದು ಭಾವಿಸಿದ್ದವರು (ಅಥವಾ ಅದನ್ನು ಮೂರ್ಧನ್ಯವಾಗಿ ಉಚ್ಚರಿಸುತ್ತಿದ್ದವರು) ಪಾಣಿನೀಯರು ಮಾತ್ರ. ನಮ್ಮಲ್ಲಂತೂ ಈಗ ಅದರ ಉಚ್ಚಾರಣೆ ದಂತ್ಯಕ್ಕೇ ಅತಿಸಮೀಪ. ಹೀಗಿರುವಲ್ಲಿ, ದಂತ್ಯ ರೇಫದ ಮುಂದೆ ದಂತ್ಯ ನಕಾರವು ಬಂದರೆ ಆ ನಕಾರವನ್ನು ಮೂರ್ಧನ್ಯವಾಗಿ ಮಾರ್ಪಡಿಸಬೇಕಾದ ನಿಮಿತ್ತವೇ ತಪ್ಪಿಹೋಯಿತು. ಆದ್ದರಿಂದ ಸಂಸ್ಕೃತ ಭಾಷೆಯ ಉಚ್ಚಾರಣೆಯಲ್ಲೇ ಕರ್ನಾಟ, ಕರ್ನಾಟಕ ಎಂಬ ರೂಪಗಳು ಶಿಕ್ಷಾಶಾಸ್ತ್ರದ ದೃಷ್ಟಿಯಿಂದ

ಅಶಾಸ್ತ್ರೀಯ, ಅಸಾಧು ಎಂದು ಹೇಳಲಾಗುವುದಿಲ್ಲ. ಅವು ಅಪಾಣಿನೀಯವೆಂಬುದೇನೋ ನಿಜ. ಆದರೆ ಪಾಣಿನಿಗೆ ಒಪ್ಪಿತವಲ್ಲದ ಪ್ರಯೋಗಗಳನ್ನು ಸಂಸ್ಕೃತ ಮಹಾಕವಿಗಳೇ ರೂಢಿಗೆ ತಂದಿಲ್ಲವೆ?...."

ಒಂದು ಶಬ್ದರೂಪವು ಸಾಧುವೇ ಅಸಾಧುವೆ ಎಂದು ನಿರ್ಣಯಿಸುವುದರಲ್ಲಿ ಶಿಕ್ಷಾಶಾಸ್ತ್ರ, ಭಾಷಾಗತಿ, ಶಿಷ್ಟಸಮ್ಮತಿ - ಇವೆಲ್ಲವನ್ನೂ ಗಮನಕ್ಕೆ ತಂದುಕೊಳ್ಳಬೇಕು. 'ಕರ್ಣಾಟಕ' ಎಂಬ ಮೂರ್ಧನ್ಯಸಹಿತ ರೂಪವು ಪಾಣಿನಿಸಮ್ಮತವಾದದ್ದು, ಕನ್ನಡನಾಡಿನ ಒಂದು ಭಾಗದಲ್ಲಿ (ಮುಖ್ಯವಾಗಿ ಮೈಸೂರಿನಲ್ಲಿ) ಬಹುಮಟ್ಟಿಗೆ ಬಳಕೆಯಲ್ಲಿರತಕ್ಕದ್ದು. ಆದಕಾರಣ ಅದರ ಉಚ್ಚಾರಣೆ ಕಠಿನವಾದರೂ ಶಿಕ್ಷಾಶಾಸ್ತ್ರದ ಬೆಂಬಲವು ಅದಕ್ಕಿಲ್ಲದೆ ಹೋದರೂ ಅದು ಸರ್ವಥಾ ತ್ಯಾಜ್ಯವೆಂದು ಹೇಳಲಾಗುವುದಿಲ್ಲ. 'ಕರ್ನಾಟಕ' ಎಂಬ ರೂಪವಾದರೋ ಹೆಚ್ಚು ಯುಕ್ತಿಯುಕ್ತವಾದದ್ದು, ಉಚ್ಚಾರಣೆಗೆ ಸುಲಭವಾದದ್ದು. ಕನ್ನಡ ನಾಡಿನ ಉತ್ತರಭಾಗದಲ್ಲೆಲ್ಲಾ ರೂಢಿಯಾಗಿರತಕ್ಕದ್ದು. ಇದನ್ನು ಅಸಾಧುವೆಂದು ಹೊರದೂಡುವುದು ಹಾಗಿರಲಿ ; ಮೂರ್ಧನ್ಯಸಹಿತ ರೂಪಕ್ಕಿಂತ ಹೆಚ್ಚು ಉಪಾದೇಯ ವೆಂದು ಹೇಳಲು ಮನಸ್ಸಿಲ್ಲದಿದ್ದರೆ, ಅದರಷ್ಟೇ ಸಾಧುವೆಂದಾದರೂ ಒಪ್ಪಲೇಬೇಕು. ಸದ್ಯಕ್ಕೆ ಎರಡು ರೂಪಗಳನ್ನೂ ಅಂಗೀಕರಿಸೋಣ. ಸಂಸ್ಕೃತದಲ್ಲೇ ಕೋಷ-ಕೋಶ, ಪೃಥ್ವೀ-ಪೃಥಿವೀ ಮೊದಲಾದ ಜೋಡಿಗಳಿಲ್ಲವೇ? ಕರ್ಣಾಟಕ-ಕರ್ನಾಟಕಗಳಲ್ಲಿ ಕೊನೆಗೆ ಯಾವುದು ನಿಲ್ಲಬೇಕೆಂಬುದನ್ನು ಕಾಲಪುರುಷನು ನಿರ್ಣಯಿಸಲಿ.[೭]

ವಿದ್ವಾಂಸರಾದ ಸಾಹಿತ್ಯಕಾರರು 'ಕರ್ಣಾಟ(ಕ)' ರೂಪವನ್ನು ಸಂಪ್ರದಾಯದಂತೆ ಬಳಸಿದರೂ, ದೇಶೀಯ ಭಾಷೆಯ ಸಂಪರ್ಕ ಪ್ರಭಾವಗಳಿಂದ ಕನ್ನಡ ಭಾಷೆಯ ಆಡುಮಾತಿನ ರೀತಿಯಲ್ಲಿ 'ಕರ್ನಾಟ(ಕ)' ರೂಪ ಸಹಜವಾಗಿಯೇ ನುಡಿಯುತ್ತದೆ ಎನ್ನಬಹುದು. 'ಕರ್ಣಾಟಕ ಶಬ್ದಾನುಶಾಸನ'ದ ಸೂತ್ರ ೩೮೮ ವ್ಯಾಖ್ಯಾನಭಾಗದಲ್ಲಿ ರೇಫೋತ್ಪತ್ತಿ ಸ್ಥಾನವನ್ನು ಹೇಳುವಾಗ "ಋವರ್ಣ ಟವರ್ಗ ರೇಫ ಷಕಾರಾ ಮೂರ್ಧನ್ಯಾಃ ರೇಫೋ ದಂತಮೂಲಪ್ರಭವ ಇತ್ಯೇಕೇ" ಎಂದು ಹೇಳಿರುವುದು ಇದೇ ಕಾರಣವಾಗಿ ಎಂದು ತೋರುತ್ತದೆ. ಕನ್ನಡ ವರ್ಣೋತ್ಪತ್ತಿ ವಿಚಾರವನ್ನು ಕುರಿತಾಗ ಈ ಸಂಗತಿಯನ್ನು ಲಕ್ಷಿಸಿ, ದೇವುಡು ನರಸಿಂಹಶಾಸ್ತ್ರಿಗಳು ಹೀಗೆಂದಿದ್ದಾರೆ :

"ರ - ಇದನ್ನು ಈಗಿರುವ ವ್ಯಾಕರಣಗಳು (ಸಂಸ್ಕೃತ ವ್ಯಾಕರಣವನ್ನು ಅನುಸರಿಸಿ) ಮೂರ್ಧನ್ಯವೆನ್ನುತ್ತವೆ. ಆದರೆ ನಾಲಗೆಯು ಇದನ್ನು ಉಚ್ಚರಿಸುವಾಗ ಅಂಗುಳಿನವರೆಗೂ ಹೋಗುವುದಿಲ್ಲ (ಟ, ಡ, ರಗಳನ್ನು ಉಚ್ಚರಿಸಿ ನೋಡಿರಿ). ಇದು ನಮ್ಮ ಮತದಂತೆ ಉಪದಂತ್ಯ, ಎಂದರೆ 'ಚ' ಕ್ಕಿಂತ ಮುಂದೆ, 'ತ'ಕ್ಕಿಂತ ಹಿಂದೆ ಹುಟ್ಟುವುದು. ಇದರಲ್ಲಿ 'ಮಿಡಿತ' (Fricativeness)ವುಂಟು. ಇದು 'ಸ' ಆಗುವುದು, 'ದ' ಸ್ಥಾನದಲ್ಲಿ ಆದೇಶವಾಗಿ ಬರುವುದು, ಇದರ ಮುಂದಿನ 'ತ, ದ, ನ, ಲ, ಸ'ಗಳು ಮೂರ್ಧನ್ಯಗಳು ಆಗದಿರುವುದು - ಇವುಗಳನ್ನು ವಿಚಾರಿಸಿದರೆ ನಮ್ಮ ಮತಕ್ಕೆ ಬಣ್ಣವೇರುತ್ತದೆ.[೮]"

ಕಾಲಪುರುಷನು ಒಂದು ರೀತಿಯಲ್ಲಿ ಈ ಸಮಸ್ಯೆಯನ್ನು ಪರಿಹರಿಸುವಂತೆ ತೋರುವುದು. ಈಚೆಗೆ ರಾಜ್ಯ ತನ್ನ ಹೊಸಹೆಸರನ್ನು ತಳೆದಾಗ, 'ಕರ್ನಾಟಕ' ಎಂಬ ರೂಪ ಅಧಿಕೃತವಾಗಿ ಬಳಕೆಗೆ ಬಂದಿದೆ. ಇಷ್ಟವಿದ್ದವರು 'ಕರ್ಣಾಟಕ' ಎಂಬ ರೂಪವನ್ನೂ ಬಳಸುತ್ತಾರೆ. ಆದರೆ ಈ ದೇಶ - ಭಾಷಾವಾಚಕವಾದ 'ಕರ್ನಾಟಕ' ಶಬ್ದವು ಈಗ ಕೇವಲ ದೇಶವಾಚಕವಾಗಿಯೇ ಬಳಕೆಯಾಗುತ್ತದೆ. ಈಗ ರಾಜ್ಯ 'ಕರ್ನಾಟಕ' ; ರಾಜ್ಯದ ಭಾಷೆ 'ಕನ್ನಡ'.

ಕನ್ನಡನಾಡಿನಲ್ಲಿ ಕನ್ನಡ, ಕರ್ನಾಟಕ ಶಬ್ದಗಳು ಬಳಕೆಯಾಗುತ್ತಿದ್ದ ರೀತಿ ನೀತಿಗಳನ್ನು ಈವರೆಗೆ ನೋಡಿದುದಾಯಿತು. ಪ್ರಾಕೃತದಲ್ಲಿ ಕಣ್ಣಾಡ, ಪಾಲಿಯಲ್ಲಿ ಕಾಣ್ಣಾಟ, ಅಪಭ್ರಂಶದಲ್ಲಿ ಕನ್ನಾಡ ಎಂದೂ ಆಧುನಿಕ ಆರ್ಯಭಾಷೆಗಳಲ್ಲಿ, ಮರಾಠಿಯಲ್ಲಿ ಕರ್ನಾಟಕ, ಕಾನಡಿ, ಗುಜರಾತಿಯಲ್ಲಿ ಕನಡಿ ಎಂದೂ ದ್ರಾವಿಡ ಭಾಷೆಗಳಲ್ಲಿ, ತಮಿಳಿನಲ್ಲಿ ಕರುನಾಡಗ, ಕನ್ನಾಡಗ, ಕನ್ನಾಡ, ಕರುನಡ, ತೆಲುಗಿನಲ್ಲಿ ವ್ಯತ್ಯಾಸವಿಲ್ಲದೆ ಕರ್ಣಾಟ ಎಂದೂ ಬೇರೆ ಬೇರೆ ರೂಪಗಳಲ್ಲಿ ಅವು ಬಳಕೆಯಾಗಿರುವುದನ್ನು ಕಾಣಬಹುದು.

ಮಧ್ಯಕಾಲೀನ ಪಾಶ್ಚಾತ್ಯ ಬರೆಹಗಳಲ್ಲಿ ಆಗಿರುವ ರೂಪಾಂತರಗಳು ಹೆಚ್ಚು ಕುತೂಹಲಕರ. ೧೮೭೯ರಲ್ಲಿ, ಇಂಡಿಯನ್ ಆಂಟಿಕ್ವೆರಿ ಪತ್ರಿಕೆಯಲ್ಲಿ ಪ್ರಕಟವಾಗಿರುವ ಒಂದು ವಿವರಣಾತ್ಮಕ ಕೋಶದಲ್ಲಿಯ ವಿವರಗಳನ್ನು ಗಮನಿಸಿದರೆ ಇದು ತಿಳಿಯುತ್ತದೆ.[೯] ಈ ವಿವರಗಳು ಪಶ್ಚಿಮ ಕರಾವಳಿಯ ಉತ್ತರ ದಕ್ಷಿಣ ಕನ್ನಡ ಜಿಲ್ಲೆಗಳ 'ಕನ್ನಡ' ಎಂಬ ಹೆಸರನ್ನು ಉಚ್ಚರಿಸುವುದರಲ್ಲಿ ಪಾಶ್ಚಾತ್ಯರ ಬರೆವಣಿಗೆಗಳಲ್ಲಿ ಆಗಿರುವ ಆಭಾಸಗಳನ್ನು ತೋರಿಸುವುವು Canari (೧೫೧೬), Canarim (೧೫೨೦), Canara (೧೫೫೨) ಇತ್ಯಾದಿ ರೂಪಗಳಲ್ಲಿ ಅಲ್ಲಿ ಕಾಣಬಹುದಾಗಿದ್ದು, ಕೌಟೋ ಎಂಬ ಮಹಾಶಯನು, ೧೬೧೪ರಲ್ಲಿ, ``Its proper name is Charnathaca, which from corruption to corruption has come to be called canara" ಎಂದು ಹೇಳಿರುವುದು ಸಹ ಅಷ್ಟೇ ಆಭಾಸಕರವಾಗಿದೆ. ಕರ್ನಲ್‌ಮಾರ್ಕ್‌ವಿಲ್ಕ್ಸ್ ಬರೆದ ಮೈಸೂರು ದೇಶದ ಚರಿತ್ರೆಯನ್ನು ಸಂಪಾದಿಸಿ ಪ್ರಕಟಿಸಿದ (೧೯೩೦) ಎಂ. ಹ್ಯಾಮಿಕ್ ಅವರು ಸಹ ತಮಿಳು ಕರ್ (=ಕಪ್ಪು) ಮತ್ತು ನಾಡು (=ದೇಶ) ಕರ್ನಾಟ ಅಥವಾ ಕಾರ್ನಾಟ ಆಗಿದೆಯೆಂದು ಸೂಚಿಸಿ, Canara ಎಂಬುದು Karnataka ಎಂಬುದರ ಅಪಭ್ರಂಶವೆಂದು ಹೇಳಿ, ಪಾಶ್ಚಿಮಾತ್ಯ ಬರೆಹಗಳಲ್ಲಿ Karnatte ೧೬೪೨), Karnatte ೧೬೪೨-೪೩) Carnatta (೧೬೫೦) ಇತ್ಯಾದಿ ಆದುದನ್ನು ಮೂಲದ ದಾಖಲೆಗಳಿಂದ ಉದ್ಧರಿಸಿದ್ದಾರೆ.

'ಕನ್ನಡ' ಶಬ್ದ ಹಾಗೆಯೇ 'ಕರ್ನಾಟಕ' ಶಬ್ದದ ಅರ್ಥವ್ಯಾಪ್ತಿಯೂ ಬೆಳೆದ ಹಾಗೆ ತೋರುತ್ತದೆ. 'ಕನ್ನಡಿಗ ಕುಲ' ಎಂಬರ್ಥದಲ್ಲಿಯೇ 'ಕರ್ನಾಟ' ವಂಶವನ್ನು ಹೇಳಿರುವ ಪ್ರಯೋಗಗಳಿವೆ. "ಕರ್ಣಾಟಕುಳತಿಳಕರ್ಮ್ಮಾಚಿರಾಜಂಗೆ" (ಎಕ. ii, ೨೨೧ ; ೧೧೦೦), ಕರ್ಣಾಟಕುಳಕಮಳಮಾರ್ತಂಡ ಹೆಗ್ಗಡೆ ಗೋವಿಂದಮಯ್ಯ" (ಎಕ iii, ಶ್ರೀಪ. ೧೧೯;

೧೧೬೦), "ಕರ್ಣಾಟಕವಂಶೋದ್ಭವಂ ಕರಮೊಪ್ಪಂ ಬಡೆದಿರ್ಪನೂರ್ಜಿತಯಶಂ ಶ್ರೀವಿಷ್ಣುದಂಡಾಧಿಪಂ" (ಎಕ. V, ಹಾ. ೭೬ ; ೧೧೬೮) ಇತ್ಯಾದಿ ಶಾಸನಸ್ಥಗಳಾದ ಪ್ರಯೋಗಗಳಿವೆ. 'ನಳಚಂಪು'ವಿನ ಕರ್ತೃ ಚೌಂಡರಸನು (೧೩ನೆಯ ಶ.) ತನ್ನನ್ನು 'ಕರ್ಣಾಟವಂಶಶೃಂಗಾರರಸಂ" ಎಂದು (ಪ. ೮) ಕರೆದುಕೊಂಡಿದ್ದಾನೆ. 'ಕರ್ಣಾಟ' ವೆಂಬುದು ಬಂಗಾಳವೆಂಬ ಪುರುಷರಾಗಕ್ಕೆ ಸ್ತ್ರೀರಾಗವೆಂದು 'ಭರತಕಲ್ಪಲತಾಮಂಜರಿ' ಮೊದಲಾದ ಗ್ರಂಥಗಳಲ್ಲಿ ಹೇಳಿದೆ ; 'ಕರ್ಣಾಟಗೌಳ' ಎಂಬ ಉಪಾಂಗರಾಗವನ್ನು 'ವಿವೇಕ ಚಿಂತಾಮಣಿ' ಹೆಸರಿಸಿದೆ (೨೩೪). ಅಪಾ ತುಲಸಿ 'ಕರ್ನಾಟಕ'ವೆಂಬ ಸಂಗೀತಮಾರ್ಗವನ್ನು 'ಹಿಂದುಸ್ಥಾನಿ'ಯಿಂದ ಪ್ರತ್ಯೇಕಿಸಿ ಹೇಳಿದ್ದಾನೆ. ತಟ್ಟು ಅಥವಾ ನಾಟಿಕುದುರೆಗೆ 'ಕರ್ಣಾಟಾಶ್ವ'ವೆಂದು ಸಿದ್ಧಾಂತಿ ಸುಬ್ರಹ್ಮಣ್ಯಶಾಸ್ತ್ರಿಗಳು 'ಸಟೀಕ ಅಮರಕೋಶ'ದಲ್ಲಿ ಹೇಳಿದ್ದಾರೆ (೨೧೪).

ಅರ್ಥನಿಷ್ಪತ್ತಿಗಳು

ಇನ್ನು ಮುಂದೆ 'ಕರ್ಣಾಟ(ಕ)' ಅಥವಾ 'ಕರ್ನಾಟ(ಕ)' ಈ ಶಬ್ದದ ಅರ್ಥ ನಿಷ್ಪತ್ತಿಗಳ ವಿಷಯವಾಗಿ ಚರಿತ್ರಕಾರರೂ ಸಾಹಿತ್ಯಜ್ಞರೂ ಮಾಡಿರುವ ಜಿಜ್ಞಾಸೆಯನ್ನು ಕುರಿತು ನೋಡಬಹುದು. ಈ ಶಬ್ದದ ಜೊತೆಗೆ 'ಕನ್ನಡ' ಶಬ್ದದ ವಿಚಾರವೂ ಜಿಜ್ಞಾಸೆಗೆ ಸೇರಿಕೊಳ್ಳುತ್ತದೆ. ವಿಚಾರಮಥನ ನಡೆದು ಭಿನ್ನ ಭಿನ್ನ ಮತಗಳು ವ್ಯಕ್ತಪಟ್ಟಿವೆ. ಆದರೆ ಒಮ್ಮತವಾದ ಅಥವಾ ಬಹುಜನಸಮ್ಮತವಾದ ನಿರ್ಣಯ ಇನ್ನೂ ಸಾಧ್ಯವಾಗಿಲ್ಲ. ನಿಶ್ಚಿತಪ್ರಮಾಣಗಳ ಅಭಾವವೇ ಇದಕ್ಕೆ ಕಾರಣ. ವಿವರಗಳಿಗೆ ಪ್ರವೇಶಿಸದೆ, ಕೆಲವು ಅಭಿಪ್ರಾಯಗಳನ್ನು ಮಾತ್ರ ಇಲ್ಲಿ ಸಂಕ್ಷೇಪವಾಗಿ ಸೂಚಿಸಬಹುದು ;

(ಅ) 'ಕರ್ಣಾಟ(ಕ)' / 'ಕರ್ನಾಟ(ಕ)' ಪದಕ್ಕೆ ಸಂಸ್ಕೃತಮೂಲವಾಗಿ ನಿಷ್ಪತ್ತಿ ಹೇಳಿರುವುದು:

(೧) 'ಸ್ಕಾಂದಪುರಾಣ'ದಲ್ಲಿ (ಸು. ೭೦೦-೧೦೦೦): ಲೋಕಕಂಟಕನಾದ ದೈತ್ಯನೊಬ್ಬನನ್ನು ಬ್ರಹ್ಮಪುತ್ರಿಯಾದ ಶ್ರೀಮಾತೆಯ ಅಂಶಸ್ವರೂಪಿಣೀದೇವಿ ಮಾತಂಗಿಯು ನಿಗ್ರಹಿಸುವಾಗ, ಆತನನ್ನು ನುಂಗಿದರೂ ಆತ ಬಿಡದೆ ಆಕೆಯ ಕರ್ಣರಂಧ್ರದಿಂದ ಹೊರಬಂದನಂತೆ ; ಆದರಿಂದಾಗಿ ಆತನಿಗೆ 'ಕರ್ಣಾಟ'ನೆಂದು ಹೆಸರಾಯಿತಂತೆ ; ಬಳಿಕ ದೇವಿಯ ಅನುಗ್ರಹದಿಂದಲೇ ತನ್ನ ಹೆಸರಿನ ದೇಶವನ್ನು ಆತನು ಸಮುದ್ರತಟದಲ್ಲಿ ಸ್ಥಾಪಿಸಿದನಂತೆ (ಇದನ್ನು ತಿಳಿಸುವ ೧೦೩, ೧೭೬ನೆಯ ಪದ್ಯಗಳಿಗೆ ಅನುಬಂಧವನ್ನು ನೋಡಿ)

(೨) ಜೈನಪಂಡಿತನಾದ ಕೇಶವವರ್ಣಿಯ (೧೩೫೯) ಪ್ರಕಾರ, ಭೇದನಾರ್ಥಕ ವಾದ 'ಕರ್ಣ' ಧಾತುವಿನಿಂದ 'ಕರ್ಣಾಟ' ಎಂಬ ಪದವಾಯಿತು. ದಿವ್ಯ ಭಾಷೆಯಿಂದ ಬೇರೆಯಾಗಿ ವ್ಯವಹಾರದಲ್ಲಿರುವ ಭಾಷೆಯೆಂದು ಈ ಪದದ ಅರ್ಥ.

(೩) ವೇಂಕಟಾಧ್ವರಿಯ (ಸು. ೧೬೫೦) 'ವಿಶ್ವಗುಣಾದರ್ಶ'ದಲ್ಲಿ ಕರ್ಣಗಳಲ್ಲಿ ಅಟನ ಮಾಡುವುದರಿಂದ, ಎಂದರೆ ಎಲ್ಲರ ಕಿವಿಗಳಲ್ಲಿಯೂ ಬಿದ್ದು ಪ್ರಸಿದ್ಧವಾದ್ದರಿಂದ, 'ಕರ್ಣಾಟದೇಶ' ಎಂದು ಹೆಸರಾಯಿತು ಎಂದಿದೆ (ಶ್ಲೋಕ ೨೪೯).

(೪) 'ಶಬ್ದರತ್ನಾವಲೀ' ಎಂಬ ಕೋಶದಲ್ಲಿ ಯಾವ ದೇಶದ ರಾಜನ ಕೀರ್ತಿ ಎಲ್ಲರ ಕಿವಿಗಳಲ್ಲಿಯೂ ಮೊಳಗುತ್ತಿರುವುದೋ ಆ ದೇಶ 'ಕರ್ಣಾಟದೇಶ' ಎಂದು ಹೇಳಿದೆ.

(೫) 'ಆಂಧ್ರಭಾಷಾತತ್ತ್ವ'ವೆಂಬ ಗ್ರಂಥದಲ್ಲಿ ಕಾಕಿನಾಡದ ಪಾಠಿ ವೆಂಕಟ ನಾರಾಯಣ ಪಂಡಿತರು ಕರ್ಣ = ಪರ್ವತ + ಆಟ = ಭ್ರಮಣೇ ಎಂದು ವಿಂಗಡಿಸಿ ಕನ್ನಡಿಗ / ಕರ್ಣಾಟರೆಂದರೆ ಕಾಡುಜನರೆಂದು ವಾದಿಸಿರುವರು.[೨೦]

ಆಧುನಿಕರಲ್ಲಿ ಕೆಲವರು iii, iv ನೆಯ ಸೂಚನೆಗಳ ಬಗ್ಗೆ ಒಲವನ್ನು ತೋರಿದ್ದರೂ,[೨೧] ಸಾಮಾನ್ಯವಾಗಿ ಈ ಮೇಲಿನ ಎಲ್ಲವೂ ಕವಿಕಲ್ಪಿತಗಳೂ ಆಧಾರ ರಹಿತಗಳೂ ಆದ ಅರ್ಥ ನಿಷ್ಪತ್ತಿಗಳೆಂಬುದಾಗಿ ಆರ್. ನರಸಿಂಹಾಚಾರ್ಯರೂ ಇತರ ವಿದ್ವಾಂಸರೂ ಭಾವಿಸಿ, ಇವನ್ನು ಗ್ರಾಹ್ಯಮಾಡಿಲ್ಲವೆಂದು ತಿಳಿಯುವುದು.

ಇದೇ ರೀತಿಯ ವಿಭಜನೆಗೆ ಸೇರುವ ಆಧುನಿಕವಾದ ಇನ್ನೊಂದು ಅಭಿಪ್ರಾಯ ವನ್ನೂ ಇಲ್ಲಿಯೇ ಸೂಚಿಸಿದರೆ ತಪ್ಪಾಗದು. ಮನು ತನ್ನ ಕಾಲದ ವ್ರಾತ್ಯಕ್ಷತ್ರಿಯರ ಪಂಗಡಗಳನ್ನು ವಿಂಗಡಿಸುತ್ತ "ನಟಶ್ಚ ಕರಣಶ್ಚೈವ" ಎಂಬುದಾಗಿ (ಮನುಸ್ಮೃತಿ, ೧೦-೨೩) ಎರಡು ಬಗೆಗಳನ್ನು ಕೂಡ ಹೇಳಿದ್ದಾನೆ ಎಂಬ ಆಧಾರವನ್ನು ಹಿಡಿದು, ಮಹಾರಾಷ್ಟ್ರದ ರಾಜವಾಡೆಯವರು ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡುತ್ತ, ಕರಣ ಮತ್ತು ನಟರ ಸಮ್ಮಿಶ್ರಪಂಗಡವೇ ಕರ್ಣಾಟ (ಕರಣ + ನಟ=ಕರ್ಣಾಟ) ಎಂದು ಆಗಿದೆಯೆಂಬುದಾಗಿ ಸೂಚಿಸಿರುವರೆಂದಿದೆ.[೨೨] "ಮರಾಠಿಜ್ಞಾನಕೋಶ' (ಭಾಗ ೧೦, ಪು ೧೧೬) ದ ಮೂಲಕ ಈ ನಿಷ್ಪತ್ತಿಯನ್ನೇ ಅಂಗೀಕರಿಸಿ, ಶ್ರೀರಂಗ ಭೀಮಾಚಾರ್ಯರು ಸಹ 'ಕರ್ಣಾಟ' ಪದ ಜಾತಿವಾಚಕವೆಂದು ಅಭಿಪ್ರಾಯಪಟ್ಟಿದ್ದಾರೆ.[೨೩] ಈ ಅಂಶವನ್ನು ವಿಮರ್ಶಿಸುತ್ತ, ಶಂ.ಬಾ. ಜೋಶಿಯವರು ಬೇರೆ ಸ್ಮೃತಿಗಳಲ್ಲಿಯೂ ನಟರ ಉಲ್ಲೇಖಗಳನ್ನು ಗುರುತಿಸಿ, 'ಮತ್ಸ್ಯಪುರಾಣ'ದಲ್ಲಿ 'ಕರಣ' ಎಂಬುದರೊಂದಿಗೆ ಅಭಿನ್ನವಾಗಿ ಗ್ರಹಿಸಿ, ಕರಣ + ನಟ=ಕರ್ಣ್ನಾಟ > ಕರ್ಣಾಟ ಎಂದೋ ಕರ್ಣ + ನಟ = ಕರ್ಣಾಟ ಎಂದೋ ಆಗಬಹುದು ಎಂಬುದಾಗಿ ಸೂಚಿಸಿದ್ದಾರೆ ; ಆದರೆ ಈ ಶಬ್ದಗಳ ಮೂಲವನ್ನು ದೇಶೀಯ ಎಂದರೆ ಕನ್ನಡವೆಂದು ಗ್ರಹಿಸ್ಸಾರೆ.[೨೪] ಎರಡು ಭಿನ್ನ ಜನಾಂಗ ವಾಚಕಗಳು ಸೇರಿ ಮತ್ತೊಂದು ಜನಾಂಗವಾಚಕವಾಯಿತೆಂಬುದನ್ನು ಪುಷ್ಟೀಕರಿಸುವ ಪ್ರಮಾಣವಾವುದೂ ಇಲ್ಲದಿರುವ ದೆಸೆಯಿಂದ, ಸಮಸ್ತ ಪದದಲ್ಲಿ ನಟ > ನಾಟ ಆದುದನ್ನು ಭಾಷಿಕವಾಗಿ ವಿವರಿಸುವುದರಲ್ಲಿ ಕೆಲವು ತೊಡಕುಗಳಿರುವ ಕಾರಣದಿಂದ, ಅವರದೇ ಅಭಿಪ್ರಾಯ ಬೇರೊಂದು ಇರುವ ದೆಸೆಯಿಂದ ಈ ಸೂಚನೆಯನ್ನು ಕೈಬಿಡಬಹುದೆಂದು ತೋರುತ್ತದೆ.

ವೃಕ್ಷವಾಚಕವಾದ 'ಅಶ್ವ', 'ಕರ್ಣ' ಮೊದಲಾದ ಶಬ್ದಗಳಂತೆ 'ಕರ್ಣಾಟಕ' ಶಬ್ದವೂ ರೂಢವಾದ ಶಬ್ದವೆಂದು ಹೇಳುವುದಾದರೆ ಅದು ಅವ್ಯುತ್ಪನ್ನ ಶಬ್ದವಾಗಿ, ವೃದ್ಧ ವ್ಯವಹಾರದಲ್ಲಿ ಬಂದಿರುವ ಅದೇ ರೂಪವೇ ಸಾಧುರೂಪವಾಗುತ್ತದೆ ; ಇಲ್ಲವೆ ಯೌಗಿಕ ಶಬ್ದವೆಂದಾದರೆ "ಕರ್ಣೇ ಅಟತೀತಿ ಕರ್ಣಾಟಃ" ಎಂದು ವ್ಯುತ್ಪತ್ತಿ ಹೇಳಿ 'ಕೀರ್ತಿಮದ್ದೇಶ', ಸುಗುಣಾಲಂಕೃತದೇಶ' ಎಂದು ಅರ್ಥ ಮಾಡುವುದೂ ಸಾಧ್ಯ ಎಂದು ನಂಜನಗೂಡು ಶ್ರೀಕಂಠಶಾಸ್ತ್ರಿಗಳು ಭಾವಿಸಿದ್ದಾರೆ.[೩೫] ಈ ವಿಚಾರಣೀಯ ಶಬ್ದಕ್ಕೆ ಕನ್ನಡ ಭಾಷೆಗೆ ಅನುಸಾರವಾಗಿ ವ್ಯುತ್ಪತ್ತಿ ಸಾಧ್ಯವೆಂಬುದರಿಂದ, ಎರಡನೆಯ ಸೂಚನೆ ಕವಿಕಲ್ಪಿತ ಎಂದು ಮೊದಲೇ ಗ್ರಹಿಸಿರುವುದರಿಂದ, ಈ ಸೂಚನೆಯ ಕೈಬಿಡಬಹುದು.

(ಆ) ಕನ್ನಡ ಎಂಬ ದೇಶ್ಯಶಬ್ದವೇ 'ಕರ್ಣಾಟ(ಕ)'/ 'ಕರ್ನಾಟ(ಕ)'ಎಂಬ ಸಂಸ್ಕೃತರೂಪವನ್ನು ಅನಂತರದಲ್ಲಿ ಪಡೆದುಕೊಂಡಿತು ಎನ್ನುವ ಆಧುನಿಕ ಭಾಷಾ ವಿದ್ವಾಂಸರ ಕೆಲವು ಅಭಿಪ್ರಾಯಗಳನ್ನು ಈಗ ಒಗ್ಗೂಡಿಸಬಹುದು :

೧. ರಾಬರ್ಟ್ ಕಾಲ್ಡ್ವೆಲ್ : ಚೋಳ, ಕೇರಳ, ಆಂಧ್ರ, ಕಳಿಂಗ ಇತ್ಯಾದಿ ಪ್ರದೇಶವಾಚಕಗಳಲ್ಲಿ 'ಕರ್ಣಾಟಕ' ಶಬ್ದವೊಂದೇ ದ್ರಾವಿಡಮೂಲದ್ದಾಗಿ ತೋರುವುದು. ದಕ್ಷಿಣ ದಖನ್ನಿನ ದಿಣ್ಣೆ ನೆಲ ಹತ್ತಿ ಬೆಳೆಯ ಕಪ್ಪುನೆಲ ; ಆದ್ದರಿಂದ ಕರ್‌ನಾಡು (=ಕಪ್ಪುನಾಡು) ಎನ್ನುವುದರ ಸಂಸ್ಕೃತರೂಪವೇ ಕರ್ಣಾಟ.[೩೬]

ಈ ಅಭಿಪ್ರಾಯ ಅವರೇ ತಿಳಿಸಿರುವಂತೆ ಕರ್+ನಾಟ್(ನಾಡು) +ಅಗಂ ಎಂದರೆ ಕಪ್ಪುನಾಡಿನ ಒಳಭಾಗ (ಪ್ರದೇಶ) ಎಂಬ ಗುಂಡರ್ಟ್ ಅವರ ಸೂಚನೆಯಿಂದ ಪ್ರೇರಿತವಾದ್ದು.[೩೭] ಕಿಟ್ಟೆಲ್ ಅವರಿಗೆ ಇದು ಸಮ್ಮತವಾದ್ದು.[೩೮] ಆರ್. ರಘುನಾಥರಾಯರು ಇವುಗಳಲ್ಲಿ ಮೊದಲನೆಯದನ್ನು ಒಪ್ಪಿದ್ದಾರೆ, ಎರಡನೆಯದನ್ನು ಉದ್ಧರಿಸಿದ್ದಾರೆ[೩೯]. ಎಲ್.ಡಿ. ಬಾರ್ನೆಟ್ ಅವರು ಉದ್ಧರಿಸುವ ಫ್ಲೀಟ್ ಅವರ ಊಹೆಯೂ[೪೦] ಎಚ್.ಸಿ. ರಾಯ್ ಚೌಧುರಿಯವರ ಅಭಿಪ್ರಾಯವೂ[೪೧] ಈ ಸೂಚನೆಗಳಲ್ಲಿ ಮೊದಲನೆಯದನ್ನೇ ಒಟ್ಟಿನಲ್ಲಿ ಪೋಷಿಸುತ್ತವೆ.

೨. ಹಟ್ಟಿಯಂಗಡಿ ನಾರಾಯಣರಾಯರು : ಕನ್ನಡ ನಾಡು ಸಮುದ್ರ ಮಟ್ಟಕ್ಕಿಂತ ಎತ್ತರವಾಗಿ ಘಟ್ಟದ ಮೇಲಿದೆ. ಕರುನಾಡು ಎಂಬುದು ಕರುಮಾಡ ಇತ್ಯಾದಿ ಶಬ್ದಗಳ ಹಾಗೆ, ಎತ್ತರವಾದ ಅಥವಾ ಮಹತ್ತಾದ ನಾಡು. ಮೇಲಣ ಸೀಮೆ ಅಥವಾ ಘಟ್ಟದ ಮೇಲಣ ಸೀಮೆ ಎಂಬ ಅರ್ಥವನ್ನು ಕೊಡಬಲ್ಲ ಮಾತು ಅದು. ಆದ್ದರಿಂದ ಕರುನಾಡು (=ಎತ್ತರವಾದ ನಾಡು) ಎಂಬುದು ಮುಂದೆ ದ್ರಾವಿಡ ಭಾಷೆಗಳಲ್ಲಿ 'ಕನ್ನಡ' ಎಂಬುದಾಗಿಯೂ ಸಂಸ್ಕೃತದಲ್ಲಿ 'ಕರ್ಣಾಟ' ಎಂಬುದಾಗಿಯೂ ಪರಿವರ್ತಿಸಿರಬಹುದು.[೪೨] ತ್ರಿವೇಂದ್ರಂನ ಕೆ.ಜಿ. ಶೇಷ ಅಯ್ಯರ್, ಕೆ. ವರದಾಚಾರ್ಯ, ಎಂ.ಎಚ್. ಕೃಷ್ಣ ಅವರ ನಿಲವು ಸಹ ಇದಕ್ಕೆ ಅನುಗುಣವಾಗಿಯೇ ಇದೆ.[೪೩] ಪ್ರ.ಗೋ. ಕುಲಕರಣಿಯವರೂ

ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರೂ ಇದನ್ನೇ ಎತ್ತಿ ಹಿಡಿದಿದ್ದಾರೆ; ರಂ.ಶ್ರೀ. ಮುಗಳಿಯವರೂ ಇದನ್ನು ಕೆಲಮಟ್ಟಿಗೆ ಪೋಷಿಸುತ್ತಾರೆ.[೩೪]

೩. ಆರ್. ತಾತಾಚಾರ್ಯರು : 'ಕರುನಡಂ' ಎಂಬುದೂ 'ಕನ್ನಡ' ಎಂಬುದೂ ತಮಿಳು ಲಕ್ಷಣಗ್ರಂಥಗಳ ವೃತ್ತಿಗಳಲ್ಲಿ ಉಕ್ತವಾಗಿವೆ. ತಮಿಳಿನಲ್ಲಿ 'ಕರು' ಎಂದರೆ ಬೆಟ್ಟ ಎಂದರ್ಥ. ಕೀಳ್ನಾಡಿನವರಾದ ತಮಿಳರು ಮೇಲ್ನಾಡನ್ನು ಕರುನಾಡು-ಕರುನಡಂ ಎಂದು ಕರೆದಿರಬಹುದು. 'ಕನ್ನಡ' ಶಬ್ದಕ್ಕೆ ನಿಷ್ಪತ್ತಿ ಬೇರೆ. ಅದು ಕಮ್ಮಿತು+ನಡೆ = ಕಂ+ನಡೆ ಕನ್ನಡ. ತಮಿಳು ಮತ್ತು ತೆಲುಗು ಭಾಷೆಗಳಲ್ಲಿ ತೇನ್+ಮೊಚಿ ಮೊದಲಾಗಿ ಮಾಡುವ ನಿಷ್ಪತ್ತಿಗಳಿಗೆ ಆಗ ಇದು ಅನುಗುಣವಾಗಿರುತ್ತದೆ.[೩೫]

೪. ಎಂ. ಗೋವಿಂದಪೈ ಅವರು : ಕರಂ, ಕರು ಎಂಬವು ದೊಡ್ಡ, ವಿಸ್ತಾರವಾದ, ಮಹತ್ ಎಂಬ ಅರ್ಥವನ್ನು ಕೊಡುವ ಪದಗಳು. ಆದ್ದರಿಂದ ಕರುನಾಡು ಎಂದರೆ ಮಹಾರಾಷ್ಟ್ರ. ಕರು+ನಾಡು = ಕರ್+ನಾಡು > ಕರ್ನಾಡು (= ದೊಡ್ಡದೇಶ) ಎಂಬ ಕನ್ನಡ ಸಮಾಸಪದವೇ ಸಂಸ್ಕೃತದಲ್ಲಿ 'ಕರ್ನಾಟ' ಎಂದು ಆಗಿರಬೇಕು[೩೬]. ರಾ.ಹ. ದೇಶಪಾಂಡೆಯವರ ಮತ್ತು ಎ. ಮಾಸ್ಟರ್ ಅವರ[೩೭] ಅಭಿಪ್ರಾಯಗಳು ನಿಷ್ಪತ್ತಿಯಲ್ಲಿಯೂ ಅರ್ಥದಲ್ಲಿಯೂ ಬಹುಮಟ್ಟಿಗೆ ಇದನ್ನೇ ಸಮರ್ಥಿಸುತ್ತವೆಯಲ್ಲದೆ, ಈ ಸಂಬಂಧವಾಗಿ ಅವರ ಸೂಚನೆಗಳು ಇನ್ನೂ ಮೊದಲೇ ಪ್ರಕಟವಾಗಿದ್ದುವು.

೫. ಆರ್. ನರಸಿಂಹಾಚಾರ್ಯರು : (ಪರಿಮಳವಾಚಿಯಾದ) ಕಮ್ಮಿತು+ನಾಡು = ಕನ್ನಾಡ. 'ಕನ್ನಡು' > ಕನ್ನಡ ರೂಪ ಕನ್ನಡದೇಶದ ಕೆಲವು ಪ್ರಾಂತಗಳಲ್ಲಿ ಈಗಲೂ ಕಿವಿಗೆ ಬೀಳುತ್ತದೆ. ಕನ್ನಡ ದೇಶ ಗಂಧದ ಮರದ ಕಾಡುಗಳಿಂದಲೂ ತಾವರೆಯ ಕೊಳಗಳಿಂದಲೂ ಪ್ರಸಿದ್ಧಿ ಪಡೆದಿರುವುದರಿಂದ ಕಮ್ಮಿತು ಎಂಬ ವಿಶೇಷಣ ಈ ನಾಡಿಗೆ ಅನುರೂಪವಾದ್ದು.[೩೮] ಈ ಅಭಿಪ್ರಾಯ ಆರ್. ತಾತಾಚಾರ್ಯರಿಗೆ ಕೂಡ ಸಮ್ಮತವಾಗಿರುವಂತೆ ತೋರುತ್ತದೆ[೩೯].

೬. ಬಿ.ಎಂ. ಶ್ರೀಕಂಠಯ್ಯನವರು : ತಮಿೞಗಂ=ತಮಿೞಕಂ ಎಂಬುದನ್ನು ಕರ್+ನಾಟ್+ಅಕಂ, ಕರ್ನಾಟಕಂ ಎಂಬುದರೊಡನೆ ಹೋಲಿಸಿ. ಅಕಂ=ಅಗಂ=ಅಂ= ಕರ್ನಾಟಂ. ಈ ನಿಷ್ಪತ್ತಿ ಗುಂಡರ್ಟ್ ಅವರ ಸೂಚನೆಯಿಂದ ಪ್ರೇರಿತವಾಗಿರುವಂತಿದೆ.[೪೦]

೭. ಫಾ. ಹೆರಾಸ್ ಅವರು : ಮೊಹೆಂಜೊದಾರೋ ಚಿತ್ರಲಿಪಿಯ ಒಂದು ರೇಖಾಸಂಕೇತವನ್ನು ಗಮನಿಸಿದರೆ ಅದು 'ಕಣ್‌ನಿರ್' (=ಕಣ್ಣುಳ್ಳವರು) ಪದದ ಸಂಜ್ಞೆಯಾಗಿರಬಹುದೆಂದು ತೋರುವುದು. 'ಕಣ್‌ನಿರ್' ಈಗಿನ ಕನ್ನಡ ಜನರನ್ನು ಸೂಚಿಸುವ ಹಳೆಯ ಶಬ್ದವಾಗಿದ್ದು, ಅದರ ಸಂಸ್ಕೃತ ರೂಪಾಂತರ 'ಕರ್ನಾಟಕ' ಇರಬಹುದು.[೪೧]

೮. ದ.ರಾ.ಬೇಂದ್ರೆ, ಬೆಟಗೇರಿ ಕೃಷ್ಣಶರ್ಮರು : (i) ಕನ್ (ಎಂದರೆ ಕಾಣು, ಒಡಮೂಡು) ಧಾತುವಿನಿಂತ 'ಕನ್ನಡ' ಹುಟ್ಟಿದೆ. ಕನ್+ಅಳ್=ಕನ್ನಳ್, ಕನ್ನಡ್, ಕನ್ನಡ;

ಕನ್+ಅಳ್ ಎಂದರೆ ಒಡಮೂಡುವುದನ್ನು ಉಳ್ಳದ್ದು. ಆದ ಕಾರಣ, ಭಾವಗಳನ್ನು ಒಡಮೂಡಿಸುವುದು 'ಕನ್ನಡ'[೪೨]. (ii) ಬೇಂದ್ರೆ : "ರಾಷ್ಟ್ರಶಬ್ದವು ನಾಟವಾಚಕವು, ಪಂಪನ ಮಹಾನಾಟಕರ ವರ್ಣನೆಯು ಅದನ್ನೆ ಹೇಳುವದು. ನಾಟಕ್ಷತ್ರಿಯರು ಅಥವಾ ನಾಡವರು ಅನೇಕ ನಾಡುಗಳನ್ನು ಅಥವಾ ರಾಷ್ಟ್ರಗಳನ್ನು ವಿಂಧ್ಯದ ಸಾಲಿಗೆ ಕಟ್ಟಿದ್ದರು. ಪಶ್ಚಿಮಸಮುದ್ರದ ಬಳಿಯ ಸೌರಾಷ್ಟ್ರ, ಆವರ್ತ, ಲಾಟಗಳು, ಮಧ್ಯದೊಳಗಿನ ಮಹಾರಾಷ್ಟ್ರವು ; ಅಂಗವಂಗಕ್ಕೆ ಸೇರಿದ ರಾಡ-ರಾಢವು ; ಇವೆಲ್ಲ ನಾಟರ ರಾಷ್ಟ್ರಗಳು ಕರ್ನಾಟವೂ ನಾಟರ ರಾಷ್ಟ್ರವೇ. ಸಂಸ್ಕೃತದಲ್ಲಿ ನಾಟರೆಂದರೆ ಕರ್ನಾಟಕವೇ".[೪೩]

೯. ಚೆನ್ನಪ್ಪ ಉತ್ತಂಗಿಯವರು : 'ಕಣ್ಣನ್' ಶಬ್ದವು ಶಿವಸೂಚಕವಾಗಿದೆ ಎಂಬುದರಲ್ಲಿ ತಿಲಾಂಶವೂ ಸಂದೇಹವಿಲ್ಲ. ಏಕೆಂದರೆ, ಶಿವನಿಗೆ ಕನ್ನಡದಲ್ಲಿ ಮುಕ್ಕಣ್ಣ, ಹಣೆಗಣ್ಣ ಮುಂತಾದ ಹೆಸರುಗಳು ರೂಢಿಯಲ್ಲಿರುವವಲ್ಲದೆ ಕನ್ನಡಿಗ ಎಂಬುದೊಂದು ನಾಮವಿಶೇಷವಿದ್ದಂತೆ ಹಳಗನ್ನಡ ನಿಘಂಟಿನಿಂದ ತಿಳಿದುಬರುತ್ತದೆ. ಕಣ್+ಅಡಿಗ-ಕಣ್ಣಡಿಗ-ಕನ್ನಡಿಗ ಎಂದರೆ ಅಂಗಾಲಲ್ಲಿ ಕಣ್ಣುಳ್ಳವನೆಂದು ಅರ್ಥ. ಇದರಿಂದ ಶಿವನಿಗೆ ಹಣೆಗಣ್ಣನೆಂದಲ್ಲದೆ ಕಾಲಡಿಯಲ್ಲಿ ಕಣ್ಣುಳ್ಳವನೆಂಬ ಹೆಸರೂ ಇದ್ದಂತೆ ತಿಳಿಯುತ್ತದೆ. ಅಡಿಗಣ್ಣನಾದ ಶಿವನಿಂದ ಅವನ ಉಪಾಸಕರಾದ ಜನರಿಗೆ ಕನ್ನಡಿಗರೆಂಬ ಹೆಸರು ಬಂದಿರಲೂ ಬಹುದು.[೪೪]

೧೦. ಮುಳಿಯ ತಿಮ್ಮಪ್ಪಯ್ಯನವರು : (i) ಕನ್ನಡದ ರಾಜಕುಲಕ್ಕೆ ಕದಂಬ ಅಥವಾ ಕರಂಬ ಎಂಬ ಹೆಸರಿದೆ. ಆ 'ಕರ್' ಅಥವಾ 'ಕನ್' ಎಂಬ ದಸ್ಯುವರ್ಗದಿಂದ ಕನ್ನಡ ಎಂದು ಹೆಸರಾಗಿರಬಹುದು. (ii) 'ಕರು' ಪದಕ್ಕೆ ಎತ್ತರ, ಶಿಖರ, ಮಹತ್ತು ಎಂಬ ಅರ್ಥಗಳಿರುವುದು ತಿಳಿದಿದೆ. ಕನ್ ಮತ್ತು ಕರ್ ಎಂಬ ರೂಪಗಳು ಅಭಿನ್ನ. ಆದ್ದರಿಂದ ಕನ್ + ನಾಡು = ಕನ್ನಾಡು (ಕನ್ನಡ) ; ಕರ್ + ನಾಡು= ಕರುನಾಡು (ಕರುನಾಡಗ : ಸಂ. ಕರ್ಣಾಟಕ) ; 'ಕಜುತಳ'ದ ನಾಟರೇ ಕನ್ನಡಿಗರು. (iii) ಆದಿಜನಾಂಗದೊಳಗಿನವರಾದ ಕನ್ ಮತ್ತು ನಾಟರು ಬೆರೆತು ಕನ್ನಡಿಗರೆನಿಸಿರಬಹುದು.[೪೫]

೧೧. ಎನ್. ವೆಂಕಟರಮಣಯ್ಯನವರು : ಶ್ರೀಶೈಲದ ತಪ್ಪಲಿನಲ್ಲಿ ಹಿಂದಿನ ಕಾಲದಲ್ಲಿ ಕಣ್ಣ ವಿಷಯ, ಕರ್ಣಾಟ ಸೀಮ, ಕನ್ನಾಡು ಎಂಬ ಬೇರೆ ಬೇರೆ ಹೆಸರುಗಳ ಚಿಕ್ಕ ಜಿಲ್ಲೆಯೊಂದಿತ್ತು. 'ಕರ್ಣ' ದೊರೆಗಳ ಮೂಲಕವಾಗಿ ಈ ಶಬ್ದಗಳು ಉಗಮಗೊಂಡಿರಬೇಕು. 'ಶಾತಕರ್ಣ'ದ ಹ್ರಸ್ವರೂಪ 'ಕರ್ಣ' (ಸಂ. ಕರ್ಣ > ಪ್ರಾ. ಕಣ್ಣ > ತೆ. ಕನ್ನ). ಹೀಗೆ ಶಾತವಾಹನ ದೊರೆಗಳ ಆಳ್ವಿಕೆಯ ಆಂಧ್ರದೇಶದ ಒಂದು ಚಿಕ್ಕಜಿಲ್ಲೆಯ ಮೂಲಕವಾಗಿ ಕನ್ನಡ ಜನ ತಮ್ಮ ದೇಶ ಮತ್ತು ಭಾಷೆಗಳ ಹೆಸರನ್ನು ಪಡೆದುಕೊಂಡಂತೆ ತೋರುತ್ತದೆ.[೪೬]

ಎಸ್. ಶ್ರೀಕಂಠಶಾಸ್ತ್ರಿಗಳು ಈ ಅಭಿಪ್ರಾಯವನ್ನು ಕೆಲಮಟ್ಟಿಗೆ ಪೋಷಿಸುವಂತೆ ತೋರುತ್ತದೆ.[೪೭]

೧೨. ಶಂ.ಭಾ. ಜೋಶಿಯವರು : ಳ, ಣ ಮತ್ತು ನ ಗಳಲ್ಲಿ ಪರಸ್ಪರವಾಗಿ ಪಲ್ಲಟವುಂಟು. ಕಳವರು (ಕಳ್ವರು ಅಥವಾ ಕಳ್ಳರು - ಕಳಭ್ರರು) ಎಂಬ ದ್ರಾವಿಡ ವರ್ಗದ ಬಹುಪ್ರಾಚೀನ ಶಾಖೆಯ ಜನಾಂಗವೇ ಕಣ್ಣರು ಅಥವಾ ಕನ್ನರು. ಕನ್ನರ ನಾಡು ಕನ್ನಾಡು > ಕನ್ನಡ). ಇದು ಕನ್ನಾಡು > ಕನ್ನಾಟ > ಕರ್ಣಾಟ ಈ ಕ್ರಮದಿಂದ ಸಂಸ್ಕೃತದಲ್ಲಿ ಸೇರಿಕೊಂಡಿದೆ. ಕರ್ನಾಟಕದಲ್ಲಿರುವ ದ್ವಿರುಕ್ತಿ ದೋಷ ಕನ್ನಾಡು (ಕನ್ನಡ)ವಿನಲ್ಲಿ ಸ್ವಲ್ಪವೂ ಇಲ್ಲ.[೪೮]

ರಾ.ಯ. ಧಾರವಾಡಕರ ಅವರು ಈ ವಾದವನ್ನು ಒಪ್ಪುತ್ತಾರೆ.[೪೯]

೧೩. ಬಿ.ಎ. ಸಾಲೆತೊರೆಯವರು : ಕನ್ನಾಡು ಅಥವಾ ಕರ್ನಾಡು ಎಂಬ ಪದದ ಮೂಲ ಅರ್ಥ ಒಂದು ಮಹಾನಾಡು ಅಥವಾ ಒಂದು ಎತ್ತರವಾದ ನಾಡು ಎಂದಿದ್ದು, ಅದನ್ನು ಸಂಸ್ಕೃತಕ್ಕೆ ತಿರುಗಿಸಿದಾಗ ಕರ್ನಾಟ, ಕರ್ನಾಟಕ, ಮಹಾರಾಷ್ಟ್ರ ಆಗಿರಬೇಕು. ಕ್ರಮವಾಗಿ ಮಹಾರಾಷ್ಟ್ರ ಎಂಬ ಹೆಸರು ಕರ್ನಾಟಕದ ಒಡಲಿನ ಉತ್ತರ ಭಾಗಗಳಿಗೂ ಹೆಚ್ಚು ಪುರಾತನವಾದ ಕರ್ನಾಡು ಎಂಬ ಅಂಕಿತ ದೇಶದ ಮಿಕ್ಕ ಭಾಗಗಳಿಗೂ ಉಳಿದುಕೊಂಡಿರಬೇಕು.[೫೦]

ಇದು ಒಟ್ಟಿನಲ್ಲಿ ಗೋವಿಂದ ಪೈ ಅವರ ಅಭಿಪ್ರಾಯವನ್ನು ಅನುಸರಿಸಿದ್ದೇ ಆಗಿದೆ.

೧೪. ತೀ.ನಂ. ಶ್ರೀಕಂಠಯ್ಯನವರು : ಕರ್ಣಾ(ರ್ನಾ)ಟ, ಕರ್ಣಾ(ರ್ನಾ)ಟಕ ಶಬ್ದಗಳು ಮೂಲತಃ ಸಂಸ್ಕೃತ ಶಬ್ದಗಳಲ್ಲ. ಪುನ್ನಾಡು ಸಂಸ್ಕೃತಕ್ಕೆ ಬರುವಾಗ ಪುನ್ನಾಟ ಆದಂತೆ, 'ಕರ್ನಾಡು' ಎಂಬ ದೇಶ್ಯಶಬ್ದ ಸಂಸ್ಕೃತಜ್ಞರ ಉಚ್ಚಾರಣೆಯಲ್ಲಿ ಕರ್ಣಾ(ರ್ನಾ)ಟ ಎಂಬ ರೂಪವನ್ನು ತಾಳಿರಬೇಕು. ಕರ್ಣಾ(ರ್ನಾ)ಟ + ಕ= ಕರ್ಣಾ (ರ್ನಾ)ಟಕ ಎಂಬುದು ಮತ್ತೊಂದು ರೂಪದ ಕ್ರಮ.[೫೧]

೧೫. ಜಿ.ಪಿ. ರಾಜರತ್ನಂ ಅವರು : "..... ಎಡತೊರೆನಾಡು, ಯೆಲಹಂಕ ನಾಡು ಮುಂತಾದ 'ನಾಡು' ಸಹಿತವಾದ ಹೆಸರುಗಳು ಶಾಸನಗಳ ತುಂಬ ಸಿಕ್ಕುತ್ತವೆ. ಇವುಗಳಂತೆಯೇ 'ಕರುನಾಡು', 'ಕರ್‌ನಾಡು' ಎಂಬ ಹೆಸರಿನ ಕನ್ನಡ ಭೂಭಾಗವು ಇದ್ದಿರಬಹುದು. ನೃಪತುಂಗನು ಕನ್ನಡ ತಿರುಳನ್ನು ಗುರುತಿಸಿದ ನೆಲವು ಕಪ್ಪುನೆಲ. ಅಲ್ಲಿಗೆ 'ಕರ್‌ನಾಡು' ಎಂಬ ಹೆಸರು ಮೊದಲಾಗಿ, ಅನಂತರ ಅಲ್ಲಿಯ ಭಾಷೆಯನ್ನೇ (ನೃಪತುಂಗನ 'ಕನ್ನಡಂಗಳ'ನ್ನು) ಆಡುತ್ತಿದ್ದ ಜನಕ್ಕೆಲ್ಲ ಅದೇ ಹೆಸರು ಹರಡಿರಬಹುದು. ಅಥವಾ ನಮ್ಮ ನಾಡಿಗೆ ದಕ್ಷಿಣದಲ್ಲಿರುವ ನೆರೆಯವರಾದ ತಮಿಳರೇ ನಮ್ಮ ನಾಡನ್ನು 'ಕರುನಾಡು' ಎಂದು ಕರೆದಿರಬಹುದು...."

ಕರ್‌ನಾಡುವಿನಿಂದ ಕರ್‌ನಾಟ ಹುಟ್ಟಿ ಸ್ವಾರ್ಥದಲ್ಲಿ ಕ ಪ್ರತ್ಯಯ ಬಂದು 'ಕರ್ನಾಟಕ' ಆಗಿರುವುದು ಸಾಧ್ಯ. ಕರ್ನಾಟ, ಕರ್ನಾಟಕ ರೂಪಗಳು ಅಪಾಣಿನೀಯ ವೆಂದು, ಅದನ್ನು ಕರ್ಣಾಟ, ಕರ್ಣಾಟಕ ಎಂದು ಮಾಡಿಕೊಂಡಿರಬೇಕು; ಆಗ ಮೂಲಪದದ ಅರ್ಥ ಮರೆಯಾಗಿಯೋ ಗೊತ್ತಗದೆಯೋ 'ಪುನ್‌ನಾಟ'ವನ್ನು 'ಪುಂರಾಷ್ಟ್ರ'

ಎಂದು ಮಾಡಿಕೊಂಡಂತೆ ಕರ್ಣಾಟದ ನಿಷ್ಪತ್ತಿಯನ್ನು "ಕರ್ಣೇಷು ಅಟತಿ ಇತಿ ಕರ್ಣಾಟಃ" ಎಂದು ವಿವರಿಸಲು ಸ್ವಾಭಾವಿಕವಾಗಿ ಯತ್ನಿಸಿರಬಹುದು. ಪ್ರಯೋಗಗಳನ್ನು ನೋಡಿದರೆ, ನಕಾರಯುಕ್ತ ಕರ್ನಾಟಕವೂ ಣಕಾರಯುಕ್ತ ಕರ್ಣಾಟಕವೂ ಬಹುಕಾಲದಿಂದ ವಿಕಲ್ಪವಾಗಿ ಬಳಕೆಯಾಗಿರುವುದಕ್ಕೆ ಶಾಸನೋಕ್ತ ಉದಾಹರಣೆ ಗಳಿರುವುದರಿಂದ ಎರಡೂ ಗ್ರಾಹ್ಯವೇ. ಪ್ರಾಯಃ ಪ್ರಾಕೃತಪ್ರಭಾವದಿಂದ ಪ್ರಾಚೀನವಾದ ಪುನ್ನಾಡು ಪುನ್ನಾಟವಾದಂತೆ ಕರ್‌ನಾಡು ಕರ್ಣಾಟವಾಗಿರಬೇಕು.[೫೨]

ಈ ಮೇಲೆ ಕೆಲವು ಅಭಿಪ್ರಾಯಗಳನ್ನು, ಅವು ಪ್ರಕಟವಾದ ಕಾಲಾನು ಕ್ರಮವೇನನ್ನೂ ಅನುಸರಿಸದೆ, ಯಾದೃಚ್ಛಿಕವಾಗಿ ಕ್ರೋಢೀಕರಿಸಿದೆ ; ಸಾರಾಂಶಗಳನ್ನಷ್ಟೇ ಕೊಟ್ಟಿದೆ. ಇವನ್ನು ಪರಿಶೀಲಿಸಿದರೆ, ಕನ್ನಡ ದೇಶ ಹಾಗೂ ಭಾಷೆಗಳಿಗೆ ಕನ್ನಡ, ಕರ್ಣಾಟ(ಕ)/ ಕರ್ನಾಟ(ಕ) ಎಂಬ ಹೆಸರುಗಳು ಹೇಗೆ ಬಂದುವು - ಎನ್ನುವುದನ್ನು ಖಚಿತ ವಾಗಿ ಗೊತ್ತು ಮಾಡುವುದು ಇನ್ನೂ ಸಾಧ್ಯವಾಗದಿರುವುದು ಸ್ಪಷ್ಟವಾಗುತ್ತದೆ. ಒಂದೊಂದು ಸೂಚನೆಯಲ್ಲಿಯೂ ಏನಾದರೂ ಕುಂದುಕೊರತೆಗಳನ್ನು ಎತ್ತುವುದು ಸಾಧ್ಯವಿದೆ. ಆ ಸೂಚನೆಯನ್ನು ಕೊಟ್ಟವರು ಸಹ ಸಂದೇಹಗಳನ್ನು ವ್ಯಕ್ತಮಾಡಿರುವುದೂ ಇತರರ ಅಭಿಪ್ರಾಯಗಳನ್ನು ಉದ್ಧರಿಸಿರುವುದೂ ಆಗಾಗ ಕಂಡುಬಂದಿವೆ. ಆದ್ದರಿಂದ ಬಹುಜನ ಸಮ್ಮತವಾದ, ತೃಪ್ತಿಕರವಾದ ಅಭಿಪ್ರಾಯ ಈ ಸಮಸ್ಯೆಯ ವಿಷಯದಲ್ಲಿ ಇನ್ನೂ ದೊರೆತಿಲ್ಲ ಎನ್ನಬೇಕು.

ಹೀಗಿದ್ದು ಕೂಡ, ವಿದ್ವಾಂಸರು ನಡಸಿರುವ ವಿಚಾರಮಥನದಿಂದ, ಕೆಲವು ಅಂಶಗಳನ್ನು ಕುರಿತ ಹಾಗೆ ಅವರಲ್ಲಿ ಹೆಚ್ಚಿನವರ ನಡುವೆ ಒಂದು ರೀತಿಯಲ್ಲಿ ಸದೃಶಾಭಿಪ್ರಾಯವಿರುವಂತೆ ತೋರುವುದು. ಅದು ಹೀಗೆ :

(i) 'ಕನಾ(ಣಾ)ರ್(ಟಕ)' ಎಂಬ ಸಂಸ್ಕೃತಪದದ ಮೂಲ ದೇಶೀಯವಾದುದು. ದೇಶೀಯವಾದೊಂದು ಪದದಿಂದ ಆ ಸಂಸ್ಕೃತಪದ, ಅದರ ರೂಪಾಂತರಗಳು ಕಾಣಿಸಿಕೊಂಡಿವೆ. ಆ ದೇಶೀಯವಾದ ಪದ ಹಿಂದಿನಿಂದಲೂ ಪ್ರಚಲಿತವಾಗಿರುವ ಸಮಾನಾರ್ಥದ 'ಕನ್ನಡ' ಎಂಬುದರ ಯಾವುದಾದರೊಂದು ರೂಪವೇ ಆಗಿದೆ.

(ii) 'ಕನಾ(ಣಾ)ರ್ಟ(ಕ)'ವಾಗಲಿ 'ಕನ್ನಡ'ವಾಗಲಿ ಒಂದು ಸ್ವತಂತ್ರಶಬ್ದವಲ್ಲ, ಸಮಸ್ತ ಪದ. ಇಲ್ಲಿ ಪೂರ್ವಪದದ ವಿಷಯದಲ್ಲಿ ಸಂಶಯಗಳಿದ್ದರೂ ಉತ್ತರ ಪದ 'ನಾಡು' ಎಂಬುದರ ಜನ್ಯರೂಪವೆಂದು ಹೇಳಬಹುದು.

ಇಲ್ಲಿಗೆ ಅಭಿಪ್ರಾಯದ ಏಕತೆ ನಿಲ್ಲುತ್ತದೆ. 'ಕನಾ(ಣಾ)ರ್ಟ(ಕ)' ಹಾಗೂ 'ಕನ್ನಡ' ಈ ಸಮಸ್ತ ಪದಗಳ ಉತ್ತರ ಪದ 'ನಾಡು' ಎಂಬುದರ ಜನ್ಯರೂಪ ಎನ್ನುವುದಾದರೆ, ಪೂರ್ವಪದದ ಮೂಲರೂಪ ಏನಿರಬಹುದು? ಅದು ಕಪ್ಪು ಎಂಬರ್ಥದ 'ಕರ್' ಎಂಬ ಗುಣವಾಚಕ ಪ್ರಕೃತಿಯೋ, ಎತ್ತರ ಎಂಬರ್ಥದ 'ಕರು' ಎಂಬ ಗುಣವಾಚಕ ಪ್ರಕೃತಿಯೋ

ಆಗಿರಬೇಕು – ಎನ್ನುವುದರ ಕಡೆಗೆ ಹೆಚ್ಚು ಜನರ ಒಲವು ವ್ಯಕ್ತವಾಗಿದೆ. ಇದನ್ನು ಸ್ವಲ್ಪ ಪರಿಶೀಲಿಸಬೇಕಾಗುವುದು. ಮೊದಲು ಕರ್(<ಕರಿದು) + ನಾಡು ಎಂಬ ವಿಗ್ರಹವಾಕ್ಯದ ಬಗ್ಗೆ ನೋಡೋಣ :

ಕರ್ + ನಾಡು ಎಂಬ ಅರ್ಥದ ವಿಭಜನೆಯನ್ನು ಗುಂಡರ್ಟ್ ಮೊದಲುಮಾಡಿ ಈಚೆಗೆ ಕಾಲ್ಡ್‌ವೆಲ್, ಕಿಟ್ಟೆಲ್, ಫ್ಲೀಟ್, ರಘುನಾಥರಾವ್, ಬಿ.ಎಂ. ಶ್ರೀಕಂಠಯ್ಯ, ಎಂ.ಎಚ್. ರಾಮಶರ್ಮ, ತೀ.ನಂ. ಶ್ರೀಕಂಠಯ್ಯ, 'ಮರಾಠಿವ್ಯುತ್ಪತ್ತಿ ಕೋಶ'ಕಾರರಾದ ಕೃ.ಪಾ. ಕುಲಕರ್ಣಿ ಮೊದಲಾದ ಕೆಲವರು ಪುರಸ್ಕರಿಸಿದ್ದಾರೆ. ಕರ್ + ನಾಡು > ಕರ್ನಾಡು (ಕ.) > ಕರ್ಣಾಟ (ಸಂ) ಎಂದು ಸಂಸ್ಕೃತದಲ್ಲಿ ಶಬ್ದರೂಪದ ಬೆಳೆವಣಿಗೆಯನ್ನು ತೋರಿಸಲು ಸಾಧ್ಯ ; ಕರ್+ನಾಡು > ಕರ್ನಾಡು > ಕನ್ನಡ ಎಂಬುದು ಇನ್ನೊಂದು ಮುಖದ ಬೆಳೆವಣಿಗೆ ಎನ್ನಬಹುದು.

ಈ ಸಂಬಂಧವಾಗಿ ತೀ.ನಂ.ಶ್ರೀಕಂಠಯ್ಯನವರ ಒಂದು ಸೂಚನೆಯನ್ನು ಇಲ್ಲಿ ಉದ್ಧರಿಸುವುದು ಸೂಕ್ತ : "ಕನ್ನಡ ಎಂಬ ಹೆಸರಿನ ವಿಷಯವಾಗಿ ಹಲವು ನಿಷ್ಪತ್ತಿಗಳನ್ನು ಸೂಚಿಸಲಾಗಿದೆ. ಭಾಷಾದೃಷ್ಟಿಯಿಂದ, ಕಪ್ಪು ಮಣ್ಣಿನ ಭೂಮಿ ಎಂಬರ್ಥದ ಕರ್-ನಾಡು ಎಂಬುದು ಇದರ ಸುಸಂಭಾವ್ಯವಾದ ಮೂಲ. ಇದು ದೇಶ ಮತ್ತು ಭಾಷೆಗಳನ್ನು ಸೂಚಿಸುವ 'ಕರ್ಣಾಟ' ಎಂಬ ಸಂಸ್ಕೃತಶಬ್ದವಾಗಿ ರೂಪಾಂತರಗೊಂಡಿತು. 'ಕರ್ಣಾಟ' ಎಂಬುದರಿಂದ 'ಕನ್ನಡ' ಎಂಬ ರೂಪ ಅನಂತರದ ಸ್ವಾಭಾವಿಕವಾದ ಬೆಳೆವಣಿಗೆ"[೫೩].

ಈ ಬೆಳವಣಿಗೆಯನ್ನು ಎರಡು ರೀತಿಗಳಿಂದ ಊಹಿಸುವುದು ಸಾಧ್ಯವಿದೆ. ಅವು ಈ ರೀತಿಯಾಗಿವೆ :

(i) ಕರಿದು ನಾಡು =ಕರ್+ನಾಡು=ಕರ್ನಾಡು (ಕ) > ಕರ್ಣಾಟ (ಸಂ.)> ಕಣ್ಣಾಡ. (ಪ್ರಾ.) /ಕನ್ನಾಡ>ಕನ್ನಡ (ಕ.)

(ii) ಕರಿದು ನಾಡು=ಕರ್+ನಾಡು = ಕರ್ನಾಡು (ಕ.) > ಕರ್ಣಾಟ / ಕರ್ನಾಟ (ಸಂ.)> ಕಣ್ಣಾಡ/ಕನ್ನಾಡ (ಪ್ರಾ.)>ಕನ್ನಡ (ಕ.)

ಈ ನಿಷ್ಪತ್ತಿ ಬೆಳೆವಣಿಗೆಗಳಲ್ಲಿ ವಿಜಾತೀಯ ದ್ವಿತ್ವಗಳು ಸಜಾತೀಯ ದ್ವಿತ್ವಗಳಾಗಿ ಮಾರ್ಪಡುವ, ಅಂತರಾಳ ದೀರ್ಘವು ಹ್ರಸ್ವವಾಗಿ ಕುಗ್ಗುವ ಹಾಗೂ ಟ>ಡ ಆಗಿ ಪರಿವರ್ತನೆಗೊಳ್ಳುವ ತದ್ಭವಲಕ್ಷಣಗಳನ್ನು ಸುಲಭವಾಗಿ ಗುರುತಿಸಬಹುದು. ಉದಾ.ಗೆ ಪ್ರಸಾಧನ>ಪಸದನ, ಕರ್ಣಪೂರ>ಕನ್ನವುರ, ಮರ್ಕಟ>ಮಕ್ಕಡ, ಕಟಕ>ಕಡಗ, ತಟ>ದಡ ಇ. ತದ್ಭವಗಳನ್ನು ನೋಡಬಹುದು. ರೇಫೆಯ ಉಚ್ಚಾರದಲ್ಲಿ ದಂತ್ಯ ಮೂರ್ಧನ್ಯಗಳ ಲಕ್ಷಣ ಬೆರೆತಿರುವುದನ್ನು ಶಬ್ದಮಣಿ ದರ್ಪಣಕಾರನು "ಮೇಗಣ ಣ ಕಾರಂ ನ ಕಾರಮಪ್ಪುದರ್ಕೆ" ಎಂಬುದಾಗಿ ಹೇಳಿ (ಸೂ. ೨೭೯), ಕರ್ಣ್ಣಾಟಂ - ಕನ್ನಡಂ ಎಂದು ಪ್ರಯೋಗವನ್ನು ಸೂಚಿಸಿರುವ ರೀತಿಯಿಂದ ಒಂದು ರೀತಿಯಲ್ಲಿ ಊಹಿಸಬಹುದಾಗಿದೆ.

-ರ್ಣ್->- ಣ್ಣ್ - ಆಗುವುದೇ ಕನ್ನಡ ತದ್ಭವಗಳ ಸಾಮಾನ್ಯ ಲಕ್ಷಣವಾದರೂ -ರ್ಣ್->- ನ್ನ್-ಸಹ ಶಕ್ಯವೆಂಬುದು ಕರ್ಣಪೂರ>ಕನ್ನವುರದಂತಹ ಉದಾ.ಗಳಿಂದ ತಿಳಿಯುತ್ತದೆ (ತೆಲುಗಿನಲ್ಲಿಯಂತೂ ಈ ಲಕ್ಷಣದಲ್ಲಿ ಎರಡನೆಯ ಪರ್ಯಾಯವೇ ಬಹುಸಾಮಾನ್ಯ ವಾದುದು. ಉದಾ.ಗೆ. ವನ್ನ, ಸುನ್ನಮು ಇ.). ಈ ತದ್ಭವಕಾರ್ಯ, ಪ್ರಾಕೃತಭಾಷೆಯ ಮೂಲಕವಾಗಿ ಸಹ, ಬಹು ಹಿಂದೆಯೇ ಘಟಿಸಿರುವುದೂ ಶಕ್ಯವೇ. -ರ್ಣ್->-ಣ್ಣ್– ಎಂದಾಗುವುದು ಇಲ್ಲಿಯ ಸ್ವಾಭಾವಿಕ ತದ್ಭವಲಕ್ಷಣ ; ಆದರೆ-ರ್ಣ್->ನ್ನ್– ಎಂದಾಗುವುದಕ್ಕೆ ಸಾಹಿತ್ಯಿಕ ಪ್ರಮಾಣಗಳಿಗೆ ಕೊರತೆಯಿಲ್ಲ. ಕರ್ಣಾಟ>ಕಣ್ಣಾಡ (ಕಣ್ಣಾಲ ಸಹ ಉಂಟು) ಆಗುವಂತೆಯೇ 'ಕನ್ನಾಡ' ಎಂದೂ ಆಗುವುದು ಸಾಧ್ಯ ಎನ್ನುವುದನ್ನು 'ಭವಿಸ್ಸಯತ್ತ ಕಹಾ'ದ ನಿದರ್ಶನದಿಂದ ತಿಳಿಯಬಹುದು. ಕರ್ಣ>ಕಣ್ಣ>ಕನ್ನ, ಕರ್ಣವತಂಸ> ಕನ್ನಾಯಂಸ, ಕರ್ಣೋತ್ಪಲ>ಕಣ್ಣುಪ್ಪಲ, ಕಾನ್ಯಕುಬ್ಜ>ಕಣ್ಣ ಉಜ್ಜ/ಕನ್ನಉಜ್ಜ ಇತ್ಯಾದಿ ಉದಾಹರಣೆಗಳನ್ನು ಕೋಶಕಾರರು ತೋರಿಸಿದ್ದಾರೆ ('ಪಾಇಅ ಸದ್ದ ಮಹಣ್ಣವೋ', ಪು. ೨೭೭). ಆದ್ದರಿಂದ ಕರ್ಣಾಟ(ಸಂ.) > ಕಣ್ಣಾಡ/ಕನ್ನಾಡ (ಪ್ರಾ.) > ಕನ್ನಡ(ಕ) ಎಂದು ಕೂಡ ಬೆಳೆವಣಿಗೆಯನ್ನು ಗುರುತಿಸಬಹುದು. ಆದರೆ ಈ ಬೆಳೆವಣಿಗೆಯಲ್ಲಿ, ದೇಶ ಮತ್ತು ಭಾಷಾವಾಚಕವಾಗಿ ದೇಶ್ಯಶಬ್ದವಾದ 'ಕನ್ನಡ' ಎಂಬುದು ಮೊದಲು ರೂಪುಗೊಳ್ಳಲಿಲ್ಲವೆಂದೂ ಸಂಸ್ಕೃತಶಬ್ದ 'ಕರ್ಣಾಟ' ಎಂಬುದೇ ಮೊದಲು ರೂಪಗೊಂಡಿತೆಂದೂ ಭಾವಿಸಬೇಕಾದ ಒಂದು ವಿಲಕ್ಷಣ, ಸಂದಿಗ್ಧ ಪರಿಸ್ಥಿತಿ ಏರ್ಪಡುತ್ತದೆ. ಪರಿಹಾರ ಹೇಗೆ?

ಕನ್ನಡ ಶಬ್ದಕ್ಕೆ ದೇಶ್ಯಮೂಲವಾಗಿಯೇ ನಿಷ್ಪತ್ತಿ ಸಾಧ್ಯ ಎಂದು ಈಗಾಗಲೇ ತೋರಿಸಿದೆ. ಇದು ಸರಿಯಾದರೆ, ಕರಿದು ನಾಡು=ಕರ್+ನಾಡು >ಕರ್ನಾಡು > ಕನ್ನಡು> ಕನ್ನಡ ಎಂದು ಒಂದುರೀತಿ, ಕರಿದು ನಾಡು = ಕರ್+ ನಾಡು >ಕರ್ನಾಡು > ಕರ್ಣಾಟ/ ಕರ್ನಾಟ ಎಂದು ಇನ್ನೊಂದು ರೀತಿ, ಪ್ರತ್ಯೇಕವಾಗಿ ಬೆಳೆವಣಿಗೆಯನ್ನು ತೋರಿಸಬಹುದು. ಸಂಸ್ಕೃತ ಪ್ರಾಕೃತಗಳ ವ್ಯಾಕರಣಮರ್ಯಾದೆಯನ್ನು ಅನುಸರಿಸಿ, ಪುನ್ನಾಡು> ಪುನ್ನಾಡ> ಪುನ್ನಡ ಎಂದು ಒಂದು ಕಡೆ, ಪುನ್ನಾಡು>ಪುನ್ನಾಟ ಎಂದು ಇನ್ನೊಂದು ಕಡೆ (ರವಿದ್ದತನ ಕೊಮರಲಿಂಗಂ ಶಾಸನದಲ್ಲಿ 'ಏಕತ್ರ ಪುನ್ನಾಟ ರಾಜ ಸ್ಯಾಯನೋ' ಎಂದೂ 'ಪುನ್ನಾಡು ವಿಷಯೇ' ಎಂದೂ ಬಳಸಿದೆ) ರೂಪಾಂತರಗಳುಂಟಾಗಿವೆಯೆಂದು ಭಾವಿಸಲು ಶಕ್ಯವಾಗಿರುವಂತೆಯೇ ಇಲ್ಲಿಯೂ.

ಕರ್ಣಾಟಕ, ಕರ್ನಾಟಕಗಳಲ್ಲಿ ಕಾಣುವ 'ಕ' ಪ್ರತ್ಯಯ, ನ್ಯಾಯವಾಗಿ ಕರ್/ ಕರು+ನಾಡು+ಅಕಂ ಎಂಬ ನಿಷ್ಪತ್ತಿಗೆ ಅನುಗುಣವಾಗಿ ಶಬ್ದರೂಪವಿರುವುದರಿಂದ, ತಪ್ಪು ವಿಭಜನೆಯ ಫಲವಾದ್ದು ಎಂದು ಕೆಲವರು ಹೇಳಿದ್ದಾರೆ ; ಅಕಂ ಸ್ಥಾನ ಎಂದು ತಮಿಳು ಭಾಷೆಯ ಆಧಾರದಿಂದ ತಿಳಿಯುವುದೆಂದಿದ್ದಾರೆ. ಇನ್ನು ಕೆಲವರು ನಾಡು=ಪ್ರದೇಶ, ಅಕಂ=ಸ್ಥಾನ, ಪ್ರದೇಶ ಎಂದಾಗಿ, ಅನಾವಶ್ಯಕವಾಗಿ ದ್ವಿರುಕ್ತಿಗೆ ಅವಕಾಶ ಮಾಡುವುದೆಂದು ಇದನ್ನು ನಿರಾಕರಿಸಿ, "ಕರ್ಣಾಟ ಏವ ಕರ್ಣಾಟಕಃ, ಸ್ವಾರ್ಥೇ ಕ ಪ್ರತ್ಯಯಃ" ಎಂಬುದಾಗಿ

ಸಂಸ್ಕೃತವ್ಯಾಕರಣಮರ್ಯಾದೆಯಂತೆ ಕ ಪ್ರತ್ಯಯವನ್ನೇ ಒಪ್ಪಿದ್ದಾರೆ. 'ಕರ್ನಾಟ' ಸಂಸ್ಕೃತರೂಪವಾಗಿರುವಂತೆಯೇ, ಕ ಪ್ರತ್ಯಯ ಸಹಿತವಾದ 'ಕರ್ನಾಟ /ಕ' 'ಕರ್ನಾಟಕ'ವೂ ಸಂಸ್ಕೃತರೂಪವಾಗಿ, ಸ್ವಲ್ಪ ಈಚಿನ ಕಾಲದಲ್ಲಿ ಬಳಕೆಗೆ ಬಂದಿತೆಂದು ತಿಳಿದರೆ ತಪ್ಪಾಗಲಾರದು.

ಈ ಸಂದರ್ಭದಲ್ಲಿ ಆರನೆಯ ವಿಕ್ರಮಾದಿತ್ಯನ ನೀಲಗುಂದ ತಾಮ್ರಶಾಸನದಲ್ಲಿ ಬಂದಿರುವ (ಎಇ., xii, ಪು. ೧೫೩ ; ೧೦೮೭, ೧೧೨೩).

ವಿಖ್ಯಾತ ಕೃಷ್ಣವರ್ಣ್ಣೇ । ತೈಲಸ್ನೇಹೋಲಬ್ಧಸರಲತ್ವೇ
ಕುಂತಲವಿಷಯೇ ನಿತರಾಂ । ವಿರಾಜತೇ ಮಲ್ಲಿಕಾಮೋದಃ ॥

- ಎಂಬ ಆರ್ಯೆಯ ಆಶಯವನ್ನು ವಿವರಿಸುವಾಗ, "ವೇರ್ಣಾ (>ವರ್ಣ) ನದಿ ಸಂಗಮಿಸುವ ಕೃಷ್ಣಾನದಿಗಾಗಿ ಪ್ರಸಿದ್ಧವಾಗಿರುವ ಕುಂತಲವಿಷಯ" ಎಂದು ಅರ್ಥಮಾಡಲಾಗುವಂತೆ, "ಫಲವತ್ತಾದ ಕಪ್ಪುನೆಲಕ್ಕಾಗಿ ಪ್ರಸಿದ್ಧವಾಗಿರುವ ಕುಂತಲ ವಿಷಯ" ಎಂದೂ ಅರ್ಥಮಾಡಲು ಸಾಧ್ಯವಿದೆಯೆಂಬ ಫ್ಲೀಟ್ ಅವರ ಅಭಿಪ್ರಾಯವನ್ನು ಬಾರ್ನೆಟ್ ಅವರು ಉದ್ಧರಿಸಿದ್ದಾರೆ. ಕವಿ ಈ ಪದ್ಯದಲ್ಲಿ ಶ್ಲೇಷೆಯ ಮೂಲಕ,, ಇಂಥ ಅರ್ಥವನ್ನಿಟ್ಟಿರುವ ಸಾಧ್ಯತೆಯೇನೋ ಇದೆ. ಆದರೆ ಅರ್ವಾಚೀನವಾದ ಈ ಒಂದೇ ಆಧಾರದಿಂದ ಪ್ರಾಚೀನವೂ ಪ್ರಚುರವೂ ಆದ ಪದದ ನಿಷ್ಪತ್ತಿಯನ್ನು ಕರ್+ನಾಡು ಎಂದು ಹೇಗೆ ಹೇಳುವುದು? ಪೂರ್ವೋಕ್ತ ಪದ್ಯವನ್ನುದ್ಧರಿಸಿ ವಿಚಾರ ಮಾಡಿರುವ ರಾಯ್‌ಚೌದುರಿ ತಮ್ಮ ಸಮ್ಮತಿಯನ್ನು ಸೂಚಿಸಿದ್ದಾರೆ.[೫೪] ಕ್ರಿ.ಶ. ೫ ರಿಂದ ೯ನೆಯ ಶತಮಾನದ ಆದಿಭಾಗದವರೆಗೆ ದೊರೆಯುವ ಸಮಕಾಲೀನದಾಖಲೆಗಳಿಂದ ಅಂದಿನ ಕರ್ನಾಟಕ ಉತ್ತರಕನ್ನಡ, ಧಾರವಾಡ ಮತ್ತು ಬಿಜಾಪುರ ಜಿಲ್ಲೆಗಳು, ರಾಯಚೂರು ಗುಲ್ಬರ್ಗ ಜಿಲ್ಲೆಗಳು ಸೇರಿದ್ದ ಭಾಗ 'ಕರ್ನಾಟ'ವಾಗಿತ್ತೆಂದು ಅವರು ತಿಳಿದಿರುವುದನ್ನು ಲಕ್ಷಿಸಿದರೆ, ಎರೆಮಣ್ಣಿನ ಭೂಮಿ ಅಥವಾ ಕಪ್ಪುನೆಲ ಈ ಭಾಗದಲ್ಲಿಯೇ ಹೆಚ್ಚಾಗಿ ಕಾಣಿಸುವುದರಿಂದ, ಈ ರೀತಿಯ ಅರ್ಥ ನಿಷ್ಪತ್ತಿಗಳಿಗೆ ದೃಢವಾದ ಆಧಾರ ದೊರೆಯುವಂತೆ ತೋರುತ್ತದೆ. ಉತ್ತರದಲ್ಲಿ ಮಲಪ್ರಭಾ ಮತ್ತು ಕೃಷ್ಣೆಗಳು, ಪಶ್ಚಿಮದಲ್ಲಿ ಘಟ್ಟಗಳು, ಪೂರ್ವದಲ್ಲಿ ವೇದಾವತಿ - ಇವುಗಳ ನಡುವೆ ಹಬ್ಬಿದ್ದ, ಎಂದರೆ ಈಗಿನ ಬಳ್ಳಾರಿ, ಚಿತ್ರದುರ್ಗ, ಧಾರವಾಡ ಮತ್ತು ಮುದ್ಗಲ್ಲುಗಳನ್ನು ಒಳಕೊಂಡಿದ್ದ ಸೀಮೆಯ ಭೂಗುಣಕ್ಕೆ ಅನುಗುಣವಾಗಿ ಕರ್+ನಾಡು>ಕರ್ನಾಟ (ಸಂ.) ಆಯಿತೆಂದು ಅಭಿಪ್ರಾಯುವಾಗುವಂತೆ ಎಂ.ಎಚ್. ರಾಮಶರ್ಮರೂ ಬರೆದಿದ್ದಾರೆ ಎಂಬುದನ್ನು ನೆನೆಯಬೇಕು.[೫೫] ಸು. ೮ನೆಯ ಶತಮಾನದ ದಂತಿದುರ್ಗನ ಸಾಮನ್‌ಗಡ ತಾಮ್ರ ಶಾಸನದಲ್ಲಿ ಬಾದಾಮಿ ಚಾಲುಕ್ಯರ ದೊರೆ ಇಮ್ಮಡಿ ಕೀರ್ತಿವರ್ಮನ ಸೇನೆಯನ್ನು ದಂತಿದುರ್ಗನು 'ಕರ್ಣಾಟಕ ಬಲ' ಎಂದು ಕರೆದಿರುವುದರಿಂದ ಬಾದಾಮಿ ಚಾಲುಕ್ಯರು ಆಗ್ಗೆ ಆಳುತ್ತಿದ್ದ ಬಾದಾಮಿ (=ವಾತಾಪಿ) ಮತ್ತು ಸುತ್ತಮುತ್ತಣ ಸೀಮೆ 'ಕರ್ಣಾಟ'ವೆನಿಸಿತ್ತು ಎಂದು ಹೇಳಬೇಕು. ಅನಂತರದ

ಕಾಲಗಳಲ್ಲಿ ಕರ್ನಾಟಕ, ಕನ್ನಡ ಶಬ್ದಗಳವ ಸೀಮಾವ್ಯಾಪ್ತಿ ಉಳಿದ ದಕ್ಷಿಣ ಭಾಗಗಳಿಗೆ ಸಹ ಹಬ್ಬಿರುವುದು ಸಾಧ್ಯ.

ಆರ್. ನರಸಿಂಹಾಚಾರ್ಯ, ಮುಳಿಯ ತಿಮ್ಮಪ್ಪಯ್ಯ ಮುಂತಾದವರು ಈ ನಿಷ್ಪತ್ತಿಯನ್ನು ಒಪ್ಪಿಲ್ಲ; ಕನ್ನಡದ ಕೆಲವು ಜಿಲ್ಲೆಗಳು ಕಪ್ಪುನೆಲದಿಂದ ಕೂಡಿದ್ದು ನಿಜವೇ ಆದರೂ, ಕಪ್ಪುಮಣ್ಣಿನ ನೆಲವಲ್ಲದ ಭಾಗಗಳೂ ಬಹುವಾಗಿರುವುದೆಂದು ಬಿ.ಎಸ್. ವೆಂಕಟರಾಮಯ್ಯ, ಎನ್. ರಾಮಶಾಸ್ತ್ರಿ, ಸಿ.ಎನ್. ಸೀತಾರಾಮಶಾಸ್ತ್ರಿ, ಶಂ.ಬಾ.ಜೋಶಿ ಮುಂತಾದ ಕೆಲವರು ವಾದಿಸಿ, ಇದನ್ನು ತಾವೂ ನಿರಾಕರಿಸಿರುವುದುಂಟು.[೫೬] ಆದರೆ ಹೀಗೆ ವಾದಿಸಿರುವವರು ದಕ್ಷಿಣ ಕರ್ನಾಟಕದ ಅದರಲ್ಲಿಯೂ ವಿಶೇಷವಾಗಿ ಹಳೆಯ ಮೈಸೂರು ಪ್ರಾಂತದ - ಭೂಲಕ್ಷಣವನ್ನು, ಎಂದರೆ ಅದು ಕೆಂಪು ನೆಲ (ಮಸಾರೆ ಭೂಮಿ)ವಾಗಿರುವುದನ್ನು, ಲಕ್ಷಿಸಿ 'ಕರ್ಣಾಟಕ' ಶಬ್ದದ ನಿಷ್ಪತ್ತಿಯನ್ನು ಕುರಿತಿರುವುದು ಸಾಮಾನ್ಯವಾಗಿ ಕಾಣುತ್ತದೆ. ಇದು ನಿರಾಧಾರವಾದ ಹಿಂಜರಿಕೆಯೆಂಬುದನ್ನು, ಈ ಮೇಲೆ ಹೇಳಿದ ಕೆಲವು ಆಧಾರಗಳ ಅವಲಂಬನದಿಂದ ಕಂಡುಕೊಳ್ಳಬಹುದಾಗಿದೆ. ಪ್ರಸ್ತುತ, ವಿದ್ವಾಂಸರ ವಿಶ್ವಾಸಗಳಿಸಿರುವ ನಿಷ್ಪತ್ತಿಗಳೆಲ್ಲೆಲ್ಲ ಇದಕ್ಕೆ ಹೆಚ್ಚು ಪ್ರಾಮುಖ್ಯವಿರುವಂತೆ ತೋರುತ್ತದೆ; ಇದು ಕೆಲಮಟ್ಟಿಗೆ ಸಮರ್ಥನೀಯವೂ ಆಗಿದೆ.

ಈಗ ಕರು+ನಾಡು ಎಂಬ ವಿಗ್ರಹವಾಕ್ಯವನ್ನು ಎತ್ತಿಕೊಳ್ಳೋಣ. ಇಲ್ಲಿ 'ಕರು' ಎಂಬ ಪೂರ್ವಪದದ ಅರ್ಥ ಎತ್ತರ, ದೊಡ್ಡ, ವಿಶಾಲ, ಮಹಾ ಎಂದಾಗಿದೆ ಎಂಬುದರಿಂದ, ಎತ್ತರವಾದ ನಾಡು ಇಲ್ಲವೆ ವಿಶಾಲವಾದ ನಾಡು ಎಂಬುದನ್ನು 'ಕರುನಾಡು' ಎಂಬ 'ಕರ್ನಾಟ' ಪದದ ಮೂಲರೂಪ ಕೊಡಲು ಶಕ್ಯವಾಗಿದೆ. ತಮಿಳಿನಲ್ಲಿ 'ಕರುಮೈ' ಎಂಬ ನಾಮವಾಚಕ ಗಟ್ಟಿತನ, ಹಿರಿತನ ಎಂಬ ಅರ್ಥಗಳಲ್ಲಿದೆ.[೫೭] ಈ ಪದದ ವಿಶೇಷಣರೂಪವಾದ 'ಕರು' ಕನ್ನಡದಲ್ಲಿ ಸ್ವತಂತ್ರರೂಪದಲ್ಲಿ ಅಷ್ಟು ಪ್ರಚಲಿತವಿರದಿದ್ದರೂ ಕರುಮಾಡ (=ಉಪ್ಪರಿಗೆ, ಮಹಡಿ), ಕರುವಗೆಯ್ (=ದಿಣ್ಣೆಯ ಹೊಲ), ಕರುವಗಟ್ಟಿ (=ಎತ್ತರವಾದ ಗದ್ದೆ,), ಕರುವವನೆ (= ದೊಡ್ಡ ಮನೆ) ಎಂಬ ಸಮಾಸರೂಪಗಳಲ್ಲಿ ಪ್ರಾಚೀನಶಾಸನಗಳಲ್ಲಿಯೂ ಗ್ರಂಥಗಳಲ್ಲಿಯೂ ಕಂಡುಬರುತ್ತಿದೆ.[೫೮] ಆದ್ದರಿಂದ ಕರುನಾಡು ಎಂದರೆ ಎತ್ತರವಾದ ನಾಡು ಅಥವಾ ತಮಿಳುಭಾಷೆಯ 'ಕರುಮೈ' ಶಬ್ದದ ಅರ್ಥಚ್ಛಾಯೆಯನ್ನು ಗಮನಿಸಿ ಹೇಳುವುದಾದರೆ ಗಟ್ಟಿಯಾದ, ಉತ್ಕೃಷ್ಟವಾದ, ವಿಶಾಲವಾದ ಎಂಬವುಗಳಲ್ಲಿ ಯಾವುದಾದರೊಂದು ಅರ್ಥವನ್ನು ಕೊಡುವ ನಾಡು ಎಂದಾಗಬಹುದು.

ಕರು=ಎತ್ತರವಾದ್ದು ಎನ್ನುವುದು ಒಂದು ಪಕ್ಷ, ಕರು=ವಿಶಾಲವಾದ್ದು ಎನ್ನುವುದು ಇನ್ನೊಂದು ಪಕ್ಷ. ಇವುಗಳಲ್ಲಿ ಮೊದಲನೆಯ ಪಕ್ಷವನ್ನು ಹಟ್ಟಿಯಂಗಡಿ ನಾರಾಯಣ ರಾಯರು ಮೊದಲಲ್ಲಿ ಪುರಸ್ಕರಿಸಿದವರು. ರಾಜಮಹೇಂದ್ರದ ತಾತಾಚಾರ್ಯರ ನಿರೂಪಣೆಯ ಒಂದು ಭಾಗ ಸಹ ಇದೇ ಪಕ್ಷದಲ್ಲಿ ಬರುವುದಾಗಿದೆ. ತ್ರಿವೇಂದ್ರಂನ

ಕೆ.ಜಿ. ಶೇಷ ಅಯ್ಯರ್ ಕಪ್ಪುಸೀಮೆಯೆಂಬ ವಿವರಣೆಯನ್ನೊಪ್ಪದೆ, ತಮಿಳಿನಲ್ಲಿ ಈಗಲೂ ಸಹ 'ಕರುನಾಡು' ಎಂದರೆ 'ಎತ್ತರವಾದ ನಾಡು' ಎಂದಾಗುವುದರಿಂದ, ಕನ್ನಡಿಗರ ನಾಡಿನ ಭೌಗೋಳಿಕ ಲಕ್ಷಣಕ್ಕೆ ಅದು ಹೊಂದುವುದರಿಂದ, ಎಂದರೆ ಕನ್ನಡನಾಡು ಪ್ರಸ್ಥಭೂಮಿಯಾಗಿರುವುದರಿಂದ, ಈ ನಿಷ್ಪತ್ತಿಯನ್ನೇ ಒಪ್ಪಬೇಕೆಂದಿದ್ದಾರೆ. ನಾರಾಯಣ ರಾಯರು ಇವರ ಅಭಿಪ್ರಾಯವನ್ನು ಒತ್ತಾಸೆಯಾಗಿ ಗ್ರಹಿಸಿಯೂ ಇದ್ದಾರೆ. ವಿಂಧ್ಯದ ದಕ್ಷಿಣಕ್ಕಿರುವ, ಗೋದಾವರಿಯಿಂದ ಕಾವೇರಿಯವರೆಗೆ ವ್ಯಾಪಿಸಿರುವ, ದಕ್ಷಿಣದ ಭಾಗದ ತಪ್ಪಲುಪ್ರದೇಶಕ್ಕೆ ಒಪ್ಪುವಂಥದಾಗಿದೆ, ಪ್ರಾಥಮಿಕಸ್ಥಿತಿಯ ಜನಾಂಗದವರಿಂದ ನಾಡಿಗೆ ಸಹಜವಾಗಿ ಬರುವಂಥ ಹೆಸರಾಗಿದೆ, ಕನ್ನಡ ಮತ್ತು ಕರ್ಣಾಟ ಎಂಬೆರಡು ರೂಪಗಳಿಗೂ ಎಡೆಮಾಡಿಕೊಂಡುವಂಥದಾಗಿದೆ - ಎನ್ನುವ ಕಾರಣಗಳನ್ನು ಹೇಳಿ, ಪ್ರ.ಗೋ. ಕುಲಕರಣಿಯವರು ಸಹ ಇದನ್ನು ಮಾನ್ಯಮಾಡಿದ್ದಾರೆ. ಮಹಾಭಾರತದ ಪರಿಷ್ಕೃತ ಮುದ್ರಣದಲ್ಲಿ, ಭೀಷ್ಮ ಪರ್ವದ ೯-೫೯ರ ಶ್ಲೋಕದಲ್ಲಿ 'ಕರ್ಣಾಟಕ' ಎಂಬ ಪ್ರಚಲಿತಪಾಠದಿಂದ ಬೇರೆಯಾಗಿ 'ಉನ್ನತ್ಯಕಾ' ಎಂದು ಇರುವ ಪಾಠವನ್ನು ಲಕ್ಷಿಸಿ, ರಂ.ಶ್ರೀ. ಮುಗಳಿಯವರು, "ನಿಜವಾಗಿ 'ಕರ್ಣಾಟಕ'ಕ್ಕೆ 'ಉನ್ನತ್ಯಕ' ಇದು ಪರ್ಯಾಯ ಪದವೆಂದೇ ತೋರುತ್ತದೆ. ಉನ್ನತವಾದ ತಪ್ಪಲುಸೀಮೆಯಲ್ಲಿ ಇರುವುದೇ ಉನ್ನತ್ಯಕವೆಂಬ ಹೆಸರಿನ ದೇಶ. ಕರ್ನಾಟಕವು ಭೌಗೋಲಿಕವಾಗಿ ತನ್ನ ಬಹುಭಾಗದಲ್ಲಿ ಈ ಲಕ್ಷಣವನ್ನು ಹೊಂದಿದೆ. ಈ ಅಭಿಪ್ರಾಯವು ಸರಿಯಾಗಿದ್ದಲ್ಲಿ ಕರುನಾಡು ಅಂದರೆ ಎತ್ತರದ ಪ್ರದೇಶ ಎಂಬ ಮೂಲದಿಂದ ಕರ್ನಾಟಕ ನಿಷ್ಪನ್ನವಾಗಿರಬೇಕೆಂಬುದಕ್ಕೆ ಇಲ್ಲಿ ಪ್ರಮಾಣ ದೊರೆಯುತ್ತದೆ. ಸದ್ಯ ಇದೊಂದು ಊಹೆ ಮಾತ್ರ ಎಂದು ಒಪ್ಪಬೇಕು"- ಎಂಬುದಾಗಿ ತಿಳಿಸಿದ್ದಾರೆ.[೫೯] ಈಚೆಗೆ ಸೇಡಿಯಾಪು ಕೃಷ್ಣಭಟ್ಟರು 'ತುಳು' ಶಬ್ದಾರ್ಥ ವಿವೇಚನೆಯನ್ನು ನಡಸುವಾಗ, ಪ್ರಾಸಂಗಿಕವಾಗಿ ಕರ್ಣಾಟ(ಕ) ಶಬ್ದದ ನಿಷ್ಪತ್ತಿಯನ್ನು ಸ್ವಲ್ಪ ಮಟ್ಟಿಗೆ ಪ್ರಸ್ತಾಪಮಾಡಿ, ".....ನಮ್ಮನಾಡು 'ಕರುನಾಡು' ಎಂದರೆ ಎತ್ತರದ ನಾಡು (ಪೀಠಭೂಮಿ) ಅಥವಾ ದೊಡ್ಡನಾಡು (ಕರು-ಎತ್ತರ, ದೊಡ್ಡ ಇತ್ಯಾದಿ- ಕಿಟ್ಟೆಲ್) ಎಂಬ ಕಾರಣದಿಂದಲೇ 'ಕರುನಾಡಗ' (ತಮಿಳು), ಕರ್ಣಾಟ-ಕರ್ಣಾಟಕ (ಸಂಸ್ಕೃತ) ಎಂದು ಪುರಾತನ ಕಾಲದಲ್ಲಿಯೇ" ಹೆಸರಾಗಿದೆಯೆಂದು ಅಭಿಪ್ರಾಯ ಪಟ್ಟಿದ್ದಾರೆ.[೬೦]

ಇನ್ನೂ ಈಚೆಗೆ ಕರ್ನಾಟಕ ಇತಿಹಾಸದ ತಮಿಳು ಆಕರಗಳ ಬಗೆಗೆ ವಿವೇಚಿಸುತ್ತ ಕೆ.ಜಿ. ಕೃಷ್ಣನ್ ಅವರು ತಮ್ಮ ಅಭಿಪ್ರಾಯವನ್ನು ಹೀಗೆ ಪ್ರಕಟಿಸಿದ್ದಾರೆ: "ಇಂದು ಉಚ್ಚರವಾಗುತ್ತಿರುವ 'ಕರ್ಣಾಟಕ' ಎಂಬ ಹೆಸರಿನ ರೂಪ, ಪ್ರಸಿದ್ಧ ತಮಿಳು ಮಹಾಕಾವ್ಯವಾದ ಶಿಲಪ್ಪದಿಗಾರಂನಲ್ಲಿ ತೋರುತ್ತಿರುವ 'ಕರುನಾಡು' ಎಂಬ ಅದರ ಸಂಭಾವ್ಯಮೂಲರೂಪದಿಂದ ಬೇರೆಯೇ ಆಗಿದೆ. 'ಕರುನಾಡು' 'ಕರ್ಣಾಟಕ' ಎಂಬುದಾಗಿ ಪರಿವರ್ತಿಸಿರುವುದು, ದ್ರಾವಿಡಮೂಲಶಬ್ದದ ಸಂಸ್ಕೃತೀಕರಣವಿಧಾನಕ್ಕೆ - ತತ್ಫಲವಾಗಿ ಅದರ ಮೂಲಾರ್ಥ ಕಳಚಿಹೋಗಿದೆ - ವಿಶಿಷ್ಟವಾದುದು. ಕರು ಎಂದರೆ 'ಎತ್ತರ', ನಾಡು ಎಂದರೆ 'ದೇಶ'. ಈ ಪ್ರದೇಶದ ಭೌಗೋಳಿಕ ಲಕ್ಷಣ, ಅದು ತಮಿಳುನಾಡು

ಆಂಧ್ರಗಳ ಬಯಲುಸೀಮೆಯಿಂದ ದಿಟವಾಗಿ ಎತ್ತರದಲ್ಲಿದ್ದು, ಪ್ರಸ್ಥಭೂಮಿ ಎನ್ನುವಂತಾಗಿರುವುದನ್ನು ತೋರಿಸುತ್ತದೆ. ತಕ್ಷಣದ ಸ್ವಾಭಾವಿಕವಾದ ಅರ್ಥ 'ಕಪ್ಪು' ಎನ್ನುವುದು ಈ ಪ್ರದೇಶದ ಭೌಗೋಳಿಕರೀತಿಗೆ ಪೂರ್ತಿ ಅನ್ವಯಿಸುವಂತೆ ತೋರುವುದಿಲ್ಲವಾದ್ದರಿಂದ, ಮೇಲಿನ ಅರ್ಥವನ್ನು ಇಲ್ಲಿ ಪುರಸ್ಕರಿಸಿದೆ."[೬೧]

ಕರು=ವಿಶಾಲವಾದುದು, ಮಹತ್ತಾದುದು ಎನ್ನುವುದು ಇನ್ನೊಂದು ಪಕ್ಷವೆಂದು ಹೇಳಿತಷ್ಟೆ, ಈ ಪಕ್ಷವನ್ನು ಎಂ. ಗೋವಿಂದ ಪೈ ಅವರು ಸವಿಸ್ತಾರವಾಗಿ ಪ್ರಸ್ತಾಪಿಸಿದ್ದಾರೆ. ಬಹಳ ಹಿಂದೆಯೇ ರಾ.ಹ. ದೇಶಪಾಂಡೆಯವರೂ ಎ. ಮಾಸ್ಟರ್ ಅವರೂ ಇದನ್ನು ತಮ್ಮ ಟಿಪ್ಪಣಿಗಳಲ್ಲಿ ಸೂಚಿಸಿದ್ದರು. ಬಿ.ಎ. ಸಾಲೆತೊರೆ ಸಹ ಈ ಪಕ್ಷವನ್ನು ಸಮರ್ಥಿಸುವವರೇ, ಪೈ ಅವರ ವಿವೇಚನೆಯಲ್ಲಿ ಕರ್‌ನಾಡು>ಕರ್ನಾಡು>ಕರ್ಣಾಟ (=ದೊಡ್ಡ ದೇಶ) ಎಂಬ ನಿಷ್ಪತ್ತಿಯ ಜೊತೆಗೆ ಕರು(ರ್)ನಾಡು>ಕರ್ಣಾಟ = ಮಹಾರಾಷ್ಟ್ರ (ಮರಾಠರ ಸೀಮೆ) ಎಂಬ ಅರ್ಥವಿವರಣೆಯೂ ಸೇರಿದೆ. 'ಕರ್‌ನಾಡು' ರೂಪವೇ ರೇಫವನ್ನು ಬಿಡಿಸಿ ಉಚ್ಚರಿಸುವ ತಮಿಳಿನಲ್ಲಿ 'ಕರುನಾಡು' ಆಗಿದೆಯೆಂದು ಅವರು ಗ್ರಹಿಸಿದ್ದಾರೆ. ಅಧಿಕಾರ್ಥವನ್ನು ಹೇಳುವ ಕರು. ಕರಂ ಇವು ಹಿಂದೆ 'ಕರ್'ಎಂಬ ಮೂಲರೂಪದಲ್ಲಿದ್ದು, 'ನಾಡು' ಪದದೊಂದಿಗೆ ಕೂಡಿ, ಕರ್ನಾಡು > ಕರ್ಣಾಟ ಆಗಿರುವುದೆಂದು ಅವರ ಭಾವನೆ.

ದೇಶಪಾಂಡೆಯವರ ಸೂಚನೆಗಳು ಹೀಗೆ : (i) "ಕರು ಎಂದರೆ ದೊಡ್ಡ, ವಿಸ್ತೀರ್ಣ, ಮಹತ್; ಕರುನಾಡು ಅಂದರೆ ಮಹಾರಾಷ್ಟ್ರ, ದೊಡ್ಡ ದೇಶ, ಪ್ರಸಿದ್ಧವಾದ ದೇಶ, ಹರವಾದ ಮತ್ತು ಹೆಸರಾದ ನಾಡು.... ಕರ್ನಾಟಕ ಶಬ್ದದ ಅರ್ಥವು ದೊಡ್ಡ ದೇಶ, ಮಹಾರಾಷ್ಟ್ರ ಎಂದು ಇರುವುದರಿಂದ ಇದರೊಳಗೆ ಆಂಧ್ರ ದ್ರಾವಿಡ ಪ್ರದೇಶಗಳೂ ಮರಾಟಸೀಮೆಯೂ ಒಂದು ಕಾಲದಲ್ಲಿ ಅಡಕವಾಗಿದ್ದುವೆಂದು ತೋರುತ್ತದೆ". (ii) ೧. ಕರ್ನಾಟಕ (ಕರು=ಮಹಾ+ನಾಡು=ರಾಷ್ಟ್ರ+ಅಕ) = ಮಹಾರಾಷ್ಟ್ರ, ೨. ಗುಜರಾತ, ೩. ಕೋಶಲ ಕಲಿಂಗ ರಾಜ್ಯ ಇವೇ ಮೂರು ಮಹಾರಾಷ್ಟ್ರಕಗಳಾಗಿದ್ದುವೆಂದು ತೋರುತ್ತದೆ. ಕೊಂಕಣವು ಕರ್ನಾಟಕದಲ್ಲಿ ಸೇರಿತ್ತು. ಈಗಿನ ಮರಾಠ ನಾಡು ಕರ್ನಾಟಕ ಗುಜರಾತುಗಳಲ್ಲಿ ಅಂತರ್ಧಾನವಾಗಿತ್ತೆಂದು ತೋರುತ್ತದೆ...."[೬೨]

ಎ. ಮಾಸ್ಟರ್ ಅವರ ವಿವರಣೆ : ಕರು ಎಂದರೆ ಎತ್ತರ ಎಂದು ಮಾತ್ರವಲ್ಲದೆ ಮಹಾ ಎಂದೂ ಆಗುತ್ತದೆ. ದಖಿನ್ ದಿಣ್ಣೆ ನೆಲದ ಉತ್ತರಭಾಗದ ನಿವಾಸಿಗಳು, ಪ್ರಾಕೃತ ಭಾಷೆಯಾಡುವವರು. ತಾವು ಹೊರಟುಬಂದ ಪ್ರದೇಶದ ಹೆಸರನ್ನು ಹೇಳಲು, ಕರುನಾಡು ಎಂಬುದನ್ನೇ ಮಹಾರಾಟ್ಠ ಅಥವಾ ಮಾರಟ್ಠ ಎಂದು ಸರಳವಾಗಿ ಅನುವಾದಿಸಿದರು. ಕ್ರಿ.ಪೂ.ಸು. ೨೩೦ರಲ್ಲಿ ನರ್ಮದೆಯವರೆಗೆ ಹಬ್ಬಿದ್ದ ಆಂಧ್ರಸಾಮ್ರಾಜ್ಯ ಇದರ ಸಂಸ್ಕೃತ ರೂಪ 'ಮಹಾರಾಷ್ಟ್ರ' ಎಂಬುದನ್ನು ಬಳಿಕ ಜನಪ್ರಿಯಗೊಳಿಸಿರಬೇಕು, ದೃಢಗೊಳಿಸಿರಬೇಕು.[೬೩]

ಪೈ ಅವರು ಅನಂತರದ ವಿವೇಚನೆಯಲ್ಲಿ, ಈ ಚಾರಿತ್ರಿಕ ಸಂದರ್ಭಗಳನ್ನು ಇನ್ನಷ್ಟು ವಿಶದಪಡಿಸುತ್ತ, ಮಹಾರಾಷ್ಟ್ರವೂ ಕರ್ನಾಟಕವೂ ಒಂದೇ ರಾಜ್ಯದ ಭಿನ್ನ ನಾಮಗಳೆಂಬುದನ್ನು ತೋರಿಸುವ ಪ್ರಯತ್ನ ಮಾಡಿದ್ದಾರೆ. ಸಾಲೆತೊರೆಯವರು "ಕನ್ನಾಡು ಅಥವಾ ಕರ್ನಾಡು ಎಂಬ ಪದದ ಮೂಲ ಅರ್ಥ, 'ಒಂದು ಮಹಾನಾಡು', 'ಒಂದು ಎತ್ತರವಾದ ನಾಡು' ಆಗಿದ್ದು, ಅದನ್ನು ಸಂಸ್ಕೃತಕ್ಕೆ ತಿರುಗಿಸಿದಾಗ ಅದು 'ಮಹಾರಾಷ್ಟ್ರ'ವಾಗಿ ಆದುದು ಅಸಂಭವವಲ್ಲ" ಎಂದು ಭಾವಿಸಿ, ಪ್ರಾಯಃ ಇದೇ ಅರ್ಥದಲ್ಲಿಯೇ, ಪುಲಕೇಶಿಯ ಐಹೊಳೆ ಶಾಸನದಲ್ಲಿ ಮಹಾರಾಷ್ಟ್ರ ಕತ್ರಯವನ್ನು ಕುರಿತಿದೆ ಯೆಂದಿದ್ದಾರೆ.[೬೪] "ಹ್ಯೂಯೆನ್‌ತ್ಸಾಂಗನು ಪುಲಕೇಶಿಯ ವಾಸಸ್ಥಾನವನ್ನು ಹೇಳುವಾಗ ಮಹಲವ್ (=ಮಹಾರಾಷ್ಟ್ರ) ದೇಶವೆಂದು ಹೇಳಿದ್ದಾನೆ. ಪುಲಕೇಶಿಯು ಕರ್ನಾಟಕದಲ್ಲಿದ್ದವನೇ ಹೊರಟು ಮಹಾರಾಷ್ಟ್ರದಲ್ಲಿ ಎಂದೂ ಇರಲಿಲ್ಲ. ಆದುದರಿಂದ ಆತನು ಹೇಳುವ 'ಮಹಲವ್' ಎಂಬುದು ಕರ್ನಾಟಕವೇ ಹೊರತು ಬೇರೆಯಾಗಲಾರದು. 'ಕರುನಾಡು' ಎಂಬುದಕ್ಕೆ 'ಮಹತ್ತಾದ ರಾಷ್ಟ್ರ, ಕಾಂತಿಯುಕ್ತ ದೇಶ, ಪ್ರತಿಭಾಶಾಲಿಗಳ ದೇಶ' ಎಂದೂ ಅರ್ಥವಾಗಿ ಮೇಲಿನ ಅಂಶವು ಸಂಗತವಾಗುವುದು" ಎಂದು ಜಿ.ಪಿ. ರಾಜರತ್ನಂ ಅದಕ್ಕೆ ಪೋಷಕವಾಗಿಯೇ ಅಭಿಪ್ರಾಯ ಪಟ್ಟಿದ್ದಾರೆ.[೬೫]

ಇಲ್ಲಿ ಕರುನಾಡು=ಮಹಾರಾಷ್ಟ್ರ ಈ ಸಮೀಕರಣದ ಚಾರಿತ್ರಿಕತೆ ಅಷ್ಟೇನೂ ಪ್ರಸ್ತುತವಲ್ಲ ; ಕರುನಾಡು >ಕರ್ನಾಟ ಎಂಬ ಬೆಳೆವಣಿಗೆಯ ವಿಚಾರವೇ ಪ್ರಸ್ತುತವಾದುದು. ಶಂ.ಬಾ. ಜೋಶಿ ಈ ಬೆಳೆವಣಿಗೆಯನ್ನು, ಇಲ್ಲಿಯ ದೌರ್ಬಲ್ಯಾಂಶಗಳನ್ನು ಎತ್ತಿ ತೋರುವ ಮೂಲಕ, ನಿರಾಕರಿಸಿದ್ದಾರೆ. ಪ್ರತಿಯಾಗಿ ಹಿಂದೆ ಎಚ್. ನಾರಾಯಣರಾಯರೂ ತೋಗೆರೆ ನಂಜುಂಡಶಾಸ್ತ್ರಿಯವರೂ ಹೇಳಿದ್ದಂತೆಯೇ ತಾವೂ ಕರ್ಣಾಟ >ಕರುನಾಡು ಎಂಬ ರೂಪಾಂತರವನ್ನು ಒಪ್ಪಿದ್ದಾರೆ.[೬೬] ತಮಿಳು ಸಾಹಿತ್ಯದ ಶಾಸನಗಳ ಉಲ್ಲೇಖಗಳಲ್ಲಿ ಅಲ್ಲದೆ, 'ಕರುನಾಡು' ಎಂಬ ರೂಪ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಎಲ್ಲಿಯೂ ಬಳಕೆ ಯಾಗಿಲ್ಲವೆಂದು ಎಂ.ಎಚ್. ಕೃಷ್ಣ ಅವರು ಹೇಳಿರುವುದು ನಿಜವೇ.[೬೭] ಎತ್ತರವಲ್ಲದ ಬಯಲುಸೀಮೆಯೂ ಕನ್ನಡನಾಡಿನಲ್ಲಿ ಉಂಟೆಂದು ಕೆಲವರು ಕೊಡುವ ಕಾರಣವನ್ನು ಬೇಕಾದರೆ, ಕರ್ಣಾಟ(ಕ) ಶಬ್ದದ ಪ್ರಾದೇಶಿಕವ್ಯಾಪ್ತಿ ಮೊದಲು ದಿಣ್ಣೆ ನೆಲದ ಉತ್ತರಕರ್ನಾಟಕದ ಭಾಗಗಳಿಗೆ ಸೀಮಿತವಾಗಿದ್ದು ಕಾಲಕ್ರಮದಲ್ಲಿ ಇತರ ಭಾಗಗಳಿಗೆ ಸಹ ಹಬ್ಬಿರಬೇಕು ಎಂಬುದರ ಸಾಧ್ಯತೆಯನ್ನೆತ್ತಿ, ತಳ್ಳಿಹಾಕಬಹುದು. ಆದರೆ ಕರುನಾಡು>ಕರ್ನಾಟ ಸರಿಯೇ, ಕರ್ಣಾಟ>ಕರುನಾಡು (ತ.) ಸರಿಯೇ ಎಂಬ ತರ್ಕವೂ ವಿದ್ವಾಂಸರ ಚರ್ಚೆಗಳಲ್ಲಿದ್ದು, ಈ ವಾದವನ್ನು ಸ್ವಲ್ಪ ದುರ್ಬಲಗೊಳಿಸಿದೆ. ಇನ್ನು 'ಮಹಾಭಾರತ'ದೊಳಗೆ ಕಾಣಸಿಕೊಂಡಿರುವ ದೇಶವಾಚಕವಾದ 'ಉನ್ನತ್ಯಕಾ' ಎಂಬುದು ಕರ್ನಾಟಕದ ಪರ್ಯಾಯಪದವೆಂದು ಸಾಧಿಸುವಲ್ಲಿ ಸಹ, ಕರುನಾಡು=ಎತ್ತರವಾದ ದೇಶ ಎಂಬ ಕಲ್ಪಿತ ಭೂಮಿಕೆಯನ್ನಿಟ್ಟುಕೊಂಡೇ ಮುಂದುವರಿಯಬೇಕಾಗುತ್ತದೆ. ತಮಿಳಿನ 'ಕರು' ಶಬ್ದಕ್ಕೆ ಆಗಲಿ, 'ಕರುಮೈ' ಶಬ್ದಕ್ಕೆ ಆಗಲಿ ಇರುವ ಹಲವು ಅರ್ಥಗಳಲ್ಲಿ ವಿಸ್ತಾರವಾದ,

ಎತ್ತರವಾದ ಅಥವಾ ದೊಡ್ಡದಾದ ಎಂಬ ಅರ್ಥಗಳನ್ನು ತಮಿಳು ನಿಘಂಟುಗಳಲ್ಲಿ ಉಲ್ಲೇಖಿಸಿರುವಂತೆ ತೋರುವುದಿಲ್ಲ; ದ್ರಾವಿಡ ವ್ಯುತ್ಪತ್ತಿ ಕೋಶದಲ್ಲಿಯೂ ಅಷ್ಟೇ. ಕನ್ನಡದಲ್ಲಿಯೇನೋ ಕರು ಮತ್ತು ಕರುವ ಪದಗಳ ಸಮಾಸಘಟಿತ ರೂಪಗಳಲ್ಲಿ ಪೂರ್ವೋಕ್ತವಾದ ಅರ್ಥಗಳು ಕಂಡುಬರುವಂತೆ ತೋರುತ್ತವೆ. ಈ ಅವಲಂಬನೆಯಿಂದ ಕರುವಾದುದು (=ಎತ್ತರವಾದ್ದು, ವಿಶಾಲವಾದ್ದು) + ನಾಡು = ಕರುನಾಡು ಎಂದು ಭಾವಿಸಲು ಅವಕಾಶವೇನೋ ಇದೆ.

ಇಲ್ಲಿ ಏಳುವ ಮುಖ್ಯವಾದ ಸಮಸ್ಯೆಯೆಂದರೆ, 'ಕರುನಾಡು' ಶಬ್ದದ ಪ್ರಯೋಗ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಎಲ್ಲಿಯೂ ದೊರೆಯದೆ, ತಮಿಳಿನಲ್ಲಿ ಮಾತ್ರ ಕ್ವಚಿತ್ತಾಗಿ ದೊರೆಯುತ್ತಿರುವುದು. ಇಲ್ಲಿ ಕೂಡ ಇದು ಕನ್ನಾಟ (ಎಕ. X, ಕೋಲಾರ ೧೦೬), ಕನ್ನಾಟಕ (ಎಕ. ಕೋಲಾರ, ೧೦೮), ಕನ್ನಾಡಗರ್ (ಎಕ, X, ಮುಳಬಾಗಿಲು, ೨೨೭), ಕರುನಾಡರ್ (ಶಿಲಪ್ಪದಿಗಾರಂ), ಕರುನಾಡಗನ್ (ವೇಳ್ವಿಕುಡಿ ಶಾಸನ) ಇತ್ಯಾದಿ ರೂಪಗಳ ನಡುವೆ ಪರ್ಯಾಯವಾಗಿ ತೋರುತ್ತಿರುವುದು ಸಂದಿಗ್ಧತೆಯನ್ನು ಹೆಚ್ಚಿಸುತ್ತದೆ. ಆದ್ದರಿಂದ ಕರುನಾಡು>ಕರ್ನಾಡು> ಕನಾ(ರ್ಣಾ)ಟ ಎಂಬ ಬೆಳವಣಿಗೆ ಸಂಶಯಾಸ್ಪದವಾದ್ದು ಎಂದೂ ಪ್ರತಿಯಾಗಿ ಈಗಾಗಲೇ ಊಹಿಸಿರುವಂತೆ, ತಮಿಳು ಭಾಷೆಯ ಭಾಷಿಕ ನಿಯಮಗಳಿಗೆ ಅನುಸಾರವಾಗಿ ಸಂಸ್ಕೃತರೂಪವಾದ ಕನಾ(ರ್ಣಾ)ಟ(ಕ) ಎಂಬುದರ ಮೂಲಕವಾಗಿ, ಅದರ ತದ್ಭವವಾಗಿ, 'ಕರುನಾಡು' ರೂಪವೂ ಅಲ್ಲಿಂದ ಮುಂದೆ ಅದರ ಇತರ ನಿಷ್ಪನ್ನರೂಪಗಳೂ ಹುಟ್ಟಿರಬೇಕು ಎಂದೂ ಹೇಳುವುದೇ ಸೂಕ್ತವಾಗಿ ತೋರುತ್ತದೆ. 'ಕರುನಾಡು'ವಾದದ ಪುರಸ್ಕರ್ತರಾದ ಎಚ್. ನಾರಾಯಣ ರಾಯರು ಸಹ ತಮಿಳುಶಬ್ದ 'ಕರುನಾಡು' ಸಂಸ್ಕೃತಶಬ್ದದ (ಕರ್ಣಾಟ) ತದ್ಭವವೇ ಆಗಿದೆಯೆಂದು ತಮ್ಮ ಇಂಡಿಯನ್ ಆಂಟಿಕ್ವೆರಿಯ ಲೇಖನದಲ್ಲಿ ಒಪ್ಪಿದ್ದರೆಂಬುದನ್ನು ಇಲ್ಲಿ ನೆನೆಯಬಹುದು.

ಅಲ್ಲಿಗೆ, ಕರ್=ಕರಿಯದು ಎಂಬ, ಕರು=ಎತ್ತರವಾದುದು, ವಿಶಾಲವಾದುದು ಎಂಬ ವಿಶೇಷಣಗಳಲ್ಲಿ ಯಾವುದಾದರೊಂದು ಪೂರ್ವಪದವಾಗಿರುವ ನಿಷ್ಪತ್ತಿಯ ಕಡೆಗೆ ವಿದ್ವಾಂಸರ ಒಲವು ತೂಗುತ್ತಿರುವುದು ಅನಂತರದ ವಿವೇಚನೆಗಳಲ್ಲಿ ಕಂಡುಬಂದಿದ್ದು, ಇವುಗಳಲ್ಲಿ ಒಂದು ಪಕ್ಷವನ್ನು 'ಹೀಗೆಯೇ ಸರಿ' ಎಂದು ಹಿಡಿಯುವುದಕ್ಕೆ ಯಾವುದೇ ನಿರ್ಣಾಯಕ ಪ್ರಮಾಣವೂ ಈವರೆಗೆ ಗೋಚರಿಸದೆ ಇರುವುದೇ ದೊಡ್ಡ ಅಡ್ಡಿಯಾಗಿದೆ ಎಂದು ಹೇಳಬೇಕಾಗಿದೆ. ಇಷ್ಟು ಹೇಳಿದ ಮೇಲೆ, ಉಳಿದ ನಿಷ್ಪತ್ತಿಗಳ ವಿಚಾರವಾಗಿ ಸಂಕ್ಷೇಪವಾಗಿ ಕೆಲವು ಸಮಾಧಾನಗಳನ್ನು ಹೇಳಿದರೆ, ಸಾಕಾಗಬಹುದೆಂದು ತೋರುತ್ತದೆ.

ಈ ನಿಷ್ಪತ್ತಿಗಳಲ್ಲಿ, ಶಂ.ಬಾ. ಜೋಶಿಯವರೂ ಮುಳಿಯ ತಿಮ್ಮಪ್ಪಯ್ಯನವರೂ ಪ್ರತಿಪಾದಿಸಿರುವುದೇ, ಜನಾಂಗವಾಚಕ ಶಬ್ದಗಳು ಪೂರ್ವಪದಗಳಾಗಿ ಇಲ್ಲವೆ ಪೂರ್ವೋತ್ತರ ಪದಗಳಾಗಿ ಸೇರುವುವೆನ್ನುವುದೇ, ಹೆಚ್ಚು ಗಮನಾರ್ಹವಾದುದು. ಈ ಬಗ್ಗೆ ಹಿಂದೆಯೇ ಸ್ವಲ್ಪ ಗಮನಿಸಿದೆ. ಜೋಶಿಯವರು ಸ್ಮೃತಿ ಹಾಗೂ ಪುರಾಣ ಗ್ರಂಥಗಳ ಆಧಾರದಿಂದ ಕರಣ (=ಕರ್ಣ, ಕಣ್, ಕನ್ನ, ಕಣ್ಣ, ಕಳ್ಳ, ಕಳವ, ಕಳ್ವ, ಕಳಭ್ರ ಇ.)

ಮತ್ತು ನಟ (=ನಾಟ, ನಾಡವ) ಇವರನ್ನು ಗುರುತಿಸಿ, ಇವರು ಭಿನ್ನಜನಾಂಗದವರಲ್ಲ ಒಬ್ಬರೇ ಎನ್ನುವುದನ್ನು ತೋರಿಸಿ, ಹೀಗೆ ಸೇರುವ ಶಬ್ದಗಳಿಂದ 'ಕರ್ನಾಟ' ಎಂದಾಗುವುದು ದ್ವಿರುಕ್ತಿ ದೋಷಕ್ಕೆ ಎಡೆಮಾಡುವುದೆಂದು ಹೇಳಿ, ಇದನ್ನು ನಿವಾರಿಸಲು ಕನ್ನರ ನಾಡು ಎಂಬ ವಿಗ್ರಹವಾಕ್ಯವನ್ನೊಪ್ಪಿ, ಕನ್ನಾಡು>ಕನ್ನಾಟ>ಕರ್ಣಾಟ ಎಂಬ ಬೆಳವಣಿಗೆಯನ್ನು ಅವರು ಅಂಗೀಕರಿಸಿದ್ದಾರೆ. ಹೀಗೆ ಮಾಡುವುದರಲ್ಲಿ ಅವರು ಅನೇಕ ಚಾರಿತ್ರಿಕ ಸಂಗತಿಗಳನ್ನು ಚರ್ಚಿಸಿ, ಹಲವು ರೀತಿಯ ಸಮೀಕರಣಗಳನ್ನು ಮಾಡಿದ್ದಾರೆ. ಈ ಜನಾಂಗಿಕ ಶಬ್ದಗಳು ಅವುಗಳ ಸಮೀಕರಣಗಳೂ ಕುತೂಹಲಕಾರಿಯಾಗಿದ್ದರೂ,[೬೮] ನಿರ್ವಿವಾದವಾದ ವಾಸ್ತವ ಸಂಗತಿಗಳೆಂದು ಗ್ರಹಿಸುವುದಕ್ಕೆ ತುಂಬ ಅಡಚಣೆಗಳಿವೆ. ಕನ್ನಡ ನಾಡು 'ಕನ್ನಾಡು' ಎಂದಿಟ್ಟುಕೊಂಡರೆ, ಅದು ಸಂಸ್ಕೃತದಲ್ಲಿ ಸರೇಫಶಬ್ದ ಕರ್ಣಾಟ/ಕರ್ನಾಟವಾದುದು ಹೇಗೆ ಎಂದು ವಿವರಿಸುವುದು ಕಷ್ಟವಾಗುತ್ತದೆ. ಆಗ ಕರಣರ (=ಕರ್ಣರ) ನಾಡು ಎಂದಿಟ್ಟುಕೊಂಡರೆ ಆಗಬಹುದೇನೋ? ಆದರೆ ಈ ಜನಾಂಗದ ಇತಿಹಾಸ, ವ್ಯಾಪ್ತಿ ಈವರೆಗೆ ತಿಳಿದಮಟ್ಟಿಗೆ ಚರಿತ್ರೆಯ ಪುಟಗಳನ್ನು ಹತ್ತಿರುವಂತೆ ತೋರುವುದಿಲ್ಲ ಎಂಬುದರಿಂದ ಇದು ವಿವಾದಾಸ್ಪದವಾಗಿಯೇ ಉಳಿದುಕೊಳ್ಳುತ್ತದೆ.

ಮುಳಿಯ ತಿಮ್ಮಪ್ಪಯ್ಯನವರು ಮಾಡಿರುವ ವಿಚಾರದಲ್ಲಿಯೂ ಜನಾಂಗ ವಾಚಕ ಶಬ್ದಗಳ ಸೇರುವೆಯೇ ಉಂಟು. ಇವರು ಕರ್ ಅಥವಾ ಕನ್ ಎಂಬ ದಸ್ಯು ವರ್ಗದಿಂದ 'ಕನ್ನಡ' ಎಂಬುದಾಗಿ ಹೆಸರಾಗಿರಬಹುದು, ಕನ್+ನಾಡು=ಕನ್ನಾಡು (ಕನ್ನಡ), ಕರ್ + ನಾಡು=ಕರುನಾಡು- ಕರುನಾಡಗ - ಕರ್ಣಾಟಕ (ಸಂಸ್ಕೃತ) ಎಂಬುದಾಗಿ ರೂಪಗಳು ಅವುಗಳಿಂದ ಏರ್ಪಡಬಹುದು ಎಂದು ಒಮ್ಮೆಯೂ "ಆದಿ ಜನಾಂಗದೊಳಗೆ ಕನ್ ಅಥವಾ ಕಳ್ ಎಂಬುವರೂ ಇದ್ದಂತೆ ತೋರುತ್ತಿದೆ. ಆ 'ಕನ್' ಮತ್ತು 'ನಾಟ'ರು ಬೆರೆದು ಕನ್ನಡಿಗರೆನ್ನಿಸಿರಲೂಬಹುದು" ಎಂದು ಇನ್ನೊಮ್ಮೆಯೂ ತಮ್ಮ ಊಹೆಗಳನ್ನು ವ್ಯಕ್ತಮಾಡಿದ್ದಾರೆ. "ಕಱು-ತಳದ ನಾಟರೇ ಮತ್ತಿನ ಕನ್ನಡಿಗರೆನ್ನಿಸಿರಬೇಕೆಂದು" ಸಹ ಇದೇ ಪ್ರಸಂಗದಲ್ಲಿ ಹೇಳಿದ್ದಾರೆ.[೬೯] ಕೆಲವಂಶಗಳಲ್ಲಿ ಜೋಶಿಯವರ ವಿಚಾರಗಳನ್ನು ಇದು ಹೋಲುತ್ತದೆ ; ಇಲ್ಲಿ ಹೇಳಿದ ಕಾರಣಗಳಿಗಾಗಿಯೇ ವಿವಾದಾಸ್ಪದವಾಗಿ ಇದೂ ಉಳಿದುಕೊಳ್ಳುತ್ತದೆ. 'ಕಱು-ತಳ' ಎಂಬುದರ ಅರ್ಥವೇನೆಂಬುದೇ ತಿಳಿಯುವುದಿಲ್ಲ. ಈ ಅಸಾಮಂಜಸ್ಯಗಳನ್ನು ಮನಗಂಡೇ ಪ್ರಾಯಶಃ ಸೇಡಿಯಾಪು ಕೃಷ್ಣಭಟ್ಟರು. "....ಕಣ್ಣರೋ ಕಳ್ಳರೋ ಈ ನಾಡಿನಲ್ಲಿ ತುಂಬಿದ್ದು, ಅವರ ಹೆಸರಿಂದಲೇ ನಮ್ಮ ನಾಡುನುಡಿಗಳ ಹೆಸರುಗಳು ರೂಪುಗೊಂಡವೆಂದು ನಮ್ಮ ಸಂಶೋಧಕ ಮಹನೀಯರು ನಿಃಶಂಕೆಯಿಂದ ತೀರ್ಪುಕೊಡುವುದಕ್ಕೂ, ಅದನ್ನು ಅವಲಂಬಿಸಿ ಕಂನುಡಿ, ಕಂನಾಡು ಎಂಬ ಅಪಾರ್ಥಕ ಶಬ್ದಗಳನ್ನು ಸೃಷ್ಟಿಸಿರುವುದಕ್ಕೂ ವರ್ಣಪಲ್ಲಟತಥ್ಯಗಳ ಮತ್ತು ಪ್ರಮಾಣಶುದ್ಧಿಯ ಅಸಮಗ್ರವಾದ ಗ್ರಹಿಕೆಯೇ ಮುಖ್ಯಕಾರಣವಾಗಿದೆ ಎಂದು ಖೇದಪೂರ್ವಕವಾಗಿ ಹೇಳಬೇಕಾಗುತ್ತದೆ" - ಎಂಬುದಾಗಿ ಬರೆದು, ಜಾನಾಂಗಿಕ ಮೂಲಕ ಈ ನಿಷ್ಪತ್ತಿಗಳನ್ನು ನಿರಾಕರಿಸಿರಬೇಕೆಂದು ತೋರುತ್ತದೆ.[೭೦]

ಈಗ ಎಸ್. ವೆಂಕಟರಮಣಯ್ಯನವರು ಮಾಡಿರುವ ವಾದವನ್ನು ಎತ್ತಿಕೊಳ್ಳಬಹುದು. ಅವರ ಬರೆಹದಲ್ಲಿಯ ಚಾರಿತ್ರಿಕ ಪ್ರಾಮುಖ್ಯದ ಸಂಗತಿಗಳಿಂದಾಗಿ ಸ್ವಲ್ಪ ವಿವರವಾಗಿಯೇ ಆ ವಾದಾಂಶಗಳನ್ನು ಸಂಗ್ರಹಿಸಬಹುದು : ೧೪-೧೫ನೆಯ ಶತಮಾನದಲ್ಲಿ ತೆಲುಗು ಮಾತನ್ನಾಡುವ ಜನರಿಂದ ತುಂಬಿದ್ದ ನೆಲದಲ್ಲಿ ೧/೩ ಭಾಗ ಕರ್ಣಾಟವೆನಿಸಿತ್ತು. ಕರ್ನೂಲ್ ಜಿಲ್ಲೆಯ ನಂದಿಕೋಟಕೂರ್ ತಾಲ್ಲೂಕಿನ ಒಂದು ಶಾಸನದಲ್ಲಿ 'ಕನ್ನಾಡು' ಜಿಲ್ಲೆಯನ್ನು ಓರುಗಲ್ಲಿನ ಪ್ರತಾಪರುದ್ರನ ಪರವಾಗಿ ಮಹಾಸಾಮಂತ ಚಜುಕು ಮಹೇಶ್ವರ ರಡ್ಡಿ ನೋಡಿಕೊಳ್ಳುತ್ತಿದ್ದನೆಂದು ಹೇಳಿದೆ (೧೩೧೮). ಶ್ರೀಶೈಲದ ಮಲ್ಲಿಕಾರ್ಜುನ ದೇವಾಲಯದ ಶಾಸನವೊಂದರಲ್ಲಿಯೂ 'ಕನ್ನಾಡು' ಜಿಲ್ಲೆಯ ಹೆಸರಿದೆ. ಈ ಶಾಸನ ಎರಡು ಶೈವಮಠಗಳ ಭೂಸ್ವಾಮ್ಯ ಕುರಿತಾಗಿ ಹೇಳುವಾಗ ಬಂದಿರುವ ಉಲ್ಲೇಖ. ಇದರಲ್ಲಿ 'ಕನ್ನಾಡು' ಜಿಲ್ಲೆಗೆ ಸೇರಿದ್ದೆಂದು ಹಲವು ಹಳ್ಳಿಗಳ ಹೆಸರನ್ನು ಹೇಳಿದೆ. ಇವುಗಳಲ್ಲಿ ಹೆಚ್ಚಿನವು ಕರ್ನೂಲ್ ಜಿಲ್ಲೆಯ ನಂದಿಕೋಟಕೂರ್ ಮತ್ತು ನಂದ್ಯಾಲ ತಾಲ್ಲೂಕಿನವು. ವಿಕ್ರಮಾದಿತ್ಯನ (೧) ಹೈದರಾಬಾದ್ ತಾಮ್ರಪಟಗಳ ಕಣ್ಣ ವಿಷಯವೂ ಈ ಕನ್ನಾಡೂ ಒಂದೇ ಎಂದು ತಿಳಿಯುವುದಕ್ಕೆ ಸಾಧ್ಯವಿದೆ. ನಂದಿಕೋಟಕೂರಿನ ಪೂರ್ವದಿಕ್ಕಿನ ಮಗ್ಗುಲಲ್ಲಿ ಮಾರ್ಕಾಪೂರ್ ತಾಲ್ಲೂಕಿಗೆ ಸೇರಿದ ಚಿಂತಕುಂಟವೇ ಪೂರ್ವೋಕ್ತ ತಾಮ್ರ ಶಾಸನದ ಕಣ್ಣವಿಷಯದ ಚಿಂತಕುಂಟವಾಗಿರಬೇಕು. ಹಾಗಾದರೆ ಕರ್ನೂಲ್ ಜಿಲ್ಲೆಯ ನಂದಿಕೋಟಕೂರ್, ನಂದ್ಯಾಲ, ಮಾರ್ಕಾಪೂರ್ ತಾಲ್ಲೂಕಿನ ಭಾಗಗಳನ್ನು ಒಳಕೊಂಡಿದ್ದು ಕಣ್ಣವಿಷಯ. ವಿಜಯನಗರದ ರಾಯರ ಕಾಲದಲ್ಲಿ ಈ ಪ್ರಾಂತವು ಕರ್ಣಾಟ ಸೀಮೆಯೆಂದೆನಿಸಿತ್ತು ಎನ್ನುವುದನ್ನು ಸದಾಶಿವರಾಯನ ಕಾಲದ ೧೫೬೩ರ ಶಾಸನದಿಂದ ತಿಳಿಯಬಹುದು. ಇದನ್ನು ನೋಡಿದಾಗ ಶ್ರೀಶೈಲದ ಸಾನುಪ್ರದೇಶದ ಒಂದು ಚಿಕ್ಕ ಜಿಲ್ಲೆ ಪ್ರಾಚೀನಕಾಲದಲ್ಲಿ ಕಣ್ಣ ವಿಷಯ, ಕನ್ನಾಡು, ಕರ್ಣಾಟಸೀಮೆ ಎನಿಸಿತ್ತು ಎಂದು ತೋರುತ್ತದೆ.

ಈ ದಿಕ್ಕಿನಲ್ಲಿ 'ಕರ್ಣಾಟ' ಶಬ್ದದ ನಿಷ್ಪತ್ತಿ ಅರ್ಥಗಳನ್ನು ಗುರುತಿಸುವುದು ಸೂಕ್ತ. ಕಣ್ಣ (ಪ್ರಾ.) = ಕನ್ನ (ತೆ.) = ಕರ್ಣ (ಸಂ.). ಶಾಸನಗಳ ಕಣ್ಣ ವಿಷಯ, ಕನ್ನಾಡು, ಕರ್ಣಾಟಸೀಮೆ ಇವು ಕರ್ಣ ದೊರೆಗಳ (ಶಾತಕರ್ಣಿ ಎಂಬುದರ ಹ್ರಸ್ವರೂಪ ಕರ್ಣ) ಮೂಲಕವಾಗಿ ಬಂದುವಾಗಿರಬೇಕು. ಈ ದೊರೆಗಳು ಈ ಜಿಲ್ಲೆಯಲ್ಲಿ ಮೂಲತಃ ನೆಲಸಿದ್ದವರೆಂದು ತೋರುತ್ತದೆ. ಇಂದಿನ ಬಳ್ಳಾರಿ ಜಿಲ್ಲೆಯ ಬಹುಭಾಗ ಶಾತವಾಹನರ ಆಡಳಿತದ ಸೀಮೆಯಾಗಿತ್ತು ಎಂದು ವಿ.ಎಸ್. ಸುಕ್ಥಂಕರ್ ಅಭಿಪ್ರಾಯಪಟ್ಟಿದ್ದಾರೆ. ಬಳ್ಳಾರಿಜಿಲ್ಲೆಯ ಬಳ್ಳಾರಿ, ಆದವಾನಿ ತಾಲ್ಲೂಕುಗಳು ಎಂಬುದಾಗಿ ಇನ್ನೂ ಖಚಿತವಾಗಿ ಅದನ್ನು ಹೇಳಬಹುದು. ಈಗಾಗಲೇ ಹೇಳಿರುವ ಕಣ್ಣ ವಿಷಯಕ್ಕೆ, ಎಂದರೆ ಕರ್ನೂಲ್ ಜಿಲ್ಲೆಯ ನಂದಿಕೋಟಕೂರ್ ತಾಲ್ಲೂಕಿಗೆ ಇವು ಬಹುದೂರವೇನೂ ಅಲ್ಲ. ಅದರ ಸುತ್ತಣ ಭೂಮಿ ಶಾತವಾಹನರ ಅಥವಾ ಶಾತಕರ್ಣಿಗಳ ಹೆಸರನ್ನು ಪಡೆದಿರುವುದು ಸಹಜವೇ

ಆಗಿದೆ. ಕೃಷ್ಣಾ ತುಂಗಭದ್ರಾ ದಂಡೆಗಳ ಮೇಲೆ ಹಬ್ಬಿದ್ದ ಆಂಧ್ರಾಪಥಕ್ಕೆ ಶಾತವಾಹನೀ ರಾಷ್ಟ್ರವೂ ಅದರ ಮೂಲನೆಲೆ ಕಣ್ಣ ವಿಷಯವೂ ಸೇರಿತ್ತು.

'ಕನ್ನಾಡು' ಶಬ್ದದ ಮೂಲವನ್ನು ನಾವು ಕನ್ನಡನಾಡಿನ ಹೊರಗೆ ಹುಡುಕಬೇಕು. ನರಸಿಂಹಾಚಾರ್ಯರು ಕನ್ನಾಡು>ಕರ್ನಾಟ ಎಂದಿರುವುದು ಸರಿ ; ನೆಲೆಯನ್ನು ಅವರಿಗೆ ಗುರುತಿಸಲಾಗಿಲ್ಲ. ಕನ್ನಡದೇಶದ ಹಾಗೂ ಭಾಷೆಯ ಹೆಸರಿಗೆ ಮೂಲವಾದ 'ಕನ್ನಾಡು' ದೇಶ ಶ್ರೀಶೈಲದ ತಪ್ಪಲಿನ ಕನ್ನಾಡೇ (ಕಣ್ಣ ವಿಷಯ = ಕರ್ಣಾಟಸೀಮೆ) ಆಗಿದೆ. ತನ್ನ ಎಲ್ಲೆಯ ಆಚೆಗೆ ಇರುವ ಸಣ್ಣದೊಂದು ಜಿಲ್ಲೆಯಿಂದ ಈಗಿನ ಕನ್ನಡನಾಡು ತನ್ನ ಹೆಸರನ್ನು ಹೇಗೆ ಪಡೆದುಕೊಂಡಿತು? ಹಿಂದೆ ತೆಲುಗು, ಕನ್ನಡ ಜನ ಒಂದೇ ವರ್ಗಕ್ಕೆ ಸೇರಿದವರು ಎನ್ನುವುದು ವಿದ್ವಾಂಸರ ಅಭಿಪ್ರಾಯವಾಗಿದೆ. ಲಿಪಿಯ ಬಳಕೆ ಮೊದಲಾದುವುಗಳಲ್ಲಿ ಸಾಮ್ಯವಿದೆ. ಆಂಧ್ರರೂ ಕರ್ನಾಟರೂ ಒಂದೇ ಸಮುದಾಯವಾಗಿ ಅಶೋಕನ ಕಾಲದಲ್ಲಿದ್ದರೆಂದು ತೋರುತ್ತದೆ. ಅಶೋಕನ ಶಾಸನಗಳಲ್ಲಿ, ಕರ್ನಾಟಕದಲ್ಲೇ ದೊರೆತವುಗಳಲ್ಲಿ ಕೂಡ, ಕರ್ನಾಟಕದ ಹೆಸರು ಬರದಿರಲು ಇದೇ ಕಾರಣವಿರಬೇಕು. ಸಂಯುಕ್ತ ಆಂಧ್ರರಾಜ್ಯವು ಶ್ರೀಶೈಲದ ಶಾತಕರ್ಣಿಗಳ ಮೂಲನೆಲೆಯ ಮೂಲಕವಾಗಿ ಕರ್ಣಾಟವೆಂಬ ಹೆಸರನ್ನು ಪಡೆದಿರಬೇಕು. ಆಂಧ್ರ ಕರ್ಣಾಟ ಸೀಮೆಗಳೆರಡಕ್ಕೂ ಆಗ ಒಂದೇ ಹೆಸರನ್ನು ಬಳಸುತ್ತಿದ್ದಿರಬೇಕು. ಇದರಲ್ಲಿ ಅಸಹಜವಾದದ್ದು ಏನೂ ಇಲ್ಲ. ವೆಂಗಿ ಮುಂತಾದ ಸಣ್ಣ ಸ್ಥಳಗಳೇ ರಾಜಕೀಯ ಕಾರಣಗಳಿಂದ ವಿಸ್ತಾರವಾದ ಭೂಭಾಗಕ್ಕೆ ಕೊಟ್ಟ ಹೆಸರಾಗಿ ಮಾರ್ಪಟ್ಟ ಸಂದರ್ಭಗಳು ಇತಿಹಾಸದಲ್ಲಿ ಕಂಡುಬಂದಿವೆ. ಶಾತವಾಹನರು ಪ್ರಬಲಿಸಿ, ಇಂದಿನ ತೆಲುಗು ಮತ್ತು ಕನ್ನಡ ನಾಡಿನ ಪ್ರದೇಶಗಳನ್ನು ತಮ್ಮ ಅಂಕೆಗೆ ತೆಗೆದುಕೊಂಡ ಮೇಲೆ ಆಂಧ್ರ - ಕರ್ಣಾಟ ಕೂಡಿದ ಸಮಗ್ರ ಸೀಮೆಗೆ 'ಕನ್ನಾಡು' ಮೂಲಕವಾಗಿ 'ಕರ್ಣಾಟ' ಎಂಬ ಹೆಸರು ಬಳಕೆಯಾಗಿರಬೇಕು. ಕೃಷ್ಣೆಗೆ ದಕ್ಷಿಣದಲ್ಲಿದ್ದ ತೆಲುಗು ಭಾಷೆಯ ಸೀಮೆಯಲ್ಲಿ ಆಡುತ್ತಿದ್ದ ತೆಲುಗನ್ನು 'ಕರ್ಣಾಟ ಭಾಷೆ'ಯೆಂದು ಕರೆಯಲಾಗುತ್ತಿತ್ತೆಂದು ತಿಳಿಯುವ ಶಾಸನ ಮತ್ತು ಗ್ರಂಥಗಳು ಮಧ್ಯಕಾಲೀನ ಇತಿಹಾಸದಲ್ಲಿ ಕಂಡುಬಂದಿವೆ. ಶಾತವಾಹನ ಪ್ರಾಬಲ್ಯ ತಗ್ಗಿದ ಮೇಲೆಯೂ ಕರ್ಣಾಟವೆಂಬ ಹೆಸರು ಮುಂದುವರಿಯಿತು. ವಿಜಯನಗರದ ಆಳಿಕೆಯ ಸೀಮೆ ತಗ್ಗಿ ಕ್ಷೇತ್ರ ಸಂಕೋಚಗೊಳ್ಳುತ್ತಿದ್ದ ಮೇಲೆಯೂ ದೊರೆಗಳು ತಮ್ಮನ್ನು ಕರ್ಣಾಟದ ದೊರೆಗಳೆಂದು ಕರೆದುಕೊಂಡರು. ಮಹಮದೀಯರ ಮುತ್ತಿಗೆಯ ಬಳಿಕವೂ ಪೂರ್ವಕರೆಯ ತಮಿಳುನಾಡಿಗೆ ಕರ್ಣಾಟವೆಂಬ ಹೆಸರೂ ಸೇರಿಕೊಂಡೇ ಇತ್ತು. ಮಹಮದೀಯ ಅಧಿಕಾರಿಗಳು 'ಕರ್ಣಾಟಕದ ಸುಬೇದಾರರು', 'ಕರ್ಣಾಟಕದ ನವಾಬರು' ಎನಿಸಿ ಅಲ್ಲಿ ಅಧಿಕಾರ ನಡಸುತ್ತಿದ್ದ ಕಾಲದಲ್ಲಿ ಫ್ರೆಂಚ್ ಮತ್ತು ಇಂಗ್ಲಿಷ್ ಜನ ತಮಿಳು ದೇಶದ ನಿಜವಾದ ಹೆಸರು 'ಕರ್ಣಾಟ'ವೆಂದೇ ನಂಬಿ, ತಮ್ಮ ದಾಖಲೆಗಳಲ್ಲೂ ಅದನ್ನು

ನಮೂದಿಸತೊಡಗಿದರು. ನಿಜವಾದ ಕರ್ಣಾಟಸೀಮೆಗೇ ಆ ಹೆಸರು ಮರೆತುಹೋಗಿ, ಮೊನ್ನೆ ಮೊನ್ನೆಯವರೆಗೆ ಅದು ಮುಂದುವರಿದಿತ್ತು.

ಎನ್. ವೆಂಕಟರಮಣಯ್ಯನವರು ತಮ್ಮ ಲೇಖನವನ್ನು ಸಮಾಪ್ತಿಗೊಳಿಸುತ್ತ, ಶ್ರೀಶೈಲದ ಮಗ್ಗುಲ ಕಣ್ಣವಿಷಯ ಅಥವಾ ಕನ್ನಾಡುವಿನ ಮೂಲಕವಾಗಿ ಕರ್ಣಾಟಕ ತನ್ನ ಹೆಸರು ಪಡೆದುಕೊಂಡಿತೆಂದೂ ಚಾರಿತ್ರಿಕಕಾರಣಗಳಿಗಾಗಿ ಈಗಣ ಕನ್ನಡನಾಡಿಗೇ ಆ ಹೆಸರು ಅನ್ವಯಿಸುವಂತೆ ಅನಂತರದಲ್ಲಿ ಆಯಿತೆಂದೂ ತಾವು ನಂಬುವುದಾಗಿ ತಿಳಿಸಿದ್ದಾರೆ.[೨೧]

ಜೋಶಿಯವರು ವೆಂಕಟರಮಣಯ್ಯನವರ ವಾದವನ್ನು ಗಮನಿಸಿ, ವೆಂಕಟ ರಮಣಯ್ಯನವರು ಕನ್ನ ಅಥವಾ ಕಣ್ಣ ಶಬ್ದದ ಅರ್ಥವನ್ನು ವಿವರಿಸಿಲ್ಲ, ಶ್ರೀಶೈಲದ ಸುತ್ತಲಿನ ಭಾಗವೇ ಪ್ರಾಚೀನಕರ್ನಾಟಕದ ಮುಖ್ಯಕೇಂದ್ರವಾಗಿದ್ದುದನ್ನೂ ಅಲ್ಲಿಯ ಜನ ಬೇರೆ ಭಾಗಗಳಲ್ಲಿ ಹೋಗಿ ತಮ್ಮ ಪ್ರಭಾವವನ್ನು ವಿಸ್ತರಿಸಿದರು ಎನ್ನುವುದನ್ನೂ ಸ್ಥಿರಪಡಿಸಿಲ್ಲ ಎಂದೂ ಕನ್ನ ಅಥವಾ ಕಣ್ಣ ಹೆಸರಿನ ಸ್ಥಳಗಳು ಕರ್ನಾಟಕದ ಇತರ ಭಾಗಗಳಲ್ಲಿಯೂ ಕಾಣಿಸಿಕೊಳ್ಳುತ್ತವೆಯಾದ್ದರಿಂದ ಅವರ ತರ್ಕ ನಿಲ್ಲುವುದಿಲ್ಲ ಎಂದೂ ಅದನ್ನು ನಿರಾಕರಿಸಿದ್ದಾರೆ.[೨೨] ಕರ್ನೂಲ್ ಪ್ರಾಂತಕ್ಕೆ 'ಕನ್ನಾಡು' ಎಂದು ಹೆಸರಿದ್ದುದರ ಸೂಚನೆಯನ್ನು ವಿಮರ್ಶಿಸುತ್ತ ಎ.ಆರ್. ಕೃಷ್ಣಶಾಸ್ತ್ರಿಗಳು, ಕಪ್ಪುನಾಡು ಎಂದು ಅದರ ಅರ್ಥವಿದ್ದಿರಬಹುದೇ, ಅದು ಹಿಂದೆ ಕನ್ನಡ ನಾಡಿನ ಭಾಗವಾಗಿತ್ತೇ ಎಂದು ಪ್ರಾಸಂಗಿಕವಾಗಿ ಶಂಕಿಸಿರುವುದುಂಟು.[೨೩] ಇದಕ್ಕೆ ಪ್ರತಿಯಾಗಿ ಎಸ್. ಶ್ರೀಕಂಠಶಾಸ್ತ್ರಿಗಳು "ಶಾತವಾಹನ ರಾಜರಾದ ಶಾತಕರ್ಣಿಗಳ ಹೆಸರಿನಿಂದ ಕರ್ನಾಟವೆಂಬ ಹೆಸರು ಮೊದಲು ಶ್ರೀಪರ್ವತ ಪ್ರಾಂತಕ್ಕೆ ಬಂದಿರಬಹುದು" - ಎಂದು ಹೇಳಿದ್ದಾರೆ.[೨೪] ಈ ವಿಷಯದಲ್ಲಿ ನಿರ್ಣಯ ಹೇಗೆ ?

'ಕನ್ನಾಡು' ೧೩-೧೪ನೆಯ ಶತಮಾನದಲ್ಲಿ ಗೋಚರಿಸುವ ಹೆಸರು. ಆ ಮೊದಲು ದಕ್ಷಿಣ ಭಾರತದ ಯಾವ ಭಾಗಕ್ಕಾದರೂ ಆ ಹೆಸರು ಅಥವಾ ಅದನ್ನು ಹೋಲುವ ಹೆಸರೊಂದು ಇದ್ದುದು ನಮಗೆ ತಿಳಿದಿಲ್ಲ. ಅದನ್ನು ತಿಳಿಸುವ ಶಾಸನದ ಅಥವಾ ಸಾಹಿತ್ಯದ ಆಧಾರವಿಲ್ಲವೆಂದು ತೋರುತ್ತದೆ. ವಿಕ್ರಮಾದಿತ್ಯನ (೧) ಕಾಲದ (೬೫೫-೮೦) 'ಕಣ್ಣವಿಷಯ', ಕನ್ನಾಡಿನೊಂದಿಗೆ ಸಮೀಕರಿಸಬಹುದಾದ್ದು, ಇನ್ನೂ ಹಳೆಯದೆಂಬುದೇನೋ ನಿಜ. ಆದರೆ ಆ ಕಾಲಾವಧಿಗೂ ಹಿಂದಿನ ಒಂದೆರಡು ಶಾಸನಗಳಲ್ಲಿಯೇ ಕರ್ಣಾಟ, ಕನ್ನಾಟಕ ಶಬ್ದಗಳು ಬಂದುಹೋಗಿದ್ದು, ಇವಕ್ಕೆ ಸಹ ಶಾತಕರ್ಣಿ ದೊರೆಗಳೋ ಇಲ್ಲವೇ ಶ್ರೀಶೈಲಪ್ರಾಂತದ ಚಿಕ್ಕ ಜಿಲ್ಲೆಯೋ ಮೂಲವಾಗಿರಬೇಕೆಂದು ಸಾಧಿಸಲು ಸಾಧ್ಯವೇ ? ಕದಂಬ ಶಾಂತಿವರ್ಮನ (ಸು. ೪೫೦-೭೫) ಶಾಸನವೊಂದರಲ್ಲಿ "(ವೈ)ಜಯನ್ತೀ ತಿಲಕಸಮಗ್ರಕರ್ಣ್ನಾಟದೇಶಭೂವರ್ಗ್ಗಭರ್ತ್ತಾರಂ' 'ಎಂಬುದಾಗಿದ್ದು (ಎಕ. vi, ೧೬೨; ಸು. ೪೫೦), ಇಲ್ಲಿ ಕರ್ಣ್ನಾಟ' ಶಬ್ದ ಗಣ್ಯವಾಗಿ ಕಾಣಿಸಿಕೊಂಡಿದೆ; ಗಂಗರಾಜ ಭೂವಿಕ್ರಮನ ತಾಮ್ರಶಾಸನದಲ್ಲಿ ಜನರ ಮಾತನ್ನು 'ಕರ್ನಾಟಕ' ಎಂದು ಸ್ಪಷ್ಟವಾಗಿ

ತಿಳಿಸಿದೆ. ಈ ವೇಳೆಗಾಗಲೇ ಕನಾ(ರ್ಣಾ)ಟ (ಕ) ಶಬ್ದ ದೇಶ ಮತ್ತು ಭಾಷಾವಾಚಕಗಳಾಗಿ ಪ್ರಸಿದ್ಧಿಯಾಗಿದ್ದುವು ಎಂದು ಇದರಿಂದ ತಿಳಿಯುವುದು. ಆ ಪ್ರಸಿದ್ಧಿಗೆ, ವೆಂಕಟ ರಮಣಯ್ಯನವರು ಉಲ್ಲೇಖಿಸಿರುವ ಕನ್ನಾಡು ಕಣ್ಣ ವಿಷಯಗಳ ಶಾಸನಗಳ ಕಾಲದಲ್ಲಿ ಕೊರತೆ ಬರಲಿಲ್ಲ. ಅಲ್ಲದೆ, ಈ ಕನ್ನಾಡುವಿನ ಕೆಲ ಗ್ರಾಮಗಳನ್ನು ಕನ್ನಡನಾಡಿನ ಶಾಸನಗಳಲ್ಲಿ "ಕನ್ನೆ ಮೂನೂಱುಸೀಮೆ"ಯೊಳಗಿನವೆಂದು ಉದಾಹರಿಸಿದೆಯೆಂದು ಕುಂದೂರಿ ಈಶ್ವರದತ್ ತಿಳಿಸಿದ್ದಾರೆ.[೨೫] ಇದನ್ನು ಗಮನಿಸಿದರೆ, ಈ ಸ್ಥಳಗಳು ಕರ್ಣಾಟಕವೆಂಬ ಹೆಚ್ಚು ವ್ಯಾಪಕವಾದ ಅರ್ಥದ ದೇಶವಾಚಕಶಬ್ದದಿಂದ ಬೇರೆಯೇ ಆಗಿವೆಯೆಂದು ಹೇಳಬೇಕಾಗುತ್ತದೆ. ಆದ್ದರಿಂದ ಈ ವಾದವನ್ನು ಕೈಬಿಡಬಹುದೆಂದು ತೋರುತ್ತದೆ.

ಆರ್. ನರಸಿಂಹಾಚಾರ್ಯ, ಹೆರಾಸ್, ಬೇಂದ್ರೆ- ಬೆಟಗೇರಿ ಮತ್ತು ಉತ್ತಂಗಿ ಯವರ ಸೂಚನೆಗಳಲ್ಲಿ ಕಲ್ಪನೆಯ ಕೈವಾಡವೇ ಹೆಚ್ಚು ಎನ್ನುವುದು ವಿದಿತವೇ ಇದೆ. ಆದ್ದರಿಂದ ಅವುಗಳ ಬಗ್ಗೆ ಪ್ರತ್ಯೇಕವಾಗಿ ವಿಚಾರಮಾಡಬೇಕಾದುದಿಲ್ಲ. ಹಟ್ಟಿಯಂಗಡಿ ನಾರಾಯಣರಾವ್, ಎಂ. ಗೋವಿಂದಪೈ, ಶಂ.ಬಾ. ಜೋಶಿ ಮೊದಲಾದವರು ಈಗಾಗಲೇ ಇವಕ್ಕೆ ಉತ್ತರಗಳನ್ನು ಕೊಟ್ಟಿದ್ದಾರೆ.[೨೬]

❐

ಕುಂತಲ, ಮಹಿಷಮಂಡಲ ಮತ್ತು ಕರ್ನಾಟಕ

ಕುಂತಲ

ಇದು ಪ್ರಾಚೀನ ಕರ್ನಾಟಕದ ಇತಿಹಾಸದಲ್ಲಿ ಗಣ್ಯತೆಯನ್ನು ಪಡೆದಿದ್ದ ಕನ್ನಡ ಸೀಮೆ. 'ಕರ್ನಾಟಕ'ಕ್ಕೆ ದ್ರಾವಿಡ ಮೂಲವಾದ ನಿಷ್ಪತ್ತಿಯನ್ನು ಹೇಳುವ ಹಾಗೆಯೇ 'ಕುಂತಲ' ಶಬ್ದವೂ ಅಂಥ ಒಂದು ಮೂಲದಿಂದ ಸಂಸ್ಕೃತೀಕರಣಗೊಂಡುಬಂದುದಾಗಿರಬೇಕು. ಕೇಶವೆಂಬರ್ಥದ ಕುಂತಲವೂ ದೇಶವಾಚಕ ಶಬ್ದವಾದ ಕುಂತಲವೂ ಭಿನ್ನವೋ ಅಭಿನ್ನವೋ ತಿಳಿಯದು. ಮೊದಲನೆಯದು ದ್ರಾವಿಡದಿಂದ ಸ್ವೀಕೃತವಾದ ಶಬ್ದವೆಂದು ಭಾಷಾಶಾಸ್ತ್ರಜ್ಞರು ನಿರ್ಧರಿಸಿದ್ದಾರೆ. 'ಕುನ್' ಎಂದರೆ ಪರ್ವತಶಿಖರವೆಂಬುದರಿಂದ ಕನ್ನಡ ನಾಡಿಗೆ ಕುನ್+ತಳ = ಕುಂತಳ ಎಂದು ಹೆಸರಾಗಿದೆಯೆಂದು ಕೆಲವರು ತಿಳಿದಿರುವುದುಂಟು.[೨೨]

'ಮಹಾಭಾರತ' ಮತ್ತು 'ಬೃಹತ್ಸಂಹಿತೆ'ಗಳಲ್ಲಿಯೂ ಕೆಲವು ಪುರಾಣಗಳಲ್ಲಿಯೂ 'ಕುಂತಲ' ದೇಶದ ಹೆಸರು ಬಂದಿರುವುದನ್ನು ಕಾಣಬಹುದು :

೧. 'ಮಹಾಭಾರತ'ದಲ್ಲಿ :

> ಪೌಂಡ್ರಕೋ ವಾಸುದೇವಶ್ಚ ವಂಗಃ ಕಾಲಿಂಗಕಸ್ತಥಾ
> ಆಕರ್ಷಃ ಕುಂತಲಶ್ಚೈವ ವಾನವಾಸ್ಯಾಂಧ್ರಕಾಸ್ತಥಾ ॥

- (ಸಭಾಪರ್ವ, ೩೧-೧೧)

> ಜಪ್ಯೈರ್ಹೋಮೈಶ್ಚ ಸಂಯುಕ್ತೋ ಮಂಗಲೈಶ್ಚ ಪೃಥಗ್ವಿಧೈಃ ॥
>
> ಪುರೋಗಮಾಶ್ಚ ತೇ ಸಂತು ದ್ರವಿಡಾಃ ಸಹ ಕುಂತಲೈಃ
> ಆಂಧ್ರಾಸ್ತಾಲಚರಾಶ್ಚೈವ ಚೂಚುಪಾ ವೇಣುಪಾಸ್ತಥಾ ॥

- (ಉದ್ಯೋಗ ಪರ್ವ, ೧೩೮-೨೪, ೨೫)

೨. ವರಾಹಮಿಹಿರನ 'ಬೃಹತ್ಸಂಹಿತೆ'ಯಲ್ಲಿ:

> ದ್ರವಿಡ ವಿದೇಹಾಂಧ್ರಾಶ್ಮಕ
> ಭಾಸಾಪುರ ಕೋಂಕ ಣಾಃ ಸಮಂತ್ರಿಷಿಕಾ

ಕುಂತಲ ಕೇರಲ ದಂಡಕ
ಕಾಂತಿಪುರ ಮ್ಲೇಚ್ಛ ಸಂಕರಜಾಃ ॥ (ಅಧ್ಯಾಯ ೧೬)

೩. 'ಮತ್ಸ್ಯಪುರಾಣ'ದಲ್ಲಿ :

ಶೂರಸೇನಾ ಭದ್ರಕಾರಾ ವಾಹ್ಯಾಃ ಸಹ ಪಟಚ್ಚರಾಃ
ಮತ್ಸ್ಯಾಃ ಕಿರಾತಾಃ ಕುಲ್ಯಾಶ್ಚ ಕುಂತಲಾಃ ಕಾಶಿ ಕೋಸಲಾಃ
(೧೧೪-೩೫)

೪. 'ಮಾರ್ಕಂಡೇಯಪುರಾಣ'ದಲ್ಲಿ

ಮತ್ಸ್ಯಾಶ್ವಕೂಟಾಃ ಕುಲ್ಯಾಶ್ಚ ಕುಂತಲಾಃ ಕಾಶಿ ಕೋಸಲಾಃ
ಅರ್ಬುದಾಶ್ಚಾರ್ಕಲಿಂಗಾಶ್ಚ ಮಲಕಾಶ್ಚ ವೃಕೈಃ ಸಹ ॥
(೫೪-೩೩)

೫. 'ಬ್ರಹ್ಮಾಂಡಪುರಾಣ'ದಲ್ಲಿ :

ಶೂರಸೇನಾ ಭದ್ರಕಾರಾ ಬೋಧಾಸ್ಸಹ ಪಟಚ್ಚರಾಃ
ಮತ್ಸ್ಯಾಃ ಕುಶಲ್ಯಾಃ ಸೌಶಲ್ಯಾಃ ಕುಂತಲಾಃ ಕಾಶಿ ಕೋಶಲಾಃ
(೧೬-೪೧)

೬. 'ಪದ್ಮಪುರಾಣ'ದಲ್ಲಿ :

ಕರ್ಣಾಟಕಾ ಮಾಹಿಷಕಾ ವಿಕಲ್ಪಾ ಮೂಷಿಕಾಸ್ತಥಾ
ಝಲ್ಲಿಕಾಃ ಕುಂತಲಾಶ್ಚೈವ ಸೌಹೃದಾ ನಲಕಾನನಾಃ ॥
(ಆದಿ, ೬-೫೪)

೬. 'ವಾಯುಪುರಾಣ'ದಲ್ಲಿ :

ಪೌನಿಕಾ ಮೌನಿಕಾಶ್ಚೈವ ಅಸ್ಮಕಾ ಭೋಗವರ್ಧನಾಃ
ನೈರ್ಣಿಕಾಃ ಕುಂತಲಾ ಆಂಧ್ರಾ ಉದ್ಭಿದಾ ನಲಕಾಲಿಕಾಃ ॥
(೨- ಅಧ್ಯಾಯ ೪೫, ಪ. ೧೨೭)

ಅಲ್ಲದೆ ರಾಜಶೇಖರನ 'ಕಾವ್ಯಮೀಮಾಂಸಾ', 'ಸಮ್ಮೋಹತಂತ್ರ', 'ಶಕ್ತಿ ಸಂಗಮತಂತ್ರ' (೩-೭-೪೩), ಸಾಳುವ ನರಸಿಂಹರಾಯನ ಸಂಸ್ಕೃತ 'ರಾಮಾಭ್ಯುದಯ ಕಾವ್ಯ', ನಂದಿತಿಮ್ಮನನ 'ಪಾರಿಜಾತಾಪಹರಣ', ಗಂಗಾದೇವಿಯ 'ವೀರಕಂಪರಾಯ ಚರಿತ' ಮುಂತಾದ ಕೃತಿಗಳಲ್ಲಿಯೂ 'ಕುಂತಲ'ದ ಪ್ರಯೋಗ ಬಂದಿದೆ.

ಸಹ್ಯ ಪರ್ವತದ ಉತ್ತರ ಭಾಗದಲ್ಲಿರುವ, ಗೋದಾವರಿ ಹರಿಯುವ, ದಕ್ಷಿಣದ ನಾಡುಗಳೆಂದು ಕೆಲವು ನಾಡುಗಳನ್ನು ಕುರಿತ ಸಂದರ್ಭದಲ್ಲಿ ಕುತಂಲವನ್ನು ಪುರಾಣಗಳಲ್ಲಿ ಹೆಸರಿಸಿದ್ದರೆ, ಮಹಾಭಾರತದಲ್ಲಿ ಕುಂತಲ ವನವಾಸಿ(ಬನವಾಸಿ)ಗಳನ್ನೂ ದ್ರವಿಡ ಕುಂತಲ

ಆಂಧ್ರಗಳನ್ನೂ ಸಾಹಚರ್ಯದೊಂದಿಗೆ ಹೆಸರಿಸಿದೆ. 'ಮತ್ಸ್ಯಪುರಾಣ'ದ ಪಟ್ಟಿಯಲ್ಲಿಯ ೧೩ನೆಯ ದೊರೆ ಕುಂತಲಸ್ವಾತಿ, ವಾತ್ಸ್ಯಾಯನನ 'ಕಾಮಸೂತ್ರ'ದ ಪ್ರಕಾರ ಕುಂತಲ ಶಾತಕರ್ಣಿ ಎಂದು ತಿಳಿದು, ಶಾತವಾಹನರ ಕಾಲದ ವೇಳೆಗೇ ಕುಂತಲ ಇತಿಹಾಸ ಪ್ರಸಿದ್ಧವಾಗಿತ್ತೆಂದು ತಿಳಿಯಲಾಗಿದೆ.[೨೮] ಮಾನಪುರ ರಾಷ್ಟ್ರಕೂಟ ಶಾಖೆಯ ಮೊದಲ ದೊರೆ ಮಾನಾಂಕನನ್ನು ಕುಂತಲ ದೊರೆಯೆಂದು ("ಮಾನಾಂಕಾ ನೃಪತಿಃ ಶ್ರೀಮಾನ್ ಕುಂತಲಾನಾಮ್ ಪ್ರಶಾಸಿತಾ") ಇಲ್ಲವೆ ಡಿ.ಸಿ. ಸರ್ಕಾರ್ ಭಾವಿಸುವಂತೆ ಕುಂತಲರನ್ನು ಎಂದರೆ ಬನವಾಸಿಯ ಕದಂಬರನ್ನು ಶಿಕ್ಷಿಸಿ ಅಂಕೆಗೆ ತಂದವನೆಂದು ರಾಷ್ಟ್ರಕೂಟದೊರೆ ಅವಿಧೇಯನ ಪಂಡರಂಗಪಲ್ಲಿ ಶಾಸನ ವರ್ಣಿಸಿದೆ.

೪-೫ನೆಯ ಶತಮಾನದ ವಾಕಾಟಕ ಶಾಸನಗಳಲ್ಲಿ ಆಗಾಗ ಕುಂತಲದ ಪ್ರಸ್ತಾಪ ಬಂದಿದೆ. ಇಮ್ಮಡಿ ಪೃಥ್ವೀಷೇಣನ ಬಾಲಾಘಾಟ್ ಶಾಸನದಲ್ಲಿ, ಆತ ಕುಂತಲಾಧಿಪತಿಯ ಪುತ್ರಿ ಮಹಾದೇವಿ ಅಜ್ಝಿತ ಭಟ್ಟಾರಿಕೆಯ ಮಗನೆಂದು ಹೇಳಿದೆ ("ವಾಕಾಟಕಾನಾಂ ಮಹಾರಾಜ ಶ್ರೀನರೇಂದ್ರಸೇನಸ್ಯ ಸೂನೋಃ ಕುಂತಲಾಧಿಪತಿ ಸುತಾಯಾಂ ಮಹಾದೇವ್ಯಾಂ ಅಜ್ಝಿತಭಟ್ಟಾರಿಕಾಯಾಮುತ್ಪನ್ನಸ್ಯ... ವಾಕಾಟಕಾನಾಂ ಪರಮಭಾಗವತ ಮಹಾರಾಜ ಶ್ರೀಪೃಥ್ವೀಷೇಣಸ್ಯ ವಚನಾತ್") ಹರಿಷೇಣನ ಅಜಂತಾಗುಹಾಶಾಸನ ಆತ ಕುಂತಲ ಅವಂತಿ ಕಲಿಂಗ ಕೋಸಲ ತ್ರಿಕೂಟ ಲಾಟ ಮತ್ತು ಆಂಧ್ರದೇಶಗಳನ್ನು ಗೆದ್ದಿದ್ದನೆಂದು ಹೇಳುತ್ತದೆ.

ದೀರ್ಘಕಾಲ ಆಳಿದ ಕದಂಬವಂಶದ ದೊರೆಗಳ ಆಳಿಕೆಯ ಪ್ರದೇಶವನ್ನು, ವಿಶಾಲವಾದ ಅರ್ಥದಲ್ಲಿ ಇಂದಿನ ಕನ್ನಡ ನಾಡಿನ ಮತ್ತು ನೆರೆಯ ಮಹಾರಾಷ್ಟ್ರದ ಭಾಗಗಳನ್ನು 'ಕುಂತಲ' ಎಂಬ ಮಾತು ಒಳಕೊಳ್ಳುತ್ತದೆಂದು ಹೇಳಲು ಅವಕಾಶವಿದೆ. ಕ್ರಿ.ಶ. ೪ನೆಯ ಶತಮಾನದ ಮಧ್ಯಭಾಗದಿಂದ ೭ನೆಯ ಶತಮಾನದ ಮಧ್ಯಭಾಗದವರೆಗೆ ಕದಂಬರ ರಾಜ್ಯ ಕುಂತಲ ಅಥವಾ ಕರ್ನಾಟಕವಾಗಿತ್ತು ಎಂದು ತಿಳಿಯಲಾಗಿದೆ.[೨೯] ಪ್ರಸಿದ್ಧ ಕವಿ ಕಾಳಿದಾಸನದೆನ್ನಲಾದ 'ಕುಂತೇಶ್ವರ(ಕುಂತಲೇಶ್ವರ) ದೌತ್ಯ' ಎಂಬ ಕೃತಿಯ ಕೆಲವು ಭಾಗಗಳು ರಾಜಶೇಖರನ 'ಕಾವ್ಯ ಮೀಮಾಂಸಾ', ಭೋಜನ 'ಶೃಂಗಾರಪ್ರಕಾಶ' ಮತ್ತು 'ಸರಸ್ವತೀ ಕಂಠಾಭರಣ', ಕ್ಷೇಮೇಂದ್ರನ ಔಚಿತ್ಯವಿಚಾರ ಚರ್ಚಾ'ಗಳಲ್ಲಿ ಉದ್ಧೃತವಾಗಿದ್ದು, ಇವುಗಳಿಂದ ಗುಪ್ತರ ದೊರೆ ಇಮ್ಮಡಿ ಚಂದ್ರಗುಪ್ತನು ಕಾಳಿದಾಸನನ್ನು ಕುಂತಲರಾಜನ ಆಸ್ಥಾನಕ್ಕೆ ರಾಯಭಾರಿಯಾಗಿ ಕಳಿಸಿದ್ದನೆಂದು ಅಭಿಪ್ರಾಯಪಡಲಾಗಿದೆ. ಈ ಕುಂತಲರಾಜನು, ಕೆಲವರು ವಿದ್ವಾಂಸರ ಪ್ರಕಾರ ಕದಂಬರ ಕಾಕುತ್ಸ್ಥವರ್ಮ, ಇನ್ನು ಕೆಲವರ ಪ್ರಕಾರ ವಾಕಾಟಕರ ದೊರೆ ಇಮ್ಮಡಿ ಪ್ರವರಸೇನ, ಮತ್ತೆ ಕೆಲವರ ಪ್ರಕಾರ ಮಾನಪುರದ ರಾಷ್ಟ್ರಕೂಟರಲ್ಲಿ ಯಾವನೋ ಒಬ್ಬ ದೊರೆ. ಇದಲ್ಲದೆ, ಶಕಸ್ಥಾಪಕ (ಕ್ರಿ.ಪೂ. ೫೭) ವಿಕ್ರಮಾದಿತ್ಯನು ಕಾಳಿದಾಸನನ್ನು ಶಾತವಾಹನರ ಕುಂತಲ ಶಾತಕರ್ಣಿ ಇಲ್ಲವೆ ತತ್ಕಾಲೀನನಾದ ಮತ್ತಾವನಾದರೂ ಒಬ್ಬ ದೊರೆಯ, ಕುಂತಲವನ್ನು ಆಳುತ್ತಿದ್ದವನ, ಆಸ್ಥಾನಕ್ಕೆ ಕಳಿಸಿದ್ದಿರಬೇಕು ಎಂದು ಬೇರೆಯಾದ ಇನ್ನೊಂದು ಅಭಿಪ್ರಾಯವೂ ಇದೆ.[೩೦]

ರಾಜಶೇಖರನ 'ವಿದ್ಧಶಾಲಭಂಜಿಕಾ' ಎಂಬ ನಾಟಕದಲ್ಲಿ ತ್ರಿಪುರಿಯ ಕರ್ಪೂರ ವರ್ಷನು ಕುಂತಲದ ದೊರೆ ವೀರಪಾಲನನ್ನು ಆಸ್ಥಾನದಲ್ಲಿ ಸ್ವಾಗತಿಸಿದನೆಂದೂ ಈ ವೀರಪಾಲನು ಕರ್ಪೂರವರ್ಷನ ಮಗಳು ಕುವಲಯಮಾಲಾ ಎಂಬವಳಲ್ಲಿ ಅನುರಕ್ತನಾದನೆಂದೂ ಮುಂತಾಗಿ ಬಂದಿದೆ. ಈ ವೀರಪಾಲನೆಂಬ ಕುಂತಲದ ದೊರೆ ಕನ್ನಡ ನಾಡಿನಲ್ಲಿ ಸು. ೧೦ನೆಯ ಶತಮಾನದ ಪೂರ್ವಾರ್ಧದಲ್ಲಿ ಆಳುತ್ತಿದ್ದ ರಾಷ್ಟ್ರಕೂಟ ದೊರೆಯಿರಬೇಕೆಂದೂ ಅವನು ಪ್ರಾಯಃ ಬದ್ದೆಗ ಅಮೋಘವರ್ಷನಿರಬೇಕೆಂದೂ ತರ್ಕಿಸಲಾಗಿದೆ.[೮೧]

ಕಲಚುರಿ ದೊರೆ ಕರ್ಣದೇವನ ೧೦೪೭ರ ಗೊಹರ್ವಾ ಶಾಸನ ಕರ್ಣದೇವನ ತಂದೆ ಗಾಂಗೇಯದೇವ ಕುಂತಲವನ್ನು ಸಾಧಿಸಿದನೆಂದು ಹೇಳುತ್ತದೆ. ಕರ್ಣನ ರೇವಾ ಶಿಲಾಶಾಸನ ಸಹ ಕುಂತಲರಾಜ್ಯದ ಸೋಲನ್ನು ಕುರಿತಿದೆ. ೧೦ನೆಯ ಶತಮಾನದ ಅಂತ್ಯಭಾಗದಿಂದ ೧೨ನೆಯ ಶತಮಾನದ ಅಂತ್ಯಭಾಗದವರೆಗೆ ಕರ್ನಾಟಕವನ್ನು ಆಳಿದ ಕಲ್ಯಾಣದ ಪಶ್ಚಿಮ ಚಾಲುಕ್ಯರನ್ನು ಕುಂತಲೇಂದ್ರರೆಂದು ವರ್ಣಿಸಿದೆ. ಆರನೆಯ ವಿಕ್ರಮಾದಿತ್ಯನ (೧೦೮೭, ೧೧೨೩) ನೀಲ್ಗುಂದ ಶಾಸನದಲ್ಲಿ, ಆತನ ಅಜ್ಜ ಇಮ್ಮಡಿ ಜಯಸಿಂಹನನ್ನು ಕೀರ್ತಿಸುತ್ತ "ಕುಂತಲವಿಷಯೇ ನಿತರಾಂ ವಿರಾಜತೇ ಮಲ್ಲಿಕಾಮೋದಃ" ಎಂಬುದಾಗಿ ಹೇಳಿದೆ. ಆರನೆಯ ವಿಕ್ರಮಾದಿತ್ಯನ ಆಸ್ಥಾನಕವಿ ಬಿಲ್ಹಣನು, ತನ್ನ 'ವಿಕ್ರಮಾಂಕದೇವ ಚರಿತ'ದಲ್ಲಿ (ಸು. ೧೦೮೫) ಆಶ್ರಯದಾತ ವಿಕ್ರಮಾದಿತ್ಯನನ್ನು ಒಮ್ಮೆ 'ಕುಂತಲೇಂದು'ವೆಂದೂ ಒಮ್ಮೆ 'ಕರ್ಣಾಟೇಂದು'ವೆಂದೂ ಕರೆದು ಕುಂತಲ ಕರ್ಣಾಟ ದೇಶವಾಚಕಗಳನ್ನು ಪರ್ಯಾಯವಾಗಿ ಬಳಸಿದ್ದಾನೆ. ಕನ್ನಡ ಮತ್ತು ತಮಿಳುನಾಡಿನ ಶಾಸನಗಳಲ್ಲಿ ಸಹ ಕಲ್ಯಾಣದ ಚಾಲುಕ್ಯರನ್ನು ಕುಂತಲದ ದೊರೆಗಳೆಂದೂ ಕರ್ಣಾಟದ ದೊರೆಗಳೆಂದೂ ಪರ್ಯಾಯವಾಗಿ ಕರೆದಿರುವುದು ಕಾಣುತ್ತದೆ. 'ಕಲಿಂಗತ್ತುಪ್ಪರಣಿ'ಯಲ್ಲಿ ಇವರನ್ನು 'ಕುಂತಲರ್' ಎಂದಿದೆ. ವೈಜಯಂತೀಪುರ ಎಂದರೆ ಬನವಾಸಿ ಸಮಗ್ರ ಕರ್ಣಾಟದೇಶದ ತಿಲಕವೆಂದು ಶಾಂತಿವರ್ಮನ ಸು. ೪೫೦ರ ಬೀರೂರು ಶಾಸನದಲ್ಲಿ ಹೇಳಿದ್ದರೆ, ಸು. ೧೦೭೭ರ ಶಿವಮೊಗ್ಗಾ ಜಿಲ್ಲೆಯ ಶಾಸನವೊಂದರಲ್ಲಿ (ಎಕ. viii, ಎಸ್.ಬಿ. ೭೬೨) ಬನವಾಸಿ ಕುಂತಲ ರಾಜ್ಯದ ಭೂಷಣವೆಂದು ಕೀರ್ತಿಸಿದೆ. ಕುಂತಲದೇಶದ ಭೌಗೋಳಿಕ ವ್ಯಾಪ್ತಿ ಮತ್ತು ಗಡಿರೇಖೆಗಳು ಅಷ್ಟೇನೂ ಸ್ಪಷ್ಟವಿರಲಿಲ್ಲವೆಂದು ಇದರಿಂದಲೂ ತಿಳಿಯುವುದು. ಡಿ.ಸಿ. ಸರ್ಕಾರ್ ಭಾವಿಸುವಂತೆ ಸಾಂಪ್ರದಾಯಿಕ ದೇಶವಾಚಕ ಪಟ್ಟಿಗಳ ಕುಂತಲ, ಕರ್ಣಾಟ, ವನವಾಸಿ, ಮಾಹಿಷಕ ಇತ್ಯಾದಿ ಶಬ್ದಗಳು ಮೂಲತಃ ಬೇರೆ ಬೇರೆ ಭೌಗೋಳಿಕ ಘಟಕಗಳಾಗಿದ್ದು, ಒಂದೊಂದೂ ಇನ್ನೊಂದರ ಮಗ್ಗುಲಿಗೆ ಸೇರಿಕೊಂಡಿದ್ದಿರುವುದೂ ಒಂದು ಇನ್ನೊಂದರ ಭಾಗವಾಗಿದ್ದಿರುವುದೂ ಸಂಭವನೀಯವೇ ಆಗಿದೆ. ಸು. ೧೧-೧೨ನೆಯ ಶತಮಾನದ ವೇಳೆಗೆ, ಈಚೆಗೆ, ಕರ್ಣಾಟ ಕುಂತಲಗಳು ಪರ್ಯಾಯಪದಗಳೇ ಆದುವೆಂದೂ ಸಾಮ್ರಾಜ್ಯವ್ಯಾಪ್ತಿಯ ಹೆಸರುಗಳಾಗಿ ವಿಸ್ತರಿಸಿದುವೆಂದೂ ತೋರುತ್ತದೆ. ಇತಿಹಾಸಕಾರರಾದ ಬ್ಯೂಲರ್, ಬಿ.ಸಿ. ಲಾ, ಡಿ.ಸಿ. ಸರ್ಕಾರ್ ಮುಂತಾದವರೂ ಹಾಗೆಯೇ ತಿಳಿದಿದ್ದಾರೆ.

ಈಚೆಗೆ ಪರಮಾರ ದೊರೆ ಅರ್ಜುನವರ್ಮನ (೧೨೧೧-೧೨) ಧಾರ್ ಪ್ರಶಸ್ತಿ ಶಾಸನದಲ್ಲಿ, ಅರ್ಜುನವರ್ಮನ ರಾಣಿ ಸರ್ವಕಲಾ ಎಂಬವಳನ್ನು ಕುಂತಲೇಂದ್ರ ಸುತೆಯೆಂದು ಉಲ್ಲೇಖಿಸಲಾಗಿದ್ದು, ಈ ಕುಂತಲೇಂದ್ರನು ಹೊಯ್ಸಳ ಇಮ್ಮಡಿ ಬಲ್ಲಾಳ ನೆಂದು ಕೆಲವರು ತಿಳಿದಿದ್ದಾರೆ.

ಶಾತವಾಹನರ ಆದಿಪತ್ಯದ ದಕ್ಷಿಣಸೀಮಾರೇಖೆ ಕೊಲ್ಲಾಪುರ, ಬನವಾಸಿ ಹಾಗೂ ಚಿತ್ರದುರ್ಗದ ಪ್ರದೇಶಗಳನ್ನು ತೋರಿಸುತ್ತದೆ. ಇದೇ ಸ್ಥೂಲವಾಗಿ ಅಶೋಕನ ಸಾಮ್ರಾಜ್ಯದ ದಕ್ಷಿಣಸೀಮೆಯೂ ಆಗಿತ್ತು. ಕದಂಬರ ರಾಜ್ಯ ಇಂದಿನ ಕನ್ನಡನಾಡು ಮತ್ತು ನೆರೆಯ ಮಹಾರಾಷ್ಟ್ರದ ಭಾಗಗಳನ್ನು ಒಳಕೊಂಡಿತ್ತು. ಇಲ್ಲಿಂದೀಚೆಗೆ ಸಹ ಕುಂತಲ ಬೊಂಬಾಯಿ ಪ್ರಾಂತದ ತೀರ ದಕ್ಷಿಣಕ್ಕಿರುವ ಹಾಗೂ ಹಳೆಯ ಮೈಸೂರು ರಾಜ್ಯದ ಜಿಲ್ಲೆಗಳ ನಡುವೆ ವ್ಯಾಪ್ತಿಯನ್ನು ಪಡೆದಿತ್ತು. ನೀಲ್ಗುಂದದ ಆರನೆಯ ವಿಕ್ರಮಾದಿತ್ಯನ ಶಾಸನದ ಪ್ರಕಾರ ಕುಂತಲರಾಜ್ಯದಲ್ಲಿ ಕರ್ನಾಟಕದ ಉತ್ತರಕ್ಕೆ ಹಾಗೂ ಮಹಾರಾಷ್ಟ್ರದ ದಕ್ಷಿಣಕ್ಕೆ ಇರುವ, ನರ್ಮದಾನದಿ ಹರಿಯುವ, ಕೆಲವು ಭಾಗಗಳು ಸೇರಿದ್ದುವೆಂದು ತಿಳಿಯಬಹುದಾಗಿದೆ. ಉತ್ತರದ ಭಾಗ ಗೋದಾವರಿಯವರೆಗೆ ವ್ಯಾಪಿಸಿತ್ತು ಎನ್ನುವುದು ಸೊಡ್ಡಲನ 'ಉದಯಸುಂದರೀ ಕಥಾ'ದಲ್ಲಿಯ, ಕುಂತಲದ ರಾಜಧಾನಿ ಗೋದಾವರೀ ತೀರದ ಪ್ರತಿಷ್ಠಾನಪುರವಾಗಿದ್ದಿತೆಂಬ (ಈಗಿನ ಔರಂಗಾಬಾದ್ ಜಿಲ್ಲೆಯ ಪೈಠನ್) ಮಾತಿನಿಂದ ಸ್ಪಷ್ಟವಾಗುತ್ತದೆ. ("ಕುಂತೇಷು ತಟೇ ಗೋದಾವರೀತಿ ಮಹಾಸರಿತಃ । ಪ್ರತಿಷ್ಠಾನಮ್ ನಾಮನಗರಮ್ ಪ್ರತಿಷ್ಠಾನನಗರ- ಪರಮೇಶ್ವರ ಕುಂತಲಾನಾಮಧೀಶ್ವರೋ ರಾಜಾ ಮಲಯವಾಹನೋ ಭವಾನ್" ॥)

ಫ್ಲೀಟ್ ಅವರ ಪ್ರಕಾರ ಕುಂತಲರಾಜ್ಯದಲ್ಲಿ ಸೇರಿದ್ದ ಪ್ರದೇಶಗಳು ಈ ರೀತಿಯಾಗಿವೆ : "ದಕ್ಷಿಣದಲ್ಲಿ ಉತ್ತರ ಕನ್ನಡ ಜಿಲ್ಲೆಯ ಬನವಾಸಿ, ಬಳ್ಳಿಗಾಮೆ, ಶಿವಮೊಗ್ಗ ಜಿಲ್ಲೆಯ ಹರಿಹರ, ಬಳ್ಳಾರಿ ಜಿಲ್ಲೆಯ ಹಂಪಿ (ವಿಜಯನಗರ) ; ಈ ಪ್ರದೇಶಗಳಿಗೆ ಉತ್ತರದಲ್ಲಿ ಧಾರವಾಡ ಜಿಲ್ಲೆಯ ಹಾನಗಲ್ಲು, ಲಕ್ಷ್ಮೇಶ್ವರ, ಲಕ್ಕುಂಡಿ ಮತ್ತು ಗದಗು; ಇನ್ನೂ ಉತ್ತರದಲ್ಲಿ ಬೆಳಗಾಂ ಜಿಲ್ಲೆಯ ಬೆಳಗಾಂ, ಸೌಂದತ್ತಿ, ಮನೋಳಿ ಮತ್ತು ಕೊಣ್ಣೂರು; ಬಿಜಾಪುರ ಜಿಲ್ಲೆಯ ಪಟ್ಟದ ಕಲ್ಲು ಮತ್ತು ಐಹೊಳೆ ; ಮತ್ತೂ ಉತ್ತರಕ್ಕೆ ಸಾಂಗ್ಲಿ ಸಂಸ್ಥಾನದ ತೇರದಾಳ, ಬಿಜಾಪುರ ಹಾಗೂ ನಿಶ್ಚಯವಾಗಿ ಕಲ್ಯಾಣಿ."[೨]

ಜಿ.ಎಸ್. ಗಾಯಿಯವರ ಪ್ರಕಾರ, ಶಾಸನಸಾಕ್ಷ್ಯಗಳಿಂದ ಬನವಾಸಿ ೧೨೦೦೦, ಪಾನುಂಗಲ್ ೫೦೦, ಪುರಿಗೆಱೆ ೩೦೦, ಬೆಳ್ವೊಲ ೩೦೦, ಕೂಂಡಿ ೩೦೦೦, ತೊಱಗಲೆ ೬೦೦, ತರ್ದವಾಡಿ ೧೦೦೦, ಕೆಳವಾಡಿ ೩೦೦ ಇತ್ಯಾದಿ, ಎಂದರೆ ಹಳೆಯ ಮೈಸೂರು ರಾಜ್ಯದ ಕೆಲವು ಭಾಗಗಳು, ಬಲುಮಟ್ಟಿಗೆ ಉತ್ತರ ಕರ್ನಾಟಕದ ಪೂರ್ತಿಭಾಗ ಹಾಗೂ ದಕ್ಷಿಣ ಮಹಾರಾಷ್ಟ್ರದ ಕೆಲವು ಭಾಗಗಳು, ಅಲ್ಲದೆ, ಮಹಾರಾಷ್ಟ್ರದ ನಾಂದೇಡ್ ಜಿಲ್ಲೆಯ ದೇಗಲೂರು ತಾಲ್ಲೂಕಿನ ಸುತ್ತಮುತ್ತಣ ಭಾಗ ಸಹ ಕುಂತಲ ದೇಶದೊಳಗೆ ಸೇರಿತ್ತು.[೩]

ಈ ಕುಂತಲದ ಹೆಸರು, ಪ್ರಾದೇಶಿಕವಾಗಿ ಪ್ರಾಮುಖ್ಯವನ್ನು ಕೀರ್ತಿಸುವ ಕನ್ನಡ ಶಾಸನಗಳು ಹಲವಾರು ಇವೆ. "ದೇಶಂಗಳೊಳಗೆ ಕುಂತಳದೇಶಮೆ ಮಿಗಿಲ್" (೧೦೭೯) "ಜಳಧಿವ್ಯಾವೇಷ್ಟಿತೋರ್ವೀಮಹಿಳೆಗೆ ವಿಳಸಲ್ಲೋಳಭಾಳಸ್ಥಳೀ ಕುಂತಲದೇಶಂ ತಾನೆನಿಪ್ಪಂತಿರಲೆಸೆವ ಲಸತ್ಕುಂತಳಕ್ಷೋಣಿಗೆ" (೧೧೧೬), "ವರರತ್ನಾಕರದಿಂದಳಂಕರಿಸಿ ಮೆಯ್ವಿರ್ಚಿರ್ದ ಭೂದೇವಿಗಾದರದಿಂ ಕುಂತಳದಂತೆ ಕುಂತಳಸಂದೇಶಂ ತೊರ್ಕುಂ" (೧೪೦-೫), "ಭರತಮಹೀಕಾಂತೆಯ ಕುಂತಳದಂತೆಸೆವುತಿರ್ದ ಕುಂತಳದೇಶದ" (೧೧೭೬) - ಇತ್ಯಾದಿಯಾದವು ಅಂತಹವುಗಳಲ್ಲಿ ಕೆಲವು. ಭಾರತದೇಶದ ದಕ್ಷಿಣಭಾಗದಲ್ಲಿ ಕುಂತಳದೇಶದ ಮಹತಿಯನ್ನು ಸಾರುವ ಈ ಉಲ್ಲೇಖಗಳು ಕನ್ನಡಿಗರ ಹೆಮ್ಮೆಗೆ ಕೋಡು ಮೂಡಿಸತಕ್ಕವು ; ಅಭಿಮಾನವನ್ನು ಉಕ್ಕೇರಿಸುವಂಥವು. "ದ್ವಾರಕಾಂತಂ... ಶ್ರೀ ಕುಂತಲಾಭಿಧೋ ದೇಶಃ" ಎಂಬ 'ಶಕ್ತಿಸಂಗಮತಂತ್ರ'ದ (೩-೭-೪೩) ಮಾತೂ ವಿದರ್ಭವೂ ಕುಂತಲವೆಂದು ರಾಜಶೇಖರನು 'ಕರ್ಪೂರಮಂಜರಿ'ಯಲ್ಲಿ ವರ್ಣಿಸಿರುವ ರೀತಿಯೂ ಇವನ್ನು ಪುಷ್ಟೀಕರಿಸಿ ತುಂಗಭದ್ರೆಯಿಂದ ವಿದರ್ಭದವರೆಗೆ ಕುಂತಲದೇಶವೆಂದು ತಿಳಿಯಲ್ಪಡುತ್ತಿತ್ತೆಂದು ನಂದಲಾಲ್ ಡೇ ಹೇಳಿರುವರೆಂಬ ಅಭಿಪ್ರಾಯವೂ ಸರಿಯಾಗಿದ್ದರೆ, ಅದು ಇನ್ನೂ ಸಂತಸದ ವಿಷಯವೇ.[೪] ಆದರೆ 'ಶಕ್ತಿ ಸಂಗಮತಂತ್ರ'ದಲ್ಲಿ ಶ್ರೀಕುಂತಲವು ಕಾಮಗಿರಿ ದ್ವಾರಕೆಗಳ ನಡುವೆಯಿದ್ದುದಾಗಿ ಹೇಳಿದ್ದು, ಈ ಕಾಮಗಿರಿ ಉತ್ತರದ ಯಾವಪ್ರದೇಶವನ್ನು ಹೇಳುತ್ತದೆಯೆಂಬುದನ್ನು ವಿಶದವಾಗಿ ಚರ್ಚಿಸಿರುವ ಡಿ.ಸಿ. ಸರ್ಕಾರ್ ಅವರು, ಪದ್ಯದಲ್ಲಿ ಶ್ರೀಕುಂತಲ ಎಂಬ ಪಾಠವೇ ಶ್ರೀಕಂಠಕ ಎಂಬುದರ ಪ್ರತಿಯಾಗಿ ತಪ್ಪು ಬಿದ್ದಿರುವುದು ಸಾಧ್ಯವೇ ಎಂದೂ ತರ್ಕಿಸಿದ್ದಾರೆ. ಅಲ್ಲದೆ ದಖನ್ನಿನಲ್ಲಿ ಒಂದು, ವಾರಣಾಸಿಯ ದಕ್ಷಿಣದಲ್ಲಿ ಚೂನಾರ್‌ಗೆ ಸಮೀಪದಲ್ಲಿ ಇನ್ನೊಂದು, ಪಶ್ಚಿಮದಲ್ಲಿ ಮತ್ತೊಂದು, ಹೀಗೆ ಮೂರು ಕುಂತಲಗಳನ್ನು ಪರ್ಗಿಟರ್ ಗುರುತಿಸುವುದಕ್ಕೆ ಇದೇ ಸಂದಿಗ್ಧತೆ ಕಾರಣವಿರಬಹುದೆಂದು ತಿಳಿಸಿದ್ದಾರೆ.[೫] ಇದು ಹೇಗಿದ್ದರೂ ಕುಂತಲ ಕರ್ಣಾಟಗಳ ಪರಸ್ಪರ ಸಂಬಂಧವಂತೂ ಇದರಿಂದ ಅಬಾಧಿತವಾದ್ದು. ಚಾಲುಕ್ಯ ರಾಷ್ಟ್ರಕೂಟ ಮತ್ತು ವಿಜಯನಗರಗಳ ಏಳಿಗೆಯನ್ನು ಅನುಸರಿಸಿ ಕುಂತಲ, ಕರ್ಣಾಟಗಳೆಂಬ ಹೆಸರುಗಳು ಕನ್ನಡ ಮಾತಿನ ಪ್ರದೇಶಗಳ ಹೊರಗೆ ಸಹ ವಿಶಾಲಪ್ರದೇಶಗಳಿಗೆ ಹಬ್ಬಿದುದಂತೂ ನಿಜ. ಎರಡರ ವಿಷಯದಲ್ಲೂ ಮೊದಲು ಸಣ್ಣವ್ಯಾಪ್ತಿಯ ಹೆಸರುಗಳಾಗಿದ್ದುದು ಅನಂತರದಲ್ಲಿ ಸಾಮ್ರಾಜ್ಯದ ವ್ಯಾಪ್ತಿಯನ್ನು ಪಡೆದುವು, ಒಂದರ ಸ್ಥಾನದಲ್ಲಿ ಇನ್ನೊಂದು ಎನ್ನುವಂತೆ ಬಳಕೆಯಾದುವು - ಎಂಬುದನ್ನು ತಿಳಿದಿರಬೇಕು.

ಮಹಿಷಮಂಡಲ

ನಮ್ಮ ದೇಶದ ಪುರಾಣೇತಿಹಾಸದ, ಸಾಹಿತ್ಯದ ಗ್ರಂಥಗಳಲ್ಲಿ ಮಾಹಿಷಿಕ, ಮಹಿಷಿಕ, ಮಾಹಿಷ್ಮತಿ, ಮಹಿಷಮಂಡಲ, ಮಹಿಷರಾಷ್ಟ್ರ, ಮಹಿಷವಿಷಯ, ಮಹಿಷ ಇತ್ಯಾದಿ ಹೆಸರುಗಳು ಕಾಣಿಸಿಕೊಂಡಿವೆ. ಈಚಿನ ಶಾಸನ ಮತ್ತು ಸಾಹಿತ್ಯ ಗ್ರಂಥಗಳಲ್ಲಿ ಮೈಸುನಾಡು, ಮೈಸೆನಾಡು, ಮೈಸನಾಡು, ಮಯಿಸೂರು, ಮೈಸೂರು ಸ್ಥಳ, ಮಹಿಸೂರು

ಇತ್ಯಾದಿ ಹೆಸರುಗಳು ಬಂದಿವೆ. ಮೈಸೂರು ಎಂಬುದಾಗಿ ಕರೆಯುತ್ತಿರುವ ಇಂದಿನ ಸ್ಥಳದೊಂದಿಗೆ ಇವುಗಳ ಸಂಬಂಧವನ್ನು ಕುರಿತು ವಿದ್ವಾಂಸರು, ಫ್ಲೀಟ್, ರೈಸ್, ಆರ್. ನರಸಿಂಹಾಚಾರ್ಯ ಮೊದಲಾದವರು, ಚರ್ಚಿಸಿರುವುದು ಈಗಾಗಲೇ ತಿಳಿದ ವಿಷಯ ವಾಗಿದೆ.

ಪಾಲಿ ಧರ್ಮಗ್ರಂಥವಾದ 'ದೀಪವಂಸ'ದಲ್ಲಿ 'ಮಹಿಷರಾಷ್ಟ್ರ' ಎಂಬುದಾಗಿ ಕರೆಯಲ್ಪಡುವ ಮಹಿಷದೇಶಕ್ಕೆ ಮಹಾದೇವನೆಂಬ ಬೌದ್ಧಸಂನ್ಯಾಸಿಯನ್ನು ಮತಪ್ರಸಾರಕ್ಕೆಂದು ಕಳಿಸಲಾಗಿತ್ತು ಎಂದು ಹೇಳಿದೆ. ಹೀಗೆಯೇ 'ಮಹಾವಂಸ'ದಲ್ಲಿ ಮೌರ್ಯಚಕ್ರವರ್ತಿ ಅಶೋಕನ ಕಾಲದಲ್ಲಿ ಮೊಗ್ಗಲಿಪುತ್ತ ತಿಸ್ಸನು ಒಂದು ಬೌದ್ಧ ಮತಪ್ರಸಾರಕ ತಂಡವನ್ನು ಮಹಿಷಕಮಂಡಲಕ್ಕೆ ಕಳಿಸಿದನೆಂದು ಹೇಳಿದೆ. ಬುದ್ಧಘೋಷನ 'ಸಮಂತಪಸಾದಿಕ'ದಲ್ಲಿ ಈ ಪ್ರದೇಶವನ್ನು 'ಮಹಿಷಕಮಂಡಲ'ವೆಂದು ಕರೆದಿದೆ. ಇವು ಬೌದ್ಧ ಧರ್ಮಗ್ರಂಥಗಳ ವಿಚಾರವಾಯಿತು. ಮಹಾಭಾರತದಲ್ಲಿಯೇ, ರಾಜಸೂಯಯಾಗ ಮಾಡಲು ಸಂಕಲ್ಪಿಸಿದ ಯುಧಿಷ್ಠಿರ ತನ್ನ ಸೋದರ ಸಹದೇವನನ್ನು ದಕ್ಷಿಣ ಕಡೆಯ ವಿಜಯಕ್ಕೆ ಕಳಿಸಿದ್ದು, ಅವನು ಮಾಹಿಷ್ಮತಿಯ ರಾಜನನ್ನೂ ಸೋಲಿಸಿದನೆಂಬುದಾಗಿ ಹೇಳಿದೆ. ಮಹಾಭಾರತದ ಭೀಷ್ಮಪರ್ವದಲ್ಲಿ ದಕ್ಷಿಣಭಾರತದ ಸ್ಥಳಗಳನ್ನು ಕುರಿತಾಗ ಉನ್ನತ್ಯಕದೊಂದಿಗೆ ಮಾಹಿಷಿಕವನ್ನು ಹೇಳಿದೆ (೯-೫೭) ಪುರಾಣಗ್ರಂಥಗಳಲ್ಲಿ, ಮಾರ್ಕಂಡೇಯ ಮತ್ತು ಮತ್ಸ್ಯಪುರಾಣಗಳಲ್ಲಿ 'ಮಾಹಿಷಿಕ' (೫೪-೪೭ ; ೧೧೪-೪೬), ಬ್ರಹ್ಮಾಂಡಪುರಾಣದಲ್ಲಿ 'ಮಹಿಷಿಕಾ' (೧೬-೫೫-೫೮), ಪದ್ಮಪುರಾಣದಲ್ಲಿ 'ಮಾಹಿಷಕ' (೧-೬-೫೪) ಇತ್ಯಾದಿ ರೂಪಗಳಲ್ಲಿ ದಕ್ಷಿಣ ಭಾರತದ ಪ್ರದೇಶಗಳನ್ನು ಹೆಸರಿಸುವಾಗ ಮಹಿಷಪರವಾದ ಹೆಸರುಗಳು ಬಂದಿವೆ. ವಾಯು, ವಾಮನ ಮುಂತಾದ ಪುರಾಣ ಗಳಲ್ಲಿಯೂ ಈ ಹೆಸರನ್ನು ಕಾಣಬಹುದಾಗಿದೆ.

ಮಹಿಷಮಂಡಲ ಎಂಬುದು ದಕ್ಷಿಣ ಭಾರತದ ಯಾವ ಪ್ರದೇಶವನ್ನು ಸೂಚಿಸುವ ಮಾತು ಎನ್ನುವುದು ೧೮೫೪ರ ವರೆಗೆ ಸರಿಯಾಗಿ ತಿಳಿದಿರಲಿಲ್ಲ.[೮೬] ೧೮೪೦ರಲ್ಲಿ, ಎಚ್.ಎಚ್. ವಿಲ್ಸನ್ ವಿಷ್ಣುಪುರಾಣವನ್ನು ಸಂಪಾದಿಸುವಾಗ, ಮಹಾಭಾರತದ ಮಾಹಿಷಿಕರು ಈಗಿನ ಮೈಸೂರಿನ ಜನ ಎಂದು ಮಾತ್ರ ತಿಳಿಸಿದ್ದರು. ಪಾಲಿ ಧರ್ಮಗ್ರಂಥಗಳ ಮಹಿಷಮಂಡಲ ಆಧುನಿಕ ಮೈಸೂರನ್ನು ಸೂಚಿಸುತ್ತದೆಂದು 'ಇಂಪೀರಿಯಲ್ ಗೆಜೆಟಿಯರ್'ನಲ್ಲಿಯೂ (೧೯೦೮) ಆಧುನಿಕ ಮೈಸೂರು ನಗರದ ಸುತ್ತಣ ಪ್ರದೇಶವನ್ನು ಸೂಚಿಸುತ್ತದೆಂದು ರೈಸ್ ಅವರ 'ಮೈಸೂರು' (೧೮೯೭) ಮತ್ತು 'ಶಾಸನಾಧಾರಗಳಿಂದ ತಿಳಿಯುವಂತೆ ಮೈಸೂರು ಮತ್ತು ಕೊಡಗಿನ ಇತಿಹಾಸ' ಎಂಬ ಗ್ರಂಥಗಳಲ್ಲಿಯೂ (೧೯೦೯) ಪ್ರಕಟಪಡಿಸಲಾಯಿತು.[೮೭] ಫ್ಲೀಟ್ ಅವರಾದರೋ 'ಮಹಿಷ ಮಂಡಲ ಮತ್ತು ಮಾಹಿಷ್ಮತಿ' ಎಂಬ ತಮ್ಮ ಲೇಖನದಲ್ಲಿ, ಮಹಾಭಾರತದ ಮಾಹಿಷ್ಮತಿ ಮಹಿಷಮಂಡಲದ ರಾಜಧಾನಿಯಾಗಿದ್ದ ಸ್ಥಳವೆಂದೂ ಈ ಪ್ರದೇಶ ಇಂದಿನ ಮೈಸೂರಿಗೆ ಸಂಬಂಧಿಸಿದ್ದಲ್ಲ, ಮಧ್ಯಪ್ರದೇಶದ ನೆಮಾಡ್ ಜಿಲ್ಲೆಯ ಮಾಂಧಾತ ವೆಂಬುದೆಂದೂ

ಸೂಚಿಸಿದರು. ಫ್ಲೀಟರ ಈ ಅಭಿಪ್ರಾಯವನ್ನು ರೈಸ್ ಅವರು ಒಪ್ಪದೆ, ಮತ್ತೆ, ಇಂದಿನ ಮೈಸೂರಿಗೆ ದಕ್ಷಿಣ ಸೀಮೆಯೇ 'ಮಹಿಷ ಮಂಡಲ'ವೆಂದೂ ಮೈಸೂರು ಮುಖ್ಯನಗರವಾಗಿದ್ದ ಮೈಸೂರುರಾಜ್ಯವೇ ಆ ಪ್ರದೇಶವೆಂದೂ ವಾದಿಸಿ, ಕ್ರಿ.ಪೂ. ೨ನೆಯ ಶತಮಾನದ ತಮಿಳು ಸಾಹಿತ್ಯಗ್ರಂಥವಾದ 'ಅಗನಾನೂರು'ವಿನ ಎರುಮೈನಾಡು, ಎರುಮೈಯೂರನ್ (ಎಂದರೆ ಎಮ್ಮೆಗಳ ನಾಡು, ಎಮ್ಮೆಗಳ ಊರವನು) ಎಂಬ ಶಬ್ದಗಳು ಅದರ ಪರ್ಯಾಯಶಬ್ದಗಳೆಂದೂ ಗ್ರಹಿಸಿದ್ದಾರೆ.[೮೮]

ಆರ್. ನರಸಿಂಹಾಚಾರ್ಯರು ಸಹ ಶಾಸನ ಮತ್ತು ಸಾಹಿತ್ಯ ಗ್ರಂಥಗಳಲ್ಲಿ ಮಹಿಷರಾಷ್ಟ್ರ, ಮೈಸನಾಡು (ಮಹಿಷನಾಡು) ಎಂದು ಬಂದಿರುವುದು ನಮಗೆ ಪರಿಚಿತವಾಗಿರುವ ಮೈಸೂರು ಸೀಮೆಯನ್ನು ಹೇಳುವ ಅರ್ಥದಲ್ಲಿಯೇ ಎಂದು ನಂಬಿದ್ದಾರೆ. "ಮಹಿಷಮಂಡಲವು ಮಹಿಶೂರ ದೇಶವಲ್ಲ. ನರ್ಮದಾನದಿಯ ಸಮೀಪದ ಪ್ರಾಂತವು ಎಂದು ಮೆ|| ಫ್ಲೀಟ್ ಬರೆದಿದ್ದರೂ ಮೈಸೂರು ಸೀಮೆಗೆ ಮಹಿಷರಾಷ್ಟ್ರ ಅಥವಾ ಮೈಸನಾಡು ಎಂಬ ಹೆಸರು ಶಾಸನಗಳಲ್ಲಿಯೂ ಪ್ರಾಚೀನ ಗ್ರಂಥಗಳಲ್ಲಿಯೂ ದೊರೆಯುತ್ತದೆ. ಮೈಸ ಎಂಬುದು ಮಹಿಷ ಎಂಬ ಶಬ್ದದ ತದ್ಭವವು" - ಎಂದು ಗ್ರಹಿಸಿರುವುದಲ್ಲದೆ ಅವರು ತಮಿಳು ಆಧಾರಗಳ ಬಗ್ಗೆ ಹೀಗೆ ಹೇಳಿದ್ದಾರೆ : "ತಮಿಳು ಭಾಷೆಯಲ್ಲಿರುವ 'ಅಗನಾನೂರು' ಎಂಬ ಕವಿಸೂಕ್ತಿ ಕದಂಬದಲ್ಲಿ ಕ್ರಿಸ್ತಶಕ ೨ನೆಯ ಶತಮಾನದಲ್ಲಿದ್ದ ಮಾಮೂಲನಾರ್ ಎಂಬ ಕವಿಯ ಉಕ್ತಿಯಾದ ೧೧೫ನೆಯ ಪದ್ಯದಲ್ಲಿ ಎರುಮೈನಾಡು (ಎರುಮೈ=ಮಹಿಷ) ಎಂಬ ಹೆಸರನ್ನು ಹೇಳಿ, ಇದು ಪಶ್ಚಿಮಪ್ರಾಂತದಲ್ಲಿ (ಕುಡನಾಡು) ಇದೆ ಎಂದು ಹೇಳಿದೆ. ನಕ್ಕೀರಾರ್ ಎಂಬ ಮತ್ತೊಬ್ಬ ಪುರಾತನ ಕವಿಯ ಉಕ್ತಿಯಾದ ೨೬ನೆಯ ಪದ್ಯದಲ್ಲಿ ನೆಡುಂಜೆಳಿಯನ್ ಎಂಬ ಪಾಂಡ್ಯರಾಜನು ತಲೈಯಾಲಂಕಾನಂ ಎಂಬ ಸ್ಥಳದಲ್ಲಿ ಚೇರನ್, ತಿತಿಯನ್, ಎಳಿನಿ, ಎರುಮೈಯೂರನ್ (ಮಹಿಷಪುರದಪನು), ಇರುಂಕೋ, ವೇಣ್ಮಾನ್, ಪೊರನನ್ ಎಂಬ ಏಳುರಾಜರನ್ನೂ ಯುದ್ಧದಲ್ಲಿ ಸೋಲಿಸಿದಂತೆ ಹೇಳಿದೆ. ಅದೇ ಕವಿಯ ಉಕ್ತಿಯಾದ ೨೫೩ನೆಯ ಪದ್ಯದಲ್ಲಿ ಮಹಿಷಪುರದವನು ಬಡಗರ ಕುಲದವನು ಎಂದು ಉಕ್ತವಾಗಿದೆ...."[೮೯]

ಇದು ಹೀಗಿದ್ದರೂ, ಫ್ಲೀಟ್ ಅವರೇನೂ ಈ ಸಮೀಕರಣದ ವಿಷಯವಾಗಿ ಹಿಂದೆಯೇ ತಮ್ಮ ಸಂದೇಹಗಳನ್ನು ಹೀಗೆ ವ್ಯಕ್ತಮಾಡಿದ್ದರು : 'ಅಗನಾನೂರು'ವಿನ ಕಾಲ ವಿವಾದಾಸ್ಪದವಾದ್ದು. ಕೆಲವರ ಪ್ರಕಾರ ಅದು ಸು. ೮ನೆಯ ಶತಮಾನದ್ದು. ಏತಕ್ಕಾಗಿ ಮೈಸೂರನ್ನು ಅಲ್ಲಿ ಕುರಿತಿದೆಯೋ ತಿಳಿಯದು. ಮೈಸೂರು ಪ್ರಾಂತವನ್ನು 'ಎರುಮೈನಾಡು' ಎಂಬ ಹೆಸರಿನಿಂದ ಮೈಸೂರಿನೊಳಗಿನ ಹಾಗೂ ನೆರೆಯ ತಮಿಳುನಾಡಿನ ಹಲವಾರು ತಮಿಳುಶಾಸನಗಳಲ್ಲಿ ಎಲ್ಲಿಯೂ ಉಲ್ಲೇಖಿಸಿಲ್ಲ ಪ್ರತಿಯಾಗಿ 'ಗಂಗಪಾಡಿ' ಎಂದು ಉಲ್ಲೇಖಿಸಿದೆ. ಮಹಿಷಮಂಡಲದೊಳಗಿನ 'ಮಹಿಷ' ಎಂಬ ಮಾತು ಎಮ್ಮೆ ಎಂಬರ್ಥವನ್ನು ಕೊಡಬೇಕಾದ್ದಿಲ್ಲ. ಭಾರತ ಮತ್ತು ಪುರಾಣಗಳೊಳಗೆ ಹೇಳಿರುವ ಮಹಿಷ, ಮಹಿಷಕ, ಮಾಹಿಷಿಕರೆಂಬ ಜನರನ್ನು ಅದು ಹೇಳುತ್ತದೆ.[೯೦]

ಕೆಲವರು, ಪಾಣಿನಿಯ ವ್ಯಾಖ್ಯಾನಕಾರನಾದ ಕಾತ್ಯಾಯನ (ಕ್ರಿ.ಪೂ. ೪೦೦) ಹೇಳುವ 'ಮಾಹಿಷ್ಮತ್' ಎಂಬುದು ಮೈಸೂರು ದೇಶವನ್ನು ಕುರಿತಿರಬಹುದು, ಏಕೆಂದರೆ ಆ ಹೆಸರು ಬರಲು ಅದು ಮಹಿಷಿಗಳು ತುಂಬಿರುವ ನಾಡು ಎಂಬುದೇ ಕಾರಣ ಎಂದು ಆತ ಹೇಳಿದ್ದಾನೆ - ಎಂಬುದಾಗಿ ಭಾವಿಸಿದ್ದಾರೆ.[೯೧] ಮಾಹಿಷ್ಮತ್ ಎಂಬುದು ಫ್ಲೀಟ್ ಅವರು ಹೇಳುವ ನರ್ಮದೆಯ ದ್ವೀಪದ ಮೇಲೆ ಇರುವಂತಹ ಮಾಂಧಾತವೇ ಇದ್ದರೂ ಇರಬಹುದೇ, ನಿಶ್ಚಯವಲ್ಲ.

ವಿ.ವಿ. ಮಿರಾಶಿಯವರ ಕೆಲವು ಶೋಧನೆಗಳನ್ನು ಗಮನಿಸುತ್ತ, ಡಿ.ಸಿ. ಸರ್ಕಾರ್ ಅವರು "ಮಾಹಿಷಕ ಇಲ್ಲವೆ ಮಹಿಷಮಂಡಲ ಎಂಬುದರ ಮೂಲಕ ಮಹಿಷ (ಮಹಿಷ್ಯ) ಎಂಬ ರಾಜಮನೆತನದ ಹೆಸರು ಹುಟ್ಟಿ ಬಂದಿರಬೇಕು. ಈ ಮನೆತನ ಹೈದರಾಬಾದು ಸಂಸ್ಥಾನದ ದಕ್ಷಿಣಭಾಗದಲ್ಲಿ ಆಳುತ್ತಿತ್ತು" ಎಂಬ ಅವರ ಸೂಚನೆಗಳನ್ನು ಒಂದು ರೀತಿಯಲ್ಲಿ ಸಮರ್ಥಿಸುತ್ತ, ಅವರ ವಿವರಣೆ ಶಾಸನಾಧಾರಗಳು ಲಭ್ಯವಿರುವ ಮೈಸೂರುಸಂಸ್ಥಾನಕ್ಕೇ ಹೊಂದಿಕೊಳ್ಳುವುದೆಂದು ಬರೆದಿದ್ದಾರೆ. ಅಲ್ಲದೆ ಜನ ಮತ್ತು ನಾಡುಗಳಿಗೆ 'ಮಹಿಷ' ಎಂಬುದು ಪ್ರಾಣಿಲಾಂಛನವಾಗಿ ಇದ್ದ ದೆಸೆಯಿಂದ ರೂಢಿಯಾಗಿರಬೇಕೆಂದೂ ಈ ಕಾರಣವಾಗಿ ದೇಶದಲ್ಲಿ ಮಹಿಷರ ನೆಲೆಗಳು ಒಂದಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಇದ್ದುವೆಂದು ಭಾವಿಸಲು ಸಾಧ್ಯವಿದೆಯೆಂದೂ ನರ್ಮದೆಯ ದಂಡೆಯ ಮಾಹಿಷ್ಮತಿ ಎಂಬುದು ಸಹ ಮಹಿಷರಿಗೆ ಆ ಹೆಸರು ಬರಲು ಕಾರಣವಾಗಿರಬೇಕೆಂದೂ ಅವರು ತಿಳಿಸಿದ್ದಾರೆ.[೯೨]

ಬಿಂದುಸಾರನ (ಕ್ರಿ.ಪೂ. ೨೯೮-೨೭೨) ದಕ್ಷಿಣದೇಶದ ವಿಜಯಗಳ ಪರಿಣಾಮವಾಗಿ ಮಹಿಷಮಂಡಲ ಸಹ ಆತನ ಸಾಮ್ರಾಜ್ಯದ ಭಾಗವಾಗಿ ಸೇರಿದ್ದಿರಬೇಕು ಎಂದು ಎಂ. ಶೇಷಾದ್ರಿ ಭಾವಿಸಿದ್ದಾರೆ.[೯೩] ಈಗಿನ ಮಟ್ಟಿಗೆ ಕದಂಬದೊರೆ ೧ನೆಯ ವಿಷ್ಣುವರ್ಮನ ಹೆಬ್ಬಟ ಶಾಸನದಲ್ಲಿ (೫ನೆಯ ಶತಮಾನದ ಅಂತ್ಯಭಾಗ), ಮಹಿಷ ವಿಷಯದೊಳಗೆ ಇರುವ ಹೆಬ್ಬಟ > ಹೆರ್ಬ್ಬಟ) ಗ್ರಾಮವೆಂದು ಬಂದಿರುವುದನ್ನು ಗಮನಿಸಿದರೆ, ಈಗಿನ ತುಮಕೂರು ಜಿಲ್ಲೆಯ ಗ್ರಾಮವಾದ ಹೆಬ್ಬಟವಿದ್ದ ಪ್ರದೇಶ ಮಹಿಷವಿಷಯವೆನಿಸಿದ್ದುದು ನಿಶ್ಚಯವೆಂದು ತಿಳಿಯುತ್ತದೆ.[೯೪] ರಾಷ್ಟ್ರಕೂಟದೊರೆ ಮುಮ್ಮಡಿ ಕೃಷ್ಣನ ೯೪೫ರ ಒಂದು ಶಾಸನದಲ್ಲಿಯೂ 'ಮಾಹಿಷವಿಷಯ' ವೆಂದಿದೆಯಾದರೂ, ಇದು ಹುಲ್ಷ್ ಮತ್ತು ಇತರ ವಿದ್ವಾಂಸರ ಪ್ರಕಾರ ಈಗನ ಮೈಸೂರು ಎಂದಾದರೆ, ಫ್ಲೀಟ್ ಅವರ ಪ್ರಕಾರ ಬಿಜಾಪುರ ಜಿಲ್ಲೆಯೊಳಗಿನದು.[೯೫]

ಈ ಕೆಲವು ಸಮೀಕರಣಗಳು ವಿದ್ವಾಂಸರ ಕುತೂಹಲವನ್ನು ಕೆರಳಿಸಿರುವುದು ನಿಜ. ಫ್ಲೀಟ್ ಪ್ರಕಾರ ಈಗಿನ ಮೈಸೂರು ರಾಜ್ಯ ಹಾಗೂ ಜಿಲ್ಲೆ ಒಂದು ಕಾಲದಲ್ಲಿ ಮೈಸೂರು ಎಂದಿದ್ದ ಗ್ರಾಮವೊಂದು ರಾಜಧಾನಿಯಾಗಿ ಬೆಳೆದುದರ ಫಲ. ಶಾಸನಾಧಾರಗಳನ್ನು ಲಕ್ಷಿಸಿ ಹೇಳುವುದಾದರೆ, ರೈಸ್ ಅವರು ಸು. ೧೧-೧೨ನೆಯ ಶತಮಾನದ ಶಾಸನಗಳಲ್ಲಿ ಮೈಸುನಾಡು, ಮೈಸೂರ್ ನಾಡು ಇವನ್ನು ಗುರುತಿಸಿದ್ದಾರೆ.

ಮೈಸೂರು ರಾಜ್ಯದ ಚಿಕ್ಕಮಗಳೂರು ಜಿಲ್ಲೆಗೆ ಸೇರಿದ ಮಲ್ಲೇಶ್ವರದಲ್ಲಿ ದೊರೆತ ಶಾಸನವೊಂದರಲ್ಲಿ ಮೈಸೂರ್ - ನಾಡು ೭೦ರ ಉಲ್ಲೇಖವಿದೆ. ಇದಕ್ಕೆ ರೈಸ್. ಸು. ೯೯೦ ಎಂಬುದಾಗಿ ಕಾಲ ಸೂಚಿಸಿದ್ದಾರೆ. ಇದು ಊಹಿಸಿರುವ ಕಾಲ ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ನಂದಿಗುಂದದ ಶಾಸನವೊಂದರಲ್ಲಿ (೧೦೨೧) 'ಮಯ್ಸುನ್ನಾಡು' (ಇದು 'ಮೈಸೂರ್ನಾಡು' ಎಂಬುದರ ರೂಪಾಂತರವೆಂದು ತೋರುತ್ತದೆ) ಎಂಬುದಾಗಿದ್ದು, ನನ್ದಿಗುನ್ದವು ಮೈಸೂರು ನಾಡಿನೊಳಗಿನ ಊರೆಂದು ಇದರಿಂದ ತಿಳಿಯುವುದು. ಈಚೆಗೆ ಜಿ.ಎಸ್. ಗಾಯಿಯವರು ಗಂಗದೊರೆ ಮಾರಸಿಂಹನ ಕಾಲದ ಶಕ ೮೮೪ (ಕ್ರಿ.ಶ. ೯೬೨) ಎಂಬುದಾಗಿ ಕಾಲಸೂಚನೆಯಿರುವ, ದಾನಶಾಸನವೊಂದರಲ್ಲಿ (ಎಇ xxxvi, ಪು. ೯೭) 'ಮಯ್ಸೂರು' ಎಂದಿರುವುದನ್ನು ಗುರುತಿಸಿದ್ದಾರೆ. ಈ ಶಾಸನದಲ್ಲಿ ಹೇಳಿರುವ ದತ್ತಿಗ್ರಾಮ ಕಾದಲೂರ್ ಎಂಬುದು ಈಗಿನ ಮಂಡ್ಯ ಜಿಲ್ಲೆಯ, ಅದೇ ತಾಲ್ಲೂಕಿನೊಳಗಿನ ಒಂದು ಗ್ರಾಮ. ದತ್ತಿಗ್ರಾಮದ ಎಲ್ಲೆಗಳನ್ನು ಹೇಳುವಾಗ ದಕ್ಷಿಣಕ್ಕೆ ಮಯ್ಸೂರು ಎಂಬುದಾಗಿ ಇಲ್ಲಿ ಹೇಳಿದ್ದು, ಇದು ಇಂದಿನ ಮೈಸೂರು ನಗರವೇ ಎನ್ನುವುದರಲ್ಲಿ ಸಂಶಯವಿಲ್ಲ.[೯೬]

ಹೊಯ್ಸಳ ವಿಷ್ಣುವರ್ಧನನ ಕಾಲದ ೧೧೨೮ರ ಒಂದು ಶಾಸನದಲ್ಲಿ "ಮೈಸುನಾಡು ಸ್ವಸ್ತಿಶ್ರೀ ಮಾರ್ಬಲದ ತೀರ್ಥಕ್ಕೆ" ಎಂದು (ಎಕ. iii-i, ಮೈ. ೧೬) ಹೇಳಿದೆ. ಈ 'ಮಾರ್ಬಲದ ತೀರ್ಥ'ವೇ, ಎಂದರೆ ಮಹಾಬಲಾಚಲವೇ, ಇಂದಿನ ಚಾಮುಂಡಿಬೆಟ್ಟ. ಇಮ್ಮಡಿ ವೀರಬಲ್ಲಾಳನ ಕಾಲದ ೧೧೭೫ರ ಒಂದು ಶಾಸನದಲ್ಲಿ 'ಮಯಿಸೂರು ಹೊಯ್ಸಳ ಗವುಂಡ'ನೊಬ್ಬನನ್ನು ಹೇಳಿದೆ. ಮೈಸು (ಸ/ಸೆ) ನಾಡಿನ ಉಲ್ಲೇಖಗಳು ಮೈಸೂರು ತಾಲ್ಲೂಕಿನ ಹಡಜನ (ಎಕ. V, ೧೮೫, ೧೩೮೪), ಕುಮಾರಬೀಡು (ಎಕ, V, ೨೦೫, ೧೧೨೧ ; ೨೧೨, ೧೨ನೆ ಶ.), ಹೆಮ್ಮನಹಳ್ಳಿ (ಎಕ, V, ೨೧೫, ೧೧೭೫) ಈ ಸ್ಥಳಗಳ ಶಾಸನಗಳಲ್ಲಿ ಇನ್ನೂ ಬಂದಿವೆ. ಈ ಮೈಸನಾಡಿಗೆ ಸೇರಿದ ಒಂದು ಊರು ಎನ್ನುವಂತೆ ಮೈಸೂರು ಬೇರೆಯಾಗಿ ಕುಮಾರಬೀಡಿನ ೨೧೨ನೆಯ ಶಾಸನದಲ್ಲಿ (೧೨ನೆಯ ಶ.) ಉಕ್ತಗೊಂಡಿದೆ. ಮೈಸೂರು ತಾಲ್ಲೂಕಿನ ಮೈಸೂರು ನಗರದ ೧೪೯೯ರ ಒಂದು ಶಾಸನದಲ್ಲಿ ಸಹ 'ಮೈಸೂರು ಸ್ಥಳ'ದಲ್ಲಿ 'ಮೈಸೂರು ಪುರ'ವನ್ನು ಪ್ರತ್ಯೇಕವಾಗಿ ಗುರುತಿಸಿದೆ (ಎಕ. V, ೨೭). ಈಚೆಗೆ ವಿಜಯನಗರ ಕಾಲದಲ್ಲಿ ಪರ್ವತಯ್ಯ ಎಂಬುವನು ೧೪೯೪ರಲ್ಲಿ ಹಾಕಿಸಿದ ಶಾಸನವೊಂದರಲ್ಲಿ (ಎಕ. iv-ii, ಗು. ೨) "ಮಹಿಸೂರ ದೇವರ ನಿದಾನ" ಎಂದು ಬಂದಿದೆ.

ಅಂತೂ ಫ್ಲೀಟ್ ಅವರು ಭಾವಿಸುವಂತೆ ಮಾಹಿಷ್ಮತಿಗೂ ಮೈಸೂರಿಗೂ ಸಂಬಂಧವಿಲ್ಲದಿದ್ದರೂ ಮಹಿಷಮಂಡಲ ಎಂಬುದು ಈಚೆಗೆ ಒಡೆಯರ ಆಳ್ಕೆಯ ಕಾಲದಲ್ಲಿ ಈ ಪ್ರದೇಶವನ್ನು ಸೂಚಿಸುವಂತೆ ಬಳಕೆಯಾಗಿದ್ದರೂ ಮೈಸೂರು ರಾಜ್ಯವು ಅದೇ ಹೆಸರಿನ ನಗರವೂ ೧೦ನೆಯ ಶತಕದ ಆರಂಭದಿಂದಲೇ ಇತಿಹಾಸದಲ್ಲಿ ಕಂಡುಬರುವುದಂತೂ ನಿಜ ; ಒಡೆಯರ ಕಾಲದಲ್ಲಿ ರಾಜ್ಯವಾಗಿ, ರಾಜಧಾನಿ ಮೈಸೂರು ಪ್ರಶಸ್ತಿಗೆ ಪಾತ್ರವಾದುದು

ಅನಂತರದಲ್ಲಿ ಎದ್ದು ತೋರುತ್ತದೆ. ಆಗ ಪಂಡಿತವ್ಯುತ್ಪತ್ತಿಯ 'ಮಹೀಶೂರಪುರ'ವೂ ಮೈಸೂರು ಮಹಿಷಪುರಗಳ ಜೊತೆ ಜೊತೆಗೇ ಕಾಣಿಸಿಕೊಂಡದ್ದು ಗಮನಕ್ಕೆ ಬರುತ್ತದೆ.[೭೨]

ಕರ್ನಾಟಕ

'ಕರ್ನಾಟಕ' ಎಂಬ ಹೆಸರನ್ನೂ ಪ್ರಾಚೀನಕರ್ನಾಟಕದ ಪ್ರದೇಶಗಳನ್ನೂ ಉಲ್ಲೇಖಿಸುವ ಆಧಾರಗಳು ಬೇರೆ ಬೇರೆ ಭಾಷೆಯ ಶಾಸನಗಳಲ್ಲಿಯೂ ಸಾಹಿತ್ಯ ಗ್ರಂಥಗಳಲ್ಲಿಯೂ ಹೇರಳವಾಗಿ ದೊರೆಯುತ್ತವೆ. ಸ್ಥಿರವಾದ ವಿಸ್ತಾರ ಮತ್ತು ಸೀಮೆಗಳನ್ನು ಸಮಗ್ರವಾಗಿ ಹೇಳಿರುವ ಆಧಾರಗಳು ಪ್ರಾಯಶಃ ದುರ್ಲಭ. ರಾಜಕೀಯವಾಗಿ ಸಂಘಟಿಸುತ್ತಿದ್ದ ಸ್ಥಿತ್ಯಂತರಗಳು ಕಾರಣವಾಗಿ ಕರ್ನಾಟಕದ ಹೃದಯಸ್ಥಾನ ಮತ್ತು ಪರಿಸರಗಳು ವ್ಯತ್ಯಾಸಗೊಳ್ಳುತ್ತ, ಅದಕ್ಕೆ ಅನುಗುಣವಾಗಿ ಸೀಮೆ ವಿಸ್ತಾರಗೊಳ್ಳುತ್ತಲೂ ಸಂಕೋಚಗೊಳ್ಳುತ್ತಲೂ ಇದ್ದುದು ಸಹಜವೇ. ಕದಂಬರಾಜರಿಂದ ಮೈಸೂರರಸರವರೆಗೆ ಆಯಾ ರಾಜಮನೆತನದವರು ತಮ್ಮ ಆಳ್ವಿಕೆಯ ಸೀಮೆಯನ್ನು ಕರ್ನಾಟಕ ಎಂದು ಕರೆದುಕೊಂಡಿದ್ದಾರೆ.

ಕರ್ನಾಟಕದ ಮೊದಲ ಗಣ್ಯ ಮನೆತನ ಕದಂಬರದು. ಕದಂಬರ ದೊರೆ ಶಾಂತಿವರ್ಮನ (ಸು. ೪೫೦-೭೫) ಸು. ೪೫೦ರ ಬೀರೂರು ಶಾಸನದಲ್ಲಿ (ಎಕ. vi-ಕ ೧೬೨) "ವೈಜಯನ್ತೀತಿಲಕ ಸಮಗ್ರ ಕರ್ಣ್ಣಾಟ ಭೂವರ್ಗ್ಗಭರ್ತ್ತಾರಂ" ಎಂದಿದ್ದು, ಇದೇ ಮೊದಲ ಉಲ್ಲೇಖವಿರಬೇಕು (ಇದನ್ನು ಕೆಲವರು ಕೃತಕಶಾಸನವೆಂಬುದಾಗಿ ತಿಳಿದಿರುವಂತಿದೆ) ಕರ್ನಾಟಕದ ಹಲವು ಪ್ರದೇಶಗಳಲ್ಲಿ ಉತ್ತರಕನ್ನಡ ಜಿಲ್ಲೆಯ ಬನವಾಸಿ (ಜಯಂತಿ, ವೈಜಯಂತಿ) ಖ್ಯಾತವಾದದ್ದೆಂದು ಹೇಳಿರುವುದು, ಅಂದು ಕನ್ನಡ ನಾಡಿನ ಹೃದಯಸ್ಥಾನ ಬನವಾಸಿ ಮತ್ತು ಪರಿಸರಪ್ರದೇಶಗಳು ಎಂಬುದನ್ನು ಸೂಚಿಸುತ್ತದೆ ಬಾದಾಮಿ ಚಾಲುಕ್ಯರ ದೊರೆ ಇಮ್ಮಡಿ ಕೀರ್ತಿವರ್ಮನ ಸೇನೆಯನ್ನು ದಂತಿದುರ್ಗನು "ಕರ್ಣ್ಣಾಟಕಂ ಬಲವಂಚಿಂತ್ಯಮಜೇಯಮನ್ಯೈಃ । ಭೃತ್ಯೈಃ ಕಿಯತ್ಯಪಿ ಯಃ ಸಹಸಾ ಜಿಗಾಯ ॥" ಎಂಬುದಾಗಿ ಕರೆದಿರುವುದರಿಂದ ಬಾದಾಮಿ ಚಾಳುಕ್ಯರು ಆಗ್ಗೆ ಆಳುತ್ತಿದ್ದ ಬಾದಾಮಿ (ವಾತಾಪಿ) ಮತ್ತು ಸುತ್ತಣ ಸೀಮೆ ಕರ್ಣಾಟವೆನಿಸಿತ್ತು ಎನ್ನಬಹುದು. ಕ್ರಿ.ಶ. ೫ ರಿಂದ ೯ನೆಯ ಶತಮಾನದ ಆದಿಭಾಗದವರೆಗೆ ದೊರೆಯುವ ಸಮಕಾಲೀನ ದಾಖಲೆಗಳಿಂದ ಅಂದಿನ ಕರ್ನಾಟಕ ಉತ್ತರ ಕನ್ನಡ ಧಾರವಾಡ ಮತ್ತು ಬಿಜಾಪುರ ಜಿಲ್ಲೆಗಳೂ ರಾಯಚೂರು ಗುಲ್ಬರ್ಗ ಜಿಲ್ಲೆಗಳೂ ಸೇರಿದ್ದ ಪ್ರದೇಶವಾಗಿತ್ತೆಂದೂ 'ಸಮಗ್ರ ಕರ್ಣ್ಣಾಟದೇಶಭೂವರ್ಗ್ಗ'ದಲ್ಲಿ ಉಳಿದ ಯಾವ ಪ್ರದೇಶಗಳು ಸೇರಿದ್ದುವೆಂಬುದನ್ನು ನಿರ್ಣಯಿಸುವುದು ಕಷ್ಟವೆಂದು ಎಚ್.ಸಿ. ರಾಯಚೌಧುರಿ ಅವರು ಹೇಳಿದ್ದಾರೆ. ಬಾದಾಮಿ ಚಾಲುಕ್ಯರ ಕಾಲದಲ್ಲಿ ಕರ್ಣಾಟ, ಕುಂತಲ, ಲಾಟ, ಕರಹಾಟ, ವನವಾಸ, ತುಳುವ, ಆಳ್ವಖೇಡ, ಗೋಮಾಂತಕ, ಕೊಂಕಣ, ಪುನ್ನಾಟ ಮತ್ತು ವೆಂಗಿಮಂಡಲ ಎಂದು ಬೇರೆ ಬೇರೆ ವಿಷಯಗಳಾಗಿ ವಿಭಜನೆಗೊಂಡಿದ್ದ ಪ್ರದೇಶ 'ಕರ್ಣಾಟ' ಎಂಬ ಒಂದು ಹೆಸರಿನ

ಕೆಳಗೆ ಬಂದುವೆಂದೂ ಇದಕ್ಕೆ ಇಮ್ಮಡಿ ಪುಲಿಕೇಶಿಯ ಸಾಹಸೋದ್ಯಮಗಳು ಬಹುಮಟ್ಟಿಗೆ ಕಾರಣವೆಂದೂ ಈಚಿನ ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ.[೯೮]

ಚೌಧುರಿ 'ಶಕ್ತಿಸಂಗಮತಂತ್ರ'ದಲ್ಲಿ ರಾಮನಾಥದಿಂದ ಶ್ರೀರಂಗದ ವರೆಗೆ ಹಬ್ಬಿದ ನಾಡು 'ಕರ್ಣಾಟ' ಎಂದು ಹೇಳಿದೆಯೆಂದೂ 'ರಾಮನಾಥ' ಎಂಬುದು ರಾಮೇಶ್ವರತೀರ್ಥ ಅಥವಾ ರೈಸ್ ಅವರ ಪ್ರಕಾರ ತುಂಗ ಮತ್ತು ಭದ್ರಾ ನದಿಗಳ ಸಂಗಮಸ್ಥಾನದ ದಕ್ಷಿಣಕ್ಕೆ ಕೆಲವು ಮೈಲಿಗಳ ದೂರದಲ್ಲಿರುವ ಒಂದು ಸಣ್ಣ ದ್ವೀಪ ಹಾಗೂ 'ಶ್ರೀರಂಗ' ಎಂಬುದು ಪ್ರಾಯಶಃ ತಮಿಳುನಾಡಿನ ಹೃದಯಸ್ಥಾನದಲ್ಲಿರುವ ಶ್ರೀರಂಗವಾಗಿರದೆ ಮೈಸೂರು ಹತ್ತಿರದ ಶ್ರೀರಂಗಪಟ್ಟಣ ಎಂದೂ ಸೂಚಿಸಿದ್ದಾರೆ[೯೯].

ಡಿ.ಸಿ. ಸರ್ಕಾರ್ 'ಶಕ್ತಿಸಂಗಮತಂತ್ರ'ದ ಸಾಕ್ಷ್ಯವನ್ನೇ ವಿಮರ್ಶಿಸುತ್ತ ಹೀಗೆಂದಿದ್ದಾರೆ: "ಕರ್ಣಾಟರಾಜ್ಯ ರಾಮನಾಥದಿಂದ ಶ್ರೀರಂಗದವರೆಗೆ ಹಬ್ಬಿತ್ತು ಎನ್ನಲಾಗಿದೆ. ಶ್ರೀರಂಗ ಎನ್ನುವುದು ಕಾವೇರಿಯ ಆಚೆಯ ದಡದ ಮೇಲೆ ತಂಜಾವೂರಿಗೆ ಎದುರಾಗಿರುವ ಶ್ರೀರಂಗವೋ ಮೈಸೂರಿಗೆ ಸಮೀಪದ ಶ್ರೀರಂಗಪಟ್ಟಣವೋ ಆಗಿದೆ, ರಾಮನಾಥ ಎನ್ನುವುದು ರಾಮನಾಥಪುರಂ (ಹಿಂದಿನ ರಾಮನಾಡ್) ಜಿಲ್ಲೆಯೋ ಮಧುರೈ ಜಿಲ್ಲೆಯ ರಾಮನಾಥ ಮಠವೋ ತುಂಗೆ ಮತ್ತು ಭದ್ರೆ ನದಿಗಳ ಕೂಡಲ ಬಳಿಯ ರಾಮೇಶ್ವರ ತೀರ್ಥವೋ ಆಗಿರುವಂತೆ ತೋರುವುದು"[೧೦೦]

ಇಲ್ಲಿಂದ ಮುಂದೆ ಕರ್ನಾಟಕದ ಸಂಸ್ಕೃತ ಕನ್ನಡಭಾಷೆಯ ಶಾಸನಗಳಲ್ಲಿ ಈ ಪ್ರಯೋಗಗಳು ಹೆಚ್ಚುತ್ತ ಹೋಗುತ್ತವೆಯಾದರೂ, ಅದು ೧೦ನೆಯ ಶ.ದಿಂದ ಮುಂದಿನ ಕಾಲದಲ್ಲಿಯೆ ಎಂದು ತೋರುತ್ತದೆ. ಗಂಗದೊರೆಯೊಬ್ಬನನ್ನು "ಗಂಗ ಪೆರ್ಮನಡಿಗಳು ಕರ್ಣಾಟವನಾಳುತ್ತುಮಿರೆ" ಎಂದು (ಎಕ. iii, ಎಂಡಿ. ೭೮) ಹೇಳಿದೆ. ಲಾಟ ಕಳಿಂಗ ಕರಹಾಟ ಮುಂತಾದ ದೇಶದವರು ತ್ರೈಳೋಕ್ಯಮಲ್ಲ ಆಹವಮಲ್ಲ ದೇವನಿಗೆ ಎದುರುನಿಲ್ಲಲಾರದೆ ಕಪ್ಪವನ್ನಿತ್ತರೆಂದು ಹೇಳುವಾಗ ಕರ್ಣಾಟಕವನ್ನು ಸೇರಿಸಿದೆ. ಆಹವಮಲ್ಲದೇವನು ಕುಂತಳಸೀಮೆಯ ದೊರೆಯೆಂದಿರುವುದೂ ಆತನಿಗೆ ಕಪ್ಪವನ್ನಿತ್ತವರು ಕರ್ಣಾಟಕದವರು ಎನ್ನುವುದೂ (ಎಕ. viii, ಎಸ್‌ಕೆ. ೭೮) ಕುತೂಹಲಕರವಾಗಿದೆ. ಮಿಥಿಲೆ ನೇಪಾಲಗಳಲ್ಲಿ ಆಳಿದ (೧೦೯೨-೧೧೦೫) ಕನ್ನಡ ಅರಸರು 'ಕರ್ನಾಟಕ ಕುಲಭೂಷಣ'ರೆನಿಸಿದರು, ಬಂಗಾಲಪ್ರಾಂತವನ್ನಾಳಿದವರು (೧೦೯೫-೧೧೭೮) 'ಕರ್ನಾಟಕ ಕ್ಷತ್ರಿಯ ಕುಲಶಿರೋಮಣಿ'ಗಳೆನಿಸಿದರು ಎನ್ನುವುದು ವಿಶೇಷವಾಗಿ ನೆನೆಯತಕ್ಕ ಸಂಗತಿಯಾಗಿದೆ. ಕಳಚುರಿಗಳ ರಾಯುಮುರಾರಿ ಸೋಯಿದೇವನ ಗುಣವನ್ನು ಕೀರ್ತಿಸುವಾಗ "ಕ್ರಮದಿಂ ಕರ್ಣಾಟಮಂ ಕುಂತಳಮನೊಲವಿನಿಂ ತಾಳ್ದಿ ತಳ್ಕಯ್ಸಿ...." ಎಂದು (ಎಕ. vii, ಎಸ್.ಕೆ. ೧೯೭) ಹೇಳಿದ್ದು, ಆಗ್ಗೆ ಕರ್ಣಾಟ ಮತ್ತು ಕುಂತಳಗಳು ಕನ್ನಡ ನಾಡಿನ ಕೇಂದ್ರಗಳಾಗಿದ್ದುವೆಂದು ತಿಳಿಯುವುದು. ಕಾಕತೀಯ ಮಹಾದೇವನ ಕಾಲದಲ್ಲಿಯ ಒಂದು ಶಾಸನದಲ್ಲಿ "ವರಹಾಟಾದಿ ಕರ್ಣಾಟದ್ರವಿಡಾನ್ತೌಳವಾನಪಿ....."

(ಎಕ. xii, ಟಿಎಮ್. ೧೪) ಎಂದಿದೆ. ಸೇಉಣ ಸಿಂಘಣನ ಶಾಸನದಲ್ಲಿ ಹೊಯ್ಸಳ ದೊರೆಯನ್ನು 'ಕರ್ಣಾಟಕ್ಷಿತಿಪಾಳ'ನೆಂಬುದಾಗಿ ಕರೆದಿದೆ (ಎಕ. vii ಎಸ್‌ಕೆ. ೯೫). ವಿಜಯನಗರದ ಅರಸರ ಕಾಲದಲ್ಲಿ ಸಾಮ್ರಾಜ್ಯ ವಿಸ್ತರಿಸಿದಂತೆ ದಖನ್ನಿನ ಬಹುಭಾಗಕ್ಕೆ 'ಕರ್ಣಾಟ' ಎಂಬ ಹೆಸರೂ ಹಬ್ಬಿತು. ವಿಜಯನಗರದ ಅರಸರಲ್ಲಿ 'ಕರ್ಣಾಟಕ ವಿದ್ಯಾವಿಳಾಸ'ನೂ ಉತ್ತರ ದಕ್ಷಿಣ ಪೂರ್ವ ಪಶ್ಚಿಮ ಸಮುದ್ರಾಧಿಪತಿಯೂ ಆದ ಶ್ರೀಹರಿಹರರಾಯನು "ಆರಗ ಗುತ್ತಿ ಬಾರಕೂರ ಮಂಗಳೂರ ಪಶ್ಚಿಮಸಮುದ್ರಾಂತವಾಗಿ ಕರ್ಣಾಟಕ ರಾಜ್ಯವನ್ನು ಅದೇ ಪಾಲಿಸಿಯಿಹ ಸಮಯದಲ್ಲಿ" ಎಂದಿರುವುದರಿಂದ (ಎಕ. vi, ೩೩-೩೪) ಆ ಕಾಲದ ಕರ್ಣಾಟಕ ರಾಜ್ಯದ ಸೀಮಾವ್ಯಾಪ್ತಿ ಇಂದಿನ ಕರ್ನಾಟಕದ ದಕ್ಷಿಣೋತ್ತರ ದಿಶೆಗಳನ್ನು ಸಮಗ್ರವಾಗಿ ವ್ಯಾಪಿಸಿದ್ದುದು ವಿಶದಪಡುತ್ತದೆ. ಸಂಗಮನೆಂಬ ದೊರೆಯಿಂದಾಗಿ 'ಕರ್ಣಾಟದೇಶಶ್ರೀ' 'ಸ್ಥಿರತಾಟಂಕವತೀ' ಆದಳೆಂದೂ ವಿರೂಪಾಕ್ಷನೆಂಬ ದೊರೆ 'ಕರ್ಣಾಟೇಶ್ವರರಾಯ ಕುಂಜರ'ನೆಂದು ಖ್ಯಾತನಾಗಿದ್ದನೆಂದೂ (ಎಕ. xii, ಪಿಜಿ. ೬೯ ; ಎಕ. iii, ಎಂ.ಎಲ್. ೧೨೧) ಮುಂತಾಗಿ ವಿಜಯನಗರದ ಅರಸರೊಬ್ಬೊಬ್ಬರೂ ತಮ್ಮ ಪ್ರಶಸ್ತಿಯ ಮಾತುಗಳಲ್ಲಿ ಹೇಳಿಕೊಂಡಿರುವುದು ಕಾಣುತ್ತದೆ. ತಾಳಿಕೋಟೆ ಯುದ್ಧದ (೧೫೬೫) ಬಳಿಕ ಅವರ ರಾಜ್ಯದ ಸೀಮೆಗಳು ಕುಗ್ಗುತ್ತ ಬಂದರೂ, ಅವರು ತಮ್ಮನ್ನು 'ಕರ್ಣಾಟಕರಾಯ'ರೆಂದೇ ಕರೆದುಕೊಳ್ಳುತ್ತಿದ್ದರು.

ಈಚಿನ ಇತಿಹಾಸಕಾಲದಲ್ಲಿ, ಕೆಳದಿ ವೆಂಕಟನೆಂಬ ದೊರೆಗೆ "ಕರ್ಣಾಟಕ ಧರಣೀ ವಜ್ರಕವಾಟಾಯಿತ ವಿಕ್ರಮಃ" ಎಂಬ ಬಿರುದಿನುಗ್ಗಡಿಕೆಯಿದೆ. ಯದುಗಿರಿಯ ತಮ್ಮ ಕುಲದೈವತವನ್ನು ನೋಡಲೆಂದು ಬಂದ ಯದುವಂಶದ ಕೆಲವರು ರಾಜಪುತ್ರರು ಕರ್ಣಾಟಕ ದೇಶಕ್ಕೆ ಬಂದರೆಂದು ಹೇಳುವ ಉಕ್ತಿ ಮೈಸೂರರಸರ ಶಾಸನಗಳಲ್ಲಿ ಆಗಾಗ್ಗೆ "ತಸ್ಯಾಂ ಕೃತಾವತಾರಾಃ ಕತಿಚನ ಕರ್ಣಾಟದೇಶಮಾಜಗ್ಮುಃ" ಎಂಬುದಾಗಿ ಕಾಣಿಸಿಕೊಳ್ಳುತ್ತಿರುತ್ತದೆ. ಮೊದಲ ದೊರೆ ರಾಜ ಒಡೆಯನನ್ನು "ಕರ್ಣಾಟರಾಜ್ಯಾಭಿಷವಣಪರಿತೃಪ್ತ"ನೆಂದಿದೆ. ಹಾಗೂ ಆ ಮುಂದಿನ ಅರಸರನ್ನು "ಕರ್ಣಾಟಕರತ್ನ ಸಿಂಹಾಸನಾಧೀಶ್ವರ"ರೆಂದೂ ಅವರ ಆಳ್ವಿಕೆಯನ್ನು "ಕರ್ಣಾಟಕ ಜನಪದ ಸಂಪದಧಿಷ್ಠಾನಭೂತ ಶ್ರೀಮನ್ಮಹೀಶೂರಸಂಸ್ಥಾನ" ಎಂದೂ ಕರೆದಿದೆ. ನಂದಿಬೆಟ್ಟವನ್ನು ಕರ್ಣಾಟಕದೇಶದ ಪೂರ್ವದಿಕ್ಕಿಗಿದೆ ಎಂದು ಒಂದು ಶಾಸನದಲ್ಲಿ ಹೇಳಿರುವುದನ್ನು ನೋಡಿದರೆ, ಆ ಶಾಸನಕಾಲವಾದ ಸು. ೧೬೮೦ರಲ್ಲಿ ಮೈಸೂರು ರಾಜ್ಯ ಕರ್ಣಾಟಕವೆಂಬುದಾಗಿ ತಿಳಿಯಲ್ಪಡುತ್ತಿತ್ತು - ಎಂದು ಗ್ರಹಿಸುವುದಕ್ಕೆ ಅವಕಾಶವಾಗುತ್ತದೆ.

ಮುಂದಿನ ಒಂದು ಘಟ್ಟದಲ್ಲಿ ೧೭ನೆಯ ಶ. ದಿಂದೀಚೆಗೆ (೧೬೯೨-೧೭೦೩) 'ಕರ್ಣಾಟಕದ ನವಾಬರು' ಎಂಬ ಮಾತಿನೊಂದಿಗೆ ಕರ್ಣಾಟಕ ಎಂಬ ರಾಜ್ಯದ ಹೆಸರು ಒಂದು ತಪ್ಪುಕಲ್ಪನೆಗೆ ಸಿಕ್ಕುವಂತಾಯಿತು. ರಾಬರ್ಟ್ ಕಾಲ್ಡ್‌ವೆಲ್ ಅವರು ತಮ್ಮ ದ್ರಾವಿಡ ಭಾಷೆಗಳ ತೌಲನಿಕ ವ್ಯಾಕರಣ ಗ್ರಂಥದಲ್ಲಿ ಕನ್ನಡ ಭಾಷೆಯನ್ನು ಕುರಿತು ಬರೆಯುತ್ತ, ಈ ತಪ್ಪುಕಲ್ಪನೆಯನ್ನು ಸವಿವರವಾಗಿ ಎತ್ತಿ ತೋರಿಸಿದ್ದಾರೆ. ಅದನ್ನು ಸಂಗ್ರಹಿಸಿ,

ಆರ್. ನರಸಿಂಹಾಚಾರ್ಯರು ತಮ್ಮ 'ಕರ್ಣಾಟಕ ಕವಿಚರಿತೆ'ಯ ಪ್ರಥಮ ಸಂಪುಟದ ಅವತರಣಿಕೆಯಲ್ಲಿ ಹೀಗೆ ತಿಳಿಸಿದ್ದಾರೆ.[೧೧]

"ಪೂರ್ವದಲ್ಲಿ ಕರ್ಣಾಟಕ ಎಂಬುದು ದಕ್ಷಿಣ ಹಿಂದೂದೇಶದ ಎತ್ತರವಾದ ಪ್ರಾಂತಕ್ಕೆ ಹೆಸರಾಗಿದ್ದಿತು. ಈಚೆಗೆ ವಿದೇಶಿಗಳ ಕೈಗೆ ಸಿಕ್ಕಿ ವಿಪರೀತಾರ್ಥವನ್ನು ಹೊಂದಿತು. ಮಹಮ್ಮದೀಯರು ಮೊದಲುಮೊದಲು ದಕ್ಷಿಣ ಹಿಂದೂದೇಶಕ್ಕೆ ಬಂದಾಗ ಮೈಸೂರು, ತೆಲುಗುದೇಶದಲ್ಲಿ ಸ್ವಲ್ಪಭಾಗ ಇವುಗಳನ್ನು ಒಳಕೊಂಡ ಘಟ್ಟದ ಮೇಗಣ ದೇಶಕ್ಕೆ 'ಕರ್ಣಾಟಕ' ಎಂಬ ಹೆಸರು ಇದ್ದಿತು. ಕಾಲಕ್ರಮದಲ್ಲಿ ಅವರು ಈ ಹೆಸರನ್ನು ಘಟ್ಟದ ಕೆಳಗಣ ದೇಶಕ್ಕೂ ಕೊಟ್ಟರು. ತರುವಾಯ ಇಂಗ್ಲಿಷರು 'ಕರ್ಣಾಟಿಕ್' ಎಂಬ ಹೆಸರನ್ನು ಆ ಹೆಸರಿಗೆ ಸಂಬಂಧವೇ ಇಲ್ಲದ ಘಟ್ಟದ ಕೆಳಗಣ ದೇಶಕ್ಕೆ ಮಾತ್ರ ಇಟ್ಟರು. ಈಗ 'ಕರ್ಣಾಟಿಕ್' ಎಂಬುದು ಪೂರ್ವದ ಅರ್ಥವನ್ನು ಕಳೆದುಕೊಂಡು ತಮಿಳುದೇಶ, ತೆಲುಗು ದೇಶದಲ್ಲಿ ನೆಲ್ಲೂರು ಜಿಲ್ಲೆ ಇವುಗಳನ್ನು ಒಳಕೊಂಡು ಪೂರ್ವತೀರಸಮುದ್ರದಲ್ಲಿರುವ ಘಟ್ಟದ ಕೆಳಗಣ ಪ್ರಾಂತಕ್ಕೆ ಮಾತ್ರ ಅನ್ವಯಿಸುತ್ತದೆ."

ಈಗ ಕರ್ನಾಟಕ ಎಂಬುದಾಗಿ ಕನ್ನಡನಾಡಿಗೆ ೧೯೭೩ರ ನವಂಬರ್ ೧ ರಿಂದ ಅಧಿಕೃತವಾಗಿ ಹೆಸರಾಗಿರುವುದರಿಂದ, ಮೇಲಿನ ರೀತಿಯ ತಪ್ಪುಕಲ್ಪನೆಗಳಿಗೆ ನಾವು ಗಮನ ಕೊಡಬೇಕಾಗಿಲ್ಲ.

❐

ಕನ್ನಡ ದೊರೆಗಳ ಆಳ್ವಿಕೆಯ ಕರ್ನಾಟಕ

ಕನ್ನಡನಾಡಿನಲ್ಲಿ ಜನಜೀನವು ಕ್ರಿ.ಪೂ. ಕಾಲದ ಶಿಲಾ ಮತ್ತು ಲೋಹಯುಗಗಳ ಕಾಲದಿಂದ ವಿಕಾಸಗೊಳ್ಳುತ್ತ ಬಂದಿರುವುದು. ತುಮಕೂರು, ಮೈಸೂರು, ಹಾಸನ, ಚಿತ್ರದುರ್ಗ, ಚಿಕ್ಕಮಗಳೂರು, ಶಿವಮೊಗ್ಗ, ಬಿಜಾಪುರ, ರಾಯಚೂರು, ಬಳ್ಳಾರಿ, ಬೆಳಗಾವಿ, ಬೆಂಗಳೂರು, ಧಾರವಾಡ ಮುಂತಾದ ಜಿಲ್ಲೆಗಳಿಗೆ ಸೇರಿದ ಅನೇಕ ಪ್ರದೇಶಗಳಲ್ಲಿ ನಡೆದಿರುವ ಕೆಲವು ಭೂ ಉತ್ಖನನಗಳ ಮೂಲಕವಾಗಿ ತಿಳಿದು ಬಂದಿದೆ. ಆ ಬಳಿಕ ಚರಿತ್ರೆಯ ಕಾಲದಲ್ಲಿ ಕ್ರಿ.ಪೂ. ೪ನೆಯ ಶತಮಾನದಿಂದ ಮುಂದಕ್ಕೆ ಉತ್ತರದ ಮಗಧಸಾಮ್ರಾಜ್ಯದ ನಂದರು, ಮೌರ್ಯರು, ದಕ್ಷಿಣಭಾರತದ ಶಾತವಾಹನರು, ಚುಟುಗಳು, ಬಾಣರು, ಆಳುಪರು, ಸೇಂದ್ರಕರು, ನಳರು, ಪುನ್ನಾಟರು, ಪಲ್ಲವರು, ಕದಂಬರು, ನೊಳಂಬರು, ಗಂಗರು, ಬಾದಾಮಿ ಚಾಲುಕ್ಯರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು, ಸೇಉಣರು, ಕಳಚುರಿಗಳು, ಚೋಳರು, ಶಿಲಾಹಾರರು, ರಟ್ಟರು, ಹಾನಗಲ್ಲು ಮತ್ತು ಗೋವೆಯ ಕದಂಬರು, ಸಿಂದರು, ಗುತ್ತರು, ಸೇನವಾರರು, ಸಾಂತರರು, ಸಾಳುವರು, ಚಂಗಾಳ್ವರು, ಕೊಂಗಾಳ್ವರು, ಪಾಂಡ್ಯರು, ವಿಜಯನಗರದವರು, ಕೆಳದಿ ಇಕ್ಕೇರಿ ಮೈಸೂರರಸರು, ಇನ್ನಿತರ ಮನೆತನಗಳವರು ರಾಜಕೀಯ ಮೇಲಾಟಗಳಲ್ಲಿ ಒಬ್ಬರು ಇನ್ನೊಬ್ಬರನ್ನು ಹತ್ತಿಕ್ಕಿ, ಪ್ರಬಲರು ಅಲ್ಪಬಲರಾಗಿ ಕ್ಷೀಣಿಸುತ್ತ, ಅಲ್ಪಬಲರು ಪ್ರಬಲಿಸುತ್ತ, ಕನ್ನಡನಾಡಿನ ವಿವಿಧ ಸೀಮೆಗಳನ್ನು ಕಾಲದಿಂದ ಕಾಲಕ್ಕೆ ತಮ್ಮ ಅಂಕೆಗೆ ಒಳಪಡಿಸಿಕೊಳ್ಳುತ್ತ ಆಗಿಹೋದುದು ಈ ನಾಡಿನ ಗಣ್ಯ ಗತ ಇತಿಹಾಸವಾಗಿದೆ. ಚೋಳರು, ಪಲ್ಲವರು, ಮಹಮದೀಯರು ಮುಂತಾದ ಪರಕೀಯ ಜನರ ಸೈನ್ಯಕೀಯ ಆಘಾತಗಳಿಗೆ ಸಿಕ್ಕುತ್ತ, ಅವರಿಗೆ ಪ್ರತ್ಯಾಘಾತಗಳನ್ನು ದಿಟ್ಟವಾಗಿ ಕೊಡುತ್ತ, ತಮ್ಮ ತಲೆಮೆಯನ್ನು ಮೆರೆದ ಕೀರ್ತಿ ಕನ್ನಡಿಗರ ನಿರಂತರವಾದ ಪರಿಶ್ರಮ ಬಲಿದಾನಗಳ ಫಲ. ಸಾಮಂತಪದದಲ್ಲಿದ್ದವರು ಸಾರ್ವಭೌಮಪದಕ್ಕೆ ಏರಿ, ಕನ್ನಡತಾಯಿಯನ್ನು ಸಾಮ್ರಾಜ್ಯಲಕ್ಷ್ಮಿಯನ್ನಾಗಿ ಮೆರೆಸಿದ ಸತ್ತ್ವಶಾಲಿ ಜನತೆ, ಕನ್ನಡ ಜನತೆ.

ಅಶೋಕನ ರಾಜ್ಯದ ದಕ್ಷಿಣ ಮೇರೆಯಲ್ಲಿ ಮಸ್ಕಿ, ಕೊಪ್ಪಳ, ಬ್ರಹ್ಮಗಿರಿ, ಸಿದ್ದಾಪುರ ಮೊದಲಾದುವನ್ನು ಒಳಕೊಂಡ ಉತ್ತರಕರ್ನಾಟಕದ ಬಹುಭಾಗ ಸೇರಿತ್ತು. ಮಸ್ಕಿಯ ಬಳಿಯ ಸುವರ್ಣಗಿರಿ, ಬ್ರಹ್ಮಗಿರಿಯ ಹತ್ತಿರದ ಇಸಿಲ ಪ್ರಾದೇಶಿಕ ಮುಖ್ಯ

ನಗರಗಳಾಗಿದ್ದುವು. ಬೃಹದ್ಭಾರತದ ರಾಜಕೀಯ ಪ್ರಭಾವದ ವರ್ತುಲಕ್ಕೆ ಪ್ರಾಚೀನ ಕನ್ನಡನಾಡು ಸಿಕ್ಕುವಂತೆ ಮಾಡಿದ ಕೀರ್ತಿ ಮೌರ್ಯರಿಗೆ ಸಲ್ಲುತ್ತದೆ. ಅಶೋಕ ಚಕ್ರವರ್ತಿಯ ಅನಂತರವೂ ಕೆಲವು ಶತಮಾನಗಳವರೆಗೆ ಕರ್ನಾಟಕದ ಕೆಲವು ಭಾಗಗಳಲ್ಲಿ ಮೌರ್ಯಪ್ರಭುತ್ವ ನಡೆದುಕೊಂಡು ಹೋಯಿತು.

ಶ್ರೀಪರ್ವತ ಪ್ರಾಂತದವರೆನ್ನಲಾದ ಶಾತವಾಹನರು ಕರ್ನಾಟಕದ ಉತ್ತರ ಭಾಗದಲ್ಲಿ, ಅನಂತರದಲ್ಲಿ, ಅಚ್ಚಕನ್ನಡ ಕೇಂದ್ರವಾದ ಪೈಠಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದರು. ಚುಟುಗಳು ಬನವಾಸಿಯಲ್ಲಿ ತಲೆಯೆತ್ತಿದರು. ಕರ್ನಾಟಕದ ಪೂರ್ವಭಾಗದಲ್ಲಿ ಕೋಲಾರ, ಕಡಪ ಮತ್ತು ಉತ್ತರ ಆರ್ಕಾಟು ಜಿಲ್ಲೆಗಳ ಸೀಮೆಯಲ್ಲಿದ್ದವರು ಬಾಣರು. ಆಳ್ವಖೇಡ - ೬೦೦೦ ನಾಡನ್ನು ಆಳುತ್ತಿದ್ದ ಆಳುಪರು ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳ, ಕೊಂಕಣ ಮತ್ತು ಪಶ್ಚಿಮ ಘಟ್ಟಗಳ ಕೆಲಪ್ರಾಂತಗಳ ಭಾಗದಲ್ಲಿ ಬಹುಕಾಲ ರಾಜ್ಯವಾಳಿದರು. ಬನವಾಸಿ ಪ್ರಾಂತಕ್ಕೆ ಸೇರಿದ ನಾಗರಖಂಡ ಎಂದರೆ ಇಂದಿನ ಶಿವಮೊಗ್ಗ ಜಿಲ್ಲೆಯ ಕೆಲವು ಭಾಗಗಳು ಸೇಂದ್ರಕರದಾದ ಸೇಂದ್ರಕವಿಷಯವೆನಿಸಿತ್ತು. ನಳರದಾದ ನಳವಾಡ ವಿಷಯ, ಈಗಿನ ಬಳ್ಳಾರಿ ಮತ್ತು ಕರ್ನೂಲು ಜಿಲ್ಲೆಗಳು. ಮೈಸೂರಿಗೆ ದಕ್ಷಿಣದ ಈಗಿನ ಹೆಗ್ಗಡದೇವನಕೋಟೆಯ ಸೀಮೆ ಪುನ್ನಾಟರ ಆಳ್ವಿಕೆಯ ಪುನ್ನಾಡು ಆಗಿತ್ತು. ಒಂದು ಕಾಲದಲ್ಲಿ ಈ ಪುನ್ನಾಡು ಇಂದಿನ ಮೈಸೂರು ಜಿಲ್ಲೆಯಲ್ಲದೆ ಸುತ್ತಣ ಕೊಯಮತ್ತೂರು, ಕೊಡಗು, ಹಾಸನ ಮತ್ತು ಬೆಂಗಳೂರು ಜಿಲ್ಲೆಗಳನ್ನೂ ಒಳಕೊಂಡಿದ್ದಿರಬಹುದು. ಪ್ರಸಿದ್ಧಿಯ ಪ್ರಾಚೀನ ಕರ್ನಾಟಕದ ಕೇಂದ್ರಗಳಲ್ಲಿ ಪುನ್ನಾಡು ಸಹ ಒಂದು ಎನ್ನಬೇಕು.

ಕನ್ನಡಿಗರ ಮೊದಲ ಪ್ರಸಿದ್ಧ ರಾಜವಂಶವಾದ ಕದಂಬವಂಶದ ಮೂಲ ನಿವಾಸ ಶಿವಮೊಗ್ಗ ಜಿಲ್ಲೆಯ ತಾಳಗುಂದ. ಆದಿಕದಂಬರು ಮಯೂರಶರ್ಮನ ಕಾಲದಿಂದ ಬನವಾಸಿಯಲ್ಲಿ ನಿಂತು ವೈಜಯಂತೀಪುರವರಾಧೀಶ್ವರರೆನ್ನಿಸಿ, ಕನ್ನಡ ನಾಡಿನ ವಾಯವ್ಯ ಪ್ರಾಂತವನ್ನಾಳಿದರು. ಈಚಿನ ಕದಂಬರ ಶಾಖೆಗಳೂ ಸೇರಿದಂತೆ ಅವರ ರಾಜ್ಯ ಈಗಿನ ಬೆಳಗಾವಿ, ಉತ್ತರ ಕನ್ನಡ, ಶಿವಮೊಗ್ಗ, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳನ್ನು ಒಳಕೊಂಡಿದ್ದು, ಹಲಸಿ, ಬನವಾಸಿ ಮತ್ತು ಉಚ್ಚಂಗಿ ದುರ್ಗಗಳು ಕೇಂದ್ರಗಳಾಗಿದ್ದುವು. ಗಂಗರು ಗಂಗವಾಡಿ- ೯೬೦೦೦ ಸೀಮೆಯ ಒಡೆಯರು. ಮೊದಲು ಪಶ್ಚಿಮದಲ್ಲಿ ಕದಂಬರ ಮತ್ತು ಪೂರ್ವದಲ್ಲಿ ಪಲ್ಲವರ ರಾಜ್ಯಗಳ ನಡುವೆ ಅನಂತಪುರ ಮತ್ತು ಕಡಪ ಜಿಲ್ಲೆಗಳನ್ನು ಒಳಕೊಂಡಿದ್ದ ಕಾಲದಲ್ಲಿ ರಾಜ್ಯದ ಹಿಂದಿನ ರಾಜಧಾನಿ ಕುವಲಾಲಪುರ (= ಕೋಲಾರ)ವಾಗಿತ್ತು. ಅನಂತರದಲ್ಲಿ ತುಮಕೂರು, ಬೆಂಗಳೂರು, ಕೊಡಗು, ಮೈಸೂರು ಪ್ರದೇಶಗಳು ಕೊಯಮತ್ತೂರು ಮತ್ತು ಸೇಲಂ ಜಿಲ್ಲೆಗಳೂ ಅವರ ವಶಕ್ಕೆ ಬಂದಮೇಲೆ, ಸುಮಾರು ೪ನೆಯ ಶತಮಾನದ ಆದಿಭಾಗದಲ್ಲಿ ತಲಕಾಡು ಕೇಂದ್ರವಾಯಿತು. ೭ನೆಯ ಶತಮಾನದಲ್ಲಿ ಚೆನ್ನಪಟ್ಟಣದ ಬಳಿಯ ಮಾನ್ಯಕುಂಡ, ಬಳಿಕ ನೆಲಮಂಗಲ ತಾಲ್ಲೂಕಿನ ಮಾನ್ಯಪುರ (=ಮನ್ನೆ) ರಾಜಧಾನಿಗಳಾದುವು. ನೊಳಂಬಳಿಗೆ ೩೨೦೦೦ ಅಥವಾ

ನೊಳಂಬ ವಾಡಿಸೀಮೆ ತುಮಕೂರು ಚಿತ್ರದುರ್ಗ ಜಿಲ್ಲೆಗಳನ್ನೂ ಬಳ್ಳಾರಿ, ಅನಂತಪುರ, ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳ ಭಾಗಗಳನ್ನೂ ಒಳಕೊಂಡಿತ್ತು. ಈ ಸೀಮೆಯ ಅಧಿಪತಿಗಳಾದ ನೊಳಂಬರ ಮೊದಲ ರಾಜಧಾನಿ ಸಿರಾ ತಾಲ್ಲೂಕಿಗೆ ಉತ್ತರದಲ್ಲಿದ್ದ ಹೆಂಜೇರು ಅಥವಾ ಹೇಮಾವತಿ.

ಕದಂಬ, ಗಂಗ, ಆಳುಪ, ಹೈಹಯ ಮುಂತಾದ ಮನೆತನಗಳಲ್ಲಿ ಹಂಚಿಹೋಗಿದ್ದ ಕನ್ನಡನಾಡು ಬಾದಾಮಿ ಚಾಲುಕ್ಯರ ಕಾಲದಲ್ಲಿ ಒಗ್ಗೂಡಿದಂತಾಗಿ, ಅದಕ್ಕೆ ಒಂದು ಐತಿಹಾಸಿಕಸ್ಥಿರತೆ, ವ್ಯಾಪ್ತಿ ಪ್ರಭಾವಗಳು ಕೂಡಿಕೊಂಡುವು. ಬಿಜಾಪುರ ಜಿಲ್ಲೆಯ ಬಾದಾಮಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಇವರು ಕನ್ನಡ ರಾಜ್ಯದ ಗಡಿಗಳನ್ನು ಉತ್ತರದಲ್ಲಿ ನರ್ಮದೆ, ಪೂರ್ವದಲ್ಲಿ ಕರ್ನೂಲು, ಗುಂಟೂರು ಮತ್ತು ನೆಲ್ಲೂರು ಪ್ರದೇಶಗಳು, ದಕ್ಷಿಣದಲ್ಲಿ ಕಾವೇರಿ ಮತ್ತು ಪಶ್ಚಿಮದಲ್ಲಿ ಅರಬ್ಬಿ ಸಮುದ್ರ ಹೀಗೆ ಮುಟ್ಟುವಂತೆ ವಿಸ್ತರಿಸಿದರು. ಗುಜರಾತ್ ಮತ್ತು ಆಂಧ್ರಗಳಲ್ಲೂ ರಾಜ್ಯಶಾಖೆಗಳನ್ನು ನೆಟ್ಟರು. ಇವರು ಸರಿಸುಮಾರು ಇಂದಿನ ಬೊಂಬಾಯಿ, ಹೈದರಾಬಾದ್ ಮತ್ತು ಮೈಸೂರಿನ ವಾಯವ್ಯ ಪ್ರಾಂತಗಳನ್ನು ಆಳಿದರು.

ಅನಂತರದಲ್ಲಿ ರಾಷ್ಟ್ರಕೂಟರು ಕ್ರಮವಾಗಿ ಉಸ್ಮಾನಾಬಾದ್ ಜಿಲ್ಲೆಯ ಲಟ್ಟಲೂರ (=ಲಾಟೂರು), ನಾಸಿಕ್ ಜಿಲ್ಲೆಯ ಮಯೂರಖಂಡಿ, ಗುಲ್ಬರ್ಗದ ಬಳಿಯ ಮಾನ್ಯಖೇಟ (=ಮಾಲ್ಖೇಡ್) ಈ ಸ್ಥಳಗಳನ್ನು ರಾಜಧಾನಿಗಳನ್ನಾಗಿ ಮಾಡಿಕೊಂಡು ನರ್ಮದೆಯಿಂದ ಕಾವೇರಿವರೆಗಿನ ಭೂಭಾಗವನ್ನು ತಮ್ಮ ನೇರರಾದ ಆಳ್ವಿಕೆಗೆ ಒಳಪಡಿಸಿಕೊಂಡಿದ್ದರು. ಇಷ್ಟು ಮಾತ್ರವಲ್ಲದೆ, ಹಲವು ಬಾರಿ ತಮ್ಮ ಪೌರುಷಪ್ರಾಬಲ್ಯದಿಂದ ದಕ್ಷಿಣ ಗುಜರಾತ್, ಮಾಳ್ವ, ಆಂಧ್ರ, ಕಂಚಿ ಮತ್ತು ತಂಜಾವೂರು ಪ್ರದೇಶಗಳ ಮೇಲೆ ಅಧಿಕಾರವನ್ನು ಸ್ಥಾಪಿಸಿದರು. ಭರತಖಂಡದ ಇನ್ನಿತರ ಪ್ರಬಲ ರಾಜವಂಶಗಳನ್ನು ಹಣಿಸಿ, ಅರಬ್ಬಿ ಇತಿಹಾಸಕಾರ ಸುಲೇಮಾನ್ ಪ್ರಕಾರ, ವಿಶ್ವದ ನಾಲ್ಕು ಬೃಹದ್ ರಾಷ್ಟ್ರಗಳಲ್ಲಿ ಒಂದೆನಿಸಿದ ಈ ರಾಜವಂಶ ಕ್ರಿ.ಶ. ೮ರಿಂದ ೧೧ನೆಯ ಶತಮಾನದವರೆಗೆ ಭಾರತವನ್ನೆಲ್ಲ ಕರ್ನಾಟಕವನ್ನಾಗಿ ಮಾಡಿದ್ದು ಅತ್ಯಂತ ಅಭಿಮಾನದ ಸಂಗತಿಯಾಗಿದೆ. ಈ ಕಾರಣದಿಂದ ಈ ಅವಧಿಯ ಭಾರತದ ಚರಿತ್ರೆಯನ್ನು ರಾಷ್ಟ್ರಕೂಟಯುಗವೆಂದು ಕರೆಯುವುದು ಸಮಂಜಸವೆಂದು ಕೆಲವರು ಇತಿಹಾಸಕಾರರ ಅಭಿಪ್ರಾಯ.

ಕುಂತಲದ ದೊರೆಗಳೆಂದು ಬಾದಾಮಿ ಚಾಲುಕ್ಯರಂತೆ ತಾವೂ ಪರಿಕೀರ್ತಿತರಾದ ಕಲ್ಯಾಣ ಚಾಲುಕ್ಯರು ಮುಂದಿನ ಘಟ್ಟದಲ್ಲಿ ರಟ್ಟಪಾಡಿ ಏಳೂವರೆ ಲಕ್ಷದೇಶವೆಂದು ಹೆಸರಾಗಿದ್ದ ರಾಷ್ಟ್ರಕೂಟಸಾಮ್ರಾಜ್ಯದ ಅಧಿಪತಿಗಳಾಗಿ ಪ್ರಬಲಿಸಿದರು. ಅವರ ಆಳ್ವಿಕೆಯ ಕುಂತಲದೇಶವು ಎಂದರೆ ಕರ್ನಾಟಕವು ಬನವಾಸಿ, ಪಾನುಂಗಲ್ಲು, ಪುಲಿಗೆರೆ, ಬೆಳ್ವೊಲ, ಕೂಂಡಿ, ವೇಣುಗ್ರಾಮ, ತೊಱಗಲೆ, ಕೆಳವಾಡಿ, ಕಿಸುಕಾಡು, ಬಾಗಡಗೆ, ತರ್ದವಾಡಿ ಹೀಗೆ ಅನೇಕ ರಾಜ್ಯ ವಿಭಾಗಗಳನ್ನು ಒಳಗೊಂಡಿದ್ದು, ಇವನ್ನು ಅವರ ಆಳ್ವಿಕೆಯ

ಮಂಡಲೇಶ್ವರರೂ ಇತರ ಅಧಿಕಾರಿಗಳೂ ನೋಡಿಕೊಳ್ಳುತ್ತಿದ್ದರು. ಅನಂತರ ಪ್ರಬಲಿಸಿದವರು ಕಲಚುರಿಗಳು. ಇವರು ಇಂದಿನ ಬಿಜಾಪುರ ಮತ್ತು ಸೊಲ್ಲಾಪುರ ಜಿಲ್ಲೆಗಳನ್ನೊಳಗೊಂಡ ತರ್ದವಾಡಿ ಪ್ರಾಂತವನ್ನು ಮಂಗಳವಾಡ ಕೇಂದ್ರದಿಂದ ಮಹಾಮಂಡಲೇಶ್ವರರಾಗಿ ಆಳುತ್ತಿದ್ದರು. ಸೊಲ್ಲಾಪುರ ಜಿಲ್ಲೆಯ ಪಂಡರಪುರ ಗ್ರಾಮದ ಹತ್ತಿರದ ಮಂಗಳವೇಡೆಯೇ ಆ ಕೇಂದ್ರವಾಗಿದ್ದಿರಬೇಕೆಂದು ಊಹಿಸಿದೆ.

ಕಲ್ಯಾಣದ ಚಾಲುಕ್ಯರ ಕಾಲದ, ಈಚೆಯ ಸಣ್ಣಪುಟ್ಟ ರಾಜವಂಶಗಳಲ್ಲಿ ಉತ್ತರಕಾಲೀನ ಕದಂಬರು, ರಟ್ಟರು, ಸಿಂದರು ಮೊದಲಾದ ಕೆಲವರು ಪ್ರಮುಖರು. ಇವರಲ್ಲಿ ಗೋವೆಯ ಕದಂಬರು ಅನಿಲಾಪುರ (ಧಾರವಾಡ ಜಿಲ್ಲೆಯ ಅಳ್ನಾವರ್) ಮತ್ತು ಚಂದ್ರಾಪುರ (ಬಹುಶಃ ಗೋವೆಯ ಸಲ್ಸೆತ್ತೆಯಲ್ಲಿರುವ ಚಂದೋರ್), ಕುಂದೂರ (ಬಹುಶಃ ಧಾರವಾಡ ತಾಲ್ಲೂಕಿನ ಸರೇಂದ್ರ), ಸಂಪಗಡಿ (ಬಹುಶಃ ಖಾನಾಪುರ ತಾಲ್ಲೂಕಿನ ಬಿಡಿ) ಈ ಪ್ರದೇಶಗಳನ್ನು ರಾಜಧಾನಿಗಳನ್ನಾಗಿಟ್ಟುಕೊಂಡು ಕೊಂಕಣ - ೯೦೦೦ ಮತ್ತು ಪಲಸಿಗೆ - ೧೨೦೦೦ ಪ್ರಾಂತಗಳನ್ನು ವಂಶ ಪಾರಂಪರ್ಯವಾಗಿ ಆಳುತ್ತಿದ್ದರು. ಹೀಗೆಯೇ ಹಾನಗಲ್ಲು ಕದಂಬರು ತಮ್ಮ ಮುಖ್ಯ ಪಟ್ಟಣವಾದ ಪಾನುಂಗಲ್ (ಧಾರವಾಡ ಜಿಲ್ಲೆಯ ಈಗಿನ ಹಾನುಗಲ್ಲು) ಇಂದ ಬನವಾಸಿ ಪ್ರಾಂತವೆಲ್ಲವನ್ನೂ ಆಳುತ್ತಿದ್ದರು.

ಸೌಂದತ್ತಿಯ ರಟ್ಟರು ಪಶ್ಚಿಮದಲ್ಲಿ ಶಿಲಾಹಾರರ ಕೊಲ್ಲಾಪುರ, ಉತ್ತರದಲ್ಲಿ ಕಳಚುರಿಗಳ ಮಂಗಳವೇಡೆ, ದಕ್ಷಿಣದಲ್ಲಿ ಕದಂಬರ ಗೋವೆ ಮತ್ತು ಪೂರ್ವದಲ್ಲಿ ಇಂದಿನ ಬೆಳಗಾಂ ಜಿಲ್ಲೆ ಇವು ಸೀಮೆಯಾಗಿದ್ದು ಕುಂತಲದೇಶದ ಒಂದು ಭಾಗವಾಗಿದ್ದ ಕೂಂಡಿ-೩೦೦೦ (ಇಂದಿನ ಅಥಣಿ ಖಾನಾಪುರ ತಾಲ್ಲೂಕುಗಳನ್ನೂ ಸಂಪಗಾವ್ ತಾಲ್ಲೂಕಿನ ದಕ್ಷಿಣಭಾಗವನ್ನೂ ಬಿಟ್ಟು ಉಳಿದ ಬೆಳಗಾಂ ಜಿಲ್ಲೆಯ ಪ್ರದೇಶ) ಪ್ರಾಂತವನ್ನು ಆಳುತ್ತಿದ್ದರು. ಬೆಳಗಾಂ ಜಿಲ್ಲೆಯ ಸೌಂದತ್ತಿ ತಾಲ್ಲೂಕಿನ ಮುಖ್ಯ ಸ್ಥಳವಾದ ಸೌಂದತ್ತಿಯೇ (=ಸುಗಂಧವರ್ತಿ) ಇವರ ರಾಜಧಾನಿಯಾಗಿತ್ತು. ಎಲ್ಬುರ್ಗದ ಸಿಂದರು ಬಿಜಾಪುರ ಜಿಲ್ಲೆಯ ಆಗ್ನೇಯಭಾಗ, ಧಾರವಾಡ ಜಿಲ್ಲೆಯ ಈಶಾನ್ಯಭಾಗ, ಕಿಸುಕಾಡು - ೭೦, ಕೆಳವಾಡಿ - ೩೦೦೦, ಬಾಗಡೆ - ೭೦, ನರೆಯಂಗಲ್ - ೧೨ ಈ ಪ್ರದೇಶಗಳಲ್ಲಿ ಆಳುತ್ತಿದ್ದರು. ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳ ಪೂರ್ವದ ಸೀಮಾಪ್ರದೇಶ ಸೇರಿದ ಈ ನಾಡಿಗೆ ಸಿಂದವಾಡಿ ಎಂದು ಆಗ್ಗೆ ಹೆಸರಿದ್ದು, ಅದರ ರಾಜಧಾನಿ ಎರಂಬರಗೆ ಆಗಿತ್ತು. ಹೀಗೆಯೇ ಬಿಜಾಪುರ ಜಿಲ್ಲೆಯ ಬಾಗಲಕೋಟೆಯಲ್ಲಿ ಬಾಗಡಗೆಯ ಸಿಂದರೂ ಈಗಿನ ಬಳ್ಳಾರಿ ಜಿಲ್ಲೆಯ ಕುರುಗೋಡಿನಲ್ಲಿ ಕುರುಗೋಡಿನ ಸಿಂದರೂ ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ಬೆಳಗುತ್ತಿಯ ಪರಿಸರದಲ್ಲಿ ಬೆಳಗುತ್ತಿಯ ಸಿಂದರೂ ಒಡೆಯರಾಗಿದ್ದರು. ಧಾರವಾಡ ಜಿಲ್ಲೆಯ ಕರಜಿಗಿ ತಾಲ್ಲೂಕಿನ ಗುತ್ತಲು (=ಗುತ್ತವೊಳಲ್) ಮತ್ತು ಸುತ್ತಮುತ್ತಣ ಪ್ರದೇಶವನ್ನು ಗುತ್ತರು ಆಳುತ್ತಿದ್ದರು.

ಶಿಲಾಹಾರರ ಬೇರೆ ಬೇರೆ ಶಾಖೆಗಳು ಬೊಂಬಾಯಿ ಕರ್ನಾಟಕ ಮತ್ತು ಸುತ್ತಣ

ಪ್ರದೇಶಗಳಲ್ಲಿ ತಲೆಯೆತ್ತಿದ್ದುವು. ಈಗ ಇವರಲ್ಲಿ ಕೆಲವು ಶಾಖೆಗಳು ತಿಳಿದಿವೆ. ಕೊಂಕಣ-೯೦೦ (ಮೊದಲಿನ ಸಾಮಂತವಾಡಿ ಪ್ರಾಂತ ಮತ್ತು ರತ್ನಗಿರಿ ಜಿಲ್ಲೆಗೆ ಸೇರಿದ ಇರಿಡಿಗೆ ನಾಡು) ರಲ್ಲಿ ದಕ್ಷಿಣಕೊಂಕಣ ಶಿಲಾಹಾರರು, ಅಣಂದೂರು - ೩೦೦ರ ಅಂಕುಲಗೆ ನಾಡು (ಇಂದಿನ ಅಕ್ಕಲಕೋಟೆ ಪ್ರದೇಶ) ಎಂಬಲ್ಲಿ ಅಕ್ಕಲಕೋಟೆ ಶಿಲಾಹಾರರು, ಮುಂಬಯಿಯ ಈಗಿನ ಥಾಣ(ಸ್ಥಾನಕ)ದಲ್ಲಿ ಉತ್ತರಕೊಂಕಣ ಶಿಲಾಹಾರರು, ಕೊಲ್ಲಾಪುರ, ಪನಹಾಲಾದುರ್ಗ ಮತ್ತು ವಳವಾಡಗಳನ್ನು ರಾಜಧಾನಿ ಗಳನ್ನಾಗಿ ಮಾಡಿಕೊಂಡು ಸತಾರಾ ಬೆಳಗಾಂ ಜಿಲ್ಲೆಗಳ ಕೆಲವು ಭಾಗಗಳನ್ನೊಳಕೊಂಡ ಕೊಲ್ಲಾಪುರ ಪ್ರಾಂತವನ್ನು, ಎಂದರೆ ದಕ್ಷಿಣ ಮಹಾರಾಷ್ಟ್ರವನ್ನು, ಕರ್ಹಾಡ(ಕೊಲ್ಲಾಪುರ) ಶಿಲಾಹಾರರು- ಹಾಗೆ ಆಳಿದಂಥ ಶಾಖೆಗಳಲ್ಲಿ ಕೆಲವು. ಎಳಮೇಲ(ಸಿಂದಗಿ ತಾಲ್ಲೂಕಿನ ಅಲಮೇಲ), ಬಿಜಾಪುರ, ಹಾವೇರಿ, ತೇರದಳ (ಜಮಖಂಡಿ ತಾಲ್ಲೂಕು), ರಾಮತೀರ್ಥ (ಅಥಣಿ ತಾಲ್ಲೂಕು) ಇಲ್ಲಿಯ ಶಿಲಾಹಾರರ ಕೆಲವು ಸಣ್ಣಪುಟ್ಟ ಶಾಖೆಗಳು ಇದ್ದುವೆಂದು ತಿಳಿಯುತ್ತದೆ.

ಇನ್ನೂ ಕೆಲವು ರಾಜಮನೆತನಗಳು : ಇಂದಿನ ಚಿಕ್ಕಮಗಳೂರು ಜಿಲ್ಲೆಯ ಅದೇ ತಾಲ್ಲೂಕು ಮತ್ತು ಶಿವಮೊಗ್ಗ ಜಿಲ್ಲೆಯ ಕೊಪ್ಪ ತಾಲ್ಲೂಕು ಪ್ರದೇಶಗಳಲ್ಲಿ ಸೇನವಾರರು, ಈಗಿನ ತೀರ್ಥಹಳ್ಳಿ ತಾಲ್ಲೂಕು ಮತ್ತು ಸುತ್ತಣ ಪ್ರದೇಶಗಳಲ್ಲಿ ಸಾಂತರರು, ಉತ್ತರ ಕನ್ನಡ ಜಿಲ್ಲೆಗೆ ಸೇರಿದ ಹಾಡುಹಳ್ಳಿಯಲ್ಲಿ ಸಾಳುವರು, ಮೈಸೂರು ಜಿಲ್ಲೆಯ ಪಶ್ಚಿಮದ ಭೂಭಾಗ ಮತ್ತು ಕೊಡಗು ಪ್ರಾಂತಗಳಲ್ಲಿ ಚೆಂಗಾಳ್ವರು, ಹಾಸನ ಜಿಲ್ಲೆಗೆ ದಕ್ಷಿಣದಲ್ಲಿರುವ ಅರಕಲಗೂಡು ತಾಲ್ಲೂಕು ಮತ್ತು ಕೊಡಗಿನ ಉತ್ತರ ಭಾಗಗಳಲ್ಲಿ ಕೊಂಗಾಳ್ವರು ಆಧಿಪತ್ಯವನ್ನು ನಡಸುತ್ತಿದ್ದರು. ಉಚ್ಚಂಗಿಯ (ಹಳೆಯ ಮೈಸೂರಿನ ಉತ್ತರ ಗಡಿಯಲ್ಲಿ ಬಳ್ಳಾರಿ ಜಿಲ್ಲೆಗೆ ಈಶಾನ್ಯ ದಿಕ್ಕಿಗಿರುವ ಒಂದು ಗಿರಿದುರ್ಗ) ಪಾಂಡ್ಯರು ಸ್ಥೂಲವಾಗಿ ಈಗಿನ ಚಿತ್ರದುರ್ಗ ಜಿಲ್ಲೆಗೆ ಹೊಂದಿದ ನೊಳಂಬವಾಡಿ - ೩೨೦೦೦ ಸೀಮೆಯ ಒಡೆಯರಾಗಿದ್ದರು. ನಿಡುಗಲ್ಲಿನ ಚೋಳರು ಗುಂಡ್ಲುಪೇಟೆ ತಾಲ್ಲೂಕಿನ ತೆರಕಣಾಂಬಿ ರಾಜಧಾನಿಯಾಗಿದ್ದ ಪದಿನಾಲ್ಕುನಾಡು ಸೀಮೆಯ ನಾಯಕರಾಗಿದ್ದರು. ಹೆಂಜೇರು ರಾಜಧಾನಿಯಾಗಿ ಹೇಮಾವತಿ ಮತ್ತು ನಿಡುಗಲ್ಲುಗಳ ನಡುವಿನ ಸಣ್ಣ ಪ್ರದೇಶ ಒಡೆತನವೂ ಇವರಿಗಿತ್ತು.

ಕಲ್ಯಾಣ ಚಾಲುಕ್ಯರ ಬಳಿಕ, ದ್ವಾರಸಮುದ್ರದ ಹೊಯ್ಸಳರು ಕರ್ನಾಟಕದ ಇತಿಹಾಸದಲ್ಲಿ ಖ್ಯಾತರಾಗುವ ಮುನ್ನ, ಅದರ ಉತ್ತರಭಾಗದಲ್ಲಿ ಪ್ರಬಲಿಸಿದವರು ಎಂದರೆ, ಸೇಉಣರು ಅಥವಾ ದೇವಗಿರಿಯ ಯಾದವರು. ಶಿವಮೊಗ್ಗ, ಹಾಸನ, ಚಿತ್ರದುರ್ಗ, ಧಾರವಾಡ, ಬಿಜಾಪುರ, ರಾಯಚೂರು, ಬಿದರೆ, ಬಳ್ಳಾರಿ ಜಿಲ್ಲೆಗಳ ಕೆಲವು ಭಾಗಗಳು ಇವರ ರಾಜ್ಯದಲ್ಲಿ ಸೇರಿದ್ದುವು. ಇವರ ಪ್ರತಾಪಶಾಲಿ ದೊರೆ ಭಿಲ್ಲಮನ (V) ಕಾಲದಲ್ಲಿ ಇವರ ಆಳ್ವಿಕೆಯ ಸೀಮೆ ಕಲ್ಯಾಣ, ಕಿಸುಕಾಡು ನಾಡು (ಇಂದಿನ ಎಲ್ಬುರ್ಗ, ಲಿಂಗಸುಗೂರು, ರಾಯಚೂರು ಜಿಲ್ಲೆ), ತರ್ದವಾಡಿ ನಾಡು (ಬಿಜಾಪುರ ಜಿಲ್ಲೆಯ

ಬಾಗೆವಾಡಿ ತಾಲ್ಲೂಕು), ಬೆಳ್ವೊಲ (ಧಾರವಾಡ ಜಿಲ್ಲೆಯ ಗದುಗಿನ ಪರಿಸರ) ಇವನ್ನು ಒಳಕೊಂಡಿತ್ತು. ಈಗಿನ ಧಾರವಾಡ ಜಿಲ್ಲೆಯ ಡಂಬಳ ಎಂಬ ಊರಿನ ನೆರೆಭಾಗಗಳನ್ನು ಒಳಕೊಂಡಿದ್ದ ಮಾಸವಾಡಿ - ೧೪೦ ಎಂಬ ಪ್ರಾಂತವನ್ನು ಮಾಸವಾಡಿ ಸೇಉಣರು ಆಳುತ್ತಿದ್ದರು.

ಮಹಾಮಂಡಲೇಶ್ವರರಾಗಿ ಬಾಳಿದ ಕರ್ನಾಟಕದ ಹೈಹಯ ರಾಜವಂಶದವರ ಒಂದು ಶಾಖೆ ಮೊರಟ - ೩೦೦ರ ಪ್ರದೇಶವನ್ನೂ (ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಪ್ರದೇಶ), ಇನ್ನೊಂದು ಶಾಖೆ ಅರಳು-೩೦೦ರ ಪ್ರದೇಶವನ್ನೂ (ಈಗಿನ ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನ ಅರಳೂರು ಗ್ರಾಮದ ಪರಿಸರ) ಆಳುತ್ತಿದ್ದಂತೆ ತಿಳಿದಿದೆ.

ಅಚ್ಚಕನ್ನಡಿಗರಾದ ಹೊಯ್ಸಳರ ಮೂಲಸ್ಥಾನ ಶಶಕಪುರ ಅಥವಾ ಸೊಸೆವೂರು ಕರ್ನಾಟಕ ರಾಜ್ಯದ ಈಗಿನ ಚಿಕ್ಕಮಗಳೂರು ಜಿಲ್ಲೆಗೆ ಸೇರಿದ ಮೂಡಿಗೆರೆ ತಾಲ್ಲೂಕಿನ ಅಂಗಡಿ. ಈ ಮನೆತನದ ಪ್ರಸಿದ್ಧರಾಜನಾದ ವಿಷ್ಣುವರ್ಧನನ ಕಾಲದಲ್ಲಿ ದ್ವಾರಸಮುದ್ರ ಅಥವಾ ದೋರಸಮುದ್ರ (ಹಳೆಯಬೀಡು) ರಾಜಧಾನಿಯಾಗಿದ್ದು, ಹೊಯ್ಸಳ ಸಾಮ್ರಾಜ್ಯವು ಕೊಂಗು (ಸೇಲಂ), ನಂಗಲಿ (ಕೋಲಾರ ಜಿಲ್ಲೆಯ ಪೂರ್ವಭಾಗ), ತಲಕಾಡು, ಗಂಗವಾಡಿ, ನೊಳಂಬವಾಡಿ, ಬನವಾಸಿ, ಹಾನಗಲ್ಲು, ಪುಲಿಗೆರೆ, ಹಲಸಿಗ, ಬೆಳ್ವೊಲ ಈ ಪ್ರಾಂತಗಳಿಂದ ಕೂಡಿತ್ತು. ಮುಂದಿನ ಘಟ್ಟದಲ್ಲಿ ಕರ್ನಾಟಕದ ಕೀರ್ತಿಯನ್ನು ಮೆರೆಸಿದ ವಿಜಯನಗರ ಸಾಮ್ರಾಜ್ಯ ತುಂಗಭದ್ರಾನದೀತೀರದ ವಿಜಯನಗರದಲ್ಲಿ ಸ್ಥಾಪಿತವಾಗಿ, ರಾಜ್ಯದ ಮುಖ್ಯ ಪಟ್ಟಣಗಳಾಗಿ ಬಂಕಾಪುರ, ರಾಯಚೂರು, ಆದವಾನಿ, ಭಟ್ಕಳ, ಹೊನ್ನಾವರ, ಅಂಕೋಲ, ಮಂಗಳೂರು, ಪೆನುಗೊಂಡೆ, ಇಕ್ಕೇರಿ, ದೋರಸಮುದ್ರ, ಶ್ರೀರಂಗಪಟ್ಟಣ ಇವು ಆ ಸಾಮ್ರಾಜ್ಯದ ತಲೆಮೆಯನ್ನು ಮೆರೆಸಿದವು. ಈ ರಾಜ್ಯದ ಕೀರ್ತಿಗೆ ಕಾರಣನಾದ ಕೃಷ್ಣದೇವರಾಯನ ಕಾಲದಲ್ಲಿ ರಾಜ್ಯದ ಗಡಿರೇಖೆಗಳು ಒರಿಸ್ಸದ ತುದಿಯಿಂದ ಸಿಂಹಳದ್ವೀಪದವರೆಗೆ ವಿಸ್ತರಿಸಿತಾದರೂ ರಾಜಕೀಯವಾದ ಏರಿಳಿತಗಳಿಂದ ಕಾಲಕಾಲಕ್ಕೆ ವಿಜಯನಗರದ ಅರಸರ ಆಳ್ವಿಕೆಯ ಪ್ರದೇಶಗಳೂ ರಾಜಧಾನಿಗಳೂ ವ್ಯತ್ಯಾಸಗೊಂಡವು. ಬಿ.ಎ. ಸಾಲೆತೊರೆಯವರು ವಿಜಯನಗರ ಸಾಮ್ರಾಜ್ಯದ ಬಗ್ಗೆ ಬರೆಯುತ್ತ, ಒಂದೆಡೆ ಹೀಗೆಂದಿದ್ದಾರೆ :

"ವಿಜಯನಗರದ ದೀರ್ಘಕಾಲದ ಚರಿತ್ರೆಯಲ್ಲೆಲ್ಲ ಆ ರಾಜರು ತಮ್ಮ ಪ್ರಖ್ಯಾತ ರಾಜಧಾನಿಯಾದ ವಿಜಯನಗರದಿಂದಲೇ ಆಳುತ್ತಿರಲಿ ಅಥವಾ ಈಚಿನ ರಾಜಧಾನಿ ಗಳಾದ ಪೆನುಗೊಂಡ, ಚಂದ್ರಗಿರಿ, ವೆಲ್ಲೂರುಗಳಿಂದ ಆಳುತ್ತಿರಲಿ, ಯಾವಾಗಲೂ ಅವರನ್ನು ಕರ್ನಾಟಕರಾಜರೆಂದೇ ಕರೆಯುತ್ತಿದ್ದರು. ಇದರಿಂದ ದಕ್ಷಿಣ ಮತ್ತು ಪಶ್ಚಿಮ ಭಾರತದ ಮುಂದಾಳುತನ, ಕನಿಷ್ಠಪಕ್ಷ ಹಿಂದುಗಳ ವಿಷಯದಲ್ಲಾದರೂ,

ಕರ್ನಾಟಕದ್ದೆಂಬುದು ನಿರ್ವಿವಾದವಾಗಿ ಸಿದ್ಧವಾಗುತ್ತದೆ. ಮುಖ್ಯವಾಗಿ ತೆಲುಗು ಮೂಲವುಳ್ಳ ವಿಜಯನಗರದ ರಾಜಸಂತತಿ ಎಂದರೆ ಆರವೀಟಿ ಸಂತತಿ ಅಧಿಕಾರಕ್ಕೆ ಬಂದ ಮೇಲೂ ಜನ ವಿಜಯನಗರದ ರಾಜರನ್ನು ಕರ್ನಾಟಕರಾಜರೆಂದೇ ಕರೆಯುತ್ತಿದ್ದದ್ದು ಇನ್ನೂ ಹೆಚ್ಚು ಗಮನಾರ್ಹವಾಗಿದೆ."[೧೦೩]

ಕರ್ನಾಟಕದ ಕೊನೆಯ ಐತಿಹಾಸಿಕ ಸಾಮ್ರಾಜ್ಯವಾದ ವಿಜಯನಗರದ ಪತನಾನಂತರದಲ್ಲಿ ಮೈಸೂರು, ಇಕ್ಕೇರಿ (ಬಿದನೂರು), ಗೇರುಸೊಪ್ಪೆ, ಭಟ್ಕಳ ಇಲ್ಲಿಯ ಅರಸರು ಮತ್ತು ಉಮ್ಮತ್ತೂರು, ಆವತಿನಾಡು, ಎಲಹಂಕ, ಚಿತ್ರದುರ್ಗ, ನಿಡಗಲ್ಲು, ಚೆನ್ನಪಟ್ಟಣ, ಕೊಡಗು, ಕಾರ್ಕಳ ಮುಂತಾದ ಕಡೆಗಳ ಪಾಳೆಯಗಾರರು ಸಾಮ್ರಾಜ್ಯವನ್ನು ಸಣ್ಣಪುಟ್ಟ ಭಾಗಗಳಾಗಿ ಹಂಚಿಕೊಂಡು ಆಳತೊಡಗಿದರು. ಇವರಲ್ಲಿ ಪ್ರಬಲರಾದವರು ಎಂದರೆ ಬಿದನೂರಿನ ಕೆಳದಿ ಅರಸರು ಮತ್ತು ಮೈಸೂರಿನ ಒಡೆಯರು.[೧೦೪] ಭರತಖಂಡ ಸ್ವತಂತ್ರ ರಾಷ್ಟ್ರವಾದ ಮೇಲೆ, ಅರಸುಮನೆತನದ ಆಳ್ವಿಕೆಗಳು ದೇಶದಲ್ಲೆಲ್ಲ ಕೊನೆಗೊಂಡುದರ ಪರಿಣಾಮವಾಗಿ ಮೈಸೂರಿನ ಒಡೆಯರ ರಾಜತ್ವವೂ ಕೊನೆಗೊಂಡಿತು ; ಇಲ್ಲಿಯೂ ಪ್ರಜಾಪ್ರಭುತ್ವ ಪದ್ಧತಿ ಮೊದಲುಗೊಂಡಿತು.

❐

ಟಿಪ್ಪಣಿಗಳು

೧. ವಿವರಗಳಿಗೆ ನೋಡಿ : ಕರ್ನಾಟಕ (ರಾಜ್ಯ), 'ಕರ್ನಾಟಕ - ಕನ್ನಡ ವಿಷಯ ವಿಶ್ವಕೋಶ', ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೯, ಪು. ೨೭೪-೭೬

೨. 'ಕನ್ನಡ ವಿಶ್ವಕೋಶ', ಸಂ. ೪, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೨, ಪು. ೨೨ ; 'ಕರ್ನಾಟಕ - ಕನ್ನಡ ವಿಷಯ ವಿಶ್ವಕೋಶ', ಪು. ೨೭೪

೩. Coloner Mark Wilks, History of Mysoor, Mysore, 1930. (II ed), pp 6-7

೪. Census of India, 1981, Series 9, Karnataka Paper 1-2, B.K. Das, Director of Census operations, karnataka..

೫. 'ಕರ್ನಾಟಕ - ಕನ್ನಡ ವಿಷಯವಿಶ್ವಕೋಶ', ಪು. ೨೭೪-೭೬.

೬. B.S. Krishnaswamiengar, A Brief History of Karnataka, HJMU (A), 21-2, March 1962, p 57.

೭. 'ಕನ್ನಡ ವಿಶ್ವಕೋಶ', ಸಂ. ೪, ಪು. ೨೨.

೮. ಹೆಚ್ಚಿನ ವಿವರಗಳಿಗೆ ನೋಡಿ : ರಾ.ಹ. ದೇಶಪಾಂಡೆ, 'ಕರ್ನಾಟಕ ಸಾಮ್ರಾಜ್ಯ', ಧಾರವಾಡ, ೧೯೨೬, ಪು. ೧-೨೦ ; B.S. Krishnaswamiengar, op.cit. p 57 ; Tradition and Legends, Karnataka Through the Ages, Bangalore, 1968. pp., 95-98.

೯. ದ.ರಾ. ಬೇಂದ್ರೆ, 'ಸಾಹಿತ್ಯದ ವಿರಾಟ್ ಸ್ವರೂಪ', ಧಾರವಾಡ, ೧೯೭೪, ಪು. ೮೪೮.

೧೦. ಜಿ.ಪಿ. ರಾಜರತ್ನಂ, ಕರ್ನಾಟ (ಕ) - ಕರ್ಣಾಟ(ಕ), ಕಸಾಪ. ೨೩-೩, ೧೯೩೮, ಪು. ೧೭೨-೮೬ ; M.H. Krishna, EC., Xiii-i.

೧೧. ಕಸಾಪ. ೨೨-೪, ಪು. ೨೪೨ ; ೨೩-೨, ಪು. ೧೫೦ ; ೨೩-೩, ಪು. ೨೪೦.

೧೨-೧೪ ಇವರ ವಾದಗಳ ವಿವರಗಳಿಗೆ ನೋಡಿ : 'ಕರ್ಣಾಟಕ, ಕರ್ನಾಟಕ ಈ ರೂಪಗಳಲ್ಲಿ ಯಾವುದು ಸಾಧು?', ಬೆಳ್ಳಾವೆ ವೆಂಕಟನಾರಾಯಣಪ್ಪ, ಬೆಂಗಳೂರು, ೧೯೩೮ ; ಕಸಾಪ. ೪-೪-, ೧೯೨೦, ಪು. ೨೦೫.

೧೫. 'ಕರ್ಣಾಟಕ, ಕರ್ನಾಟಕ - ಈ ರೂಪಗಳಲ್ಲಿ ಯಾವುದು ಸಾಧು ?' ೧೯೩೮, ಪು. ೪೫-೪೭.

೧೬. ಕಸಾಪ. ೨೩-೩, ೧೯೩೮, ಪು. ೧೬೭, ೧೭೨.

೧೭. "ಕರ್ನಾಟಕ" ಎಂಬ ರೂಪವು ಅಸಾಧುವೆ?, ಕಸಾಪ. ೨೩-೩, ೧೯೩೮, ಪು. ೧೫೯-೬೨ ; 'ಸಮಾಲೋಕನ', ಮೈಸೂರು, ೧೯೫೮, ಪು. ೨೪೧-೪೨.

೧೮. ಕರ್ಣಾಟಕ ಶಿಕ್ಷಾ, ಕಸಾಪ. ೧೭-೩, ೧೯೩೨, ಪು. ೧೭೭.

೧೯. H.Y. and A.C.B. Specimen of a Discursive Glossary of Anglo - Indian Terms ; Carnatic. 1A, viii, 1879, pp 174-79

೨೦. ಆರ್. ತಾತಾಚಾರ್ಯ, ಕನ್ನಡ ಶಬ್ದದ ವ್ಯುತ್ಪತ್ತಿ, ಕಸಾಪ. ೩-೪, ಜನವರಿ ೧೯೧೯, ಪು.೨೯.

೨೧. ಸಿದ್ಧಾಂತಿ ಶಿವಶಂಕರಶಾಸ್ತ್ರಿ, ನಂ. ಶ್ರೀಕಂಠಶಾಸ್ತ್ರಿ ಮೊದಲಾದವರ ವಾದಗಳಿಗೆ ನೋಡಿ : 'ಕರ್ಣಾಟಕ, ಕರ್ನಾಟಕ- ಈ ರೂಪಗಳಲ್ಲಿ ಯಾವುದು ಸಾಧು?', ೧೯೩೮, ಪು. ೫೩-೫೮.

೨೨. ಶಂ.ಬಾ. ಜೋಶಿ, 'ಕನ್ನಡದ ನೆಲೆ', ಧಾರವಾಡ, ೧೯೫೨, ಪು. ೬೮.

೨೩. 'ಕರ್ಣಾಟಕ, ಕರ್ನಾಟಕ - ಈ ರೂಪಗಳಲ್ಲಿ ಯಾವುದು ಸಾಧು?', ೧೯೩೮, ಪು.೨೫-೨೬.

೨೪. 'ಕನ್ನಡದ ನೆಲೆ', ೧೯೫೨, ಪು. ೬೮-೭೩.

೨೫. ನೋಡಿ : ಟಿಪ್ಪಣಿ ೨೩, ಪು. ೫೩-೫೪.

೨೬-೨೭. Comparative Grammar of the Dravidian Languages, Madras, 1956, pp 30-31 ; p. 577.

೨೮. 'ಶಬ್ದಮಣಿದರ್ಪಣಂ', ಮಂಗಳೂರು, ೧೮೭೨, ಮುನ್ನುಡಿ, ಪು. vi.

೨೯. 'ವ್ಯಾಕರಣೋಪನ್ಯಾಸಮಂಜರಿ', ಬೆಂಗಳೂರು, ೧೮೯೪, ಪು. ೧೧.

೩೦. El, xii, p. 144.

೩೧. Early History of od Deccan, p. 41.

೩೨. The Core of Karnataka, 1A, Jan 1923, p.17

೩೩. QJMS, xi-i, October, ೧೯೨೦ ; 'ಕರ್ಣಾಟಕ, ಕರ್ನಾಟಕ - ಈ ರೂಪಗಳಲ್ಲಿ ಯಾವುದು ಸಾಧು ?', ೧೯೩೮, ಪು. ೧೨, ೪೫

೩೪. ಕನ್ನಡ ಭಾಷೆಯ ಚರಿತ್ರೆ, ಬೆಳಗಾಂ, ೧೯೬೫, ಪು. ೩೭-೩೮; 'ನಮ್ಮನುಡಿ', ಬೆಂಗಳೂರ, ೧೯೬೦, ಪು. ೩೮ ; 'ಕರ್ನಾಟಕ - ಪದದ ಪ್ರಾಚೀನತೆ', ಬೆಂಗಳೂರು, ೧೯೭೩, ಪು. ೪.

೩೫. ಕನ್ನಡ ಭಾಷೆಯ ಚರಿತ್ರೆ, ಬೆಳಗಾಂ, ೧೯೭೫, ಪು. ೩೭-೩೮ ; 'ನಮ್ಮ ನುಡಿ', ಬೆಂಗಳೂರು, ೧೯೬೦, ಪು. ೩೮ ; 'ಕರ್ನಾಟಕ - ಪದದ ಪ್ರಾಚೀನತೆ', ಬೆಂಗಳೂರು, ೧೯೭೩, ಪು. ೪.

೩೫. ಕನ್ನಡ ಶಬ್ದದ ವ್ಯುತ್ಪತ್ತಿ, ಕಸಾಪ. ೩-೪, ಪು. ೨೮-೩೪.

೩೬. 'ಕರ್ಣಾಟಕ ಕವಿಚರಿತೆ' (ಸಂ.೩)ಯ ವಿಮರ್ಶೆ, ಪ್ರಕ. ೧೧-೪, ೧೯೩೦, ಪು. ೭-೯ ; ಕರ್ಣಾಟಕವೊ ? ಕರ್ನಾಟಕವೊ ?, 'ಕರ್ಣಾಟಕ, ಕರ್ನಾಟಕ - ಈ ರೂಪಗಳಲ್ಲಿ ಯಾವುದು ಸಾಧು?', ೧೯೩೮, ಪು. ೩೫-೪೪.

೩೭. ಕರ್ನಾಟಕ, ಕರ್ಣಾಟಕ - ಈ ಎರಡು ಶಬ್ದಗಳಲ್ಲಿ ಸರಿಯಾದ್ದು ಯಾವುದು ?, ಕ.ಸಾ.ಪ. ೫-೨, ಜುಲೈ ೧೯೨೦, ಪು. ೧೪೧-೪೪ ; Maharastra and Kannada, 1A, LVII, Septmeber 1928, pp. 174-76.

೩೮. History of Kannada Language, Mysore, 1934, p. 35 ; 'ಕರ್ಣಾಟಕ ಕವಿಚರಿತೆ', ಸಂ.೩, ೧೯೭೪, ಅವತರಣಿಕೆ, ಪು. XV.

೩೯. ನೋಡಿ ; ಟಿಪ್ಪಣಿ ೩೫.

೪೦. ಪೂರ್ವದ ಹಳಗನ್ನಡ ಮತ್ತು ತಮಿಳು, 'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ', ಮೈಸೂರು, ೧೯೫೮, ಪು. ೧೨೬.

೪೧. KHR IV, 1937, No. 1-2.

೪೨. ಜಯಕರ್ನಾಟಕ, ೧೦-೮, ಪು. ೫೫೩-೫೫.

೪೩. 'ಸಾಹಿತ್ಯದ ವಿರಾಟ್ ಸ್ವರೂಪ', ಧಾರವಾಡ, ೧೯೭೪, ಪು. ೮೬೩.

೪೪. 'ಸಮ್ಮೇಳಾನಾಧ್ಯಕ್ಷರ ಭಾಷಣಗಳು', ಸಂ. ೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು. ೪೩೨-೩೩ ; ಹೀಗೆಯೇ ಸ್ವತಂತ್ರವಾಗಿ ಕನ್ನಡ ಶಬ್ದದ ನಿಷ್ಪತ್ತಿ ಹೇಳಲು ಸಿ.ಪಿ. ಬ್ರೌನ್ ಅವರು ಯತ್ನಿಸಿ (Ed. B.L. Rice, Karnataka Bhasha Bhushana, 1884, Intro, p.v. Cannada (we have nothing) ಎಂದೂ ಇದು ಮೂಲನಿವಾಸಿಗಳಿಗೆ ತಿಳಿಯದ ಶಬ್ದ ಎಂದೂ ಹೇಳಿದ್ದಾರೆ.

೪೫. ಕನ್ನಡದ ಸ್ವರೂಪ ನಿರೂಪಣ, 'ನಾಡೋಜ, ಪಂಪ', ಮಂಗಳೂರು, ೧೯೩೮ ಪು. ೧೨೫-೨೬ ; 'ಕನ್ನಡ ನಾಡೂ ದೇಸಿ ಸಾಹಿತ್ಯವೂ' ಧಾರವಾಡ, ೧೯೫೪, ಪು. ೨೬-೨೭.

೪೬. Karnata, JAHRS X, pp. 89-99.

೪೭. ಕನ್ನಡ ನಾಡಿನ ಚರಿತ್ರೆ, ಮೈಸೂರು ರಾಜ್ಯ', ೧೯೫೬, ಪು. ೧೪-೧೫.

೪೮. 'ಕನ್ನಡದ ನೆಲೆ', ಧಾರವಾಡ. ೧೯೫೨, ಪು. ೧೨೫-೯೨.

೪೯. 'ಕನ್ನಡ ಭಾಷಾಶಾಸ್ತ್ರ', ೧೯೭೪, ಪು. ೧೦೫.

೫೦. 'ಕನ್ನಡ ನಾಡಿನ ಚರಿತ್ರೆ', ಸಂ. ೧, ಕನ್ನಡ ಸಾಹಿತ್ಯ ಪರಿಷತ್ತು, ೧೯೬೪, ಪು. ೫-೬.

೫೧. 'ಸಮಾಲೋಕನ', ೧೯೫೮, ಪು. ೨೩೮.

೫೨. ಕ.ಸಾ.ಪ. ೨೩-೩, ೧೯೩೮ ಪು. ೧೬೯, ೭೨.

೫೩. The Languages of Karnataka, Karnataka Through The ages, 1968, p. 77.

೫೪. EI. XII, p. 144 ; Early History of the Deccan, p. 41.

೫೫. M.H. Rama Sharma, The History of Vijayanagar Empire, 1978, p. 1.

೫೬. 'ಕನ್ನಡದ ನೆಲೆ', ೧೯೫೨, ಪು. ೭೦-೭೧ ; 'ಕರ್ಣಾಟಕ, ಕರ್ನಾಟಕ - ಈ ರೂಪಗಳಲ್ಲಿ ಯಾವುದು ಸಾಧು', ೧೯೩೮, ಪು. ೧೫, ೨೫,೫೨.

೫೭. Dravidian Etymological Dictionary, Oxford. 1961, No. ೧೦೮೨, p. ೯೧ (ಇಲ್ಲಿಯೇ ನಂ. ೧೦೭೯ ರಲ್ಲಿ 'ಕರ್ಣಾಟಕ' ಶಬ್ದದ ದ್ರಾವಿಡ ಪರ್ಯಾಯ ಶಬ್ದಗಳಿಗೂ ನೋಡಿ.)

೫೮. 'ಕನ್ನಡ ನಿಘಂಟು', ಸಂ. ೨, ಪು. ೧೫೫೬.

೫೯. 'ಕರ್ನಾಟಕ - ಪದದ ಪ್ರಾಚೀನತೆ', ೧೯೭೩, ಪು. ೪.

೬೦. 'ಕೆಲವು ದೇಶನಾಮಗಳು', ಮಣಿಪಾಲ, ೧೯೭೫, ಪು. ೫-೬.

೬೧. Tamil Sources on Karnataka History QJMS, LXXII, 1981, p. 80.

೬೨. ಕಸಾಪ. ೫-೨, ಜುಲೈ ೧೯೨೦, ಪು. ೧೪೪ ; 'ಕರ್ಣಾಟಕ ಸಾಮ್ರಾಜ್ಯ', ೧೯೨೬, ಪು. ೨೪೦.

೬೩. 1A, LVII, p. 175.

೬೪. ಕನ್ನಡ ನಾಡಿನ ಚರಿತ್ರೆ, ಸಂ. ೧, ೧೯೬೪, ಪು. ೫-೬.

೬೫. 'ಕರ್ಣಾಟಕ, ಕರ್ನಾಟಕ - ಈ ರೂಪಗಳಲ್ಲಿ ಯಾವುದು ಸಾಧು?', ೧೯೩೮, ಪು. ೨೩-೨೪.

೬೬. 'ಕನ್ನಡದ ನೆಲೆ', ೧೯೫೨, ಪು. ೮೧.

೬೭. ನೋಡಿ : ಟಿಪ್ಪಣಿ ೬೫, ಪು. ೪೫-೪೭.

೬೮. ನೋಡಿ : ಟಿಪ್ಪಣಿ ೬೬, ಪು. ೧೦೦-೧೯೨.

೬೯. 'ನಾಡೋಜಪಂಪ', ೧೯೩೮, ಪು. ೧೨೪-೨೬. 'ಕನ್ನಡ ನಾಡೂ ದೇಸಿ ಸಾಹಿತ್ಯವೂ', ೧೯೫೪, ಪು. ೨೬-೨೭.

೭೦. 'ಕೆಲವು ದೇಶನಾಮಗಳು', ೧೯೭೫, ಪು. ೬.

೭೧. ನೋಡಿ : ಟಿಪ್ಪಣಿ ೪೬.

೭೨. ನೋಡಿ : ಟಿಪ್ಪಣಿ ೬೬, ಪು ೧೧೫-೧೭.

೭೩. ಮಲ್ಲಿಕಾರ್ಜುನ- ಒಂದು ಊಹೆ, 'ಸಂಭಾವನೆ', ೧೯೪೧, ಪು. ೧೯೭.

೭೪. ನೋಡಿ : ಟಿಪ್ಪಣಿ ೪೭.

೭೫. 'ಪ್ರಾಚೀನಾಂಧ್ರ ಚಾರಿತ್ರಿಕ ಭೂಗೋಳಮು', ಹೈದರಾಬಾದು, ೧೯೭೯, ಪು. ೭೦.

೭೬. ಕನ್ನರ, ಕನ್ನಡಿ, ಕನ್ನಡ, ಕಸಾಪ. ೪-೨೩, ಅಕ್ಟೋಬರ್ ೧೯೧೯, ಪು.೧೭೭-೭೮ ; ಪ್ರಕ. ೧೧-೪, ಪು. ೬ ; 'ಕನ್ನಡದ ನೆಲೆ', ಪು. ೮೫.

೭೭. 'ನಾಡೋಜಪಂಪ', ೧೯೩೮, ಪು., ೧೨೫-೨೬

೭೮. KTA, 1968. p. 104.

೭೯. D.C. Sircar, Successors of Satavahanas, 1939, p. 215.

೮೦. V. Varadachari, A Hostory of Samskrta Litereture, 1960, p. 73.

೮೧ Studies in Ancient Geography of Karnataka - II, Studies, in Indian Place names II, Mysore 1981, p. 9-12.

೮೨. KTA, 1968, p. 104.

೮೩. ನೋಡಿ : ಟಿಪ್ಪಣಿ ೮೧.

೮೪. 'ಕನ್ನಡದ ನೆಲೆ', ೧೯೫೨, ಪು. ೧೫೯-೬೦.

೮೫. D.C. Sircar, Studies, in the Geography of ancient and Medieval India, Varanasi, 1960, pp. 101-07.

೮೬. G.S. Gai. Antiquity of Mysore, Cultureal Profiles of Mysore City, Anthropological Survey of India, Calcutta, p. 9.

೮೭. Mysore. Vol. I, 1897, p. 1; Mysore and Coorg from the Inscriptions, London, 1909, p. 14.

೮೮. Mahishamandala and Mysore State, QJMS. 10-1, 1919-pp 11-36.

೮೯. ಕಕಚ. ಸಂ. ೨, ೧೯೭೩, ಅವತರಣಿಕೆ, ಪು. ೨೪-೨೬, ಕಸಾಪ. ಅಕ್ಟೋಬರ್, ೧೯೧೮, ಪು. ೧೨೭-೨೮ ; QJMS. 10-3, pp. 249-50.

೯೦. ನೋಡಿ : ಟಿಪ್ಪಣಿ ೮೯.

೯೧. HJMU. (A), 21-2, 1962, p. 57.

೯೨. D.C. Sircar op. cit p 189-90

೯೩. KTA. 1968, pp 99-100

೯೪. D.C. Sircar, op cit, p. 190-91.

೯೫-೯೬. ನೋಡಿ : ಟಿಪ್ಪಣಿ ೮೬.

೯೭. C. Hayavadana Rao, History of Mysore, Vol. I, Bangalore 1943, pp. 20-21, 517-18.

೯೮. P.B. Desai (Ed). A History of Karnataka, Dharawar, p. 107.

೯೯. Early History of the Deccan, p 41.

೧೦೦. D.C. Sircar. op. cit, pp. 89-90.

೧೦೧. CGDL, 1956, p. 31 ; ಕಕಚ, ಸಂ. ೧, ೧೯೬೧, ಅವತರಣಿಕೆ, ಪು. ೬ ; 1A, VIII. p. 174.

೧೦೨. 'ಕನ್ನಡ ನಾಡಿನ ಚರಿತ್ರೆ', ಸಂ. ೧, ೧೯೬೪, ಪು. ೬೪-೬೫.

೧೦೩. ಈ ಭಾಗದ ವಿವರಗಳನ್ನು 'ಕರ್ಣಾಟಕದ ಪರಂಪರೆ' ಮೊದಲಾದ ಮೂಲಗಳಿಂದ ಕೂಡಿಸಿದೆ.

CGDL : R. Caldwell, A Comparative Grammar of the Dravidian or South-Indian Family of Languages, University of Madras, 1956.

EC : Epigraphia Caranatica (Rice B.L.l Revised), Mysore.

EI : Epigraphia Indica, Calcutta.

HJMU. (A) : Half-Yearly Journal of the Mysore University (Arts), Mysore.

IA : The indian Antiquary, Bombay Education Society, Bombay.

JAHRS : Journal of the Andhra Historical Reserch Society.

KHR : The Karnataka Historical Review.

KTA : Karnataka Through the Ages, The Government of Mysore (Karnataka), 1968

QJMS : Quarterly Journal of the Mythic Society, Mythic Society, Bangalore.

ಕಸಾಪ. : ಕರ್ಣಾಟಕ / ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಕರ್ಣಾಟಕ / ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಪ್ರ.ಕ. : ಪ್ರಬುದ್ಧ ಕರ್ಣಾಟಕ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

✿ ✿ ✿

ಭಾಗ : ಎರಡು

ಅನುಬಂಧಗಳು

ಸಂಸ್ಕೃತ ಸಾಹಿತ್ಯದ ಉಲ್ಲೇಖಗಳು

(೧) ಪುರಾಣೇತಿಹಾಸಗಳು

ಮಹಾಭಾರತದಲ್ಲಿ, ವಿಷ್ಣುಧರ್ಮೋತ್ತರ, ಭಾಗವತ, ಮಾರ್ಕಂಡೇಯ, ಸ್ಕಾಂದ ಮತ್ತು ಪದ್ಮಪುರಾಣಗಳಲ್ಲಿ 'ಕರ್ಣಾಟ(ಕ)' ಶಬ್ದ ದೇಶವಾಚಕವಾಗಿ ಬಳಕೆಯಾಗಿದ್ದು, ದಕ್ಷಿಣಭಾರತದ ದೇಶಗಳಲ್ಲಿ ಒಂದಾಗಿ ಅದರ ಹೆಸರು ಬರುತ್ತದೆ. ವಿಷ್ಣು ಧರ್ಮೋತ್ತರ ಪುರಾಣದಲ್ಲಿ, ಕರ್ಣಾಟಕದಲ್ಲಿ ಅಶ್ವಶಿರಸ್ಸಿನ ದೇವತೆ (ಹಯಗ್ರೀವ?) ಪೂಜೆಗೊಳ್ಳುವುದೆಂದು ಹೇಳಿರುವುದು ಗಮನಾರ್ಹವಾಗಿದೆ. ಸ್ಕಾಂದಪುರಾಣದ ಕರ್ಣಾಟ ಎಂಬ ಹೆಸರಿನ ರಾಕ್ಷಸನ ಕಥೆ, ಪುರಾಣದ ಅತಿಮಾನುಷಪ್ರಪಂಚದ ನಿರೂಪಣೆಗೆ ಸಹಜವಾದ ಒಂದು ಕಲ್ಪಿತಕಥೆಯೆಂದು ಹೇಳಬಹುದಾದ್ದು.

ಮಹಾಭಾರತ (ಕ್ರಿ.ಪೂ. ೪ನೆಯ ಶ. - ಕ್ರಿ.ಶ. ೪ನೆಯ ಶ.)

(i) ಕರ್ಣಾಟಾಃ ಕಾಂಸಕುಟ್ಯಾಶ್ಚ ಪದ್ಮಜಾಲಾಃ ಸತೀನರಾಃ
ದಾಕ್ಷಿಣಾತ್ಯಾಃ ಪುಲಿನ್ದಾಶ್ಚ ಶವೇರಾಸ್ತಜ್ಜಣಾಃ ಖಷಾಃ ॥
(ಸಭಾಪರ್ವ, ೨೮-೯೮)

(ii) ಕರ್ಣಾಟಕಾ ಮಹಿಷಕಾ ವಿಕಲ್ಪಾ ಮೂಷಕಾಸ್ತಥಾ
ಝಿಲ್ಲಿಕಾಃ ಕುನ್ತಲಾಶ್ಚೈವ ಸೌಹೃದಾ ನಭಕಾನನಾಃ ॥
(ಭೀಷ್ಮಪರ್ವ, ಅ. ೯-ಶ್ಲೋ. ೫೯)

ಮೇಲೆ ಪ್ರಚಲಿತ ಮಹಾಭಾರತ ಪರಿಷ್ಕರಣಗಳ ಪಾಠದಂತೆ ಶ್ಲೋಕಗಳನ್ನು ಉದ್ಧರಿಸಿಕೊಟ್ಟಿದೆ. ಸಭಾಪರ್ವದ ಶ್ಲೋಕವನ್ನು ಟಿ. ಆರ್. ಕೃಷ್ಣಾಚಾರ್ಯ, ಟಿ. ಆರ್. ವ್ಯಾಸಾಚಾರ್ಯ ಇವರು ಸಂಪಾದಿಸಿ, ಮುಂಬಯಿಯ ನಿರ್ಣಯಸಾಗರ ಮುದ್ರಣಾಲಯದ ಮೂಲಕ ೧೯೦೬ರಲ್ಲಿ ಪ್ರಕಟಿಸಿದ ಮಹಾಭಾರತದ ಆ ಪರ್ವದಿಂದ ಉದ್ಧರಿಸಿದೆ. ಈ ಪ್ರಚಲಿತ ಪ್ರತಿಗಳ ಪಾಠ, ಮುಖ್ಯವಾಗಿ ಭೀಷ್ಮಪರ್ವದ ಉದ್ಧೃತ ಶ್ಲೋಕದ ಪಾಠ, ಪುಣೆಯ ಭಂಡಾರ್ಕರ್ ಸಂಸ್ಥೆ ಪ್ರಕಟಿಸಿರುವ ಮಹಾಭಾರತದ ಅಧಿಕೃತ ಪರಿಷ್ಕರಣದಲ್ಲಿ ಬೇರೆ ರೀತಿಯಾಗಿರುವುದು ಕಂಡುಬರುತ್ತದೆ. ಭೀಷ್ಮಪರ್ವದ ೯ನೆಯ ಅಧ್ಯಾಯದ ೫೯ನೆಯ ಶ್ಲೋಕ, ಇಲ್ಲಿ ೯ನೆಯ ಅಧ್ಯಾಯದ ೫೭ನೆಯ ಶ್ಲೋಕವಾಗಿದ್ದು, ಇದರಲ್ಲಿ 'ಕರ್ಣಾಟಕ' ಶಬ್ದವಿಲ್ಲ. ಶ್ಲೋಕದ ಮೊದಲ ಪಾದ 'ಉನ್ನತ್ಯಕಾ ಮಾಹಿಷಕಾ ವಿಕಲ್ಪಾ ಮೂಷಕಾಸ್ತಥಾ" ಎಂಬುದಾಗಿ ಇಲ್ಲಿ ಭಿನ್ನ ರೀತಿಯಲ್ಲಿದೆ.

ವಿಷ್ಣುಧರ್ಮೋತ್ತರ ಪುರಾಣ (ಸು. ೪೦೦-೫೦೦)

ಅಯೋಧ್ಯಾಯಾಂ ತಥಾ ರಾಮಂ ನೈಮಿಷೇ ಧರ್ಮ ಮೇವ ಚ
ಕರ್ಣಾಟೇ ಚಾಶ್ವಶಿರಸಂ ಮದ್ರದೇಶೇ ನೃಕೇಸರೀಂ ॥

(ಅ. ೧೨೧-ಖಂ. ೩-ಶ್ಲೋ. ೩, ವಜ್ರಮಾರ್ಕಂಡೇಯ ಸಂವಾದ)

ಭಾಗವತ ಪುರಾಣ (ಸು. ೬ನೆಯ ಶತಮಾನ)

ತಸ್ಯ ಹ ವಾ ಏವಂ ಮುಕ್ತಲಿಙ್ಗಸ್ಯ ಭಗವತ ಋಷಭಸ್ಯ ಯೋಗಮಾಯಾ ವಾಸನಯಾ ದೇಹ ಇಮಾಂ ಜಗತೀಮಭಿಮಾನಾಭಾಸೇನ ಸಂಕ್ರಮಮಾಣಃ ಕೋಙ್ಕ ವೇಙ್ಕ ಕುಟಕಾನ್ ದಕ್ಷಿಣ ಕರ್ಣಾಟಕಾನ್ ದೇಶಾನ್ ಯದೃಚ್ಛಯೋಪ ಗತಃ ಕುಟಕಾಚಲೋಪವನ ಆಸ್ಯಕೃತಾಶ್ಮಕವಲ ಉನ್ಮಾದ ಇವಮುಕ್ತ ಮೂರ್ಧಜೋಽ ಸಂವೀತ ಏವ ವಿಚಚಾರ (ಸ್ಕಂ. ೫-ಅ. ೬-ಗ. ೭)

ಮಾರ್ಕಂಡೇಯ ಪುರಾಣ (ಸು. ೮ನೆಯ ಶತಮಾನ)

ಮಹಾರಾಷ್ಟ್ರಾಃ ಸಕರ್ಣಾಟಾ ಗೋನರ್ದಾಶ್ಚಿತ್ರಕೂಟಕಾಃ
ಚೌಲಾಃ ಕೌಲಗಿರಾಶ್ಚೈವ ಕ್ರೌಞ್ಚದ್ವೀಪ ಜಟಾಧರಾಃ ॥

(ಅ. ೫೫-ಶ್ಲೋ. ೨೪)

ಸ್ಕಾಂದ ಮಹಾಪುರಾಣ (ಸು. ೭೦೦-ಸು. ೧೦೦೦)

(i) ಶೃಣು ಸ್ಕಂದ ಮಹಾಪ್ರಾಜ್ಞ ಹ್ಯದ್ಭುತಂ ಯತ್ಕೃತಂ ಮಯಾ
ಧರ್ಮಾಽರಣ್ಯೇ ಮಹಾದುಷ್ಟೇ ದೈತ್ಯಃ ಕರ್ಣಾಟಕಾಽಭಿದಃ ॥೧॥

ಹತಃ ಕರ್ಣಾಟಕೋ ನಾಮ ರಾಕ್ಷಸೋ ದ್ವಿಜಘಾತಕಃ
ತದಾ ಸರ್ವೇಽಪಿ ವೈ ವಿಪ್ರಾಃ ಹೃಷ್ಟಾಸ್ತೇ ತೇನ ಕರ್ಮಣಾ ॥೪॥

ಶೃಣು ರಾಜನ್ಪ್ರವಕ್ಷ್ಯಾಮಿ ಕರ್ಣಾಟಕ ವಿಚೇಷ್ಟಿತಂ
ದೇವಾನಾಂ ದಾನವಾನಾಂ ಯೋ ದುಃಸಹೋ ವೀರ್ಯದರ್ಪಿತಃ ॥೮॥

ನ ವೇದಾಧ್ಯಯನಂ ತತ್ರ ನ ಚ ಯಜ್ಞಾಃ ಪ್ರವರ್ತತೇ
ಮನುಜಾಸ್ತತ್ರಃ ತಿಷ್ಠಂತಿ ನ ಕರ್ಣಾಟ ಭಯಾರ್ದಿತಾಃ ॥೨೬॥

ಕರ್ಣಾಟಸ್ಯ ವಧೋಪಾಯಂ ಮಂತ್ರಯಂತಿ ದ್ವಿಜರ್ಷಭಾಃ
ವಿಚಾರ್ಯಮಾಣೇ ತೈರ್ದೇವಾದ್ವಾಗ್ಜಾತಾ ಚಾಽಶರೀರಿಣೇ ॥೨೮॥

ಕರ್ಣಾಟಸ್ಯ ವಧಾರ್ಥಾಯ ದ್ವಿಜಾತೀನಾಂ ಹಿತಾಯ ಚ
ಪ್ರತ್ಯಕ್ಷಾ ಸಾಽಭವತ್ತತ್ರ ವರಂ ಬ್ರೂತೇತ್ಯುವಾಚ ಹ ॥೪೯॥

ಕರ್ಣಾಟಾಖ್ಯೋ ಮಹಾರೌದ್ರೋ ದಾನವೋ ಮದಗರ್ವಿತಃ
ವಿಘ್ನಂ ಪ್ರಕುರುತೇ ನಿತ್ಯಂ ಸತ್ಯಮಂದಿರವಾಸಿನಾಂ ॥೫೩॥

ಕಂಟಕಾಢ್ಯಾಂ ಚ ಬದರೀಂ ಬಿಭ್ರತೀ ತು ಮಹಾನನಾ
ತತ್ರಾಽಭವನ್ಮಹಾಯುದ್ಧಂ ತುಮುಲಂ ಲೋಮಹರ್ಷಣಂ ॥೬೩॥

ಮಾತಂಗ್ಯಾಃ ಸಹ ಕರ್ಣಾಟ ದಾನವೇನ ನೃಪೋತ್ತಮ ॥೬೪॥

ಉದ್ಗಿರಂತೋ ಹಿ ನಿಗಮಾನ್ವಿವಾಹಸಮಯೇ ನೃಪ
ಸರ್ವಂ ನಿವೇದಯಾಮಾಸುಃ ಕರ್ಣಾಟಾಯ ದುರಾತ್ಮನೇ ॥೭೮॥

ತತಃ ಪ್ರವವೃತೇ ಯುದ್ಧಂ ದೇವೀ ಕರ್ಣಾಟಯೋಸ್ತಥಾ
ಋಷೀಣಾಂ ಪಶ್ಯತಾಂ ತತ್ರ ವರ್ಣಿಜಾಂ ಚ ದ್ವಿಜನ್ಮನಾಂ ॥೮೩॥

ಕ್ವಯಾಸ್ಯಸೀತಿ ಬ್ರೂತೇ ಸಾ ಬ್ರೂಹಿ ತ್ವಂ ಸಾಂಪ್ರತಂ ಹಿ ಮೇ
ಕರ್ಣಾಟಕ ಮಹಾದುಷ್ಟ ಏಹಿ ಶೀಘ್ರಂ ಹಿ ಯುದ್ಧ್ಯತಾಂ ॥೯೬॥

ಯುಧ್ಯತೇ ಸ ಪುನರ್ದೈತ್ಯಃ ಕರ್ಣಾಟೋ ಮದಪೂರಿತಃ
ತತೋ ದೇವೀ ಪ್ರಕುಪಿತಾ ಮಾತಂಗೀ ಮದಪೂರಿತಾ ॥೯೯॥

ಕರ್ಣರಂಧ್ರಪ್ರಸೂತೋಽಯಂ ಕರ್ಣಾಟೇತಿ ವಿದುರ್ಬುಧಾಃ
ಪುನರ್ಯುದ್ಧಾರ್ಥಮಾಯಾತೋ ದೈತ್ಯೋ ಹಿ ಬಲದರ್ಪಿತಃ ॥೧೦೩॥

ಮಾಯಾರೂಪಂ ಸಮಾಸ್ಥಾಯ ಕರ್ಣಾಟಃ ಕುಸುಮಾಯುಧಃ
ಗೌರಶ್ಚಾಂಽಬುಜಪತ್ರಾಕ್ಷಂ ತಥಾ ಷೋಡಶವಾರ್ಷಿಕಂ ॥೧೦೬॥

ತತಃ ಕರ್ಣಾಟಕಃ ಕ್ರುದ್ಧೋ ಗೃಹೀತ್ವಾ ಶಕ್ತಿ ಮೂರ್ಜಿತಾಂ
ಅಭ್ಯಧಾವತ ದುಷ್ಟಾತ್ಮಾ ಶ್ಯಾಮಲಾನಿಧನೇಚ್ಛಯಾ ॥೧೧೪॥

ಮಾಘೇ ಕೃಷ್ಣ ತೃತೀಯಾಯಾಂ ಧರ್ಮಾಽರಣ್ಯೇ ಮಹಾರಣೇ
ಮಧ್ಯಾಹ್ನಸಮಯೇ ಭೂಪ ಕರ್ಣಾಟಾಖ್ಯೋ ನಿಪಾತಿತಃ ॥೧೧೭॥

ಕಾರ್ಣಾಟಃ ಪತಿತಸ್ತತ್ರ ಯತ್ರ ದೇವ್ಯಾ ನಿಪಾತಿತಃ
ತಚ್ಛೈಲಶೃಂಗಪ್ರತಿಮಂ ಪಪಾತ ಶಿರ ಉತ್ತಮಂ ॥೧೧೮॥

ಮಾಘಾಸಿತೇ ತೃತೀಯಾಯಾಂ ಭಕ್ಷ್ಯಭೋಜ್ಯಾದಿಭಿಸ್ತಥಾ
ಕರ್ಣಾಟಸ್ಯ ತಥೋತ್ಪತ್ತಿಃ ಪುನರ್ಜಾತಾ ತು ಭೂತಲೇ ॥೧೬೬॥

ವಿಪುಲಂ ದೇಹಮಾಸಾಧ್ಯ ಕರ್ಣಾಟಃ ಸ ನರಾಧಿಪ
ಸ್ವನಾಮ್ನಾ ಚೈವ ತಂ ದೇಶಂ ಸ್ಥಾಪಯಾಮಾಸ ಚೋತ್ತಮಂ ॥೧೭೬॥

ಯಸ್ಮಿಂಶ್ಚ ಸರ್ವವಸ್ತೂನಿ ಧನಧಾನ್ಯಾನಿ ಭೂರಿಶಃ
ಕರ್ಣಾಟದೇಶಂ ತಂ ರಾಜನ್ಪರಿವಾರ್ಯ ಚಿರಂ ಸ್ಥಿತಃ ॥೧೭೭॥

(ಮೂರನೆಯ ಬ್ರಹ್ಮಖಂಡದ ಪೂರ್ವಭಾಗದ 'ಧರ್ಮಾರಣ್ಯಮಾಹಾತ್ಮ್ಯ' ದಲ್ಲಿ, ಬ್ರಹ್ಮಖಂಡದ ಸಂಪುಟ ಎರಡರಲ್ಲಿ, 'ಮಾತಂಗೀಕರ್ಣಾಟಕೋಪಾಖ್ಯಾನ ವರ್ಣನ' ಎಂಬ ೧೮ನೆಯ ಅಧ್ಯಾಯ ; ಶ್ಲೋ ೧-೧೭೯)

(ii) ಅಷ್ಟಾದಶ ತಥಾ ಕೋಟ್ಯೋ ರಾಮಕೋ ದೇಶ ಉಚ್ಯತೇ
ತೋಮರಶ್ಚಾಪಿ ಕರ್ಣಾಟೋ ಯುಗಲಶ್ಚ ತ್ರಯಸ್ತ್ರಿಮೇ ॥

(ಮಾಹೇಶ್ವರಖಂಡದ ದ್ವಿತೀಯೋಪಖಂಡವಾದ ಕೌಮಾರಿಕಾಖಂಡದ ಉತ್ತರಾರ್ಧ ; ೩೯ನೆಯ ಅಧ್ಯಾಯ-೧೫೨ನೆಯ ಶ್ಲೋಕ)

(iii) ಕರ್ಣಾಟಾಶ್ಚೈವ ತೈಲಙ್ಗಾ ಗುರ್ಜರಾ ರಾಷ್ಟ್ರವಾಸಿನಃ
ಆನ್ಧ್ರಾಶ್ಚ ದ್ರಾವಿಡಾಃ ಪಞ್ಚ ವಿನ್ಧ್ಯದಕ್ಷಿಣವಾಸಿನಃ ॥

(ಶಬ್ದಕಲ್ಪದ್ರುಮ, ಭಾಗ ೨, ಪು ೭೬೦ ; ವಾಚಸ್ಪತ್ಯ, ಭಾಗ ೫, ಪು. ೩೭೮೩ - ಈ ಮೂಲಗಳಿಂದ ಉದ್ಧೃತ)

ಪದ್ಮಪುರಾಣ (ಸು. ೯ನೆಯ ಶತಮಾನದ ಅನಂತರ)

(i) ಕರ್ಣಾಟಕಾ ಮಾಹಿಷಕಾ ವಿಕನ್ಧಾ ಮೂಷಿಕಾಸ್ತಥಾ
ಝಿಲ್ಲಿಕಾಃ ಕುನ್ತಲಾಶ್ಚೈವ ಸೌಹೃದಾ ನಲಕಾನನಾಃ ॥
(ಆದಿಖಂಡ, ಅ. ೬-ಶ್ಲೋ. ೫೪)

(ii) ಉತ್ಪನ್ನಾ ದ್ರಾವಿಡೇ ಸಾಹಂ ವೃದ್ಧಿಂ ಕರ್ಣಾಟಕೇ ಗತಾ
ಕ್ವಚಿತ್ ಕ್ವಚಿನ್ಮಹಾರಾಷ್ಟ್ರೇ ಗುರ್ಜರೇ ಜೀರ್ಣತಾಂ ಗತಾ ॥
(ಉತ್ತರಖಂಡ, ಅ. ೧-ಶ್ಲೋ. ೪೮)

(೨) ಕಾವ್ಯನಾಟಕಾದಿ ಸಾಹಿತ್ಯ ಗ್ರಂಥಗಳು

ಹೆಚ್ಚಿನ ಪ್ರಯೋಗಗಳು ಕರ್ನಾಟಕ ಶಬ್ದ ದೇಶವಾಚಕವಾಗಿರುವುದನ್ನು ಸೂಚಿಸುತ್ತವೆ. 'ಮೃಚ್ಛಕಟಿಕ ಪ್ರಕರಣ'ದ ಮಾತಿನಲ್ಲಿ ಯಾವುದೋ ಸಾಮಾಜಿಕ ಅಥವಾ ಸ್ವಭಾವಸಂಬಂಧವಾದ ಅಂಶವಿರುವಂತಿದೆ. ರಾಜಶೇಖರನ ಮಾತಿನಲ್ಲಿ ಕನ್ನಡಿಗರು ಯುದ್ಧೋದ್ಯೋಗಸಮರ್ಥರೆಂಬ ಆಶಯವಿದೆ. ಸಂಕಲಿತ 'ಸೂಕ್ತಿ ಮುಕ್ತಾವಲಿ'ಯ ಸೂಕ್ತಿ ಕನ್ನಡನಾಡಿನ ವಿಜಯೆ ಎಂಬವಳು ಕಾಲಿದಾಸನ ಅನಂತರದಲ್ಲಿ ವೈದರ್ಭೀಶೈಲಿಗೆ ಹೆಸರಾದವಳು ಎಂಬುದಾಗಿ ರಾಜಶೇಖರನು ಉದ್ಗಾರವೆತ್ತಿದುದನ್ನು ಹೇಳುತ್ತದೆ. ಸೋಮದೇವನ 'ಕಥಾಸರಿತ್ಸಾಗರ'ದ ಮಾತು ಈ ಗ್ರಂಥಕ್ಕೆ ಮೂಲವಾದ ಗುಣಾಢ್ಯನ ಪೈಶಾಚಿಭಾಷೆಯ 'ಬೃಹತ್ಕಥಾ'ದಲ್ಲಿಯೂ ಇದ್ದುದು ನಿಜವಾದರೆ, 'ಕರ್ನಾಟ' ಶಬ್ದದ ಪ್ರಯೋಗವನ್ನು ಆ ಗ್ರಂಥದ ರಚನಾಕಾಲವಾದ ಸು. ೧-೨ನೆಯ ಶತಮಾನದಷ್ಟು ಹಿಂದಕ್ಕೆ ಒಯ್ಯುವುದು ಸಾಧ್ಯವಿದೆಯೆಂದು ಕೆಲವರು ವಿದ್ವಾಂಸರು ಊಹಿಸಿದ್ದಾರೆ. (ಕಕಚ. ೧, ಅವತರಣಿಕೆ, ಪು. ೫)

ಶೂದ್ರಕ ಕವಿಯ 'ಮೃಚ್ಛಕಟಿಕ ಪ್ರಕರಣ' (ಸು. ४೦೦)

(i) ಚಂದನಕ : ಅರೇ, ಕೋಽಪ್ರತ್ಯಯಸ್ತವ ? । ವಯಂ ದಾಕ್ಷಿಣಾತ್ಯಾ ಅವ್ಯಕ್ತಭಾಷಿಣಃ। ಖಷ-ಖತ್ತಿ-ಕಡ-ಕಡಟ್ಟೋಬಿಲ-ಕರ್ಣಾಟ-ಕರ್ಣ-ಪ್ರಾವರಣ-ದ್ರಾವಿಡ-ಚೋಲ-ಚೀನ-ಬರ್ಬರ-ಖೇರ-ಖಾನ-ಮುಖ-ಮಧುಘಾತ ಪ್ರಭೃತೀನಾಂ ಮ್ಲೇಚ್ಛಜಾತೀನಾಮನೇಕದೇಶಭಾಷಾಭಿಜ್ಞಾ ಯಥೇಷ್ಟಂ ಮನ್ತ್ರಯಾಮಃ, ದೃಷ್ಟೋ ದೃಷ್ಟಾ ವಾ, ಆರ್ಯ ಆರ್ಯಾ ವಾ ।

(ii) ಚಂದನಕ : (ವಿಚಿನ್ತ್ಯ) ಕರ್ಣಾಟಕಲಹಪ್ರಯೋಗಂ ಕರೋಮಿ ।

(೬ನೆಯ ಅಂಕ, ೨೦ನೆಯ ಶ್ಲೋಕದ ಕೆಳಗಿನ ಸಂವಾದ ; ನಿರ್ಣಯಸಾಗರ ಮುದ್ರಣಾಲಯ, ೧೯೫೦)

ಈ ಉದ್ಧೃತಭಾಗದ ಮೂಲ ಪ್ರಾಕೃತರೂಪ

(i) ಚಂದನಕ : ಅರೇ, ಕೋ ಅಪ್ಪಚ್ಚ ಓ ತುಹ ? ವಅಂ ದಕ್ಖಿಣತ್ತಾ ಅವತ್ತ ಭಾಸಿಣೋ ಖಲ-ಖತ್ತಿ-ಖಡೋ-ಖಡಟ್ಟೋವಿಸಅ-ಕಣ್ಣಾಟ-ಕಣ್ಣ-ಪ್ಪಾವರಣಅ-ದವಿಡ -ಚೋಲ-ಚೀಣ-ಬರ್ಬರ-ಖೇರ-ಖಾನ-ಮುಖ-ಮಧುಘಾದ ಪಹುದಾಣಂ ಮಿಲಿಚ್ಛಜಾದೀಣಂ ಅಣೇಅ ದೇಸಭಾಸಾಭಿಣ್ಣಾ ಜಹೇಟ್ಠಂ ಮಂತ ಆಮ, ದಿಟ್ಠೋ ದಿಟ್ಠಾ ವಾ ಅಜ್ಜೋ ಅಜ್ಜಆ ವಾ ।

(ii) ಚಂದನಕ : (ವಿಚಿನ್ತ್ಯ) ಕಣ್ಣಾಟಕಲಹಪ್ಪಓಅಂ ಕಲೇಮಿ ।

ಭರ್ತೃ ಹರಿಯದೆನ್ನಲಾದ 'ಭರ್ತೃಹರಿ ಸುಭಾಷಿತಸಂಗ್ರಹ' (ಸು. ४೦೦)

ಮಾ ಗಾಃ ಪ್ರತ್ಯುಪಕಾರಕಾತರಧಿಯಾ ವೈವರ್ಣ್ಯಮಾಕರ್ಣಯ
ಶ್ರೀಕರ್ಣಾಟವಸುಂಧರಾಧಿಪಸುಧಾಸಿಕ್ತಾನಿ ಸೂಕ್ತಾನಿ ನಃ
ವರ್ಣ್ಯನ್ತೇ ಕತಿ ನಾಮ ನಾರ್ಣವನದೀದಾವಾಗ್ನಿ ವಿನ್ಧ್ಯಾಟವೀ
ಸನ್ಧ್ಯಾಮಾರುತನಿರ್ಝರ ಪ್ರಭೃತಯಸ್ತೇಭ್ಯಃ ಕಿಮಾಪ್ತಂ ಮಯಾ ॥

(ಪದ್ಯ ೬४೬)

ಜಿನಸೇನನ 'ಪೂರ್ವಪುರಾಣ' (೮೩೮)

(i) ಕರಹಾಟ ಮಹಾರಾಷ್ಟ್ರ ಸುರಾಷ್ಟ್ರಾಭೀರ ಕೋಂಕಣಾಃ
ವನವಾಸ್ಯಾಂಧ್ರ ಕರ್ಣಾಟ ಕೋಶಲಾಶ್ಚೋಲಕೇರಲಾಃ ॥(೧೬-೧೫४)

(ii) ಕರ್ಣಾಟಕಾನ್ ಸ್ಫುಟಾಟೋಪವಿಕಟೋದ್ಭಟವೇಷಕಾನ್
ಹರಿದ್ರಾಂಜನತಾಂಬೂಲಪ್ರಿಯಾನ್ ಪ್ರಾಯೋ ಯಶೋಧನಾನ್ ॥

(೨೯-೯೧)

ಸೋಮದೇವಸೂರಿಯ 'ಯಶಸ್ತಿಲಕ ಚಂಪೂ' (೮೬೦)

ಕೇರಲಮಹಿಲಾಮುಖಕಮಲಹಂಸ

ವಂಗೀವನಿತಾಶ್ರವಣಾವತಂಸ ॥

ಚೋಲಸ್ತ್ರೀಕುಚಕುಟ್ಮಲವಿನೋದ
ಪಲ್ಲವರಮಣೀಕೃತವಿರಹಖೇದ ॥

ಕುಂತಲಕಾಂತಾಲಕಭಂಗನಿರತ
ಮಲಯಾಂಗನಾಂಗನಖದಾನನಿರತ ॥

ವನವಾಸಿಯೋಷಿದೀಕ್ಷಣವಿಮುಗ್ಧ
ಕರ್ಣಾಟಯುವತಿಕೈತವವಿದಗ್ಧ ॥

ಕುರುಜಾಂಗಲಲಲನಾಕುಚತನುತ್ರ
ಕಂಬೋಜಪುರಂಧ್ರೀತಿಲಕಪತ್ರ (ಆಶ್ವಾಸ ೧-೨೧೦, ೨೧೧)

ರಾಜಶೇಖರನ 'ವಿದ್ಧಶಾಲಭಂಜಿಕಾ' (ಸು. ೯೦೦)

(i) ಕಾರ್ಣಾಟೋ ಯುದ್ಧತನ್ತ್ರೇ ಚತುರತರಮತಿಃ ಸಿಂಹಲಃ ಸಿಂಹಕರ್ಮಾ ಪಾಣ್ಡ್ಯಶ್ಚಣ್ಡಾಸಿಯಷ್ಟಿರ್ಮುರಲಪರಿವೃಢಃ ಕಾರ್ಮುಕಪ್ರೌಢವಾಹಃ ಆನ್ಧ್ರೋ ನೀರನ್ಧ್ರಸಾರಃ ಸಮರಭುವಿಸುರಃ ಕುನ್ತಲಃ ಕುನ್ತಲೇಶಃ ಕಿಂಚಾನ್ಯೇ ಕೋಙ್ಕಣಾದ್ಯಾ ಅಪಿ ನರಪತಯಃ ಸಂಶ್ರಿತಾಃ ಸಜ್ಘವೃತ್ತಿಮ್ ॥

(ii) ರಾಜಾ । ಸಮರಕರ್ಮಣಿ ನಿಸರ್ಗೋದ್ಭಟಾ ಏವ ಕಾರ್ಣಾಟಾಃ ॥
(೪ನೆಯ ಅಂಕ, ಪ. ೧೯, ೧೯ರ ಮುಂದೆ)

ರಾಜಶೇಖರನ 'ಬಾಲರಾಮಾಯಣ ನಾಟಕ'

(i) (ಕರ್ಣಂ ದತ್ವಾಕಾಶೇ) ಕಿಂ ಬ್ರೂಥ ವಿಲಕ್ಷೇಣ ಸತಾ ಕರ್ಣಾಟ ನಟೇನ ತೇನ ನಿರ್ಮರ್ಯಾದಮಿದಮುದಿತಮ್ । ಯದುತಾಖಂಡಿತಪ್ರಸರಾಹಿ ಪುರುಷಕಾರಾಃ ಕರ್ಣಾಟಾನಾಂ ತಥಾ ಹಿ ॥ (ಪ್ರಸ್ತಾವ. ಪ. ೨-೩ರ ನಡುವೆ)

(ii) ಕರ್ಣಾಟ್ಯೋ ಯತ್ರ ಯತ್ರೈವ ವಿಕ್ಷಿಪಂತಿ ದೃಶೋ ದಿಶಿ
ವಿಕ್ಷೇಪಾಗ್ರೇಸರಃ ಕಾಮಸ್ತತ್ರ ತತ್ರೈವ ಧಾವತಿ ॥ (೧೦-೭೩)

ಆರ್ಯ ಕ್ಷೇಮೀಶ್ವರನ 'ಚಂಡಕೌಶಿಕ' (೧೦ನೆಯ ಶ. ದ ಆದಿ)

ಯಃ ಸಂಶ್ರಿತ್ಯ ಪ್ರಕೃತಿಗಹನಾಮಾರ್ಯ್ಯಚಾಣಕ್ಯನೀತಿಂ
ಜಿತ್ವಾ ನನ್ದಾನ್ ಕುಸುಮನಗರಂ ಚನ್ದ್ರಗುಪ್ತೋಜಿಗಾಯ

ಕರ್ಣಾಟತ್ವಂ ಧ್ರುವಮುಪಗತಾನದ್ಯ ತಾನೇವ ಹನ್ತುಂ
ದೋರ್ದರ್ಪಾಢ್ಯಃ ಸ ಪುನರಭವಚ್ಛ್ರೀಮಹೀಪಾಲದೇವಃ ॥
(ಪ್ರಥಮಾಂಕ, ಪ್ರಸ್ತಾವನೆ, ೪ನೆಯ ಶ್ಲೋಕ)

ಬಿಲ್ಹಣನ 'ವಿಕ್ರಮಾಂಕದೇವ ಚರಿತ' (ಸು. ೧೦೮೫)

ದಿಙ್ಮಾತ್ರಜ್ಞೈರಪಿ ಸ ಪುಲಕೈಃ ಶುಶ್ರುವೇ ಯಸ್ಯ ಕೀರ್ತಿ
ರ್ನಿದ್ರಾಮುದ್ರಾಪ್ರಣಯಿಷು ಮದಾಸ್ವಾದತಃ ಷಟ್ಪದೇಷು
ತೇನ ಪ್ರೀತ್ಯಾ ವಿರಚಿತಮಿದಂ ಕಾವ್ಯಮವ್ಯಾಜಕಾನ್ತಂ
ಕರ್ಣಾಟೇನ್ದೋರ್ಜಗತಿ ವಿದುಷಾಂ ಕಣ್ಠಭೂಷಾತ್ವಮೇತು ॥ (೧೮-೧೦೨)

ಸೋಮದೇವನ 'ಕಥಾಸರಿತ್ಸಾಗರ' (ಸು. ೧೧ನೆಯ ಶತಮಾನ)

(i) ಕರ್ಣಾಟ ಲಾಟ ಸೌರಾಷ್ಟ್ರ ಮಧ್ಯದೇಶಾದಿ ದೇಶಜಾಃ
ಯೋಷಾ ದೇಶಸಮಾಚಾರೈ ರಂಜಯಂತಿ ನಿಜೈರ್ನಿಜೈಃ ॥
(ಲಂಬಕ ೮-ತರಂಗ ೪-ಶ್ಲೋಕ ೧೦೬)

(ii) ಶ್ರೂಯತಾಂ ನಾಪಿತಸ್ಯಾರ್ಥೀ ಮುಗ್ಧೋಽತ್ರ ಪುಮಾನಯಮ್
ಕರ್ಣಾಟಃ ಕೋಽಪಿ ಭೂಪಂ ಸ್ವಂ ರಣೇ ಶೌರ್ಯಾದತೋಷಯತ್॥
(ಲಂಬಕ ೧೦-ತರಂಗ ೫-ಶ್ಲೋಕ ೩೨೩)

(iii) ದದೌ ತಸ್ಮೈ ಸಪುತ್ರಾಯ ಪ್ರೀತ್ಯಾ ವೀರವರಾಯ ಚ
ಲಾಟದೇಶೇ ತತೋ ರಾಜ್ಯಂ ಸ ಕರ್ಣಾಟಯುತೇ ನೃಪಃ ॥
(ಲಂಬಕ ೧೨-ತರಂಗ ೧೧-ಶ್ಲೋಕ ೧೧೯)

(iv) ಗೌಡಃ ಶಕ್ತಿ ಕುಮಾರೋಽಯಂ ಕರ್ಣಾಟೋಽಯಂ ಜಯಧ್ವಜಃ
ಲಾಟೋ ವಿಜಯವರ್ಮಾಯಂ ಕಾಶ್ಮೀರೋಽಯಂ ಸುನಂದನಃ ॥
(ಲಂಬಕ ೧೮-ತರಂಗ ೩-ಶ್ಲೋಕ ೩)

ಕಲ್ಹಣನ 'ರಾಜತರಂಗಿಣೀ' (೧೧೪೯)

ವ್ಯಾವೃತ್ಯ ಚೋಲ ಕರ್ಣಾಟಲಾಟಾದೀಂಶ್ಚ ನರೇಶ್ವರಾನ್
ಸಿನ್ಧುರಾನಿವ ಗನ್ಧೇಭೋ ಗನ್ಧೇನೈವ ವ್ಯದಾರಯತ್ ॥
(ತರಂಗ ೧-ಶ್ಲೋಕ ೩೦೦)

ಜಲ್ಹಣನ 'ಸೂಕ್ತಿಮುಕ್ತಾವಲಿ' (೧೨೫೭)

ಸರಸ್ವತೀವ ಕಾರ್ಣಾಟೀ ವಿಜಯಾಂಕಾ ಜಯತ್ಯಸೌ
ಯಾ ವಿದರ್ಭಗಿರಾಂ ವಾಸಃ ಕಾಲಿದಾಸಾದನಂತರಮ್ ॥ (೧-ಪು ೪೭)

ಅಯ್ಯಪಾರ್ಯನ 'ಜಿನೇಂದ್ರಕಲ್ಯಾಣಾಭ್ಯುದಯ' (೧೩೧೯)

ಶ್ರೀಮಾನ್ ಪಾಂಡ್ಯಮಹೀಶ್ವರೇ ನಿಜಭುಜಾದಂಡಾವಲಂಬೇ ಕೃತೇ
ಕರ್ಣಾಟಾವನಿಮಂಡಲಂ ಪದನತಾನೇಕಾವನೀಶೇಽವತಿ
ತತ್ಪ್ರೀತ್ಯಾನುಸರನ್ ಸ್ವಬಂಧುನಿವಹೈರ್ವಿದ್ವದ್ಭಿರಾಪ್ತೈಸ್ಸಮಮ್
ಜೈನಾಗಾರಸಮೇನ ಸಂತರನಮೇ (?) ಶ್ರೀಹಸ್ತಿಮಲ್ಲೋಽವಸತ್ ॥

(S. Srikantha Sastri, Sources of Karnataka History. p. ೨೩೭ ಇಲ್ಲಿ ಉದ್ಧೃತ)

ಗಂಗಾಂಬಿಕೆಯ 'ಮಧುರಾವಿಜಯ' ಅಥವಾ 'ವೀರಕಂಪರಾಯ ಚರಿತ' (ಸು. ೧೩೮೦)

ಕರ್ಣಾಟಲೋಕನಯನೋತ್ಸವಪೂರ್ಣಚಂದ್ರ
ಸ್ಸಾಕಂ ತಯಾ ಹೃದಯಸಮ್ಮತಯಾ ನರೇಂದ್ರಃ
ಕಾಲೋಚಿತಾನ್ಯನುಭವನ್ ಕ್ರಮಶಸ್ಸುಖಾನಿ
ವೀರಶ್ಚಿರಾಯ ವಿಜಯಾಪುರಮಧ್ಯವಾತ್ಸೀತ್ (ಸರ್ಗ ೧-ಪದ್ಯ ೭೫)

ಅಥ ಲಂಘಿತ ಕರ್ಣಾಟಃ ಪಂಚಷೈರೇವ ವಾಸರೈಃ
ಪ್ರಾಪತ್ಕಂಪ ಮಹೀಪಾಲಃ ಕಂಟಕಾನನಪಟ್ಟನಮ್ ॥ (೪-೪೭)

ವೇಂಕಟಾಧ್ವರಿಯ 'ವಿಶ್ವಗುಣಾದರ್ಶ' (ಸು. ೧೬೫೦)

ಕರ್ಣಾಟದೇಶೋ ಯಃ ಪೂರ್ವಂ ಕರ್ಣದೇಶಮಭೂಷಯತ್
ಸ ಏಷ ಸಾಂಪ್ರತಂ ಪಶ್ಯ ಚಕ್ಷುಷೋರ್ಭೂಷಣಾಯತೇ ॥ (ಶ್ಲೋಕ ೨೪೯)
ಕರ್ಣಯೋಃ ಅಟತೀತಿ ಕರ್ಣಾಟಃ, ಅಟ ಗತೌ ಇತಿ ಧಾತೋಃ ನಿಷ್ಪನ್ನಶ್ಶಬ್ದಃ

ಕೆಳದಿ ಬಸವರಾಜನ 'ಶಿವತತ್ತ್ವರತ್ನಾಕರ' (೧೭೦೯)

ಏತೇ ಪ್ರಧಾನದೇಶಾಃ ಸ್ಯುಃ ಕನ್ಯಾದ್ವೀಪಾನ್ತರಸ್ಥಿತಾಃ
ಅಙ್ಗಾ ವಙ್ಗಾಃ ಕಲಿಙ್ಗಾಶ್ಚ ಕರ್ನಾಟಾಶ್ಚೈವ ಕೇರಲಾಃ ॥ (೪-೨-೫)

ಅಜ್ಞಾತಕರ್ತೃಕ

ಕರ್ಣಾಟಂ ದೇಹಿ ಕರ್ಣಾಧಿಕವಿಧಿವಿಹಿತತ್ಯಾಗ ಲಾಟಂ ಲಲಾಟ
ಪ್ರೋತ್ತುಂಗ ದ್ರಾವಿಡಂ ವಾ ಪ್ರಚಲಭುಜಬಲಪ್ರೌಢಿಮಾಗಾಢರಾಢಮ್
ಪ್ರಸ್ಫೂರ್ಜದ್ಗುರ್ಜರಂ ವಾ ದಲಿತರಿಪುವಧೂಗರ್ಭವೈದರ್ಭಕಂ ವಾ
ಗಾಜೀ ರಾಜೀವದೃಷ್ಟೇ ಕುಶಶತಮಥವಾ ಶಾಹಜಲ್ಲಾಲುದೀನ ॥

(ವಿಶಿಷ್ಟರಾಜಪ್ರಶಂಸಾ, 'ಸುಭಾಷಿತರತ್ನಭಾಂಡಾಗಾರಂ', ೧೯೫೨, ಪು. ೧೧೩-ಪ. ೩)

(೩) ಲಕ್ಷಣ ಮತ್ತು ಶಾಸ್ತ್ರಗ್ರಂಥಗಳು-೧

ಇಲ್ಲಿಯ ಪ್ರಯೋಗಗಳಲ್ಲಿ ಹೆಚ್ಚಿನವು ಕನ್ನಡ ಭಾಷೆ, ಸಾಹಿತ್ಯಗಳ ಪ್ರಾಚೀನತೆ ಹಾಗೂ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತವೆ. ದೇಶವಾಚಕವಾದವು ಕರ್ನಾಟಕದ ಭೌಗೋಳಿಕವ್ಯಾಪ್ತಿ ಸಾಂಸ್ಕೃತಿಕವೈಶಿಷ್ಟ್ಯಗಳನ್ನು ತಿಳಿಯಲು ಸಹಕಾರಿಯಾಗಿವೆ. ತಂತ್ರಗ್ರಂಥ

ಗಳಲ್ಲಿ ಇಲ್ಲಿ ಕುರಿತಿರುವುವಲ್ಲಿ ಅಲ್ಲದೆ, 'ತಾರಾತಂತ್ರ' ಎಂಬುದರಲ್ಲಿ ಸಹ ಕರ್ಣಾಟಕದ ಪ್ರಸ್ತಾಪವಿದೆಯೆಂದೂ 'ಮಹಾರಾಷ್ಟ್ರ ದೇಶದ ಹೆಸರು ಕರ್ಣಾಟ ಎಂದೂ ಕರ್ಣಾಟವೂ ಮಹಾರಾಷ್ಟ್ರವೂ ಒಂದೇ ದೇಶವೆಂದೂ ಹೇಳಿದೆ' ಎಂದೂ ತಿಳಿಯಲಾಗಿದೆ. *(Nundolal Dey, Geographical Dictionary of Ancient and Mediaeval India,* p. 94). ಆ ಉಲ್ಲೇಖವನ್ನು ಇಲ್ಲಿ ಗುರುತಿಸಲಾಗಿಲ್ಲ.

ಪಾಣಿನಿಯ 'ಅಷ್ಟಾಧ್ಯಾಯಿ' (ಕ್ರಿ.ಪೂ. ೩೫೦) ಗಣಪಾಠ

ಯಸ್ಕಾದಿಭ್ಯೋ ಗೋತ್ರೇ (ಅ. ೨-ಪಾದ ೪-ಸೂತ್ರ ೬೩) ಕರ್ಣಾಢಕ. ಪಾಣಿನಿಯ ಅಷ್ಟಾಧ್ಯಾಯಿಯ ಗಣಪಾಠದಲ್ಲಿಯ ಗೋತ್ರನಾಮಗಳ ಪಟ್ಟಿಯಲ್ಲಿ 'ಕರ್ಣಾಢಕ' ಎಂದಿದೆ. (Index. *Panini-Sutrapatha and Parisistas,* BORI, Poona, 1935). 'ಸಿದ್ಧಾಂತ ಕೌಮುದಿ'ಯ 'ತತ್ತ್ವಬೋಧಿನೀ' ವ್ಯಾಖ್ಯಾನದಲ್ಲಿಯೂ ವಾಚಸ್ಪತ್ಯ ನಿಘಂಟುವಿನಲ್ಲಿಯೂ 'ಕರ್ಣಾಟಕ' ರೂಪದಲ್ಲಿ ಗೋತ್ರ ಪ್ರವರ್ತಕ ಋಷಿಭೇದವಾಗಿ ಶಬ್ದವನ್ನು ತೋರಿಸಿಯೂ ಇದ್ದಾರೆ; ವಿ. ಎಸ್. ಅಗ್ರವಾಲ ಅವರೂ ಇದೇ ರೂಪವನ್ನು ಗ್ರಹಿಸಿದ್ದಾರೆ. (Gotras in Panini, 1963, p.31) ಎಸ್. ಕೆ. ಬೆಳವಲಕರ್ ಅವರು ಗಣಪಾಠದ ಶಬ್ದಗಳು ವ್ಯಾಕರಣಕರ್ತೃ ಪಾಣಿನಿಯದೇ ಎಂಬುದು ನಿಶ್ಚಯವಿಲ್ಲ ಎಂದಿದ್ದಾರೆ (Systems of Sanskrit Grammar, Poona, 1915, p.24)ಇದು ಹೇಗಿದ್ದರೂ, ಗೋತ್ರನಾಮವಾಗಿ 'ಕರ್ಣಾಢಕ' ಶಬ್ದ ೨-೪-೬೩ನೆಯ ಸೂತ್ರದ ಗಣಪಾಠದಲ್ಲಿ ೧೦ನೆಯದಾಗಿ ಬಂದಿರುವುದು, ಈಗ ನಾವು ತಿಳಿದಿರುವ ದೇಶಭಾಷಾವಾಚಕವಾದ 'ಕರ್ಣಾಟಕ'ವನ್ನೇ ಕುರಿತುದಾಗಿದೆ ಎಂದೋ ಅದರ ಮೂಲವೋ ಪ್ರಾಚೀನರೂಪವೋ ಆಗಿದೆಯೊಂದೋ ನಿಸ್ಸಂಶಯವಾಗಿ ತಿಳಿಯಲಾಗದು. ಈಗ ತಿಳಿದಿರುವಂತೆ ಕರ್ನಾಟಕದ ಇತಿಹಾಸದಲ್ಲಿ ದೇಶಭಾಷಾವಾಚಕವಾದ 'ಕರ್ಣಾಟಕ' ಕ್ರಿ.ಶ. ೫ನೆಯ ಶ. ದಿಂದ ಮುಂದೆ ಮಾತ್ರವೇ ಕಾಣಿಸಿಕೊಂಡಿತೆಂದು ಹೇಳಬೇಕಾಗಿದೆ ; ಗೋತ್ರಪ್ರವರ್ತಕ ಋಷಿಯ ಹೆಸರಿನಿಂದ ನಾಡು ಕರೆಯಲ್ಪಟ್ಟಿರುವುದಕ್ಕೆ ದ್ರಾವಿಡವರ್ಗದ ಇತರ ಭಾಷೆಗಳಲ್ಲಿ ಆಧಾರವೇನೂ ಇರುವಂತಿಲ್ಲ.

ವರಾಹಮಿಹಿರನ 'ಬೃಹತ್ಸಂಹಿತಾ' (೫೦೫-೮೭)

ಕರ್ಣಾಟ ಮಹಾಟವಿ ಚಿ । ತ್ರಕೂಟ ನಾಸಿಕ್ಯ ಕೋಲ್ಲಗಿರಿ ಚೋಲಾಃ
ಕ್ರೌಞ್ಚದ್ವೀಪ ಜಟಾಧರ । ಕಾವೇರ್ಯೋ ರಿಷ್ಯಮೂಕಶ್ಚ ॥ (ಅ. ೧೪-ಪ. ೧೩)

ರಾಜಶೇಖರನ 'ಕಾವ್ಯಮೀಮಾಂಸಾ' (ಸು. ೯೦೦)

ರಸಃ ಕೋಽಪ್ಯಸ್ತು ಕಾಪ್ಯಸ್ತು ರೀತಿಃ ಕೋಽಪ್ಯಸ್ತು ವಾ ಗುಣಃ
ಸಗರ್ವಂಸರ್ವ ಕರ್ಣಾಟಾಷ್ಟಂಕಾರೋತ್ತರಪಾಠಿನಃ ॥ (ಅಧ್ಯಾಯ ೭)

ಇಂದ್ರನಂದಿಯ 'ಶ್ರುತಾವತಾರ' (೯೭೮ರ ಪೂರ್ವ)

(i) ಪ್ರಾಕೃತ ಸಂಸ್ಕೃತ ಕರ್ಣಾ । ಟ ಭಾಷಯಾ ಪದ್ಧತಿಃ ಪರಾ ರಚಿತಾ
ತಸ್ಮಾದಾರಾತ್ಪುನರಪಿ । ಕಾಲೇ ಗತವತಿ ಕಿಯತ್ಯಪಿ ಚ ॥ (ಪ. ೧೬೪)

(ii) ಚತುರಧಿಕಾಶೀತಿ । ಸಹಸ್ರ ಗ್ರಂಥರಚನಯಾ ಯುಕ್ತಾಂ (?)
ಕರ್ಣಾಟಭಾಷಯಾ ಕೃತ । ಮಹತೀಂ ಚೂಡಾಮಣಿಂ ವ್ಯಾಖ್ಯಾಂ ॥
(ಪ. ೧೬೬)

ಭೋಜದೇವನ 'ಸರಸ್ವತೀಕಂಠಾಭರಣ' (೧೦೦೫-೫೪)

ಕಾರ್ಣಾಟೀ ಕೌನ್ತಲೀ ಕೌಚ್ಛೀ ಕೌಙ್ಕಣೀ ಬಾಣವಾಸಿಕಾ
ದ್ರಾವಿಡೀ ಮಾಥುರೀ ಮಾತ್ಸೀ ಮಾಗಧೀ ತಾಮ್ರಲಿಪ್ತಿಕಾ ॥
(ಪರಿಚ್ಛೇದ ೨-ಸೂತ್ರ ೭೯)

ನಾಗವರ್ಮನ 'ಕರ್ಣಾಟಕ ಭಾಷಾಭೂಷಣ' (೧೦೪೨)

(i) ಅಥ ಕರ್ಣಾಟಕ ಶಬ್ದಸಿದ್ಧಿಃ ॥
ಇಹ ಕರ್ಣಾಟಕ ವಿಷಯೇ ಶಬ್ದ ಸಿದ್ಧಿರಧಿಕ್ರಿಯತ ಇತಿ ॥
(ಸೂತ್ರ, ೧, ೧ರ ವೃತ್ತಿ)

(ii) ಅಸ್ಮಿನ್ ಕರ್ಣಾಟಕ ವಿಷಯೇ ವರ್ಗಾಣಾಂ ದ್ವಿತೀಯ ಚತುರ್ಥಾಕ್ಷರಾಃ
.... ಪ್ರಾಯೇಣನ ವಿದ್ಯನ್ತೇ (ಸೂತ್ರ ೧೧ರ ವೃತ್ತಿ)

(iii) ಶಕಾರ ಷಕಾರೌ ದ್ರಾವಪ್ಯಸ್ಮಿನ್ ಕರ್ಣಾಟಕ ವಿಷಯೇ ನ ಸ್ತಃ ॥
(ಸೂತ್ರ ೧೨ರ ವೃತ್ತಿ)

(iv) ಜೀಯಾದಸೌ ಮಹಾಪ್ರೋಕ್ತಾ ನಾಗವರ್ಮಬುಧೋತ್ತಮಃ
ಯತ್ಪ್ರಜ್ಞಯಾ ಜಗತ್ಯುಚ್ಚೈರ್ಯಾತಿ ಕರ್ಣಾಟಲಕ್ಷಣಂ ॥ (ಗ್ರಂಥಾಂತ್ಯ)

ಜಯಕೀರ್ತಿಯ 'ಛಂದೋನುಶಾಸನ' (ಸು. ೧೦೫೦)

(i) ಸಂಸ್ಕೃತವಾಚ್ಯಾರ್ಯಾದ್ಯಾಃ । ಪ್ರಾಕೃತವಿಷಯೇ ತು ಗಲಿತಕಾದ್ಯಾ ಬಹುಧಾ
ಕರ್ಣಾಟಕೇऽಕ್ಷರಾದ್ಯಾ । ವಿಷಯೇ (ऽಂಧ್ರೇ) ಶೀರ್ಷಕಾದಿಜಾತಯ ಉದಿತಾಃ
॥
(ಅಧಿಕಾರ ೧-ಪದ್ಯ ೨೨)

(ii) ಅಜ್ಝಜಗಣಯುಗಾದ್ ಬಾಣಗಣೇ । ಸಜ್ಗತೇ ಪ್ರತಿಪಾದಮಲ್ಪಾಕ್ಷರಮ್
ಶೃಙ್ಗಾರಪಿಣ್ಡಾದಿ ಕಾವ್ಯೇಷು ತತ್ । ಸಜ್ಗೀತಂ ಕರ್ಣಾಟಕೇ ಪ್ರಸಿದ್ಧಮ್ ॥
(ಅಧಿಕಾರ ೭, ಪದ್ಯ ೪)

(iii) ಯದಿ ತು ರತಿಗಣಃ ಪಾದಾದೌ ಪಾದಮಧ್ಯೇ

ಮದನಗಣಯುಗಂ ಪಾದಾನ್ತೇ ಬಾಣಗಣಮ್
ತದಿದಮನ್ತರಾಕ್ಷರಮಕ್ಷರಜ್ಞಾ (ಜ್ಞೈರ್) ಗೀತಂ
ವಿದಿತಮಾರ್ಹತೇ ಕರ್ಣಾಟೇಶ್ವರಕಥಾದೌ ॥ (ಅಧಿಕಾರ ೭, ಪದ್ಯ ೫)

(iv) ಪ್ರಥಮೇ ರತಿರೇವ ಮನ್ಮಥಃ ಸ್ಯಾದ್ ದ್ವಿತೀಯೇ ತೃತೀಯೇಽ
ಪ್ಯಥ ಚತುರ್ಥೇ ಬಾಣಗಣಸ್ತು ಪಞ್ಚಮಸ್ಥಾನ ಏವ
ಗ್ರಥಿತಂ ಲಕ್ಷಣಮಿತಿ ಯಸ್ಯ ತನ್ಮಧ್ಯಮಾಕ್ಷರಾಖ್ಯಂ
ಪ್ರಥಿತಂ ಕರ್ಣಾಟಮಾಲತೀಮಾಧವ ಪ್ರಭೃತಿ ಕಾವ್ಯೇ ॥
(ಅಧಿಕಾರ ೭, ಪದ್ಯ ೬)

(v) ರತಿಪತಿಗಣಯುಗ್ಮಾದದ್ರತಿತಃ ಸ್ಮರಯುಗ್ಮಂ ರತಿರಪಿ ಚ ಪುನಃ
ಪ್ರತಿಪಾದಂ ವರ್ತತೇ ಯಸ್ಮಿನ್ನತ್ರಸಮಾನಾಕ್ಷರಂ ನಾಮ
ಶ್ರುತಿಕಾನ್ತಮಕ್ಷರಜ್ಞೈರಾದೃತಮಸಗಾಖ್ಯ ಕವಿನಾ
ಪ್ರತಿಪಾದಿತಂ ನನು ಕರ್ಣಾಟಕುಮಾರಸಂಭವ ಕಾವ್ಯೇ ॥
(ಅಧಿಕಾರ ೭, ಪದ್ಯ ೭)

(vi) ಸರ್ವಲಕ್ಷಣಮತ್ರ ಪೂರ್ವವದ್ಧರಧಾಮ್ನಿ
ಗುರ್ವಾದಿ ಬಾಣಗಣಭಾಗ್ ವಿಚಿತ್ರಾ ಸ್ಯಾತ್
ಪೂರ್ವಂ ಕರ್ಣಾಟಚ್ಛಂದೋಮತೇ ॥ (ಅಧಿಕಾರ ೭, ಪದ್ಯ ೧೦)

(vii) ಇತಿ ಜಯಕೀರ್ತಿಕೃತೌ ಛನ್ದೋಽನುಶಾಸನೇ ಕರ್ಣಾಟವಿಷಯಭಾಷಾ ಜಾತ್ಯಧಿಕಾರಃ ಸಪ್ತಮಃ (ಸಪ್ತಮಾಧಿಕಾರದ ಉಪಸಂಹಾರ ಗದ್ಯ)

ಕ್ಷೇಮೇಂದ್ರನ 'ಔಚಿತ್ಯವಿಚಾರಚರ್ಚಾ' (ಸು. ೧೦೫೦)

ಕರ್ಣಾಟೇ ದಶನಾಂಕಿತಃ ಶಿತಮಹಾರಾಷ್ಟ್ರೀಕಟಾಕ್ಷಾಹತಃ
ಪ್ರೌಢಾಂಧ್ರೀಸ್ತನಪೀಡಿತಃ ಪ್ರಣಯಿನೀಭ್ರೂಭಂಗವಿತ್ರಾಸಿತಃ
ಲಾಟೀಬಾಹುವಿವೇಷ್ಟಿತಶ್ಚ ಮಲಯಸ್ತ್ರೀತರ್ಜನೀತರ್ಜಿತಃ
ಸೋಽಯಂ ಸಂಪ್ರತಿ ರಾಜಶೇಖರಕವಿರ್ವಾರಾಣಸೀಂ ವಾಂಛತಿ ॥
(ಸೂತ್ರ ೨೭-ಲಕ್ಷ್ಯಪದ್ಯ ೮೦)

ದಿವಾಕರಣಂದಿಯ 'ತತ್ತ್ವಾರ್ಥಸೂತ್ರವೃತ್ತಿ' (೧೦೬೭)

ನತ್ವಾ ಜಿನೇಶ್ವರಂ ವೀರಂ ವಕ್ಷ್ಯೇ ಕರ್ಣಾಟಭಾಷಯಾ
ತತ್ತ್ವಾರ್ಥಸೂತ್ರ ಸೂತ್ರಾರ್ಥಂ ಮಂದಬುದ್ಧ್ಯನುರೋಧತಃ ॥
(ವೃತ್ತಿಯ ಆದಿಶ್ಲೋಕ)

ವಾತ್ಸ್ಯಾಯನನ 'ಕಾಮಸೂತ್ರ'ದ ಯಶೋಧರಕೃತ 'ಜಯಮಂಗಲಾ' ವ್ಯಾಖ್ಯೆ (ಸು. ೧೨೫೦)

(i) ನರ್ಮದಾಯಾ ದಕ್ಷಿಣೇನ ದೇಶೋ ದಕ್ಷಿಣಾಪಥಃ ತತ್ರ
ಕರ್ಣಾಟವಿಷಯಾತ್ ಪೂರ್ವೇಣಾನ್ಧ್ರ ವಿಷಯಃ ।
(ಅಧಿಕರಣ, ೨, ಅಧ್ಯಾಯ ೫, ಸೂತ್ರ ೨೮ರ ವ್ಯಾಖ್ಯೆ)

(ii) ನರ್ಮದಾ ಕರ್ಣಾಟವಿಷಯಯೋರ್ಮಧ್ಯೇ ಮಹಾರಾಷ್ಟ್ರವಿಷಯಃ
(ಅಧಿಕರಣ ೨, ಅಧ್ಯಾಯ ೫, ಸೂತ್ರ ೨೯ರ ವ್ಯಾಖ್ಯೆ)

(iii) ಕರ್ಣಾಟಕವಿಷಯಾದ್ದಕ್ಷಿಣೇನ ದ್ರವಿಡವಿಷಯಃ
(ಅಧಿಕರಣ ೨, ಅಧ್ಯಾಯ ೫, ಸೂತ್ರ ೩೧ರ ವ್ಯಾಖ್ಯೆ)

ಹೇಮಾದ್ರಿಯ 'ವ್ರತಖಂಡಪ್ರಶಸ್ತಿ' (೧೨೬೫)

ತಿಲ್ಲಿಂಗಕ್ಷಿತಿಪಾಲತೂಲನಿಚಯಪ್ರಕ್ಷೇಪಚಂಡಾನಿಲೋ
ಗರ್ಜದ್ಗೂರ್ಜರಗರ್ವಪರ್ವತಭಿಧಾದಂಭೋಲಿ ದೋರ್ವಿಕ್ರಮಃ
ಹೇಲೋನ್ಮೀಲಿತಕೋಂಕಣಕ್ಷಿತಿಪತಿಃ ಕರ್ಣಾಟಲಾಟೋದ್ಭಟ
ಕ್ಷೋಣೀಪಾಲವಿಡಂಬನಃ ಸ ಹಿ ಮಹಾದೇವಃ ಕಥಂ ವರ್ಣ್ಯತೇ ॥

(Sources of Karnataka History, p. 229)

ಅಜ್ಞಾತಕರ್ತೃಕ 'ಲೀಲಾತಿಲಕಂ' (ಸು. ೧೩೮೫-೧೪೦೦)

(i) ಯಥಾ ವಾ ನಾಳೆ ಇಲ್ಲ ಇತ್ಯಾದಯಃ ಕರ್ಣಾಟಭಾಷಾಸದೃಶಾಃ ನ ಕರ್ಣಾಟ ಭಾಷಾ

(ii) ನನು ಚೋಳಭಾಷಾ ಸಂಸ್ಕೃತಯೋಗೋ ಮಣಿಪ್ರವಾಳಂ ಭವತಿ ; ಕರ್ಣಾಟ ಭಾಷಾ ಸಂಸ್ಕೃತಯೋಗೋಪಿ ; ತಥಾ ಆಂಧ್ರಾದಿ ಭಾಷಾ ಸಂಸ್ಕೃತಯೋಗೋಪಿ

(iii) ತಥಾಪಿ (ನ) ಕೇರಳಮಣಿಪ್ರವಾಳೇ ಚೋಳಭಾಷಾ ಭವತಿ, ಯಥಾ ಕರ್ಣಾಟ ಮಣಿಪ್ರವಾಳೇ

(ಒನ್ನಾಮ್ ಶಿಲ್ಪಂ, ಪು ೨೯೦-೯೨ ; ಸಂ, ಇಳಂಗುಳಮ್ ಕುಂಜೆನ್ ಪಿಳ್ಳೈ, ಕೊಟ್ಟಾಯಂ, ೧೯೬೨ರ ಮುದ್ರಣ)

ಅಜಿತಸೇನನ 'ಅಲಂಕಾರ ಚಿಂತಾಮಣಿ' (ಸು. ೧೪೨೦)

ಜಹಾತಿ ಕೀದೃಶೀ ಕಾಂತಂ ವಧೂ ಸಂಬುಧ್ಯತಾಃ ರಿಪುಃ
'ಏನೆಂದು ಕರೆವಂ ನಾಥಂ ಕಾಂತೆಯಂ ಸಂಬುಭುಕ್ಷೆಯಿಮ್" ॥
"ನೀರ ತಾರೇ"

ರತಾನ್ನಿಷ್ಕ್ರಾನ್ತಾ ನೀರತಾ ಅರೇ ಸಂಸ್ಕೃತ ಕರ್ಣಾಟ ಜಾತಿಃ ॥

(ಅಸ್ಯ ಸಂಸ್ಕೃತಂ ಯಥಾ-ಕಥಮಾಹೂತವಾನ್ ನಾಥಃ ಕಾಂತಾಂ ವೈ ಸಂಬುಭುಕ್ಷಿತಃ ಅಸ್ಯ ಪ್ರಶ್ನಸ್ಯೋತ್ತರಂ ಕರ್ಣಾಟಭಾಷಾಯಾಮ್-"ನೀರ ತಾರೇ" ಇತಿ ; ತದರ್ಥಃ ಜಲಮಾನಯ ಇತಿ)

(Sources of Karnataka History, p 166)

'ಸಮ್ಮೋಹತಂತ್ರ' (ಸು. ೧೪೫೦ರ ಪೂರ್ವ)

(i) ಸೌರಾಷ್ಟ್ರೋ ದ್ರವಿಡಶ್ಚೈವಂ(ವ) । ತ್ರೈಲಿಂಗಮಲಯಾದ್ರ (ದಿ) ಕೌ
ಕರ್ಣಾಟಾವನ್ತ್ಯವೈದರ್ಭ । ಸರ್ಪಾ (ಪ್ರಾ) ಭೀರ (ರಾಃ) ಸಮಾಲವಾ (ವಾಃ)

(ii) ಚೋಲ(ಪಾಂ)ಚಾಲಗೌಡಾಶ್ಚ । ಮಲಯಾಂಧ್ರ (ಯಾಲ)ಶ್ಚಸಿಂಹಲಃ
ವ್ಯೋಂಕವಿಡೋ ವ್ಯೋನ್ತಶ್ಚೈವ (?) । ಕಾ (ಕ)ರ್ಣಾಟೋ ಲಾಟ ಏವ ಚ ॥

(D. C. Sircar, Studies in the Geography of Ancient
and Medieval India, 1960. p. 71)

ಮಾರ್ಕಂಡೇಯ ಕವೀಂದ್ರನ 'ಪ್ರಾಕೃತ ಸರ್ವಸ್ವಮ್' (ಸು. ೧೪೯೦-೧೫೬೫)

ಗೌಡೌಡ್ರ ಥೈವ ಪಾಶ್ಚಾತ್ಯ ಪಾಣ್ಡ್ಯ ಕೌನ್ತಲ ಸೈಂಹಲಾಃ
ಕಾಲಿಙ್ಗ್ಯ ಪ್ರಾಚ್ಯ ಕಾರ್ಣಾಟ ಕಾಞ್ಚ್ಯ ದ್ರಾವಿಡ ಗೌರ್ಜರಾಃ ॥
(ಪ್ರಥಮಪಾದ, ಸೂತ್ರ ೨ರ ವೃತ್ತಿ)

ಭಟ್ಟಾಕಳಂಕನ 'ಕರ್ಣಾಟಕ ಶಬ್ದಾನುಶಾಸನ' (೧೬೦೪)

(i) ಸರ್ವಾಃ ಸಮಸ್ತಾಃ ಕರ್ಣಾಟಕಾಂಧ್ರಮಗಧ ಮಾಳವಾದಿ ನಾನಾಜನಪದ
ವಿಕಲ್ಪೈಶ್ಚ ನಾನಾತ್ವಂ ಪ್ರಾಪ್ತಾಃ (ಮಂಗಲಶ್ಲೋಕ ವ್ಯಾಖ್ಯೆ)

(ii) ಅಥ ಶಬ್ದಾನುಶಾಸನಮಾರಭ್ಯತೇ । ಕೇಷಾಂ ಶಬ್ದಾನಾಂ ಕರ್ಣಾಟಿಕಾನಾಂ
(ಪ್ರಥಮ ಸೂತ್ರಾರಂಭದ ಸಂಕಲ್ಪವಾಕ್ಯ)

(iii) ಕಾರ್ಣಾಟಿಕಾನಾಂ ಇತಿ. ಕರ್ಣಾಟೇ ಪ್ರಸಿದ್ಧಾಃ ಕಾರ್ಣಾಟಿಕಾಃ ತೇಷಾಂ ಕಾರ್ಣಾಟಿಕಾನಾಂ. ತದ್ಭವ ತತ್ಸಮ ದೇಶ್ಯ ಪ್ರಭೇದೇನ ಆರಾತೀಯ ಮಹಾಕವಿಭಿಃ ಕರ್ಣಾಟವಿಷಯೇ ಪ್ರಯೋಗಾರ್ಹತಯಾ ಸಮ್ಮತಾನಾ ಮಿತ್ಯರ್ಥಃ
(ಸಂಕಲ್ಪವಾಕ್ಯಾನಂತರದ ವ್ಯಾಖ್ಯೆ)

(iv) ಯದ್ಯಪಿ ಕೃತ್ತದ್ಧಿತ ಸಾಮಾಸಾಂತಾಃ ಸಂಸ್ಕೃತಶಬ್ದಾ ಅಪಿ ಕರ್ಣಾಟಕ ಕಾವ್ಯ ನಾಟಕಾದೌ ಪ್ರಯೋಗಾರ್ಹಾಃ, ತಥೈವ ಅರ್ಥವತ್ಸೂತ್ರೇ ಪ್ರತಿಪಾದನಾತ್.... (ಅದೇ)

(v) ಸೂತ್ರ : ಕರಮ್ಬಾದಯಃ ॥ ಪ್ರಯೋಗ : ಕರ್ಣಾಟಕ-ಕಂನಡ
(ಸೂತ್ರ ೧೬೦)

(vi) ಯೋ ನಾನಾಮತತರ್ಕಕರ್ಕಶಮತಿರ್ವ್ಯಾಖ್ಯಾನಮುದ್ರಾಪಟುಃ
ಯಂ ಪ್ರಾಭಾವಯದಾರ್ಹತಂ ನಿಜಮತಂ ಭೂಭೃತ್ಸಭೇಽನೇಕಧಾ
ಯಃ ಕರ್ಣಾಟಕ ಸಂಸ್ಕೃತೋಭಯವಿಧಂ ಶಬ್ದಾಬ್ಧಿಮುತ್ತೀರ್ಣವಾನ್
ಸೋಽಯಂ ಸಾಧುಜನಪ್ರಿಯೋ ವಿಜಯತೇ ಭಟ್ಟಾಕಂಲಕೋ ಭುವಿ ॥
(ಗ್ರಂಥಾಂತ್ಯ ಮಂಗಲಪದ್ಯ ೨)

(vii) ಯಂ ಕರ್ಣಾಟಕಶಬ್ದ ಶಾಸನಮಿದಂ ನಿರ್ಮಾಯ ಶರ್ಮಾವಹಂ
ವೃತ್ತಿಂ ಚಾರುಚಯಚ್ಚ ತಸ್ಯ ವಿದುಷಾಂ ಪ್ರೌಢಂ ಪ್ರರೂಢಶ್ರಿಯಂ
ತೇನೇದಂ ವ್ಯರಚಿ ಪ್ರಗಲ್ಭವಚಸಾ ಭಟ್ಟಾಕಲಂಕೇನ ತ
ದ್ವ್ಯತ್ತೇಃ ಸಾಧು ನಿಬನ್ಧನಂ ಚ ಮಕರನ್ದಾಖ್ಯಂ ಸಮಾಖ್ಯಾಸ್ಪದಂ ॥
(ಗ್ರಂಥಾಂತ್ಯ ಮಂಗಲಪದ್ಯ ೩)

(viii) ಸಕಲಶಾಬ್ದಿ ಕಜನಚೇತಶ್ಚಮತ್ಕಾರಕಾರಿಯಪ್ಪ ಕರ್ಣಾಟಕ ಶಬ್ದಾನುಶಾಸನಮಂ ಸೂತ್ರಿಸಿ.... (ಗ್ರಂಥಾಂತ್ಯ ಗದ್ಯ)

'ಶಕ್ತಿಸಂಗಮತಂತ್ರ' (ಸು. ೧೭ನೆಯ ಶತಮಾನ)

(i) ಮಾರ್ಜಾರತೀರ್ಥರಾಜೇಂದ್ರೇ ಕೋಲಾಪುರನಿವಾಸಿನೀ
ತಾವದ್ದೇಶೋ ಮಹಾರಾಷ್ಟ್ರಃ ಕರ್ಣಾಟಸ್ಯಾಭಿಗೋಚರಃ ॥

(ii) ರಾಮನಾಥಂ ಸಮಾರಭ್ಯ ಶ್ರೀರಂಗಾನ್ತಂ ವರೇಶ್ವರಿ
ಕರ್ಣಾಟದೇಶೋ ದೇವೇಶಿ ಸಾಮ್ರಾಜ್ಯಭೋಗದಾಯಕಃ ॥
(iii-೭-೧೧, ೧೬)

ಪಾಠಭೇದ:

ರಾಮನಾಥಂ ಸಮಾರಭ್ಯ ಶ್ರೀರಂಗಾಂತಂ ಕಿಲೇಶ್ವರಿ
ಕರ್ಣಾಟದೇಶ ಇತ್ಯುಕ್ತೋ ರಾಜ್ಯಸಾಮ್ರಾಜ್ಯದಾಯಕಃ ॥
(ವಾಚಸ್ಪತ್ಯಮ್, iii, ೧೯೬೨, ಪು. ೧೭೧೪)

'ಶಂಬುರಹಸ್ಯ'

ಮಾಮುದ್ದಿಶ್ಯ ತಪಶ್ಚಕ್ರೇ ಪುರಾಗಸ್ತ್ಯೋ ಮಹಾಮುನಿಃ
ಮಯಾ ಪ್ರದತ್ತವಿಜ್ಞಾನೋ ದ್ರಾಮಿಡೀಂ ವ್ಯಾಕೃತಿಂ ವ್ಯಧಾತ್ ॥

ನಾಪಭ್ರಂಶತ್ವದೋಷೋಸ್ತಿ ದ್ರಾಮಿಡೀನಾಂ ಗಿರಾಂ ತತಃ
ಅನಾರ್ಷಮಾಂಧ್ರ ಕಾರ್ಣಾಟ ಘೌರ್ಜರಾದ್ಯಂ ಹಿ ಭಾಷಿತಂ ॥
ಅಪಭ್ರಂಶ ವಿಜಾನೀಯಾತ್ ॥

(R. Narasimhacharya, History of Kannada Language, 1934, p 31)

'ಶಬ್ದರತ್ನಾವಲಿ'

ಕರ್ಣಾಟಃ-ಕರ್ಣೇಷು ಅಟತಿ-ಪ್ರಭೂತಯಶಸ್ವಿನ ಏತದ್ದೇಶಸ್ಯ ರಾಜ್ಞೋ
ಗುಣಾದಿ ಕೀರ್ತನೇನ ಸರ್ವೇಷಾಂ ಕರ್ಣೇಷು ಭ್ರಮತೀತಿ ।
ಕರ್ಣ+ಅಟ್+ಅಚ್। ಶಕನ್ಧ್ವಾದಿವತ್ಸಾಧುಃ ॥ ಸ್ವನಾಮಖ್ಯಾತದೇಶವಿಶೇಷಃ।

ಇತಿ ಶಬ್ದರತ್ನಾವಲೀ ।

ಯಥಾ ಕರ್ಣಾಟವರ್ಣನೇ ರಾಜ್ಞ್ಯುಕ್ತಿಃ-

ಅರ್ವಾಞ್ಚೋ ಯದಿ ಗದ್ಯಪದ್ಯನಿಪುಣಾಶ್ಚೇತಶ್ಚಮತ್ಕುರ್ವತೇ
ತೇಷಾಂ ಮೂರ್ಧ್ನಿ ದಧಾತಿ ವಾಮಚರಣಂ ಕರ್ಣಾಟರಾಜಪ್ರಿಯಾ ॥

[ಅಯಂ ದೇಶಃ ಕೂರ್ಮವಿಭಾಗೇ ದಕ್ಷಿಣಸ್ಯಾಂ ದಿಶಿ ವರ್ತತೇ]

(ಶಬ್ದಕಲ್ಪದ್ರುಮ, ii, ೧೯೬೧, ಪು. ೩೪)

(೩) ಲಕ್ಷಣ ಮತ್ತು ಶಾಸ್ತ್ರಗ್ರಂಥಗಳು-೨

ಇಲ್ಲಿ 'ಕರ್ಣಾಟ' ಎಂಬ ಶಬ್ದ ಸಂಗೀತಶಾಸ್ತ್ರದ ಗ್ರಂಥಗಳಲ್ಲಿ ಬಂದಿರುವುದನ್ನು ಗುರುತಿಸಬಹುದಾಗಿದೆ. 'ಕರ್ಣಾಟ' ದೇಶ ಸಂಗೀತಪದ್ಧತಿ, ರಾಗ, ಛಂದಸ್ಸು ಮೊದಲಾದುವನ್ನು ತಿಳಿಸುವ ಉಲ್ಲೇಖಗಳು ಇವು. ಭಾರತೀಯ ಸಂಗೀತದ ಇತಿಹಾಸದಲ್ಲಿ ಕರ್ನಾಟಕ ಸಂಗೀತಸಂಪ್ರದಾಯದ ಸ್ಥಾನ ಮಹತ್ತ್ವಗಳು ಯಾವ ರೀತಿಯವು, ಸಂಗೀತಲಕ್ಷಣವನ್ನು ನಿರೂಪಿಸಿದ ಕನ್ನಡ ನಾಡಿನ ಲಾಕ್ಷಣಿಕರು ಭಾರತೀಯ ಸಂಗೀತಪದ್ಧತಿಗೆ ನೀಡಿದ ಕಾಣಿಕೆಯ ಸ್ವರೂಪ ಮೊತ್ತಗಳು ಯಾವ ಬಗೆಯವು-ಇವು ವಿಶೇಷ ಪರಿಶೀಲನೆಗೆ ವಿಷಯವಾದವು ಎನ್ನುವುದು ಇಂತಹ ಉಲ್ಲೇಖಗಳಿಂದ ವಿದಿತವಾಗುವುದು ಸಾಧ್ಯವಿದೆ. ಅಭಿನವಗುಪ್ತ (ಸು. ೧೦೦೦) ಹೆಸರಿಸುವ ಕಶ್ಯಪಮುನಿ ಮತ್ತೊಬ್ಬ ಪ್ರಾಚೀನಾಚಾರ್ಯನಾದ ಮತಂಗಮುನಿಗೆ (ಸು. ೫೦೦ ರಿಂದ ೭೦೦ರ ನಡುವೆ) ಸಹ ಹಿಂದಿನವನೆಂಬ ಅಭಿಪ್ರಾಯವಿದೆ. ಆತನ ಕಾಲ ಸರಿಯಾಗಿ ನಿಷ್ಕರ್ಷೆಯಾದರೆ, 'ಕರ್ಣಾಟ' ಶಬ್ದಪ್ರಯೋಗದ ಹಳಮೆ ಇನ್ನೂ ಹಿಂದೆ ಸರಿಯಲು ಅವಕಾಶವಾಗುತ್ತದೆ.

ಈ ಭಾಗದಲ್ಲಿ ಸಂಗ್ರಹಿಸಿಕೊಟ್ಟಿರುವ ಉಲ್ಲೇಖಗಳೆಲ್ಲವೂ-ಒಂದೆರಡರ ಹೊರತಾಗಿ-ಸಂಗೀತಶಾಸ್ತ್ರಜ್ಞರಾಗಿರುವ ರಾ. ಸತ್ಯನಾರಾಯಣ ಅವರು ಈ ಪುಸ್ತಕಕ್ಕಾಗಿಯೇ ಸಿದ್ಧಮಾಡಿ ಕೊಟ್ಟಿರುವುವಾಗಿವೆ. ಇದಕ್ಕಾಗಿ ಅವರಿಗೆ ನನ್ನ ಕೃತಜ್ಞತೆಗಳು. (ಅವರೇ ಸಂಗ್ರಹಿಸಿಕೊಟ್ಟಿರುವ 'ಕನ್ನಡ' ಶಬ್ದದ ಕೆಲವು ಉಲ್ಲೇಖಗಳನ್ನು ಸಹ, ಅಭ್ಯಾಸಕ್ಕೆ ಅನುಕೂಲಿಸುವುದೆಂದು ಹಾಗೆಯೇ ಉಳಿಸಿಕೊಂಡಿದೆ).

ಮತಂಗ ಮುನಿಯ 'ಬೃಹದ್ದೇಶೀ' (ಸು. ೫೦೦ ರಿಂದ ೭೦೦ರ ನಡುವೆ)

(i) ಸಮಸ್ವರಾ ಚ ಸಂಪೂರ್ಣಾ ಕರ್ಣಾಟೀ ನಾಮತೋ ಭವೇತ್ ।

(ಶ್ಲೋ. ೩೭೫, ಪು. ೧೪೧)

(ii) ತಾಲಶೂನ್ಯಾದಿ ತು ಯಃ ಪಾಟ್ಯೈರ್ವಿರುತೈಶ್ಚ ಸಮನ್ವಿತಃ
ಸ ಕಂದ ಇತಿ ಕರ್ಣಾಟ ಭಾಷಾದಿ ಪದಮಿಶ್ರಿತಃ ॥

(ಶ್ಲೋ. ೩೯೭, ಪು. ೧೪೩)

(iii) ತಾಲೇನಾಪಿ ಚ ಯುಕ್ತಃ ಸ್ಯಾದ್ ವರ್ಣಃ ಕರ್ಣಾಟ ಭಾಷಯಾ ।

(ಶ್ಲೋ. ೪೦೩, ಪು. ೧೪೪)

(iv) ..... ಕರ್ಣಾಟಭಾಷಯಾಮಥವಾ ಮಿಶ್ರಿತಾ ಯದಿ
ಸಂವಾದಕಪದೋಪೇತಃ ಸ ಭವೇಚ್ಛುಕಸಾರಿತಃ ॥

(ಶ್ಲೋ. ೪೧೧, ಪು. ೧೪೫)

(v) ಲಾಟ ಕರ್ಣಾಟ ಗೌಡಾಂಧ್ರದ್ರವಿಡಾನಾಂ ಸ್ವಭಾಷಯಾ
ಪೃಥಗ್ ಪೃಥಗ್ ಭವಂತ್ಯೇಲಾ ಮಾರ್ಗಯುಕ್ತಾ ಮನೋಹರಾ ॥

(ಶ್ಲೋ ೪೮೭, ಪು. ೧೫೨)

(vi) ಏಲಾ ಕರ್ಣಾಟಕಾ ಪ್ರೋಕ್ತಾ ಲಲಿತಧ್ವನಿಸಂಯುತಾ ।

(ಶ್ಲೋ. ೪೮೯, ಪು. ೧೫೨)

ಕಶ್ಯಪಮುನಿ, ಅಭಿನವಗುಪ್ತನ 'ನಾಟ್ಯಶಾಸ್ತ್ರ'ದ 'ಅಭಿನವ ಭಾರತೀ' ವ್ಯಾಖ್ಯಾನದಲ್ಲಿ (ಸು. ೧೦೦೦) ಉದ್ಧೃತ:

ಕರ್ಣಾಟೀ ಬಂಧನಿರ್ವಿಣ್ಣೇ ಚಿತ್ರಕರ್ಮಣಿ ವಾ ಭವೇತ್ ।

(ಸಂ. ೪, ಪು. ೭೩)

ನಾನ್ಯದೇವನ 'ಸರಸ್ವತೀಹೃದಯಾಲಂಕಾರಹಾರ' (೧೧ನೆಯ ಶ.)

(i) ಧಾಂಶಾ ಧೈವತ ತಾರಾ ಷಡ್ಜನ್ಯಾಸಗ್ರಹಾ ಚ ಸಂಪೂರ್ಣಾ
ಮಧ್ಯಮ ಮಂದ್ರಾ ಕವಿಭಿಃ ಕರ್ಣಾಟ ವರಾಟಿಕಾಽಭಿಹಿತಾ ॥

(ii) ಪದ ಕರ್ಣಾಟ ಬಿರುದೈರತಿಲೀಲೇ ತ್ರಿಪಿಷ್ಟಕಮ್
ದ್ವೌ ಲಘೂ ಗುರುಣಾ ಚೈವ ರತಿಲೀಲಾ ಇತಿ ಸ್ಮೃತಾ ॥

(iii) ಕರ್ಣಾಟಭಾಷಾಪದ ತೇನಕೈಶ್ಚ ಸುಮನಾ ತಾಲೇಽಥ ಭಾವ ತ್ರಿವಿಕ್ರಮಃ ।

(iv) ಕರ್ಣಾಟಭಾಷಾಬಿರುದೈಃ ಪದೈಶ್ಚ
ಪಾಟಸ್ವರಾಭ್ಯಾಂ ಕಿಲ ಪಂಚಭಾಣಃ ॥

(ಮೈಸೂರು ವರಲಕ್ಷ್ಮೀ ಅಕೆಡಮಿಯ ಹಸ್ತಪ್ರತಿಯಿಂದ)

ಹರಿಪಾಲದೇವನ 'ಸಂಗೀತ ಸುಧಾಕರ' (ಸು. ೧೧೭೫)

(i) ಅಥ ಕರ್ಣಾಟ ಬಂಗಾಲೋ ಗಾಂಧಾರಾಂಶೋಽಂತ ಷಡ್ಜಕಃ
ಪಂಚಮೇನ ಪರಿತ್ಯಕ್ತೋ ರಾಗೋಽಯಂ ಕಥಿತೋ ಬುಧೈಃ ॥

(ii) ಅಥ ಕರ್ಣಾಟ ಗೌಡಾಖ್ಯೋ ರಾಗಃ ಸ್ವಸ್ಥಾನತಾಡಿತಃ
ಪೂರ್ಣಃ ಷಡ್ಜಾಂಶನ್ಯಾಸೋ ರಾಗವಿದ್ಭಿರುದೀರಿತಃ ॥

(iii) ಪ್ರಶ್ನೋತ್ತರೌ ವಿಧಾತವ್ಯೌ ಲಾಟ ಕರ್ಣಾಟಭಾಷಯಾ
ಯಃ ಕಶ್ಚಿದಪಿ ರಾಗಃ ಸ್ಯಾತ್ ಪ್ರೋಕ್ತೋಽಯಂ ಶುಕಸಾರಿಕಾ ॥
(ಮೈಸೂರು ವರಲಕ್ಷ್ಮೀ ಅಕೆಡಮಿಯ ಹಸ್ತಪ್ರತಿಯಿಂದ)

ಮೂರನೆಯ ಸೋಮೇಶ್ವರನ 'ಮಾನಸೋಲ್ಲಾಸ' (೧೧೨೯)

(i) ಸಾ ಕರ್ಣಾಟ ವರಾಟೀ ಸ್ಯಾತ್ ಈಷತ್ ಸಂಪ್ರತಿಪಾದಿಕಾ । (೪-೧೬-೧೬೭)

(ii) ಕರ್ಣಾಟ ಭಾಷಯಾ ಗೇಯಾ ಪ್ರಾಣಾಕ್ಷರಸಮನ್ವಿತಾ
ಷಟ್ಪದೀ ತಾಲರಹಿತಾ ಸಾನುಪ್ರಾಸಾ ಕಥಾತ್ಮಿಕಾ ॥ (೪-೧೬-೨೮೮)

(iii) ಕರ್ಣಾಟ ಭಾಷಯೈವಾಸೌ ಗೀಯತೇ ಕಂದಸಂಜ್ಞಕಃ
ಸ ತಾಲಶೂನ್ಯಃ ಪದ್ಯೈಶ್ಚ ಬಿರುದೈಶ್ಚ ಸಮನ್ವಿತಃ ॥ (೪-೧೬-೨೯೨)

(iv) ಕರ್ಣಾಟ ಭಾಷಯಾ ಯಸ್ತು ಬಿರುದೈಶ್ಚ ಸಮನ್ವಿತಃ
ಗೀಯತೇ ವರ್ಣತಾಲೇನ ಸ ತು ವರ್ಣಃ ಪ್ರಕೀರ್ತಿತಃ ॥ (೪-೧೬-೨೯೩)

(೫) ಕರ್ಣಾಟ ಭಾಷಯಾ ಯಸ್ತು ಷಟ್ಪದೀ ಪಠನೋದ್ಯತಃ
ಕಿನ್ನರೀ ಸ್ವರಸಂವಾದೀ ಧ್ವನಿರ್ಯಸ್ಯ ವಿರಾಜತೇ ॥ (೪-೧೬-೧೪೨೫)

ನಾಲ್ಕನೆಯ ಜಗದೇಕಮಲ್ಲನ 'ಸಂಗೀತ ಚೂಡಾಮಣಿ' (ಸು. ೧೧೬೦)

(i) ಸ್ವಸ್ಥಾನೇ ತಾಡಿತಃ ಪೂರ್ಣಃ ಷಡ್ಜಾಂಶನ್ಯಾಸಸಂಯುತಃ
ಪ್ರೋಕ್ತಃ ಕರ್ಣಾಟ ಗೌಡೋಽಯಂ ಪ್ರತಾಪಪೃಥಿವೀಭುಜಾ ॥

(ii) ಕರ್ಣಾಟ ಭಾಷಯಾ ಗೇಯಾ ನಾದಾಢ್ಯಾ ತ್ರಿಪದೀ ಮತಾ ।

(iii) ಕರ್ಣಾಟ ಭಾಷಯಾ ಗೇಯಾ ಷಟ್ಪದೀ ತಾಲವರ್ಜಿತಃ ।
(ಮೈಸೂರು ವರಲಕ್ಷ್ಮೀ ಆಕೆಡಮಿಯ ಹಸ್ತಪ್ರತಿಯಿಂದ)

ಶಾರ್ಙ್ಗದೇವನ 'ಸಂಗೀತ ರತ್ನಾಕರ' (ಸು. ೧೨೩೦)

(i) ರೀತಿಃ ಕರ್ಣಾಟಿಕಾ ಲಾಟೀ ಪಾಂಚಾಲೀತಿ ಬಭಾಷಿರೇ (೨-೨-೪)

(ii) ಕರ್ಣಾಟೋ ದೇಶವಾಲಶ್ಚ ತೌರುಷ್ಕ ದ್ರಾವಿಡಾವಿತಿ (೨-೨-೧೮)

(iii) ಅಂಗಂ ಕರ್ಣಾಟ ಬಂಗಾಲಂ ವೇಗರಂಜ್ಯಾಃ ಪವರ್ಜಿತಮ್
ಗಾಂಶು ಸಾಂತಂ ಚ ಶೃಂಗಾರೇ ವಕ್ತಿ ಶ್ರೀಕರಣೇಶ್ವರಃ ॥
(೨-೨-೧೨೬)

(iv) ಕರ್ಣಾಟಾದ್ಯಾಃ ಸಜಾತೀಯಾಸ್ತ್ವೇಷ್ವೇಕಾಂಶೋಽಪರತ್ರ ಯಃ ।
(೩-೧೩೬)

(v) ವರಾಟ ಲಾಟ ಕರ್ಣಾಟ ಗೌಡ ಗುರ್ಜರ ಕೋಂಕಣ್ಯೈಃ । (೨-೨೨೦)

(vi) ಕರ್ಣಾಟ ಲಾಟ ಗೌಡಾಂಧ್ರ ದ್ರಾವಿಡಾನಾಂ ತು ಭಾಷಯಾ
ದೇಶಾಖ್ಯೈಲಾ ಬುಧೈಃ ಪಂಚಪ್ರೋಕ್ತಾ ಮಂಠಾದಿ ತಾಲತಃ ॥(೪-೧೧೪)

(vii) ಕರ್ಣಾಟೈಲಾದಿ ಮಧ್ಯಾಂತವರ್ತ್ಯನುಪ್ರಾಸಭೂಷಿತಾ । (೪-೧೧೫)
(viii) ಭದ್ರಾವತೀ ಭದ್ರಲೇಖಾ ಸಾ ಸ್ಯಾತ್ ಕರ್ಣಾಟ ಸಂಮತಾ ।
(೪-೧೨೩)

(ix) ಬಿರುದೈರ್ವರ್ಣತಾಲೇನ ವರ್ಣಃ ಕರ್ಣಾಟ ಭಾಷಯಾ (೪-೧೮೧)
(x) ಕರ್ಣಾಟಾದಿ ಪದ್ಯೈಃ ಪಾಟೈರ್ಬಿರುದೈಸ್ತಾಲವರ್ಜಿತಃ ॥
ಆರ್ಯಾಗೀತೌ ರಸೇ ವೀರೇ ಕಂದಃ ಸ್ಯಾತ್ ಪಾಟಮುಕ್ತಿಕಃ ।
(೪-೨೦೪, ೨೦೫)

(xi) ಕರ್ಣಾಟ ಭಾಷಯಾ ತಾಲವರ್ಜಿತಾ ನಾದಮುಕ್ತಿಕಾ
ಭೇದಾ ವೇದ್ಯಾಸ್ತ್ರಿಪದ್ಯಾದೇಶ್ಛಂದೋಲಕ್ಷ್ಣೆ ಭೂರಯಃ ॥ (೪-೨೭೪)

(xii) ಗೌಂಡಲ್ಯಾ ಮಂಡಲಂ ಪ್ರೋಕ್ತಂ ತಜ್ಞೈಃ ಕರ್ಣಾಟದೇಶಜಮ್ ।
(೭-೧೨೭೭)

(xiii) ಕರ್ಣಾಟಮಂಡಲೈರ್ಯುಕ್ತಾಸ್ತತ್ರ ಸ್ಯುಃ ಸಾಂಪ್ರದಾಯಿಕಾಃ । (೭-೧೨೭೯)

ಸುಧಾಕಲಶನ 'ಸಂಗೀತೋಪನಿಷತ್ ಸಾರೋದ್ಧಾರ' (೧೩೫೦)
ಕರ್ಣಾಟೀ ಹಸ್ತಿಗಮನಾ ನೀಲಾಂಗೀ ರಕ್ತಚೀವರಾ
ಹಂಸಯಾನಾ ಪೀತವಸ್ತ್ರಾ ರಕ್ತ ಹಂಸಾ ಪ್ರವಾಲಭಾ ॥ (೩-೯೩)

'ರಾಗಾರ್ಣವ', ಶಾರ್ಙ್ಗಧರನ 'ಶಾರ್ಙ್ಗಧರ ಪದ್ಧತಿ'ಯಲ್ಲಿ (ಸು ೧೩೫೦) ಉದ್ಧೃತ
ನಟನಾರಾಯಣಃ ಪೂರ್ವಗಾಂಧಾರಃ ಸಾಲಗಸ್ತಥಾ
ತತಃ ಕೇದಾರ ಕರ್ಣಾಟೌ ಪಂಚೈತೇ ನಾಟಸಂಶ್ರಯಾಃ ॥ (೨೦೫೫)

ಶಾರ್ಙ್ಗದೇವನ 'ಸಂಗೀತರತ್ನಾಕರ'ದ ಕಲ್ಲಿನಾಥಕೃತ 'ಸಂಗೀತಕಲಾನಿಧಿ' ವ್ಯಾಖ್ಯಾನ (ಸು. ೧೪೪೦)

(i) ಅಸ್ತೇ ಕರ್ಣಾಟದೇಶಃ ಸುವಿಮಲಯಶಸಾ ಪೂರಿತಾಶಃ ಪೃಥಿವ್ಯಾಂ
ಕಾವೇರೀ ಕೃಷ್ಣವೇಣೀ ತರಲತರತರಂಗಾರ್ದ್ರದಕ್ಷೋತ್ತರಾಂಸಃ
ಹೃಷ್ಟಃ ಸಂಶ್ಲಿಷ್ಟ ಪೂರ್ವಾಪರ ನಿಜವಪುಷಾ ಪ್ರಾಚ್ಯಪಾಶ್ಚಾತ್ಯವೇಲೇ
ಪಾಥೋ ನಾಥ ಪ್ರಸಕ್ತಿ ಪ್ರಚಲಿತ ನಿಖಿಲಸ್ವಾಂಗ ಸೌಭಾಗ್ಯಲಕ್ಷ್ಮೀಃ ॥

(ii) ಕರ್ಣಾಟಾಘಾಟಲಕ್ಷ್ಮೀವರಣಪರಿಲಸತ್ ಪೌರುಷೋತ್ಕರ್ಷಶಾಲೀಪ್ರೌಢಃ
ಶ್ರೀದೇವರಾಯೋ ವಿಜಯನೃಪಸುತೋ ಯಾದವಾನಾಂ ವರೇಣ್ಯಃ

(iii) ತಾನೇವ ಲೋಕೇ 'ವಿದ್ಯಾವಂತರು' ಇತಿ ಕರ್ಣಾಟಾ ವದಂತಿ
(೬-೯೭೯ರ ವ್ಯಾಖ್ಯಾನ)

ಪುಂಡರೀಕ ವಿಠಲನ 'ಸದ್ರಾಗಚಂದ್ರೋದಯ' (ಸು. ೧೫೫೦)

(i) ಇತಿ ಶ್ರೀಕರ್ಣಾಟಜಾತೀಯ ಪುಂಡರಿಕವಿಠಲ ವಿರಚಿತೇ ಸದ್ರಾಗ ಚಂದ್ರೋದಯೇ
(ಪ್ರಕರಣಾಂತ ಸಮಾಪ್ತಿವಾಕ್ಯ)

(ii) ಶುದ್ಧೌ ಸಮೌ ಪಂಚಮಕೋ ವಿಶುದ್ಧಃ
ಶುದ್ಧೋ ನಿಷಾದೋ ಲಘುಮಧ್ಯಮಶ್ಚ
ನಿಗೌ ಯದಾ ತ್ರಿಶ್ರುತಿಕೌ ಭವೇತಾಂ
ಕರ್ಣಾಟ ಗೌಡಸ್ಯ ತದೇಷಮೇಲಃ ॥ (ಪು. ೧೮)

(iii) ನ್ಯಂಶಗ್ರಹಾಂತೋ ರಿಧವರ್ಜಿತೋ ವಾ
ಪೂರ್ಣಸ್ತು ಕರ್ಣಾಟ ಇನಾಸ್ತಶೋಭೀ ॥ (ಪು. ೧೮)

(iv) ಕರ್ಣಾಟೇ ಶೈವಗಂಗಾಭಿಧ ನಗನಿಕಟೇ ಸಾತನೂರ್ವಾಹ್ವಯೋ ಯೋ
ಗ್ರಾಮಸ್ತತ್ರಾಗ್ರಜನ್ಮಪ್ರವರ ಸುನಿಕರಾಜ್ಞಾಮದಗ್ನ್ಯೋಽಟಿಽಸ್ತಿ ವಂಶಃ
(ಗ್ರಂಥಾಂತ ಸಮಾಪ್ತಿವಾಕ್ಯ)

ಶ್ರೀಕಂಠನ 'ರಸಕೌಮುದೀ' (ಸು. ೧೫೭೫)

(i) ನಿಷಾದತ್ರಿತಯಂ ಯತ್ರ ಸಂಪೂರ್ಣೋ ವಾ ರಿಧೋಜ್ಝಿತಃ
ದಿನಾಂತೇ ಗೀಯತೇ ನಿತ್ಯಂ ಕರ್ಣಾಟೋಽಯಂ ಸುಖಾವಹಃ ॥
(೨-೧೨೭)

(ii) ರಾಜೀವನೇತ್ರಃ ಪೃಥುಲಾತಪತ್ರಃ
ಪದ್ಮಂ ವಹನ್ ದಕ್ಷಿಣಹಸ್ತ ಕೇನ
ಸ್ತುತ್ಯೋ ನೃಪಃ ಕಿನ್ನರಚಾರಣಾದ್ಯೈಃ
ಕರ್ಣಾಟರಾಗಃ ಕರವಾಲಪಾಣಿಃ ॥ (೨-೧೨೮)

(iii) ಕರ್ಣಾಟಪ್ರಮದಾ ಮನೋಜಸಮದಾ ತಾಂಬೂಲಭಾಸ್ವದ್‌ರದಾ
ಪ್ರಾಣೇಶಸ್ಯ ಸುಖಪ್ರದಾ ರತಿರಣೇ ಗಂಭೀರನಾಭೀಹ್ರದಾ
ಪುಷ್ಪಶ್ರೇಣಿವಿಚಿತ್ರಚಾರುಕಬರೀ ರಾಗಾಂಗಹಾರೋಜ್ಜ್ವಲಂ
ಲಾಸ್ಯಂ ಹಾರಿ ಕರೋತಿ ಹಾರವಿಲಸದ್ ವಕ್ಷೋರುಹಾ ನರ್ತಕೀ ॥
(೫-೨೭)

ಚತುರ ದಮೋದರನ 'ಸಂಗೀತದರ್ಪಣ' (ಸು. ೧೬೨೦)

(i) ತ್ರಿನಿಷಾದೋಽಥ ಸಂಪೂರ್ಣಃ ನಿಷಾದೋ ವಿಕೃತೋ ಭವೇತ್
ಮಾರ್ಗೀಯಂ ಮೂರ್ಛನಾ ಜ್ಞೇಯಾ ಕರ್ಣಾಟೇ ಸುಖಪ್ರದಾ ॥
(೨-೨೩೯)

(ii) ಕರ್ಣಾಟೇ ಕಮಲೇಕ್ಷಣಾ ಸುರತರೋರ್ಮೂಲೇ ವಸಂತೀ ಮುಹುಃ
ಶ್ವಾಸೋಚ್ಛ್ವಾಸವಿಭಿನ್ನಮೋದಮಭಿತಃ ಸಂಪೂರಯಂತೀ ದಿಶಃ

ಕೀರಂ ನೀಲನಿಚೋಲಜುಷ್ಟಮಭಿತಃ ಸ್ವರ್ಣಾಭಯಾ ಬಿಭ್ರತೀ
ಕಾಂತಾರೇ ಪಿಕಕೂಜಿತೇ ಸ್ವದಯಿತಂ ಸಾಂಕೇತಿಕೇ ಪಶ್ಯತಿ ॥

(೨-೨೪೦)

(iii) ಕರ್ಣಾಟಭಾಷಯಾ ಬದ್ಧೋ ಬಿರುದೈರ್ವರ್ಣತಾಲತಃ
ವರ್ಣಸಂಜ್ಞಃ ಪ್ರಬಂಧೋಽಯಂ ತ್ರಿವಿಧಸ್ತಾಲಭೇದತಃ ॥ (೪-೪೨೮)

ಗೋವಿಂದ ದೀಕ್ಷಿತನ 'ಸಂಗೀತಸುಧಾ (ನಿಧಿ)' (ಸು. ೧೬೨೦)

(i) ಕರ್ಣಾಟಕಾಂ ತಾಮಿಹ ಲಕ್ಷಯಾಮೋ
ನ್ಯಾಸೋ ಗ್ರಹೋ ಯತ್ರ ತು ತಾರಷಡ್ಜಃ
ಸ ಧೈವತಾಂಶಾ ಹನುಮತ್‌ಪ್ರಿಯಾ ಚ
ಸಮಸ್ವರಾ ಮಂದ್ರಗ ಮಧ್ಯಮಾ ಚ ॥ (೨-೩೧೬)

(ii) ಕರ್ಣಾಟಸಿಂಹಾಸನಭಾಗ್ಯ ವಿದ್ಯಾ
ರಣ್ಯಾಭಿಧ ಶ್ರೀಚರಣಾಗ್ರಣೀಭ್ಯಃ
ಆರಭ್ಯರಾಗಾನ್ ಪ್ರಚುರಪ್ರಯೋಗಾನ್
ಪಂಚಾಶತಾನ್ ಚಾಕಲಯೇ ಷಡಂಗಾನ್ ॥ (೨-೪೧೩)

(iii) ವಕ್ಷ್ಯಾಮಹೇ ಕನ್ನಡಗೌಲರಾಗಂ
ಸಾಮಂತಮೇಲಃ ಖಲು ತಸ್ಯ ಮೇಲಃ ॥ (೨-೧೨೦೪)

(iv) ಏವಂ ಪ್ರಕಾರೈಃ ಖಲು ಪಂಚಭಿಃ ಸ್ಯು-
ಸ್ತಾ ವಿಂಶತಿಃ ಕನ್ನಡಪೂರ್ವಕೈಲಾ ॥ (೪-೩೪೬)

(v) ನಿರೂಪಯಿತ್ವಾ ಖಲು ಕನ್ನಡೈಲಾ
ಲಾಟಾದಿಮೈಲಾಮಥ ಲಕ್ಷಯಾಮಃ ॥ (೪-೩೪೭)

ವೇಂಕಟಮಖಿಯ 'ಚತುರ್ದಂಡೀ ಪ್ರಕಾಶಿಕಾ' (ಸು. ೧೬೫೦)

(i) ಅಥ ಕಂದಪ್ರಬಂಧಸ್ಯ ಲಕ್ಷ್ಮ ಸಮ್ಯಕ್ ಪ್ರಚಕ್ಷ್ಮಹೇ
ಯಸ್ತು ಕರ್ಣಾಟಭಾಷಾದ್ಯೈಃ ಪದ್ಯೈಃ ಸಂಸ್ಕೃತವರ್ಜಿತೈಃ ॥ (೯-೨೨೮)

(ii) ಆದ್ಯಮರ್ಧಂ ಸ್ವರಾಂತಂ ಸ್ಯಾತ್ ತೇನಾಂತಂ ಸ್ಯಾದ್ ದ್ವಿತೀಯಕಂ
ತೇನಕನ್ಯಾಸ ಸಂಯುಕ್ತಾ ಗೇಯಾ ಕರ್ಣಾಟಭಾಷಯಾ ॥ (೯-೨೯೮)

(iii) ದೇಶೈಲಾ ದೇಶಭಾಷಾಭಿರ್ನಿಬದ್ಧಾಃ ಪರಿಕೀರ್ತಿತಾಃ
ಕರ್ಣಾಟಲಾಟಗೌಡಾಂಧ್ರದ್ರವಿಡಾನಾಂ ಪ್ರಭೇದತಃ ॥ (೯-೪೫೭)

(iv) ಸಾ ಚ ಪಂಚವಿಧಾ ಪ್ರೋಕ್ತಾ ತತ್ರ ಕರ್ಣಾಟಭಾಷಯಾ
ನಿಬದ್ಧಾ ಯಾ ಭವೇದೇಷಾ ಕರ್ಣಾಟೈಲೇತಿ ಕಥ್ಯತೇ ॥ (೯-೪೫೮)

ಮುದ್ದು ವೇಂಕಟಮಖಿಯ 'ರಾಗಲಕ್ಷಣ' (ಸು. ೧೭೦೦)

(i) ಭಾಷಾಂಗರಾಗಾಃ ಕಾಂಭೋಜೀ ಕನ್ನಡೇಶಮನೋಹರೀ
ಸೊರಟಶ್ಚ ಯೆರುಕುಲಕಾಂಭೋಜ್ಯತಾಣ ಇತ್ಯಪಿ ॥ (೧-೩೪)

(ii) ಕನ್ನಡರಾಗಃ ಸಂಪೂರ್ಣಶ್ಚಾರಾಹೋ ರಿಷಭಃ ಕ್ವಚಿತ್ । (೨-೯೭)

ತುಳಜೇಂದ್ರನ 'ಸಂಗೀತಸಾರಾಮೃತ' (ಸು. ೧೭೩೦)

(i) ಶ್ರೀರಾಗ ಮೇಲಸಂಜಾತೋ ರಾಗಃ ಕನ್ನಡಗೌಲಕಃ
ನಿನ್ಯಾಸಾಂಶಗ್ರಹೋಪೇತಃ ಸಪ್ತಸ್ವರಸಮನ್ವಿತಃ ॥ (೧೦, ಪು. ೭೩)

(ii) ಮೇಲಾನ್ ಮಾಲವಗೌಲೀಯಾದ್ ಬಂಗಾಲಃ ಕನ್ನಡಾಹ್ವಯಃ
ಜಾತೋ ಭಾಷಾಂಗೋ ನಿವರ್ಜಃ ಪ್ರಾತರ್ಗೇಯಶ್ಚ ಗ ಗ್ರಹಃ ॥
(೧೦, ಪು. ೮೫)

(iii) ಕಾಂಭೋಜೀ ಮೇಲಸಂಜಾತೋ ರಾಗಃ ಕನ್ನಡ ಸಂಜ್ಞಕಃ
ಸಂಪೂರ್ಣೋ ಸಗ್ರಹನ್ಯಾಸಃ ಸಾಯಂ ಸೋಽಯಂ ಪ್ರಗೀಯತೇ ॥
(೧೦, ಪು. ೯೯)

(iv) ತೇನ ವಾಗ್ಗೇಯಕಾರೇಣ ಕೃತಃ ಶ್ರೀವರ್ಧನಾಭಿಧಃ
ಜಯಕರ್ಣಾಟಧಾರೇತಿ ಪ್ರಬಂಧೋ ಲಕ್ಷಣಾನ್ವಿತಃ ॥
(೧೨, ಪು. ೧೫೮)

ಗೋವಿಂದಾಚಾರ್ಯನ 'ಸಂಗ್ರಹಚೂಡಾಮಣಿ' (ಸು. ೧೭೫೦)

(i) ಮೇಲಾಜ್ಜಾತಃ ಖರಹರಪ್ರಿಯಾತ್ ಕನ್ನಡಗೌಲಕಃ
ನಿನ್ಯಾಸಂ ನ್ಯಂಶಕಂ ಚೈವ ನಿಷಾದಗ್ರಹಮುಚ್ಯತೇ ॥ (೩-೩)

(ii) ಕರ್ಣಾಟ ದೇವಗಾಂಧಾರೀ ಕೀರವಾಣಿ ಸಮುದ್ಭವಾ
ಸನ್ಯಾಸಂ ಸಾಂಶಕಂ ಚೈವ ಸ ಷಡ್ಜಗ್ರಹಮುಚ್ಯತೇ ॥ (೩-೪)

(iii) ಕನ್ನಡೋ ಜನಿತೋ ಧೀರಶಂಕರಾಭರಣಾತ್ತಥಾ
ಸನ್ಯಾಸಂ ಸಾಂಶಕಂ ಚೈವ ಸ ಷಡ್ಜಗ್ರಹಮುಚ್ಯತೇ ॥ (೩-೧೫)

ಕಾಶೀನಾಥ ಅಪಾ ತುಲಸಿಯ 'ಸಂಗೀತ ಸುಧಾಕರ' (೧೯೧೬)

ತದಪಿ ದ್ವಿವಿಧಂ ಪ್ರೋಕ್ತಂ ದಕ್ಷಿಣೋತ್ತರಭೇದತಃ
ಕರ್ಣಾಟಕಂ ದಕ್ಷಿಣೇಸ್ಯಾದ್ಧಿಂದುಸ್ಥಾನೀ ತಥೋತ್ತರೇ ॥

ಅಜ್ಞಾತಕರ್ತೃಕ 'ರಾಗಲಕ್ಷಣ'

ಅಧಿಕಾರಿ ಖರಹರಪ್ರಿಯಾತ್ ಕನ್ನಡಗೌಲಕಃ
ಸನ್ಯಾಸಂ ಸಾಂಶಕಂ ಚೈವ ಸ ಷಡ್ಜಗ್ರಹಮುಚ್ಯತೇ ॥ (ಪು. ೨೮)

ಕನ್ನಡ ಸಾಹಿತ್ಯದ ಉಲ್ಲೇಖಗಳು

ಕಾವ್ಯನಾಟಕಾದಿ ಸಾಹಿತ್ಯ ಗ್ರಂಥಗಳಲ್ಲಿಯೂ ಲಕ್ಷಣ ಮತ್ತು ಶಾಸ್ತ್ರಗ್ರಂಥಗಳಲ್ಲಿಯೂ 'ಕಣಾ(ರ್ನಾ)ರ್ಟಕ' ಶಬ್ದ ಧಾರಾಳವಾಗಿ ಪ್ರಯೋಗವಾಗಿದ್ದು, ಸಂದರ್ಭೋಚಿತವಾಗಿ ಅದು ದೇಶವಾಚಕವೋ ಭಾಷಾವಾಚಕವೋ ಆಗಿರುತ್ತದೆ. ಕನ್ನಡನಾಡು ನುಡಿಗಳನ್ನು ಕುರಿತಾಗ, 'ಕನ್ನಡ' ಎಂಬ ಶಬ್ದದ ಬಳಕೆಗಿಂತ 'ಕಣಾ(ರ್ನಾ)ರ್ಟಕ' ಶಬ್ದದ ಬಳಕೆಯೇ ಪ್ರಾಚೀನ ಸಾಹಿತ್ಯದಲ್ಲಿ ರೂಢವಾಗಿದ್ದಂತೆ ತೋರುತ್ತದೆ. ಸಂಸ್ಕೃತ ಸಮಾಸಶಬ್ದದ ಘಟಕವಾಗಿ ಅದು ಸಮಂಜಸವಾಗಿ ಹೊಂದುವುದೆಂಬ ಒಂದೇ ಕಾರಣವಲ್ಲದೆ, ಆ ಶಬ್ದ ಪ್ರಾಚೀನ ಕನ್ನಡ ಕವಿಗಳ ಒಂದು ಅಭಿಮಾನದ ಸಂಕೇತವೂ ಆಗಿದ್ದಿತೆಂದು ನಾವು ತಿಳಿಯ ಬಹುದಾಗಿದೆ. ಇಲ್ಲಿಯ ಸಂಗ್ರಹ ಅಸಮಗ್ರವಾದುದು ; ಈ ಸಂಗ್ರಹವನ್ನು ಇನ್ನೂ ವಿಸ್ತರಿಸುವುದು ಸಾಧ್ಯವಿದೆ.

(೧) ಕಾವ್ಯನಾಟಕಾದಿ ಸಾಹಿತ್ಯಗ್ರಂಥಗಳು

'ವಡ್ಡಾರಾಧನೆ' (ಸು. ೯೨೦)

ಸ್ವಯಂವರಸಾಲೆಯೊಳ್ ನೆರೆದಿರ್ದ್ದರಂಗ ವೆಂಗಿ ಕಳಿಂಗ ಕಾಂಭೋಜ ಕಾಶಿ ಕೌಶಲ ಪಲ್ಲವ ಪಾಂಚಾಳ ಮಗಧ ಮಾಳವ ವತ್ಸ ಮಹಾರಾಷ್ಟ್ರ ಕುಣಾಳ ಕರುಜಾಂಗಣ ದ್ರವಿಳ ಲಾಳ ಕರ್ನ್ನಾಟ ಗೌಳ ಸುಹುಮ ಸುರಕ್ತಾನ ಸೂರಸೇನೀಯ ಪ್ರಭೃತಿ ನಾನಾ ವಿಷಯಾಧಿಪತಿಗಳಪ್ಪರಸುಗಳೆಲ್ಲಂ ನೆರೆದಿರ್ದ್ದಲ್ಲಿಯಾರುಮಂ ಮೆಚ್ಚದೆ ದಾಂಟಿಪೋಗಿ.....

(ಸುಕೌಶಳಸ್ವಾಮಿಯ ಕಥೆ, ಪು. ೪೦-೪೧, ೧೯೭೦ರ ಪರಿಷ್ಕರಣ)

ಪಂಪಕವಿಯ 'ಆದಿಪುರಾಣ' (೯೪೧)

(i) ಕಾಶಿ ಕೌಸಲ ಕಳಿಂಗ ವಂಗ ಕಾಶ್ಮೀರ ಕರಹಾಟ ಕರ್ನಾಟ ಚೋಳ ಕೇರಳ ಪಾಂಚಾಲ ಮಾಳವ ಮಹಾರಾಷ್ಟ್ರ ಸೌರಾಷ್ಟ್ರ ವನವಾಸ್ಯಾಂಧ್ರ ಕಾಂಭೋಜ ಬಾಹ್ಲಿಕ ತುರುಷ್ಕ ಕೇಕಯ ಸೌವೀರಾಭೀರ ಚೇರ ಶೂರಸೇನ ಪರಾಂತಿಕ ವಿದೇಹ ಸಿಂಧು ಗಾಂಧಾರ ಕುರುಜಾಂಗಣ ವಿದರ್ಭ ವತ್ಸಾವಂತಿ ವನಭೇದಿ ಪಲ್ಲವದಶಾರ್ಣ ಕಚ್ಛ ಮಹಾಕಚ್ಛ ಮಗಧಾವನಿ ರಮ್ಯಕ ಕುರು ಸಮುದ್ರಕಾದಿ ವಿವಿಧ ವಿಷಯಂಗಳುಮಂ

(ಆಶ್ವಾಸ ೮-ಪದ್ಯ ೬೩ ವ; ೧೯೦೦ರ ಪರಿಷ್ಕರಣ)

(ii) ಮತ್ತಿತ್ತ ಕೋಮಳ ಶ್ಯಾಮಳಚ್ಛಾಯಾನಿಕಾಯಮುಂ ಉಪನಿಟಿಲ ಘಟಿತ

ಕುಟಿಲಜೂಟಬಂಧಮುಮಾ ಕೂರ್ಪರರಚಿತ ಕಾಳಾಯುಸವಳಯಭಯಂಕರ ಕರದ್ವಯಮುಮಭಿನವಶುಂಭತ್ಕೌಸುಂಭವೇಣಿಕಾಬಂಧೋಲ್ಲಸನ್ಮಲ್ಲಿ ಕಾಮುಕುಳಾಕಾರ ವಿತಸ್ತಿಮಾತ್ರಾಸಿಧೇನು ಕೋಶಮುಮನೇಕರುಚಿವಿಚಿತ್ರವೇತ್ರ ವಿಶಿಖಾತಿರುಚಿರ ಪ್ರಾಂತಕುಂತ ಮನುತ್ತರೀಯಕಂಟಕಮತಿಸುಭಟಮದೋತ್ಕಂಠಮಿದು ಕರ್ಣಾಟ ಬಲಂ (ಆಶ್ವಾಸ ೧೩-ಪದ್ಯ ೪೫ ವ; ೧೯೦೦ರ ಪರಿಷ್ಕರಣ)

ಪಂಪಕವಿಯ 'ವಿಕ್ರಮಾರ್ಜುನವಿಜಯ' (೯೪೧)

(i) ಆಂಧ್ರೀಕುಚಕಲಶಪಲ್ಲವಂ ಕರ್ಣಾ (ಟೀ) ಕರ್ಣಪೂರಂ ಲಾಟೀಲಲಾಮಂ ಕೇರಳೀಕೇಳಿಕಂದರ್ಪಂ ಸಂಸಾರಸಾರೋದಯಂ ಮಱುವಕ್ಕದಲ್ಲಱಿಂ ನೋಡುತ್ತೆ ಗೆಲ್ವಂ ಪಾಣ್ಬರಂಕುಸಂ ಅಮ್ಮನ ಗಂಧವಾರಣಂ ಪಡೆಮೆಚ್ಚೆ ಗಂಡಂ ಪ್ರಿಯಗಳ್ಳಂ ಗುಣನಿಧಿ ಗುಣಾರ್ಣವಂ ಸಾಮಂತಚೂಡಾಮಣಿಯೆಂದಿಂತಿವು ಮೊದಲಾಗೆ ಪಲವುಮಷ್ಟೋತ್ತರಶತನಾಮಂಗಳನಿಟ್ಟು ವಿಶೇಷಾಶೀರ್ವಚನಂಗಳಿಂ ಪರಸಿ
(ಆಶ್ವಾಸ ೧-೧೪೮ ವ.)

(ii) ಮುಡಿದು ತಂದಿಟ್ಟ ಪೊಸನೆಯ್ದಿಲ ಕಾವನಾವಗಂ ಗೆಲ್ದ ರತ್ನಕುಂಡಲಂಗಳ ಪೊಳಪನೊಳಕೊಂಡಂತೆ ನಸುನೇಲ್ವ ಕರ್ಣಾಟೀಕರ್ಣಪೂರನ ಪಾಲೆಗಳುಂ ಸರಸ್ವತಿಯಾಡುವ ಲೀಲಾಂದೋಳದಂತಾದುವು (ಆಶ್ವಾಸ-೨-೩೯ ವ.)

(iii) ಮತ್ತಂ ಪ್ರಭದ್ಯೆಕಬಲಮುಮಂಗ ವಂಗ ಕಳಿಂಗ ಕೊಂಗ ಕೊಂಕಣ ಗೊಲ್ಲ ಕಾಂಭೋಜ ಮಗಧ ಸೌರಾಷ್ಟ್ರ ವರಾಟ ಲಾಟ ಕರ್ಣಾಟ ಕರಹಾಟ ಮಳಯ ಮಾಳವ ನೇಪಾಳ ಪಾರಿವ ಪಾರಿಯಾತ್ರ ಬರ್ಬರ ಕೋಸಳ ಕಾಶಿ ಕಾಶ್ಮೀರ ಕೌಶಿಕಾಂಧ್ರ ದ್ರವಿಳ ಗಜಮುಖಾಶ್ವ ಮುಖೋಷ್ಟ್ರಮುಖ ಖರಮುಖ ಮೇಷಮುಖ ಲಂಬಕರ್ಣ ಹಸ್ತಿ ಕರ್ಣಾಶ್ವಕರ್ಣ ತುರುಷ್ಕ ಪ್ರವರ ನಾನಾ ದ್ವೀಪದೇಶಾಧೀಶ್ವರರುಂ
(ಆಶ್ವಾಸ ೯-೯೫ ವ.)

ನಾಗವರ್ಮನ 'ಕಾದಂಬರಿ' (ಸು. ೧೦೦೦)

(i) ಸತ್ಕೃತಿ ಸಂಸ್ಕೃತದಿಂದೆ ಜ । ಗತ್ಕೌತುಕಮಾಗಿ ಮತ್ತೆ ಕರ್ಣಾಟದೊಳಂ
ಸತ್ಕವಿನಿವಹಂ ಪೊಗೞೆ ಚ। ಮತ್ಕೃತಿಯಂ ಪಡೆದು ಸೊಬಗುವಡೆ ದತ್ತೀಗಳ್॥
(ಆಶ್ವಾಸ ೧-ಪದ್ಯ ೫)

(ii) ಕ್ಷಿತಿಯೊಳ್ ಸೌವರ್ಣಕಾಂತಿಪ್ರಸರಮಸದಳಂ ಪರ್ವೆ ಸಂದಿರ್ದುದಂತಾ
ಕೃತಿ ಮುನ್ನಂ ಬಾಣವಾಣೀಪ್ರಿಯನ ವಚನದಿಂ ಮತ್ತೆ ಕರ್ಣಾಟಭಾಷಾ
ಚತುರತ್ವಂ ಪೊರ್ದೆ ಕಾದಂಬರಿ ಪಸರಿಸಿ ರಾಜೇಂದ್ರ ಚಂದ್ರಾಂಕನೊಳ್ ಸಂ
ಗತಿವೆತ್ತಾದಂ ತ್ರಿಲೋಕೀಸಹಚರಿಯೆನೆ ತಾಂ ಸುಂದುದಾಚಂದ್ರತಾರಂ ॥
(ಆಶ್ವಾಸ ೯-ಪದ್ಯ ೯೫)

ದುರ್ಗಸಿಂಹನ 'ಕರ್ಣಾಟಕ ಪಂಚತಂತ್ರ' (೧೦೩೧)

ಆತನ ವಿಶುದ್ಧಗುಣಸಂ । ಘಾತಾತ್ಮನ ಜನ್ಮಭೂಮಿ ಕರ್ಣಾಟಕಧಾ
ತ್ರೀತಿಲಕಮಖಿಳಜಗತೀ । ಖ್ಯಾತಂ ಕಿಸುಕಾಡ ನಾಡು ಸೊಗಯಿಸಿ ತೋರ್ಕುಂ॥
(೧-೪೨)

ನಾಗಚಂದ್ರನ 'ರಾಮಚಂದ್ರಚರಿತ ಪುರಾಣ' (ಸು. ೧೧೦೦)

ಕೃತವಿದ್ಯರ್ ಸಮಚಿತ್ತರಾಗಿ ಪದಪಿಂದಾರಯ್ಯೆ ಕರ್ಣಾಟ ಸಂ
ಸ್ಕೃತ ಕಾವ್ಯಂಗಳೊಳರ್ಥದಿಂ ರಚನೆಯಿಂ ನೇರ್ಪಟ್ಟು ವಿದ್ವಚ್ಚಮ
ತ್ಕೃತಿಯಪ್ಪಂತಿರೆ ನಾಗಚಂದ್ರವಿಬುಧಂ ಪೇಳ್ದಿಂದದಿಂದಾದ್ಯರ
ದ್ಯತನಂ ಪೇಳ್ದಭಿರಾಮ ರಾಮಕಥೆಯಂ ಸೈಪಿಂಗಡರ್ಪಾಗನೇ ॥
(ಆಶ್ವಾಸ ೧೬-ಪದ್ಯ ೯೮)

ಕರ್ಣಪಾರ್ಯನ 'ನೇಮಿನಾಥ ಪುರಾಣ' (ಸು. ೧೧೬೦)

ಕರಹಾಟಾಭೀರ ಕರ್ಣಾಟಕ ಮಗಧ ಕಳಿಂಗಾಂಗ ಕಾಶ್ಮೀರ ಸದ್ಗೂ
ರ್ಜರ ಕೇಯೂರಾಂಧ್ರಲಾಟ ದ್ರಮಿಳ ಕುರು ಮಹಾರಾಷ್ಟ್ರ ಬಾಹ್ಲೀಕದೇಶೋ
ತ್ಕರದೊಳ್ ಧರ್ಮಾಮೃತಾಸಾರಮನೆ ಕಱೆಯುತುಂ ದ್ವಾರವತ್ಯಾಖ್ಯ ಭಾಸ್ವ
ತ್ಪುರಮಂ ಬಂದೆಯ್ದಿ ನಿಂದಂ ಪರಮಜಿನಮತಕ್ಷೀರವಾರಾಶಿಚಂದ್ರಂ ॥
(ಆಶ್ವಾಸ ೧೩-ಪದ್ಯ ೧೦೩)

ಇಮ್ಮಡಿ ಗುಣವರ್ಮನ 'ಪುಷ್ಪದಂತ ಪುರಾಣ' (ಸು. ೧೨೧೫)

ಜಿನಧರ್ಮಹರ್ಮ್ಯಮಾಣಿಕ್ಯಕಳಶನಪ್ಪುದಱಿಂಭವ್ಯ ಜಿನಾರ್ಣವಪೂರ್ಣಚಂದ್ರನುಂ ವಿದ್ವಜ್ಜನಹೃದಯನಪ್ಪುದಱಿಂ ಸಕಳಜನಮನೋಹರನುಂ ಕರ್ಣಾಟಕೀ ಕರ್ಣಾವತಂಸನುಂ ಮಳಯಮಾನಿನೀಮನೋಮಾನಸಹಂಸನುಂ ಕೇರಳೀಕುಚಕಲಶತಾರಹಾರನುಂ ಸಿಂಹಣಸೀಮಂತಿನೀಸಿಂಧೂರನುಮೆನಿಸಿ ನೆಗೞ್ದ ನಾಟ್ಟಿಭು ನಭೋಮಣಿ ಶಾಂತಿವರ್ಮನ.... (ಆಶ್ವಾಸ ೧-ಪದ್ಯ ೮೨ ವ.)

ಪಾರ್ಶ್ವಪಂಡಿತನ 'ಪಾರ್ಶ್ವನಾಥ ಪುರಾಣ' (೧೨೨೨)

ಕರಹಾಟಾಂಧ್ರ ಕಳಿಂಗವಂಗೆ ಮಗಧಾಂಗಾಭೀರ ಸೌವೀರ ಗೂ
ರ್ಜರ ಕರ್ಣಾಯ ವರಾಟ ಮಾಳವ ಮಹಾರಾಷ್ಟ್ರಾದಿ ದೇಶಸ್ಥ ಸಿಂ
ಧುರಭವ್ಯೋತ್ತಮಪೂರ್ವಜನ್ಮಕೃತಪುಣ್ಯಪ್ರೇರ್ಯಮಾಣಂ ಜಿನೇ
ಶ್ವರನಾಸ್ಥಾನಮನಿಂದಿತಂ ವಿಹರಿಸುತ್ತುಂ ಬಂದು ಸಮ್ಮೇದಮಂ ॥
(ಆಶ್ವಾಸ ೧೬-ಪದ್ಯ ೧೬೦)

ಚೌಂಡರಸನ 'ನಳಚಂಪು' (೧೩ನೆಯ ಶ.)

ವಿಲಸತ್ಸೌರಾಷ್ಟ್ರ ಸಾಮಾಯತ ಕಳಕಳಕಾಶ್ಮೀರ ಹಮ್ಮೀರ ಸಜ್ಜಾಂ

ಗಲ ಶೋಭಾನರ್ತ ಮಾಧ್ಯಂದಿನ ಶುಭತರ ಕರ್ಣಾಟ ಕಾಂಭೋಜಿನೀ ಕುಂ
ತಳ ಕೌಶುಂಭಾದಿ ದೇಶಾಧಿಪರನುಪಮಸೌರಂಭದಿಂ ಬಪ್ಪುದೆಂದು
ಜ್ಜ್ವಲಪತ್ರಾನೀಕಮಂ ಚಾರರನನುನಯದಿಂದಟ್ಟಿದಂ ಭೀಮಭೂಪಂ ॥
(ಪದ್ಯ ೨೨೬)

ಸತತಂ ಸತ್ಕವಿತಾಪ್ರಸಂಗನಿರತಂ ಸಂಗೀತಸಾಹಿತ್ಯ ವಿ
ಶ್ರುತನೌದಾರ್ಯಪರಂ ವಿಚಿತ್ರ ನವರತ್ನಾಲಂಕೃತಂ ಪಾಪವ
ರ್ಜಿತನತ್ಯಂತಕೃಪಾಲು ಭೋಗಿ ವನಿತಾಸಂಗಪ್ರಿಯಂ ನೋಡಲೇ
ಸತಿ ಕರ್ಣಾಟನೃಪಾಳನಂ ಗುಣಗಣಕ್ಷೀರಾಬ್ಧಿಕಲ್ಲೋಲನಂ ॥
(ಪದ್ಯ ೩೮೪)

ಚೌಂಡರಸನ 'ಅಭಿನವದಶಕುಮಾರ ಚರಿತೆ' (ಸು. ೧೩೦೦)

ಮೊದಲೊಳ್ ದಂಡಿ ಕವೀಶ್ವರಂ ದಶಕುಮಾರಾಖ್ಯಾತಚಾರಿತ್ರಮಂ
ಪದೆಪಿಂ ಸಂಸ್ಕೃತಭಾಷೆಯಿಂ ರಚಿಸಿದಂ ಧಾತ್ರೀಜನಸ್ತೋತ್ರಸ
ಮ್ಮದವಪ್ಪಂತದನಾಂ ಪ್ರಸಿದ್ಧಿಯವತಾರಾಕಾರಮಂ ತಾಳ್ದಿ ಸ
ದ್ವಿದಿತಂ ರಂಗದೊಳಾಡಿ ತೋರ್ಪ ತೆಱದಿಂ ಪೇಟ್ವೆಂ ಸುಕರ್ಣಾಟದಿಂ ॥
(ಆಶ್ವಾಸ ೧-ಪದ್ಯ ೧೭)

ಬಾಹುಬಲಿಯ 'ಧರ್ಮನಾಥ ಪುರಾಣ' (೧೩೫೨)

ಮೊದಲೊಳ್ ಸಂಸ್ಕೃತಭಾಷೆಯಿಂ ಬುಧಜನಂ ಕೊಂಡಾಡುತಿರ್ಪಂತೆ ಸ
ಮ್ಮದದಿಂ ಗುಮ್ಮಟನಾಥ ಸಚ್ಚರಿತಮೆಂಬೀ ಕಾವ್ಯಮಂ ಪೇಳ್ದು ಮಾ
ಣದೆ ಕರ್ಣಾಟಕದಿಂದೆ ಮತ್ತೆ ರಚಿಸಿ ಶ್ರೀಧರ್ಮನಾಥಪ್ರಬಂ
ಧದ ಪೆರ್ಚಂ ತಳೆದಂ ಸಮಂತುಭಯಭಾಷಾಕಾವ್ಯಕರ್ತೃತ್ವಮಂ ॥
(ಆಶ್ವಾಸ ೧-ಪದ್ಯ ೪೮)

ವೃತ್ತವಿಲಾಸನ 'ಧರ್ಮಪರೀಕ್ಷೆ' (ಸು. ೧೩೬೦)

(i) ಕರ್ಣಾಟ ಶ್ರೀಕಾರಸನ್ನಿಭ ಕರ್ಣದ್ವಯದ ಚಂಪಕ ನಾಸಿಕದ ಮೃಗಶಾಬನೇತ್ರದ.... (ಆಶ್ವಾಸ ೨-ಪದ್ಯ ೧೮ ವ)

(ii) ಅಂಗ ವಂಗ ಕಳಿಂಗ ಕಾಶ್ಮೀರ ಮಗಧ ಮಾಳವ ರಾಳ ನೇಪಾಳ
ಲಾಳ ಚೋಳ ಗವುಳ ಗುರ್ಜರ ಪಾಂಬಾಳ ತುರುಷ್ಕ ಖರ್ಪರ
ಹಮ್ಮೀರ ಕಿಮ್ಮೀರ ಲಾಟ ಕರ್ಣಾಟ ಮುಖ್ಯನಾನಾದೇಶಂಗಳೊಳ್....
(ಆಶ್ವಾಸ ೭-ಪದ್ಯ ೪ ವ)

ಭೀಮಕವಿಯ 'ಬಸವ ಪುರಾಣ' (೧೩೬೯)

ಲಾಳ ಮಾಳವ ಸಿಂಧು ಸಿಂಹಳ

ಗೌಳ ಗುರ್ಜರ ಮುರು ಮಗಧ ಪಾಂ
ಚಾಲ ಮತ್ಸ್ಯ ಕುರಂಗ ವಂಗ ಕಳಿಂಗ ಬಂಗಾಳ
ಕಾಲವಾಂಧ್ರ ತುರುಷ್ಕ ಕುರು ನೇ
ಪಾಳ ಕುಂತಳ ಕುಕುರ ಬರ್ಬರ
ಚೋಳ ಪಾಂಡ್ಯ ತುಳುವ ಮಲಯ ಮಲೆಯಾಳ ಕರ್ಣಾಟ ॥
(ಕಾಂಡ ೨-ಸಂಧಿ ೬-ಪದ್ಯ ೧೪)

ಕುಮಾರವ್ಯಾಸನ 'ಕರ್ಣಾಟಭಾರತ ಕಥಾಮಂಜರಿ' (ಸು. ೧೪೦೦)

(i) ಬವರ ಸವೆಯದೆ ತೇಜಿಗಳ ಬಲು
ಜವವು ಜಾರದೆ ಬಿಡುವ ತಿವಿದರೆ
ಸವಗವುಚ್ಚಳಿಸುವವು ಕವಿದರೆ ಕಾಲಯಮನಂತೆ
ಕವಿವರವಗಡಿಸಿದರೆ ಹಿಮ್ಮೆ
ಟ್ಟುವರು ಭೂಮಾನದೊಳುಪಾಯದ
ಬವರದೋಜೆಯೊಳೊದಗಿದರು ಕರ್ಣಾಟ ರಾವುತರು ॥
(ಭೀಷ್ಮಪರ್ವ, ಸಂಧಿ ೪-ಪದ್ಯ ೬೯)

(ii) ಇತಿ ಶ್ರೀಮದಚಿಂತ್ಯಮಹಿಮ ಗದುಗಿನ ವೀರನಾರಾಯಣಚರಣಾರ
ವಿಂದ ಮಕರಂದಮಧುಪಾನಪುಷ್ಪವಚಃಷಟ್ಪದೀನಿಕಾಯಶ್ರೀ
ಮತ್ಕುಮಾರ ವ್ಯಾಸಯೋಗೀಂದ್ರ ವಿರಚಿತಮಪ್ಪಕರ್ಣಾಟಭಾರತ
ಕಥಾಮಂಜರಿಯೊಳ್... ಸಮಾಪ್ತಮಾದುದು (ಪರ್ವಾಂತ ಗದ್ಯ)

ಮಧುರನ 'ಧರ್ಮನಾಥ ಪುರಾಣ' (೧೪೧೦)

ಸರ್ವರ ಸಮ್ಮತವೆನಗಿದು । ಗರ್ವದ ಮಾತಲ್ಲ ಶಾಸ್ತ್ರಲೌಕಿಕಕೃತಿಯೊಳ್
ಬೇರ್ವರಿದ ನೇಮಿ ಜನ್ನಿಗ । ರಿರ್ವರೆ ಕರ್ಣಾಟ ಕೃತಿಗೆ ಸೀಮಾಪುರುಷರ್॥
(ಪೀಠಿಕಾ ಭಾಗ)

ದೇಪರಾಜನ 'ಸೊಬಗಿನ ಸೋನೆ' (ಸು. ೧೪೧೦)

ಎಲೆ ನಲ್ಲಳೆ ಸಕ್ಕಜವಿನಿಸಱಿವಿನ । ಬಳಕೆಯ ಬೆಳುಗನ್ನಡಿಗನ
ಹೊಲಬಲ್ಲ ಕೃತಿಯಿದು ಚದುರ ಕರ್ಣಾಟಕ । ಕಲೆಯಱಿವನ ಬಗ್ಗಿನ ಬೆಳೆ॥
(ಸಂಧಿ ೧-ಪದ್ಯ ೨೨)

ಭಾಸ್ಕರನ 'ಜೀವಂಧರ ಚರಿತೆ' (೧೪೨೪)

ಲಾಟ ಪರವಶನಾದನಾ ಕ
ರ್ಣಾಟ ಮನಗುಂದಿದನು ಕೇರಳ

ಪಾಟಿಗೆಟ್ಟನು ಮಾಗಧನು ಹೊಡೆಗೆಡೆದನವನಿಯಲಿ
ಭೋಟ ಡೆಂಢಣಿಸಿದನು ವರ ಸೋ
ರಾಟ ಸೆಡೆದನು ವಿಗಡಧನುವಿನ
ತೋಟಿ ಬೇಡೆಂದಬಲೆಯರು ನಗುತಿರ್ದರೋಲವಿನಲಿ ॥
(ಸಂಧಿ ೧೫-ಪದ್ಯ ೨೪)

ಕಲ್ಯಾಣಕೀರ್ತಿಯ 'ಜ್ಞಾನಚಂದ್ರಾಭ್ಯುದಯ' (೧೪೩೯)

ಶ್ರೀ ವೀರಜಿನಪತಿಯ ಸಮವಸೃತ ಸದನದೊಳು
ಭೂವಲಯ ವಿನುತನಾ ಶ್ರೇಣಿಕನೃಪಾಲಂಗೆ
ಪಾವನಜ್ಞಾನಿ ಗೌತಮಸ್ವಾಮಿ ಪೇಳ್ದಂದದಿಂ ಬಿಡದೆ ನಡೆದು ಬಂದು
ಶ್ರೀ ವಾಸವೇಂದುವಿಂ ಪ್ರಾಕೃತಭಾಷೆಯಿಂ
ದೋವಿ ಮಾಡಿದ ಕಥಾಸಾರದೊಳ್ ನೆಲಸಿರ್ದ
ಕೋವಿದ ಜ್ಞಾನಚಂದ್ರನ ಕಥೆಯ ಕರ್ಣಾಟಭಾಷೆಯಿಂ ಪ್ರಕಟಿಸಲು
ಮನದಂದೆನಾಂ ॥ (ಸಂಧಿ ೧-ಪದ್ಯ ೫)

ತೆರಕಣಾಂಬಿ ಬೊಮ್ಮರಸನ 'ಜೀವಂಧರ ಚರಿತ್ರೆ' (ಸು. ೧೪೮೫)

ನಗೆಮೊಗ ರನ್ನದಾಭರಣ ಹೊದೆದ ಹೊಸ । ದುಗುಲ ಕೆಳೆಯರೊಡಗೂಡಿ
ಸೊಗಸುವನಿವ ಕರ್ಣಾಟ ದೇಶದ ನೃಪ । ಮೃಗಶಾಬಸನ್ನಿಭನೇತ್ರೇ ॥
(ಸಂಧಿ ೧೦-ಪದ್ಯ ೭೬)

ನೀಲಕಂಠಾಚಾರ್ಯನ 'ಆರಾಧ್ಯಚಾರಿತ್ರ' (ಸು. ೧೪೮೫)

(i) ಮಿನುಪ ಕರ್ಣಾಟ ಸಂಸ್ಕೃತ ಶಬ್ದಶಾಸ್ತ್ರದಿಂ
ಕನದಮಲಮಾದ ಸವಿನುಡಿ ಪಸರದೆಸಕದಿಂ
ಜನವಿತಾನದ ಕಿವಿಗೆ ಮಾಣಿಕ್ಯಖಚಿತನೂತ್ನಾಭರಣಮಂ ರಚಿಸುತೆ

ಮನಸಿಜಾಂತಕನಾಗಮಂಗಳಂ ಭಕ್ತರ್ಗೆ
ಮನಮೊಸೆದು ಬೋಧಿಸುತ್ತೆನಗೆ ಸದ್ವಿದ್ಯೆಯಂ
ವಿನಯದಿಂದಿತ್ತ ಗಂಗಾಧರಾಚಾರ್ಯಂಗೆ ವಂದಿಪೆಂ ಭಕ್ತಿಯಿಂದಂ॥
(ಸಂಧಿ ೧-ಪದ್ಯ ೨೩)

(ii) ಕೃತಿನಾಮವಾರಾಧ್ಯಚಾರಿತ್ರಮೆನಿಸುವುದು
ಕೃತಿಪಾಲಕರ್ ಶಿವನ ಸದ್ಭಕ್ತರೀ ಕೃತಿಗೆ
ಪತಿ ನೀಲಕಂಠಲಿಂಗಂ ಕೃತಿಯನತಿಶಯಂ ಪೇಳ್ದಾತನಾರೆಂದೆನೆ
ವಿತತ ಕರ್ಣಾಟಲಕ್ಷಣಕಮಲಭವನೆನಿಪ

ಚತುರವರ ನೀಲಕಂಠಾಚಾರ್ಯನೆಂದೊಡಿದು
ನುತಿವೆತ್ತು ಸತ್ಪುರುಷಕರ್ಣಭೂಷಣಮೆನಿಪುದಚ್ಚರಿಯೆ ಪರಿಭಾವಿಸೆ॥
(ಸಂಧಿ ೧-ಪದ್ಯ ೪೩)

(iii) ಅದನೆಯ್ದೆ ವಾಹನಂಗೆಯ್ದು ಚರಿಸುತೆ ಮತ್ತೆ
ವಿದಿತಪ್ರಪಂಚನಿಚ್ಛಾಮಾತ್ರದಿಂ ಸೃಜಿಸೆ
ತದನಂತರಂ ಶಿಲಾದಂಗಯೋನಿಜನಾಗಿ ನಂದೀಶನಾಮದಿಂದಂ
ಮುದವಡೆದು ಸುತನಾದ ತಚ್ಛಿವಂ ಬಳಿಕ
ಮೊದವಿರ್ದ ವೀರಮಾಹೇಶ್ವರ ರಾಚಾರಕಾರಣಂ
ಪದೆದು ಕರ್ಣಾಟದೇಶದೊಳೊಪ್ಪುವಿಂಗಳೇಶ್ವರ ಬಾಗವಾಡಿಯೊಳಗೆ ॥
(ಸಂಧಿ ೧೩-ಪದ್ಯ ೭)

ತೊರವೆ ನರಹರಿಯ 'ತೊರವೆ ರಾಮಾಯಣ' (ಸು. ೧೫೦೦)

ಚಾರುತರ ಕರ್ಣಾಟಕದ ವಿ
ಸ್ತಾರ ರಾಮಾಯಣಕೆ ಕರ್ತೃ ಕು
ಮಾರವಾಲ್ಮೀಕಿಯೆ ಕಥಾಪತಿ ತೊರವೆಯಧಿನಾಥ
ವೀರನರಹರಿಯೆನಲು ಮೆಚ್ಚದ
ರಾರು ಸತ್ಕವಿತಾವಿಲಾಸದ
ಸೂರಿಗಳ ಹೃದಯಾಕರುಷಣಕಥಾಕುತೂಹಲವ ॥
(ಬಾಲಕಾಂಡ, ಸಂಧಿ ೧-ಪದ್ಯ ೯)

ಚೆನ್ನವೀರ ಜಂಗಮದೇವನ 'ಷಟ್ಸ್ಥಲ ವಲ್ಲಭ' (ಸು. ೧೫೦೦)

ಕರಕಮಲಂಗಳಂ ಮುಗಿದು ಕಿಕ್ಕಿರಿದು ನಿಂದ ಚೋಳ ಗೌಳ ಲಾಳ ಪಾಂಚಾಳ
ವರಾಟ ಕರ್ಣಾಟ ಮೊದಲಾದ ರಾಜಪುತ್ರವ್ರಜಂಗಳಿಂ.....
(ಆಶ್ವಾಸ ೧-ಪದ್ಯ ೧೧೭ ವ)

ಮಂಗರಸನ 'ಸಮ್ಯಕ್ತ್ವಕೌಮುದಿ' (೧೫೦೯)

ಕಲ್ಲಹಳ್ಳಿಯ ಮಹಾಪ್ರಭು ವಿಜಯಭೂವಧೂ
ವಲ್ಲಭನ ತನುಜಾತ ಜಿನಪದಾಂಬುಜಭೃಂಗ
ನೆಲ್ಲಕಲೆಯಲಿ ಬಲ್ಲಿದನು ಮಂಗರಸನಾನೀ ಕೌಮುದೀಕಥೆಯನು
ಸಲ್ಲಲಿತಮಪ್ಪ ಸಕ್ಕದದಿ ಪೂರ್ವಾಚಾರ್ಯ
ರುಲ್ಲಸದಿ ಪೇಳ್ದುದಂ ಕರ್ಣಾಟ ಕೃತಿಬಂಧ
ದಲ್ಲಿಯುದ್ದಂಡಷಟ್ಪದಮಾಗಿ ಬರೆದೆನಿಂತಿದನು ಭವ್ಯರು ಕೇಳ್ವುದು ॥
(ಸಂಧಿ ೧-ಪದ್ಯ ೯)

ನಂಜುಂಡ ಕವಿಯ 'ರಾಮನಾಥಚರಿತೆ' (ಸು. ೧೫೨೫)

(i) ಸಿರಿಯಿಂದ ಸಿಂಗರದಿಂದ ಸೊಬಗಿನಿಂದ । ಕರಮೆಸೆವುದು ಕರ್ನಾಟ ॥
(ಆಶ್ವಾಸ ೧-ಸಂಧಿ ೨ ಸೂ.)

(ii) ಕಾವೇರಿಯಿಂದ ಗೋದಾವರಿವರೆಗಮಿ । ರ್ದಾ ವಸುಧಾತಳವಳಯ
ಭಾವಿಸೆ ಕರ್ನಾಟಕ ಜನಪದವದ । ನಾವನೊಲಿದು ಬಣ್ಣಿಸುವನು ॥
(ಆಶ್ವಾಸ ೧-ಸಂಧಿ ೨-ಪದ್ಯ ೨೧)

(iii) ಗ್ರಾಮನಗರಖೇಡಖರ್ವಡದುರ್ಗದ್ರೋ । ಣಾಮುಖ ಸಂದೋಹದಿಂದ
ಕಾಮನಾಡುಂಬೊಲದಂತೆ ಕರ್ನಾಟ । ಭೂಮಿ ಕಣ್ಗೆಸೆದಿರುತಿಹುದು ॥
(ಆಶ್ವಾಸ ೧-ಸಂಧಿ ೨-ಪದ್ಯ ೨೧)

(iv) ಭೂರಮೆಯುಟ್ಟೊಲ್ಲದಿಟ್ಟ ದುಕೂಲದ । ಸೀರೆಗಳಂತೆ ಕಂಗೊಳಿಪ
ಭೂರಿನದಿಗಳಾ ಕರ್ನಾಟ ಭೂಮಿಯೊ । ಳೋರಂತೆ ಪರಿದೆಸೆದಿಹುದು॥
